ನಿಜಾಮಪ್ರಾಂತದ ಅತ್ರಫಾಬ್ದೂ ಜಿಲ್ಲೆಯ ದೋವಾರ್ಡಾ ಎಂಬ ಗ್ರಾಮದವರು. ಚಿಕ್ಕಂದಿನಲ್ಲಿಯೇ ಪಾರಮಾರ್ಥದಲ್ಲಿ ಮನಸೋತವರಾಗಿ ಸುಮಾರು ೧೪ ವರ್ಷಗಳವರೆಗೆ ವೈರಾಗ್ಯಜೀವನದಿಂದ ಕಾಲಕಳೆದರು. ವಚನಸಾಹಿತ್ಯದ ವ್ಯಾಸಂಗದಿಂದ ವೀರಶೈವ ತತ್ವಜ್ಞಾನದಲ್ಲಿ ಹೆಚ್ಚಿನ ಪ್ರೌಢಿಮೆಯನ್ನು ಪಡೆದು ಆಂಧ್ರದೇಶವನ್ನು ಬಿಟ್ಟು, ನಿಜಾಮ ಕರ್ನಾಟಕ ಪ್ರಾಂತಕ್ಕೆ ಬಂದು ಧರ್ಮಪ್ರಚಾರಕಾರ್ಯದಲ್ಲಿ ನಿರತರಾದರು. ಸುಮಾರು ೩೦ ವರ್ಷಗಳವರೆಗೆ ದೇಶದಲ್ಲಿ ಸಂಚರಿಸಿ ಪುರಾಣ-ಪ್ರವಚನದ ಮೂಲಕ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದರು. ಗಾಯನಕಲಾನಿಪುಣರಾದ ಇವರು ಬಸವಾದಿ ಪ್ರಮಥರ ಸ್ತುತಿರೂಪಕವಾದ ಅನೇಕ ಹಾಡುಗಳನ್ನು ರಚಿಸಿರುವರು. ನಾಗಭೂಷಣ ಘನಮಠದಾರ್ಯರೆಂದು ಪ್ರಸಿದ್ಧರು.

---

* ('ಜೈಮಿನಿ ಭಾರತ'ದ ಕೆಲವು ಭಾಗಗಳನ್ನು ಮರಾಠಿ ಭಾಷೆಯಲ್ಲಿ ಪರಿವರ್ತಿಸಿರುವರು.)

ಗ್ರಂಥ : ಭಕ್ತಿಸುಧಾಸಾರ (ಅ. ೧೯೪೫)

ಗೋವಿಂದ, ಪೈ, ಕಟಪಾಡಿ

ಜ : ಸು. ೧೮೨೫ ಮ : (?)

ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿಯವರು. ಸಾರಸ್ವತ ಬ್ರಾಹ್ಮಣರ ಗುರು ಮಠಗಳಲ್ಲಿ ಒಂದಾದ ಕಾಶೀಮಠದ ವರದೇಂದ್ರತೀರ್ಥರ ಪರಿವಾರದಲ್ಲಿದ್ದರು. ಅಮೋಘ ಕವಿತಾಶಕ್ತಿಯುಳ್ಳ ಆಶುಕವಿಗಳು: ತಾಳೆಗರಿಯ ಮೇಲೆ ಕಬ್ಬಿಣದ ಕಂಟದಿಂದ ಬರೆದ ರಾಶಿರಾಶಿ ಸಾಹಿತ್ಯವು ಇವರ ಸಂಗ್ರಹದಲ್ಲಿದ್ದಿತಾದರೂ ಅದು ಪ್ರಕಟಗೊಂಡಂತಿಲ್ಲ. ಅವೆಲ್ಲವೂ ದಾಸರ ಪದಗಳ ಮಾದರಿಯ, ವಿವಿಧ ರಾಗಗಳಲ್ಲಿ ರಚಿತವಾದ ದೇವರ ನಾಮಗಳು. ಕೊಂಕಣಿ ಭಾಷೆಯಲ್ಲಿಯೂ ಇವರು ಕವಿತೆಗಳನ್ನು ರಚಿಸಿದ್ದರು.

ಆನಂದರಾಯ, ಕೌಂಡಿಣ್ಯ

ಜ : ಸು. ೧೮೩೦

ಮಂಗಳೂರು. ಜರ್ಮನ್ ಮಿಶನ್ನಿನಲ್ಲಿ ಕೆಲಸಮಾಡುತ್ತಿದ್ದರು.

ಗ್ರಂಥಗಳು : ಈರಾರು ಪತ್ರಿಕೆ, ಕ್ರೈಸ್ತ ಧರ್ಮಬೋಧನೆ (Kurtz ಕೃತ ಜರ್ಮನ್ ಗ್ರಂಥದ ಭಾಷಾಂತರ) (ಧ.೧೮೫೫), ಪರಿಶುದ್ಧ ಚರಿತ್ರವು (Kurtz ಕೃತ ಜರ್ಮನ್ ಪುಸ್ತಕದ ಭಾಷಾಂತರ) (ಧ. ೧೮೬೩), ಬಾಯಬಲ್ (Barths ಕೃತ Commentary ಯ ಭಾಷಾಂತರ) (ಧ. ೧೮೬೧), ಸಂಕ್ಷೇಪವಾದ ಪುನಃಸ್ಥಾಪನೆಯ ಚರಿತ್ರವು (ಇಂಗ್ಲೆಂಡ್- ಸ್ಕಾಟ್‌ಲಂಡ್‌ದಲ್ಲಿ ನಡೆದ 'ಪುನಃಸ್ಥಾಪನೆ'ಯ ಇತಿಹಾಸ) (ಧ.ಫ).

ರಾಘವಾಚಾರ್ಯ, ವೇದಾಂತ

ಜ : ಸು. ೧೮೩೦

ಮೈಸೂರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಪಂಡಿತರು; ಸಂಸ್ಕೃತ, ಕನ್ನಡ, ತೆಲುಗು ಭಾಷಾ ವಿದ್ವಾಂಸರಾಗಿದ್ದರು.

ಗ್ರಂಥ : ನಿಜದೀಪಿಕಾಶಿರೋರತ್ನ (ಕೃಷ್ಣರಾಜ ಸೇಲಂ ಕೃತ ಗ್ರಂಥಕ್ಕೆ ಟೀಕೆ) (ಪ.೧೮೩೩)

ರಾಜಗೋಪಾಲಾಚಾರ್ಯ, ಕಡಕೋಳ

ಜ : ಸು. ೧೮೩೦

ಧಾರವಾಡ ಜಿಲ್ಲೆಯ ಕರಜಗಿ. 'ರಾಜಗೋಪಾಲ' ಎಂಬ ಅಂಕಿತದಿಂದ ಕೆಲವು ಕೀರ್ತನೆಗಳನ್ನು ರಚಿಸಿರುವರು.

ಗ್ರಂಥ : ಕೀಚಕಸಂಧಿ (ಅ)

ರಾಮಕೃಷ್ಣಯ್ಯ, ಮೂಲ್ಕಿ

ಜ : ೧೮೩೦ ಮ : ೧೯೧೯

ದಕ್ಷಿಣಕನ್ನಡ ಜಿಲ್ಲೆಯ ಮೂಲ್ಕಿ. ಸುಪ್ರಸಿದ್ಧ ಆಶುಕವಿ.

ಗ್ರಂಥಗಳು : ಕೃಷ್ಣಾರ್ಜುನಕಾಳಗ (ಅ), ವೆಂಕಟಗಿರಿಮಹಾತ್ಮೆ ಮತ್ತು ಪದ್ಮಾವತೀ ಕಲ್ಯಾಣವು (ಅ. ೧೯೧೫), ಸಂಕೀರ್ತನಮಾಲೆ (ಅ).

ರಾಮಚಂದ್ರ, ಶ್ರೀನಿವಾಸ, ನರೇಗಲ್ಲ

ಜ : ಸು. ೧೮೩೦

ಬೆಳಗಾವಿಯ ಹೈಸ್ಕೂಲಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದರು. ಬಾಳಶಾಸ್ತ್ರಿ ನರೇಗಲ್ಲ ಎಂಬುದು ಇವರ ಬೇರೊಂದು ಹೆಸರು.

ಗ್ರಂಥಗಳು : ರಘುವಂಶ (ಅ. ೧೮೭೫), ವಾಣೀಮುಕುರ (ದ.೧೮೮೪).

ವಾಸುದೇವಭಟ್ಟ, ಕೆ.

ಜ : ಸು. ೧೮೩೦ ಮ: ಸು. ೧೯೦೦

ದಕ್ಷಿಣ ಕನ್ನಡ ಜಿಲ್ಲೆಯ ಬೇಕಲದಲ್ಲಿ ಡಿಸ್ಟ್ರಿಕ್ಟ್ ಮುನ್‌ಸೀಫ್ ಕೋರ್ಟಿನಲ್ಲಿ ಗುಮಾಸ್ತರಾಗಿದ್ದರು.

ಗ್ರಂಥ : ಶಂಕರವಿಜಯಸಾರಸಂಗ್ರಹವು (ಸಾಯಣಕೃತ 'ಶಂಕರದಿಗ್ವಿಜಯ' ದ ಸಾರಾಂಶ) (ಧ. ೧೮೭೮)

ಕಿಟೆಲ್, ಜಾರ್ಜ್, ಫರ್ಡಿನೆಂಡ್, ರೆವರೆಂಡ್

ಜ : ೭-೪-೧೮೩೨ ಮ : ೨೦-೧೨-೧೯೦೩

ಜರ್ಮನ್ ದೇಶದಲ್ಲಿಯ ಹ್ಯಾನೋವರ್ ಪ್ರಾಂತದ ವೆಸ್ಟರ್‌ಹೋಲ್ಟ್ ಎಂಬ ಊರವರು. ಪ್ರಾರಂಭಿಕ ವಿದ್ಯಾಭ್ಯಾಸ ಪೂರ್ತಿಯಾದನಂತರ ೧೮೫೦ರಿಂದ ೫೩ರವರೆಗೆ ಇವರು ಕ್ರೈಸ್ತಮತ ಪ್ರಚಾರಸಂಘದಲ್ಲಿ ಧರ್ಮಶಾಸ್ತ್ರದ ವ್ಯಾಸಂಗ ಮಾಡಿದರು. ಆ ವರುಷವೇ (ಅಕ್ಟೋಬರ್ ೨೦) ಭಾರತಕ್ಕೆ ಮತಪ್ರಚಾರಕರಾಗಿ ಬಂದರು. ಧಾರವಾಡ, ಹುಬ್ಬಳ್ಳಿ, ಮಂಗಳೂರು, ಮಡಿಕೇರಿ ಮುಂತಾದ ಕಡೆಗೆ ಸುಮಾರು ೩೯ ವರ್ಷ ಕ್ರೈಸ್ತಮತ ಪ್ರಚಾರಮಾಡಿದರು. ಈ ಮಧ್ಯೆ ಒಂದೆರಡು ಬಾರಿ ಸ್ವದೇಶಕ್ಕೆ ಹೋಗಿದ್ದು ೧೮೭೭ರಿಂದ ೮೩ರವರೆಗೆ ಅಲ್ಲಿಯೇ ಕನ್ನಡ-ಇಂಗ್ಲೀಷ್ ನಿಘಂಟಿನ ಕಾರ್ಯದಲ್ಲಿ ನಿರತರಾಗಿದ್ದರು. ೧೮೯೬ರಲ್ಲಿ ಕಿಟೆಲ್ ಅವರ ವಿದ್ವತ್ತು ಹಾಗೂ ಪರಿಶ್ರಮಕ್ಕೆ ಮೆಚ್ಚಿ 'ಟ್ಯೂಬಂಜೆನ್' ವಿಶ್ವವಿದ್ಯಾಲಯದವರು 'ಡಾಕ್ಟರ್ ಆಫ್ ಫಿಲಾಸಫಿ' ಎಂಬ ಪ್ರಶಸ್ತಿಯಿಂದ ಗೌರವಿಸಿದರು.

ಗ್ರಂಥಗಳು : ಕನ್ನಡ : ಕಥಾಮಾಲೆ (ಇ. ೧೮೬೨), ಕನ್ನಡ-ಇಂಗ್ಲೀಷು ನಿಘಂಟು (ದ-ಏ. ೧೮೯೩), ಕನ್ನಡ ಪಾಠಗಳ ಮೊದಲನೆ ಪುಸ್ತಕವು (೧೮೬೬, II), ಕರ್ನಾಟಕ ಕಾವ್ಯಮಾಲೆ (ಅ-ಭ. ೧೮೭೪), ಕಾವ್ಯಮಂಜರಿ (ಅ-ಭ.೧೮೭೭), ಪರಮಾತ್ಮಜ್ಞಾನ (ಧ.೧೮೬೩), ಯೇಸೂಕ್ರಿಸ್ತನ ಶ್ರಮೇಚರಿತ್ರ (ಧ.೧೮೮೯, III), ಸಣ್ಣಕರ್ನಾಟಕ ಕಾವ್ಯಮಾಲೆ (ಅ-ಭ. ೧೮೬೮), ಹಳೆಗನ್ನಡ ವ್ಯಾಕರಣಸೂತ್ರಗಳು (ದ. ೧೮೮೯), ಸಂಕ್ಷೇಪ ವ್ಯಾಕರಣ ಸೂತ್ರಗಳು (ದ.೧೮೬೬).

ಇಂಗ್ಲೀಷ್ : A Grammar of the Kannada Language (೧೯೦೩)

ಪರಿಷ್ಕೃತ : ಕನ್ನಡ : ಶಬ್ದಮಣಿದರ್ಪಣ (೧೮೭೨), ಛಂದೋಂಬುಧಿ (೧೮೭೫)

ವೆಂಕಟ, ರಂಗೋ, ಕಟ್ಟಿ

ಜ : ೧೮೩೩ ಮ : ೧೨-೫-೧೯೦೯

ವಿಜಾಪುರ ಜಿಲ್ಲೆಯ ಮುಧೋಳ. ಬಟಕುರಕಿ ಎಂಬ ಹಳ್ಳಿಯಲ್ಲಿ ಸೋದರ ಮಾವನ ಮನೆಯಲ್ಲಿ ಇವರ ಪ್ರಾರಂಭಿಕ ಸಂಸ್ಕೃತ ಅಧ್ಯಯನವಾಯಿತು. ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ೧೮೫೧ರಲ್ಲಿ ಪುಣೆಗೆ ಹೋದವರು, ಶಿಕ್ಷಣವು ಮುಗಿದನಂತರ ೧೮೫೬ರಲ್ಲಿ ಅಲ್ಲಿಯೇ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಸುಮಾರು ೧೦ ವರ್ಷಗಳವರೆಗೆ ಅದೇ ಸ್ಥಾನದಲ್ಲಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ರೂಢಿ ಸಂಪ್ರದಾಯಗಳಲ್ಲಿ ಪುಣೆ-ಮುಂಬೈಯ ಸುಧಾರಣಾವಾದಿಗಳ ಪ್ರಭಾವಕ್ಕೆ ಒಳಗಾಗಿ ಪ್ರಗತಿಶೀಲ ಮನೋಭಾವನೆಯನ್ನು ಬೆಳೆಸಿಕೊಂಡರು. ಕೃಷ್ಣಶಾಸ್ತ್ರಿ ಚಿಪಳೂಣಕರರ ಸಂಪರ್ಕದಿಂದ ಲೇಖನ ವ್ಯವಸಾಯದಲ್ಲಿ ಒಳ್ಳೆಯ ಸಾಧನೆಯನ್ನು ಮಾಡಿದರು. ಇವರ ಶಿಕ್ಷಣವೆಲ್ಲ ಮರಾಠಿಯ ಮುಖಾಂತರವಾಗಿದ್ದರೂ ಮಾತೃಭಾಷೆಯ ಮೇಲಿನ ಅಭಿಮಾನದಿಂದ ಕನ್ನಡದಲ್ಲಿ ಗ್ರಂಥರಚನೆ ಮಾಡಿದರು. ಮುಂದೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರಕ್ಕೆ ವರ್ಗಾಯಿಸಲ್ಪಟ್ಟಾಗ ಇವರಿಗೆ ತಾಯ್ನುಡಿಯ ಹೆಚ್ಚಿನ ಅಭ್ಯಾಸದ ಅನುಕೂಲತೆಯೊದಗಿತು. ಕೆಲವು ಸಮಯ ಬೆಳಗಾವಿಯ 'ನಾರ್ಮಲ್ ಸ್ಕೂಲಿ'ನಲ್ಲಿ ಕೆಲಸಮಾಡಿ ಅನಂತರ ದಕ್ಷಿಣ ಭಾಗದ ಕನ್ನಡ ಭಾಷಾಂತರಕಾರರೂ (೧೮೬೬), ಧಾರವಾಡ ಶಿಕ್ಷಣಮಹಾವಿದ್ಯಾಲಯದ ಉಪಮುಖ್ಯಾಧ್ಯಾಪಕರೂ, ಕೊನೆಯ ಹದಿನಾಲ್ಕು ವರ್ಷ (೧೮೭೬-೧೮೯೦) ಮುಖ್ಯಾಧ್ಯಾಪಕರೂ ಎಂದು ಅಧಿಕಾರ ನಿರ್ವಹಿಸಿ ನಿವೃತ್ತರಾದರು.

ತಮ್ಮ ಜೀವಮಾನದ ಕೊನೆಯ ೧೯ ವರ್ಷ ಅಹರ್ನಿಶಿ ಭಾಷಾಭಿವೃದ್ಧಿಗಾಗಿ ದುಡಿದು 'ಕನ್ನಡವನ್ನುದ್ಧರಿಸಿದ ಪುಣ್ಯಪುರುಷರ' ಮಾಲಿಕೆಯಲ್ಲಿ ಗಣನೀಯವಾದ ಸ್ಥಾನವನ್ನು ಇವರು ಕಲ್ಪಿಸಿಕೊಂಡರು. ಉತ್ತರ ಕರ್ನಾಟಕದಲ್ಲಿ ಅಚ್ಚಿನ ಮೊಳೆಗಳನ್ನು ಸಿದ್ಧಪಡಿಸಿ ಮುದ್ರಣಕ್ಷೇತ್ರದಲ್ಲಿ ಹೊಸಯುಗವನ್ನು ಪ್ರಾರಂಭಿಸಿದವರು ಇವರೇ ಎಂದು ಹೇಳಲಾಗುತ್ತದೆ. ಅಲ್ಯೂಮಿನಿಯಮ್ಮಿನ ಚಾಕು-ಕತ್ತರಿ, ಮಣ್ಣಿನ ಪಾತ್ರೆ,

ಸೀಗೇಕಾಯಿಯ ವಡೆ ಮುಂತಾದ ಸಾಮಾನುಗಳನ್ನು ಸ್ವತಃ ತಯಾರಿಸಿ ತಮ್ಮ ಉದ್ಯೋಗಕುಶಲತೆಯನ್ನೂ, 'ಸ್ವದೇಶೀ' ಅಭಿಮಾನವನ್ನೂ ವ್ಯಕ್ತಗೊಳಿಸಿದರು. ಆಯುರ್ವೇದದಲ್ಲಿಯೂ ಜ್ಯೋತಿಷ್ಯದಲ್ಲಿಯೂ ಇವರು ತುಂಬ ವಿದ್ವಾಂಸರಾಗಿದ್ದರು.

ಧಾರವಾಡದಲ್ಲಿ 'ಜ್ಞಾನವರ್ಧಕ' ಮುದ್ರಣಾಲಯವನ್ನು ಸ್ಥಾಪಿಸಿ ಮಿತ್ರಸಮಾಜದ ಪರವಾಗಿ 'ಲೋಕಶಿಕ್ಷಣ' (೧೮೮೮) ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. 'ಕರ್ನಾಟಕ ಪತ್ರ' (ವಾರಪತ್ರಿಕೆ)ಕ್ಕೆ ಇವರು ೧೯೦೭ರವರೆಗೆ ಸಂಪಾದಕರಾಗಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರಾದ ಇವರು ಆ ಸಂಸ್ಥೆಯ ಉತ್ಸಾಹೀ ಕಾರ್ಯಕರ್ತರೂ ೧೮೯೮ರಲ್ಲಿ ಅಧ್ಯಕ್ಷರೂ ಆಗಿದ್ದರು.

ಗ್ರಂಥಗಳು : ಅರಬ ಭಾಷೆಯಲಿದ್ದ ಸುರಸ ಕಥೆಗಳ ಸಂಗ್ರಹವು ಭಾಗ ೧ (Arabian Nights ಗ್ರಂಥದ ಭಾಷಾಂತರ, ಇ. ೧೮೬೩), ಭಾಗ ೨ (ಇ ೧೮೬೩), ಆರು ಬೆರಳಿನ ಕುರುಹು ಅಥವಾ ಸುಧಾರಿಸತಕ್ಕ ಆಚರಣೆಗಳು (ಲ.೧೮೯೮), ಉಪನ್ಯಾಸ ವಿದ್ಯಾ (ಉ. ೧೯೦೭), ಕನ್ನಡ ಲಘುವ್ಯಾಕರಣ (ದ.೧೮೮೦), ಕರ್ನಾಟಕದ ಗೆಜೆಟಿಯರ್ (ಓ. ೧೮೮೮), ಕರ್ನಾಟಕದ ವರ್ಣನೆಯೂ ಇತಿಹಾಸವೂ (ಮ. ೧೯೦೯), ಕೊಲ್ಲಾಪುರ ಛತ್ರಪತಿಯ ಇತಿಹಾಸವು ('ವಾಗ್ಭೂಷಣ'ದಲ್ಲಿ ಕ್ರಮಶಃ), ಜೈಮಿನಿ ಭಾರತ (ಸಟೀಕ ೧ರಿಂದ ೪ ಸಂಧಿಗಳು, ಅ. ೧೮೭೫), ಜ್ಯೋತಿಶ್ಶಾಸ್ತ್ರ (ಖ), ಪಂಚಾಳಜಾತಿಗಳ ಉತ್ಪತ್ತಿ (ಪದ್ಮಪುರಾಣದಲ್ಲಿಯ ಸಂಬಂಧಪಟ್ಟ ಭಾಗಗಳ ಭಾಷಾಂತರ, ಧ.೧೮೭೬), ಪ್ರಾಕೃತಿಕ ಭೂಗೋಳ ಶಾಸ್ತ್ರ, ಬರ್ಥೋಲ್ಡ್‌ನ ಕಥೆ, ಬಾಯಿಲೆಖ್ಖಗಳ ಪುಸ್ತಕವು (ಖ. ೧೮೬೩), ಭೂಗೋಳವಿದ್ಯಾ (ಭ.೧೮೬೭), ಮುಂಬಯಿ ಇಲಾಖೆಯ ವರ್ಣನೆ (೧೮೭೦), ಯುಕ್ಲಿಡ್‌ನ ಸಿದ್ಧಾಂತ (ಭಾಷಾಂತರ, ಖ. ೧೮೭೫), ವಿಧವೆಗಳ ಮುಂಡನ ಅನಾಚಾರವು (ಲ.೧೮೮೯), ಸೋಮೇಶ್ವರಶತಕ (ಸಟೀಕ, ೧೮೭೫)*

ಮರಾಠಿ : ನೆಪೋಲಿಯನ್ ಬೋನಾಪಾರ್ಟಚೀ ಶಕುನವಂತೀ, ವಿಧವಾ ವಪನ ಅನಾಚಾರ, ನರತನು, ಸವಾಯಿ ಮಾಧವರಾವಾಂಚೇ ನಾಟಕ.

ಚನ್ನಬಸಪ್ಪ, ಬಸಲಿಂಗಪ್ಪ, ಧಾರವಾಡ

ಜ : ೧೮೩೪ ಮ : ೪-೧-೧೮೮೧

ಬೆಳಗಾವಿ ಜಿಲ್ಲೆಯ ಗೋಕಾವಿ. ಇವರ ತಂದೆಯವರು ಧಾರವಾಡದಲ್ಲಿ ಹೋಗಿ ನೆಲೆಸಿದ್ದರಿಂದ ಇವರ ಶಿಕ್ಷಣವೆಲ್ಲ ಅಲ್ಲಿಯೇ ಆಯಿತು. ಕನ್ನಡ, ಮರಾಠಿ, ಗಣಿತ ವಿಷಯಗಳಲ್ಲಿ ಪ್ರಾಥಮಿಕ ಅಭ್ಯಾಸವನ್ನು ಪೂರೈಸಿ, ಇಂಗ್ಲೀಷು ಕಲಿಯುವ ಹವ್ಯಾಸದಿಂದ ಚಿಕ್ಕ ವಯಸ್ಸಿನಲ್ಲಿಯೇ ಪುಣೆಗೆ ತೆರಳಿದರು. ಹಲವಾರು ಅಡಚಣೆಗಳ ಮಧ್ಯದಲ್ಲಿಯೇ

* ಇವರು 'ಆತ್ಮಚರಿತ್ರೆ'ಯನ್ನು ಬರೆದದ್ದು ಅದರ ಹಸ್ತಪ್ರತಿಯು ಹುಬ್ಬಳ್ಳಿಯ ಶ್ರೀ ಪ್ರ. ನರೇಗಲ್ಲ, ಎಂ.ಎ.ಬಿ.ಟಿ. ಅವರ ಬಳಿಯಲ್ಲಿದೆ.

ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಎಂಜಿನಿಯರಿಂಗ್ ಕಾಲೇಜ್ ಸೇರಿದರು. ಗಣಿತ ಹಾಗೂ ಆಧುನಿಕ ಶಾಸ್ತ್ರೀಯ ವಿಷಯಗಳಲ್ಲಿ ವಿಶೇಷ ಆಸಕ್ತಿಯುಳ್ಳ ಇವರು ವಿದ್ಯಾರ್ಥಿವೇತನ ಬಲದಿಂದ ಪದಪೀಧರರಾಗಿ, ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಸುಮಾರು ಅದೇ ಸಮಯಕ್ಕೆ ಇಂಗ್ಲೆಂಡಿನಲ್ಲಿ ಸ್ಥಾಪಿಸಲ್ಪಟ್ಟ 'ಕೂಪರ್ಸ್ ಹಿಲ್' ಎಂಜಿನಿಯರಿಂಗ್ ಕಾಲೇಜಿಗೆ ಆರಿಸಲ್ಪಟ್ಟ ಐವರು ಹಿಂದೀ ವಿದ್ಯಾರ್ಥಿಗಳಲ್ಲಿ ಚನ್ನಬಸಪ್ಪನವರೂ ಒಬ್ಬರಾಗಿದ್ದರು. ಈ ಯೋಜನೆಯಲ್ಲಿ ತೊಡಗಿದ್ದ ದಿ. ದಾದಾಭಾಯಿ ನವರೋಜಿಯವರ ಪ್ರಯತ್ನಗಳು ಅಯಶಸ್ವಿಯಾದ್ದರಿಂದ ಚನ್ನಬಸಪ್ಪನವರ ವಿದೇಶ ಪ್ರವಾಸವು ಕೈಗೂಡಲಿಲ್ಲ.

ಚನ್ನಬಸಪ್ಪನವರು ೧೮೫೫ರಲ್ಲಿ ಧಾರವಾಡಕ್ಕೆ ಬಂದು ಪೋಸ್ಟ್‌ಖಾತೆಯನ್ನು ಸೇರಿದರು. ಮರುವರ್ಷ ಬೆಳಗಾವಿಯ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರೆಂದು ಶಿಕ್ಷಣ ಶಾಖೆಯನ್ನು ಪ್ರವೇಶಿಸಿ(೧೮೫೬ ಜನವರಿ), ೧೮೬೧ರಲ್ಲಿ ಬೆಳಗಾವಿ ಜಿಲ್ಲೆಯ, ಡೆ.ಎ.ಇನ್‌ಸ್ಪೆಕ್ಟರರಾದರು. ಮುಂದೆ ೧೮೭೦ರಲ್ಲಿ ಧಾರವಾಡ ವಿಭಾಗದ ಡೆ. ಎ. ಇನ್‌ಸ್ಪೆಕ್ಟರ್ ಸ್ಥಾನವನ್ನು ಸ್ವೀಕರಿಸಿ ಕೊನೆಯವರೆಗೂ ಆ ಹುದ್ದೆಯಲ್ಲಿಯೇ ಉಳಿದರು.

ಉತ್ತರ ಕರ್ನಾಟಕದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಕನ್ನಡಕ್ಕೆ ಗೌರವದ ಸ್ಥಾನವನ್ನು ತಂದುಕೊಟ್ಟವರು ಡೆಪ್ಯುಟಿ ಚನ್ನಬಸಪ್ಪನವರು. ಒಂದು ಪ್ರಮುಖ ಅಧಿಕಾರಸ್ಥಾನದಲ್ಲಿದ್ದರೂ ಕನ್ನಡದ ನಿಸ್ಸೀಮ ಆರಾಧಕರಾಗಿದ್ದರು. ಇವರು ಅಧಿಕಾರಕ್ಕೆ ಬರುವ ಮುನ್ನ ಧಾರವಾಡ, ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಇದ್ದ ಒಟ್ಟು ೩೪ ಕನ್ನಡ ಶಾಲೆಗಳ ಸಂಖ್ಯೆಯು, ಇವರ ಹತ್ತುವರ್ಷದ ಆಳಿಕೆಯಲ್ಲಿ ೬೬೮ನ್ನು ಮುಟ್ಟಿತು. ಕನ್ನಡ ಶಾಲೆಗಳ ಸ್ಥಾಪನೆ ಹಾಗೂ ಪ್ರಗತಿಯ ವಿಷಯದಲ್ಲಿ ಇವರು ತಳೆದ ಆಸ್ಥೆಯನ್ನು ಇಷ್ಟರಿಂದಲೇ ಊಹಿಸಬಹುದು. ಶೇಷೋ ರಾಮಚಂದ್ರ ಚುರಮರಿ, ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದ ಕನ್ನಡ ಭಕ್ತರಿಗೆ ತಾಯ್ನುಡಿಯ ಸೇವಾದೀಕ್ಷೆಯನ್ನು ಕೊಟ್ಟು, ಗ್ರಂಥರಚನೆಯ ಕಾರ್ಯದಲ್ಲಿ ಇವರು ಪ್ರೋತ್ಸಾಹಕರಾಗಿದ್ದರು. ಚಿತ್ರದುರ್ಗದ ನಿರಂಜನ ಜಗದ್ಗುರು ಬೃಹನ್ಮಠದ ಮಹಾಲಿಂಗಸ್ವಾಮಿಗಳ ಸಹಾಯದಿಂದ ಬೆಳಗಾವಿಯಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ, ಅದರ ಬೆಳವಣಿಗೆಗಾಗಿ ಶ್ರಮಿಸಿದರು. ಎರಡು ವರ್ಷದ ನಂತರ ಸ್ವಾಮಿಗಳು ಲಿಂಗೈಕ್ಯರಾದಾಗ ಸಂಸ್ಥೆಗೆ ಆರ್ಥಿಕ ನೆರವು ತಪ್ಪಿದ್ದರಿಂದ ತಮ್ಮ ಸ್ವಂತ ಹೊಣೆಗಾರಿಕೆಯ ಮೇಲೆ ಸಂಸ್ಥೆಯನ್ನು ನಡೆಸಿ, ಸಾಲದ ಭಾರವನ್ನೂ ಹೊತ್ತರು. ಆದರೆ ಇವರಿಗೆ ಧಾರವಾಡಕ್ಕೆ ವರ್ಗವಾದನಂತರ ಸಂಸ್ಥೆಯ ಕಾರ್ಯ ಕುಂಠಿತವಾಯಿತು. ಧಾರವಾಡದಲ್ಲಿ ಮಿಶನರಿಯಾಗಿದ್ದ ಜಿಗ್ಲರ್ ಸಾಹೇಬರಿಗೆ ಇಂಗ್ಲೀಷು-ಕನ್ನಡ ನಿಘಂಟು ತಯಾರಿಸುವುದರಲ್ಲಿ ಚನ್ನಬಸಪ್ಪನವರು ನೆರವಾದರು.

ಚದುರಂಗದಾಟದಲ್ಲಿ ಪ್ರವೀಣರು; ಪ್ರಭಾವೀ ಭಾಷಣಕಾರರು. ಸಾರ್ವಜನಿಕ ಸೇವಾಭಿಲಾಷೆಯುಳ್ಳ ಇವರು ಪ್ರಮುಖ ಸಮಾಜ ಸುಧಾರಕರೂ ಆಗಿದ್ದರು.

ಗ್ರಂಥಗಳು : ನಗದವರನ್ನು ನಗಿಸುವ ಕತೆ, ಮ್ಯಾಕ್‌ಬೆತ್.

ಸುಬ್ಬಾಶಾಸ್ತ್ರೀ, ನಂಜನಗೂಡು, ಆಸ್ಥಾನಕವಿ

ಜ : ೧೮೩೪ ಮ : ೧೯೦೬

ಮೈಸೂರು. ಸಂಸ್ಕೃತ ಹಾಗೂ ಕನ್ನಡ ಭಾಷಾವಿಶಾರದರಾದ ಇವರು ಚಾಮರಾಜೇಂದ್ರ ಕೃಪಾಪೋಷಿತ ಅರಮನೆ ನಾಟಕ ಸಂಘದಲ್ಲಿ ಬಸವಪ್ಪಶಾಸ್ತ್ರೀ, ಅಯ್ಯಾಶಾಸ್ತ್ರೀ, ಜಯರಾಯಾಚಾರ್ಯ ಮುಂತಾದ ಭಾಷಾಸೇವಕರೊಂದಿಗೆ ಕೂಡಿ ಕೆಲಸ ಮಾಡಿದರು. ರಾಜಕುಮಾರಿಯವರಿಗೆ ವಿದ್ಯಾಗುರುಗಳಾಗಿದ್ದರು. ಮೈಸೂರು ಅರಮನೆಯಿಂದಲೂ ಶೃಂಗೇರಿ ಗುರುಪೀಠದಿಂದಲೂ ಗೌರವಿತರು.

ಗ್ರಂಥಗಳು : ಉತ್ತರಸೀತಾಚ೭ (ಅ), ಸೀತಾಚರಿತ್ರೆ (ಅ), ಮೃಚ್ಛಕಟಿಕೆ (ಅ), ಮಾಳವಿಕಾಗ್ನಿಮಿತ್ರ (ಅ).

ಸಂಸ್ಕೃತ : ವಿದ್ವಚ್ಚಕೋರಚಂದ್ರಿಕೆ, ಶಾರದಾಷ್ಟಕಾದಿಸ್ತೋತ್ರ ಇತ್ಯಾದಿ.

ಗಣೇಶರಾವ್, ಪಾಲ್

ಜ : ಸು. ೧೮೩೫ ಮ : (?)

ಮಂಗಳೂರು. ಮದ್ರಾಸ್ ವಿಶ್ವವಿದ್ಯಾಲಯದ ಉಪಪದವೀಧರರಾಗಿದ್ದ ಇವರು ಕೆಲಕಾಲ ಕಾರವಾರ ಇಂಗ್ಲೀಷು ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಆಮೇಲೆ ಸವಣೂರು ಸಂಸ್ಥಾನದಲ್ಲಿ ಮುಖ್ಯಾಧ್ಯಾಪಕತ್ವವನ್ನು ವಹಿಸಿಕೊಂಡರು (೧೮೭೧).

ಗ್ರಂಥ : ಜಹಂಗೀರನ ಚರಿತ್ರವು (ಮು-ಚ.೧೮೭೮)

ಭೀಮಾಜಿ, ರಾಘವೇಂದ್ರ, ಕುಲಕರ್ಣಿ

ಜ: ೧೮೩೫ ಮ : ೧೯೧೫

ವಿಜಾಪುರ ಜಿಲ್ಲೆಯ ಐಹೊಳ್ಳಿ ಗ್ರಾಮ. ಪ್ರಾಥಮಿಕ ಅಭ್ಯಾಸವನ್ನು ಪೂರ್ತಿಗೊಳಿಸಿ ಸ್ವಂತಪರಿಶ್ರಮದಿಂದ ಹಳಗನ್ನಡ ಹಾಗೂ ಸಂಸ್ಕೃತಕಾವ್ಯಗಳನ್ನು ಅಭ್ಯಸಿಸಿದರು. ಇವರು ಕೆಲಕಾಲ ಬೆಳಗಾವಿಯ ಸರದಾರ್ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಕವಿತೆ, ಪುರಾಣ, ನಾಟಕ ಮೊದಲಾದ ವಿಷಯಗಳಲ್ಲಿ ವಿಶೇಷ ಆಸ್ಥೆಯುಳ್ಳವರಾದ ಇವರು ನೌಕರಿಯನ್ನು ಬಿಟ್ಟು ಸ್ವಗ್ರಾಮಕ್ಕೆ ಬಂದು 'ಪಾರಿಜಾತ' ಆಟವನ್ನು ಕಟ್ಟಿ ಆಡತೊಡಗಿದರು. ಪ್ರಸಿದ್ಧ ಗಾಯಕರೂ ಅಸ್ಖಲಿತ ವಾಗ್ಗೇಯಕಾರರೂ ಆದುದರಿಂದ ಇವರ ಪ್ರಯೋಗಗಳು ಅತ್ಯಂತ ಜನಪ್ರಿಯವಾಗಿದ್ದವು. 'ಐಹೊಳೆ ವೆಂಕಟೇಶ' ಎಂಬ ಮುದ್ರಿಕೆಯಿಂದ ಅನೇಕ ದೇವರನಾಮ, ಪದ, ಸುಳಾದಿ, ಉಗಾಭೋಗ, ಸುವ್ವಾಲೆಗಳನ್ನು ರಚಿಸಿದ್ದಾರೆ.

ಗ್ರಂಥಗಳು : ಶ್ರೀಕೃಷ್ಣಪಾರಿಜಾತ, ರಾಮಪಾರಿಜಾತ(ಆ. ೧೮೯೨)★

ಮಲ್ಲಪ್ಪ, ಬೇಗೂರು

ಜ : ೧೮೩೫ ಮ : ೧೪-೨-೧೯೦೭

ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಎಂಬ ಗ್ರಾಮದವರು. ಚಿಕ್ಕಂದಿನಲ್ಲಿಯೇ ಇವರು ಅನಾಥರಾದುದರಿಂದ ಸೋದರಮಾವಂದಿರಾಗಿದ್ದ ಮೈಸೂರು ಅರಮನೆಯ ಭಕ್ಷಿ ಕೆಂಪಣ್ಣನವರು ಇವರ ಪೋಷಣೆಯ ಭಾರವನ್ನು ನಿರ್ವಹಿಸಿದರು. ಮಲ್ಲಪ್ಪನವರು ಕನ್ನಡ, ಸಂಸ್ಕೃತ ಮಾತ್ರವಲ್ಲದೆ ಮರಾಠಿ, ಪರ್ಶಿಯನ್ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿಯೂ ವಿಶೇಷ ವ್ಯಾಸಂಗವನ್ನು ಮಾಡಿದರು. ವ್ಯಾಕರಣಶಾಸ್ತ್ರದಲ್ಲಿ ನಿಷ್ಣಾತ ಪಂಡಿತರಾದುದರಿಂದ 'ವ್ಯಾಕರಣದ ಮಲ್ಲಪ್ಪ' ಎಂದೂ ಇವರು ಪರಿಚಿತರಾಗಿದ್ದರು.

ಶಿಕ್ಷಣವನ್ನು ಪೂರ್ತಿಗೊಳಿಸಿ ಮಲ್ಲಪ್ಪನವರು ಅರಮನೆಯಲ್ಲಿ ಭಾಷಾಂತರಕಾರರಾದರು. 'ಭಾಷೋಜ್ಜೀವಿನೀ ಪಾಠಶಾಲೆ' ಸ್ಥಾಪಿಸಲ್ಪಟ್ಟ ನಂತರ ಅಲ್ಲಿ ಮುಖ್ಯೋಪಾಧ್ಯಾಯರಾಗಿ ನಿಯಮಿಸಲ್ಪಟ್ಟರು. ಮೈಸೂರಿನ ಶ್ರೀಮತಿ ಚಿಕ್ಕಬಸಮ್ಮನವರ ಅನಾಥಾಲಯ, ಕೈ. ಭಕ್ಷಿ ಮರಿಮಲ್ಲಪ್ಪನವರ ಹೈಸ್ಕೂಲು, ವೀರಶೈವ ಸಂಸ್ಕೃತ ಪಾಠಶಾಲೆ ಮುಂತಾದ ಶಿಕ್ಷಣಸಂಸ್ಥೆಗಳ ಸ್ಥಾಪನೆಗಾಗಿ ಪ್ರಯತ್ನಿಸಿದವರಲ್ಲಿ ಮಲ್ಲಪ್ಪನವರೂ ಒಬ್ಬರು. ರೆ. ಕಿಟೆಲ್ ಹಾಗೂ ಬಿ.ಎಲ್.ರೈಸ್ ಅವರಿಗೆ ಕನ್ನಡಭಾಷಾ ವಿಷಯಕ ಕಾರ್ಯಗಳಲ್ಲಿ ಇವರು ತುಂಬ ಸಹಾಯಮಾಡಿದರು.

ಗ್ರಂಥ : ಶಬ್ದಾದರ್ಶ

ಪರಿಷ್ಕೃತ : ಅರ್ಥಾಲಂಕಾರಪ್ರಕರಣ (ನಾಗವರ್ಮಕೃತ ಕಾವ್ಯಾವಲೋಕನದ ಒಂದು ಪ್ರಕರಣ) (೧೮೮೨), ಕಾದಂಬರಿ (ನಾಗವರ್ಮಕೃತ) (೧೮೯೨), ರಾಜಶೇಖರ ವಿಲಾಸಂ (ಷಡಕ್ಷರಿಕೃತ) (೧೮೬೬).

ಶರೀಫಸಾಹೇಬ, ಶಿಶುನಾಳ

ಜ : ಸು. ೧೮೩೫ ಮ : ೧೮೮೮

ಧಾರವಾಡ ಜಿಲ್ಲೆಯ ಶಿಶುನಾಳ. ಜಾತಿಯಿಂದ ಮಹಮ್ಮದೀಯರಾಗಿದ್ದ ಇವರು ಕಳಸದ ಗೋವಿಂದಭಟ್ಟರ ಶಿಷ್ಯತ್ವವನ್ನು ವಹಿಸಿ ಅನೇಕ ವರ್ಷಗಳ ಅಧ್ಯಾತ್ಮಸಾಧನೆಯಿಂದ ಯೋಗಸಿದ್ಧಿಯನ್ನು ಪಡೆದರು. ಶೀಘ್ರಕವಿಗಳಾಗಿದ್ದು, 'ಶಿಶುನಾಳಾಧೀಶ' ಮುದ್ರಿಕೆಯಿಂದ ಅನೇಕ ಪದಗಳನ್ನು ರಚಿಸಿರುವರು. ಸರ್ವಧರ್ಮಾನುಯಾಯಿಗಳ ಮೇಲೆ ಪ್ರಭಾವ

★ ರುಕ್ಮಾಂಗದ, ಅಂಬರೀಷ, ನಳರಾಜ ಮೊದಲಾದ ನಾಟಕಗಳನ್ನೂ ಸುಭದ್ರಾ, ರುಕ್ಮಿಣಿ, ಸತ್ಯಭಾಮೆಯರ ಮುಖ್ಯದ ಹಾಡುಗಳನ್ನೂ 'ಏಕಾದಶೀಮಹಾತ್ಮೆ', 'ಸುಭದ್ರಾಪರಿಣಯ'ವೆಂಬ ಕಾವ್ಯಗಳನ್ನೂ ರಚಿಸಿದಂತೆ ತಿಳಿಯುತ್ತದೆ.

- ನಾ. ಭೀ. ಕಲಮದಾನಿ, ಜಯಂತಿ-ಧಾರವಾಡ, ಡಿಸೆಂಬರ್ 1956

ಬೀರಿದ ಇವರ ಸಮಾಧಿಯ ಬಳಿಯಲ್ಲಿ ಪ್ರತಿವರುಷ ಉರುಸು ಕೂಡುತ್ತದೆ.

ಗ್ರಂಥಗಳು : ತತ್ವಪದಗಳು-ಭಾಗ ೧, ಭಾಗ ೨ (ಅ.೧೯೧೯)

ಸಿದ್ಧಾರೂಢಸ್ವಾಮಿ

ಜ : ೧೮೩೬ ಮ : ೧೯೨೯

ನಿಜಾಮ ಪ್ರಾಂತದ ವಂಶದುರ್ಗವೆಂಬ ಗ್ರಾಮ; ಚಿಕ್ಕಂದಿನಿಂದಲೇ ವೇದಾಂತ ಮಾರ್ಗಾವಲಂಬಿಯಾಗಿದ್ದರು. ಗುರುಗಳಾದ ವೀರಭದ್ರಸ್ವಾಮಿಗಳ ಸನ್ನಿಧಿಯಲ್ಲಿ ಧರ್ಮಜಾಗೃತಿ ಹೊಂದಿ, ಗುಡಗುಂಟಿ ಅಮರಗುಂಡ ಮಲ್ಲಿಕಾರ್ಜುನಕ್ಷೇತ್ರದ ಕಟ್ಟಿಮಠದ ಪಟ್ಟಾಧಿಕಾರಿ ಗಜಗಂಡಸ್ವಾಮಿಗಳಲ್ಲಿ ಅಧ್ಯಯನವನ್ನು ಮಾಡಿದರು. ಅನಂತರ ಭಾರತಾದ್ಯಂತ ತೀರ್ಥಾಟನೆ ಮಾಡಿ, ಹುಬ್ಬಳ್ಳಿಯಲ್ಲಿ ಬಂದು ಸಿದ್ಧಾರೂಢ ಮಠವನ್ನು ಸ್ಥಾಪಿಸಿದರು. ದಕ್ಷಿಣ ಭಾರತದ ಪ್ರಸಿದ್ಧ ಪವಾಡಪುರುಷರಲ್ಲೊಬ್ಬರಾಗಿ, ಶಿಷ್ಯಸ್ತೋಮವನ್ನು ವಿಸ್ತರಿಸಿಕೊಂಡರು.

ಗ್ರಂಥ : ಪರಿಷ್ಕೃತ : ಪರಮಾನುಭವಬೋಧೆ. (ನಿಜಗುಣಶಿವಯೋಗಿಕೃತ; ಪ. ೧೮೮೭).

ರಾಯಿಸ್, ಬೆಂಜಮಿನ್, ಲೂಯಿ, ಸಿ.ಐ.ಇ., ಎಂ.ಆರ್.ಎ.ಎಸ್.

ಜ : ೧೭-೭-೧೮೩೭ ಮ : ೧೦-೭-೧೯೩೭

ಹ್ಯಾರೋ, ಇಂಗ್ಲೆಂಡ್. ಇ.ಪಿ. ರೈಸರ ಹಿರಿಯ ಬಂಧುಗಳಾದ ಇವರು ವಿದ್ಯಾಭ್ಯಾಸ ಮುಗಿಸಿದ ಬಳಿಕ ನಾಲ್ಕಾರು ವರ್ಷ ಕೆಲಸಮಾಡಿ, ೧೮೬೦ರಲ್ಲಿ ಭಾರತಕ್ಕೆ ಬಂದು, ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನ ಮುಖ್ಯಾಧ್ಯಾಪಕರಾದರು. ೧೮೬೬ರಲ್ಲಿ ಮೈಸೂರು ಹಾಗೂ ಕೊಡಗು ವಿಭಾಗದ ಶಾಲಾ ಇನ್‌ಸ್ಪೆಕ್ಟರರ ಅಧಿಕಾರವನ್ನು ವಹಿಸಿದರು. ೧೮೭೩ರಲ್ಲಿ ಇವರ ನೇತೃತ್ವದಲ್ಲಿ 'ಮೈಸೂರು ಗೆಜೆಟಿಯರ್'ನ ಕಾರ್ಯಾರಂಭವಾದದ್ದು. ಮೈಸೂರು ಹಾಗೂ ಕೊಡಗು ಸೀಮೆಯ ವಿದ್ಯಾಇಲಾಖೆಯ ಮುಖ್ಯಾಧಿಕಾರಿಗಳು (೧೮೭೪), ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪರೀಕ್ಷಕರು. ರಾಯಲ್ ಏಶಿಯಾಟಿಕ್ ಸೊಸೈಟಿಯ ಸಭಾಸದರು (೧೮೭೯). ಪ್ರಾಚೀನ ಸಂಸ್ಕೃತ ಗ್ರಂಥಗಳ ನಾಮಾವಲಿಯನ್ನು ಸಿದ್ಧಪಡಿಸಲು ಭಾರತ ಸರ್ಕಾರದಿಂದ ನಿಯುಕ್ತರಾದ ಅಧಿಕಾರಿಗಳು, ವಿದ್ಯಾಭ್ಯಾಸ ಆಯೋಗದ (ಹಂಟರ್ ಕಮಿಶನ್) ಕಾರ್ಯದರ್ಶಿಗಳು (೧೮೮೨) ಇತ್ಯಾದಿ. ೧೮೮೧ರಿಂದ ೮೩ರವರೆಗೆ ಮೈಸೂರು ಸಂಸ್ಥಾನದ ಜನಗಣತಿಯ ಮುಖ್ಯಾಧಿಕಾರಿಗಳೂ, ೧-೪-೧೮೮೬ರಂದು ಪ್ರಾರಂಭವಾದ ಮೈಸೂರು ಶಾಸನ ಇಲಾಖೆಯ ಪ್ರಥಮ ಉಪಾಧ್ಯಕ್ಷರೂ ಆಗಿದ್ದರು. ೧೮೮೬ರಿಂದ ೨೦ ವರ್ಷಗಳವರೆಗೆ ಪ್ರಾಚೀನ ಶಾಸನಗಳ ಪರಿಶೋಧನೆಯ ಕಾರ್ಯವನ್ನು ಮಾಡಿ ೧೯೦೬ರಲ್ಲಿ ಸ್ವದೇಶಕ್ಕೆ ಮರಳಿದರು.

೧೮೮೭ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಗೌರವವನ್ನು ಪಡೆದರು.

ಗ್ರಂಥಗಳು : ಪರಿಷ್ಕೃತ : ಕರ್ನಾಟಕ ಭಾಷಾಭೂಷಣ (ನಾಗವರ್ಮಕೃತ, ೧೮೮೪), ಕರ್ನಾಟಕ ಶಬ್ದಾನುಶಾಸನ (ಭಟ್ಟಾಕಲಂಕದೇವಕೃತ, ೧೮೯೦), ರಾಮಚಂದ್ರಚರಿತಪುರಾಣ (ನಾಗಚಂದ್ರಕೃತ, ೧೮೭೪), ವಿಕ್ರಮಾರ್ಜುನವಿಜಯ (ಪಂಪಕವಿಕೃತ, ೧೮೯೮).

ಸಂಸ್ಕೃತ : ರಾಮಾಯಣಸಂಗ್ರಹ (ತಿರುನಗರಿ ರಾಮಾನುಜಯ್ಯಕೃತ ಕನ್ನಡ-ಇಂಗ್ಲೀಷ್ ಶಬ್ದಾರ್ಥದೊಂದಿಗೆ, ೧೮೬೮).

ಇಂಗ್ಲೀಷ್ : Bibliotheca Carnatica (1884), Epigraphica Carnatica (1886), Mysore Inscriptions (1879).

ಕೃಷ್ಣಬ್ರಹ್ಮತಂತ್ರ, ಪರಕಾಲಯತಿ

ಜ : ೧೮೩೯ ಮ : (?)

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ. ಕೃಷ್ಣಮಾಚಾರ್ಯರೆಂಬುದು ಇವರ ಪೂರ್ವಾಶ್ರಮದ ಹೆಸರು. ಬಾಲ್ಯಶಿಕ್ಷಣವನ್ನು ಮನೆಯಲ್ಲಿಯೇ ಪೂರೈಸಿ, ಮೈಸೂರು ಆಸ್ಥಾನ ಪಂಡಿತ ಸಜ್ಜಯಾಚಾರ್ಯರಲ್ಲಿಯೂ ಮತ್ತೆ ಕೆಲವು ಕಾಲ ಶ್ರೀನಿವಾಸ ಬ್ರಹ್ಮತಂತ್ರಯತೀಂದ್ರರ ಆಶ್ರಯದಲ್ಲಿಯೂ ಸಾಹಿತ್ಯ, ವೇದಾಂತ ಪಾಠಗಳನ್ನು ಓದಿದರು. ಮುಮ್ಮಡಿ ಕೃಷ್ಣರಾಜರಿಂದ 'ಕವಿಗಂಡಭೇರುಂಡ' ಎಂಬ ಬಿರುದನ್ನೂ, ಗದ್ವಾಲ, ರೇವಾ ಮುಂತಾದ ಸಂಸ್ಥಾನಾಧಿಪತಿಗಳಿಂದ ರಾಜಮರ್ಯಾದೆಯನ್ನೂ ಪಡೆದವರಾಗಿದ್ದರು. ಉತ್ತರ ಭಾರತದ ಅನೇಕ ಪಂಡಿತರನ್ನು ಜಯಿಸಿದವರು. ಇವರು ಕೆಲವು ಕಾಲ ಚಾಮರಾಜ ದೊರೆಗಳಿಗೆ ರಾಜಗುರುಗಳಾಗಿದ್ದು, ಕೊನೆಗೆ ಪರಕಾಲ ಗುರುಪೀಠವನ್ನಲಂಕರಿಸಿದರು.

ಗ್ರಂಥ : ಕಲ್ಯಾಣಗೀತಮಂಜರಿ (ಅ. ೧೮೯೦).

ಸಂಸ್ಕೃತ : (ಸಂಸ್ಕೃತದಲ್ಲಿ ಸುಮಾರು ೬೦ ಗ್ರಂಥಗಳನ್ನು ರಚಿಸಿದ್ದಾರೆ. ಎಂ. ಎನ್.ಶ್ರೀನಿವಾಸಯ್ಯಂಗಾರ್ ಅವರ ಸಂಸ್ಕೃತ ಕವಿಚರಿತೆಯ ಮೂರನೆಯ ಭಾಗವನ್ನು ನೋಡಬಹುದು.)

ಕೃಷ್ಣಸ್ವಾಮಿ, ನಾರಾಯಣಪ್ಪ, ಭಾಗವತಂ, ಕವಿವರ್ಯ

ಜ: ಸು. ೧೮೪೦

ಮೈಸೂರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪಂಡಿತರಾಗಿದ್ದರು.

ಗ್ರಂಥಗಳು : ಕನ್ನಡ ಮಹಾಭಾಗವತ ಪದ್ಯರೂಪ (ಅ), ಜಾತಕಜ್ಞಾನ ರತ್ನಾವಳಿ (ಖ), ಟೀಕಾಜೈಮಿನಿ (ಧಾ), ಬೃಹಜ್ಜಾತಕಾಖ್ಯ ಹೋರಾಶಾಸ್ತ್ರ (ಖ)ಭರ್ತೃಹರಿಸುಭಾಷಿತ

ಶ್ಲೋಕ (ಅ), ವ್ರತಚೂಡಾಮಣಿ (ಧ), ವ್ರತರತ್ನಾಕರಂ (ಧ), ಶಿಶುವೈದ್ಯಸಂಜೀವಿನಿ (ಥ), ಸಟೀಕ ಹರಿಕಥಾಮೃತಸಾರ (ಧ), ಜ್ಞಾನಯೋಗ ತರಂಗಿಣಿ (ವಾಲ್ಮೀಕಿ ಕವಿಕೃತ ಯೋಗವಾಶಿಷ್ಠರಾಮಾಯಣದ ಭಾಷಾಂತರ), ೩ ಭಾಗಗಳು (ಪ. ೧೮೮೬-೯೪), ಜ್ಞಾನಸಿಂಧು.

ಪರಿಷ್ಕೃತ : ಕನ್ನಡ ತೊರವೆರಾಮಾಯಣ, ಕನ್ನಡ ದಶಪರ್ವ ಭಾರತ.

ಕ್ರಿಸ್ತಾನುಜವತ್ಸ

ಜ : ಸು. ೧೮೪೦ ಮ : ಸು ೧೯೨೦

ಮಂಗಳೂರು. ಬಾಸೆಲ್ ಮಿಶನ್ ಥಿಯಾಲಜಿಕಲ್ಲಿನಲ್ಲಿ ಪ್ರಾಧ್ಯಾಪಕರಾಗಿದ್ದರು. ೧೮೬೮ರಿಂದ ೧೮೭೧ರವರೆಗೆ 'ಸಭಾಪತ್ರ'ದ ಸಂಪಾದಕರು.

ಗ್ರಂಥಗಳು : ಇಂಗ್ಲೀಷು-ಕನ್ನಡ ಸಂಭಾಷಣ ವಾಕ್ಯಗಳು (ದ. ೧೮೭೯, II), ಕಡೆಗೆ ವಜೀರನಾದ ಯೋಸೇಫನೆಂಬ ಯುವಗೋಪಾಲರತ್ನ (Theodor Micha Waltz ಅವರೊಂದಿಗೆ) (ಧ-ಚ.೧೮೭೬), ಕನ್ನಡ-ಇಂಗ್ಲೀಷು ಲಘುಕೋಶ (ದ-ಏ.೧೯೧೩), ಕನ್ನಡ ಪಂಚತಂತ್ರವು (ಇ), ಕನ್ನಡ ಪಂಚಾಂಗವು (ಪಿ.ಬಾಳಪ್ಪಯ್ಯ ಅವರೊಂದಿಗೆ) (ಖ.ಓ. ೧೮೭೦ರಿಂದ ೭೮), ಜನ್ಮಾಂತರೋಪದೇಶವು (ಧ. ೧೮೭೪), ಬೂಸಿಯ ಕಡೇ ದಿನಗಳು (T.Smith ಅವರ ಇಂಗ್ಲೀಷು ಪುಸ್ತಕದ ಭಾಷಾಂತರ) (ಧ-ಚ.೧೮೭೯), ಮಸೀಹ ವಿಜಯ (ಧ); ವಿಕ್ಟೋರಿಯಾ ಚಕ್ರವರ್ತಿನಿ ಅವರ ಜೀವಮಾನದ ವೃತ್ತಾಂತವು (ಇಂಗ್ಲೀಷಿನಿಂದ ಭಾಷಾಂತರ) (ಯ-ಚ.೧೮೯೭).

ಗುಂಡೋ, ಕೃಷ್ಣ, ಚುರಮರಿ

ಜ : ಸು. ೧೮೪೦ ಮ : ಸು. ೧೯೨೦

ಧಾರವಾಡ. 'ಶಾಕುಂತಲ' ನಾಟಕದ ಆದ್ಯ ಭಾಷಾಂತರಕಾರರಾದ ಶೇಷೋ ರಾಮಚಂದ್ರ ಚುರಮರಿಯವರ ಕಕ್ಕನ ಮಗ. ಹುಬ್ಬಳ್ಳಿಯ ಕಾಟನ್ ಜಿನ್ ಫ್ಯಾಕ್ಟರಿಯಲ್ಲಿ ಗುಮಾಸ್ತರಾಗಿದ್ದರು.

ಗ್ರಂಥ : ರಾಘವೇಂದ್ರರಾವ್ ನಾಟಕ (Shakespeare ಕೃತ Othello ನಾಟಕದ ಭಾಷಾಂತರ) (ಆ. ೧೮೮೫)

ಶಾಮರಾವ, ವಿಠ್ಠಲ, ಕಾಯಕಿಣಿ, ಜೆ.ಪಿ.

ಜ : ೧೮೪೧ ಮ :೧೫-೬-೧೯೦೫

ಉತ್ತರ ಕನ್ನಡ ಜಿಲ್ಲೆಯ ಮುರಡೇಶ್ವರ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ, ಸ್ವಂತವ್ಯಾಸಂಗದಿಂದ ಇಂಗ್ಲೀಷು ಕಲಿತು, Public Service ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂಬಯಿ ಸರಕಾರದ ಕಂದಾಯ ಶಾಖೆಯಲ್ಲಿ ಗುಮಾಸ್ತರಾಗಿ

ಸೇರಿ, ಅನಂತರ ಮುಂಬಯಿಯಲ್ಲಿ ಸುಪ್ರಸಿದ್ಧ ಹೈಕೋರ್ಟ್ ವಕೀಲರಾಗಿದ್ದ ಶಾಂತರಾಮ ನಾರಾಯಣ ಪಾಟಕರರ ಬಳಿಯಲ್ಲಿ ಕೆಲವು ಕಾಲ ಗುಮಾಸ್ತರಾಗಿದ್ದು, ಮತ್ತೆ ಹಿಂತಿರುಗಿ ಸ್ವಸ್ಥಾನಕ್ಕೆ ಬಂದರು. ಎರಡು ವರ್ಷಗಳ ನಂತರ ಕಾರವಾರ ಜಿಲ್ಲಾ ನ್ಯಾಯಾಧೀಶರ ಕಚೇರಿಗೆ ವರ್ಗಾಯಿಸಲ್ಪಟ್ಟಾಗ ಇವರ ಭಾಷಾ ಪ್ರಭುತ್ವವೂ ಕರ್ತೃತ್ವಶಕ್ತಿಯೂ ಬೆಳಕಿಗೆ ಬಂದವು. ಪ್ರೀವೀಕೌನ್ಸಿಲಿನ ಅಪೀಲುಗಳಿಗೆ ಸಂಬಂಧಿಸಿದ ಕಾಗದಪತ್ರಗಳ ಭಾಷಾಂತರ ಕಾರ್ಯವನ್ನು ಇವರು ಅತ್ಯಂತ ವಿಚಕ್ಷಣತೆಯಿಂದ ಪಾರುಗೊಳಿಸಿದರು. ತತ್ಪರಿಣಾಮವಾಗಿ ೧೮೬೭ರಲ್ಲಿ ಮುಂಬಯಿ ಹೈಕೋರ್ಟಿನಲ್ಲಿ ದ್ವಿತೀಯ ಭಾಷಂತರಕಾರರಾಗಿ ನಿಯಮಿಸಲ್ಪಟ್ಟರು. ನಾಲ್ಕು ವರ್ಷಗಳಲ್ಲಿ ವಕೀಲಿಯ ಅಭ್ಯಾಸಮಾಡಿ, ಒಳ್ಳೆಯ ರೀತಿಯಲ್ಲಿ ಯಶಸ್ವಿಯಾಗಿ, ಕೆಲವೇ ದಿನಗಳಲ್ಲಿ ನಾಮಾಂಕಿತ ವಕೀಲರೆನಿಸಿಕೊಂಡರು.

ಕನ್ನಡ-ಇಂಗ್ಲೀಷು ಮಾತ್ರವಲ್ಲದೆ ಸಂಸ್ಕೃತ ಭಾಷಾಪಂಡಿತರಾಗಿದ್ದ ಇವರು ತೆಲುಗು, ತಮಿಳು, ಮಲೆಯಾಳಿ, ಗುಜರಾತಿ ಹಾಗೂ ಜರ್ಮನ್ ಭಾಷೆಗಳನ್ನು ಬಲ್ಲವರು.

ಮುಂಬಯಿ ವಿಶ್ವವಿದ್ಯಾನಿಲಯದ 'ಫೆಲೋ ಮತ್ತು Syndic-in-Law, ೧೮೬೯ರಿಂದ ಅನೇಕ ವರ್ಷಗಳವರೆಗೆ ಆ ವಿಶ್ವವಿದ್ಯಾನಿಲಯದ ಕನ್ನಡ ಪರೀಕ್ಷಕರು; ಪ್ರಾದೇಶಿಕ ಭಾಷಾ ಪರೀಕ್ಷೆಗೆಂದು ನಿಯಮಕವಾದ Civil & Military Examination ಕಮಿಟಿಯ ಸಭಾಸದರು; ರಾಯಲ್ ಏಶಿಯಾಟಿಕ್ ಸೊಸಾಯಿಟಿ, ಪ್ರಾರ್ಥನಾಸಮಾಜ, ಥಿಯಾಸಫಿಕಲ್ ಸೊಸಾಯಿಟಿ ಮೊದಲಾದ ಸಂಸ್ಥೆಗಳ ಉತ್ಸಾಹೀ ಕಾರ್ಯಕರ್ತರು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರೂ ಹಲವು ವರ್ಷ ಅದರ ಅಧ್ಯಕ್ಷರೂ ಆಗಿದ್ದರು (೧೮೯೧ ಮತ್ತು ೧೯೦೧ರಿಂದ ಕೊನೆಯವರೆಗೆ).

ಹುಬ್ಬಳ್ಳಿಯಲ್ಲಿ ಸದರ್ನ್ ಮರಾಠಾ ಸ್ಪಿನ್ನಿಂಗ್ ಅಂಡ್ ವೀವಿಂಗ್ ಕಂಪನಿಯ ಸ್ಥಾಪನೆಯಲ್ಲಿ ಪ್ರಮುಖರೂ ಅನೇಕ ವರ್ಷ ಅದರ ಡೈರೆಕ್ಟರರೂ ಆಗಿದ್ದರು. ಅದರಂತೆ Lord Rey Manufcturing Company, ಹುಬ್ಬಳ್ಳಿಯ ಕರ್ನಾಟಕ ಜಿನ್ನಿಂಗ್ ಪ್ರೆಸ್ಸುಗಳ ನಿರ್ದೇಶಕ ಮಂಡಲದಲ್ಲಿದ್ದವರು. ಉತ್ತರ ಕನ್ನಡ ಜಿಲ್ಲೆಯ ಚಿತ್ರಾಪುರದಲ್ಲಿ ಕ್ಲಬ್ಬು, ವಾಚನಾಲಯ, ಸಭಾಗೃಹಗಳನ್ನು ಸ್ಥಾಪಿಸಿದರು.

ಗ್ರಂಥಗಳು : ವಿಧವಾಪುನರ್ವಿವಾಹ, ವಿಶ್ವಗುಣಾದರ್ಶ (ವೆಂಕಟಾಧ್ವರಿಕೃತ ಸಂಸ್ಕೃತ ಗ್ರಂಥದ ಭಾಷಾಂತರ), ಸಮುದ್ರ ಪರ್ಯಟನ*.

ಇಂಗ್ಲೀಷ್ : Vishwagunadarsha

---

* 'ಪರಾಶರಮಾಧವಿ'ಗೆ ಸಂಬಂಧಿಸಿದ ಇವರ ಅಪೂರ್ಣ ಕೃತಿಯ ಅವತರಣಿಕೆಯು ಮುಂಬಯಿ ರಾಯಲ್ ಏಶಿಯಾಟಿಕ್ ಸೊಸಾಯಿಟಿಗೆ Posthumous Paper ಎಂದು ಕೊಡಲ್ಪಟ್ಟಿತು.

ಬಸವಪ್ಪಶಾಸ್ತ್ರೀ, ಮಹಾದೇವಶಾಸ್ತ್ರೀ, ಆಸ್ಥಾನವಿದ್ವಾನ್, ಅಭಿನವ ಕಾಳಿದಾಸ

ಜ : ೧೮೪೩ ಮ : ೧೮೯೧

ಮೈಸೂರು. ಚಿಕ್ಕಂದಿನಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡು ಅನಾಥರಾಗಿದ್ದ ಇವರು ಮುಮ್ಮಡಿ ಕೃಷ್ಣರಾಜರ ಕೃಪಾಪೋಷಣೆಯಿಂದ ಬೆಳೆದರು. ಆದುದರಿಂದ ಶಿಕ್ಷಣದ ಏರ್ಪಾಡು ಆರಮನೆಯಿಂದಲೇ ಮಾಡಲ್ಪಟ್ಟಿತು. ಸಂಸ್ಕೃತನಾಟಕ, ವ್ಯಾಕರಣಾದಿ ಶಾಸ್ತ್ರಗಳಲ್ಲಿಯೂ ಹಳೆಗನ್ನಡ ಸಾಹಿತ್ಯದಲ್ಲಿಯೂ ಪ್ರೌಢವ್ಯಾಸಂಗವನ್ನು ಮಾಡಿ ಪ್ರತಿಭಾನ್ವಿತ ಕವಿಗಳಾದರು. ಸಂಗೀತದಲ್ಲಿಯೂ ಅಪ್ರತಿಮ ವಿದ್ವಾಂಸರು. ಇವರು ಅರಮನೆಯ ಪುರೋಹಿತರೂ ರಾಜಗುರುಗಳೂ ಆಗಿದ್ದರು. ಇವರ ಪ್ರತಿಭೆ, ವೈದುಷ್ಯಕ್ಕೆ ಮೆಚ್ಚಿದ ಮಹಾರಾಜರು, 'ಆಸ್ಥಾನವಿದ್ವಾನ್' ಮತ್ತು 'ಅಭಿನವ ಕಾಳಿದಾಸ' ಇತ್ಯಾದಿ ಪ್ರಶಸ್ತಿಗಳೊಂದಿಗೆ ಇವರನ್ನು ಗೌರವಿಸಿದರು. ಹತ್ತೊಂಬತ್ತನೆಯ ಶತಮಾನದ ಕವಿಗಳಲ್ಲಿ ಅಸಾಮಾನ್ಯ ಪ್ರತಿಭಾವಂತರೆಂದು ಗಣಿಸಲ್ಪಟ್ಟ ಇವರು ಅನೇಕ ಸಂಸ್ಕೃತನಾಟಕಗಳನ್ನು ಭಾಷಾಂತರಿಸಿ ರಂಗಭೂಮಿಯ ಮೇಲೆ ತಂದರು. ಕ್ರಿ.ಶ. ೧೮೮೨ರಲ್ಲಿ ಸ್ಥಾಪಿತವಾದ 'ಚಾಮರಾಜೇಂದ್ರ ನಾಟಕ ಸಭಾ' ಎಂಬ ಸಂಸ್ಥೆಗೆ ಇವರ ಪ್ರಮುಖ ನಾಟಕಕಾರರಾಗಿದ್ದರು. ಕುದುರೆ ಬಂಡಿಯಲ್ಲಿ ವಾಯುವಿಹಾರಕ್ಕೆಂದು ಹೋದಾಗ, ಮಧ್ಯವಯಸ್ಸಿನಲ್ಲಿಯೇ ಒಂದು ಸಲ ಅಪಘಾತಕ್ಕೀಡಾಗಿ ಅಪಮೃತ್ಯುವಿಗೆ ವಶವಾದರು.

ಗ್ರಂಥಗಳು : ಅಭಿಜ್ಞಾನಶಾಕುಂತಲ (ಕಾಳಿದಾಸ ಕವಿಯ ಸಂಸ್ಕೃತ ನಾಟಕದ ಭಾಷಾಂತರ) (ಆ. ೧೯೨೨- IV), ಉತ್ತರರಾಮಚರಿತ್ರೆ (೧೯೧೧) ಚಂಡಕೌಶಿಕ, ದಮಯಂತೀ ಸ್ವಯಂವರವು, ನೀತಿಸಾರಸಂಗ್ರಹ, ಭರ್ತೃಹರಿ ಸುಭಾಷಿತವು, ರತ್ನಾವಳೀ, ವಿಕ್ರಮೋರ್ವಶೀಯ, ಶೂರಸೇನಚರಿತ್ರೆ (Shakespeare ಕೃತ Othello ನಾಟಕದ ಭಾಷಾಂತರ -ಸಿ.ಸುಬ್ಬರಾವ್ ಅವರೊಂದಿಗೆ ಆ. ೧೮೯೫), ಸಾವಿತ್ರಿಚರಿತ್ರೆ.

ಸಂಸ್ಕೃತ : ಶಿವಾಷ್ಟಕಮ್. ಶಿವಭಕ್ತಿಸುಧಾತರಂಗಿಣೀ, ತ್ರಿಷಷ್ಠಿಪುರಾತನಸ್ತವಃ, ಅಂಬಾ ಷೋಡಶಮಂಜರಿ, ಆರ್ಯಾಶತಕಮ್, ಶಾರದಾದಂಡಕಮ್.★

ರಾಮಕೃಷ್ಣಯ್ಯಾ, ವೆಂಕಪ್ಪಯ್ಯಾ, ಸಜೀಪ

ಜ : ೧೮೪೩ ಮ : ೨೯-೭-೧೯೧೫

ಬಂಟವಾಳದ ಬಳಿ ಸಜೀಪ ಗ್ರಾಮ. ವೆಂಕಪ್ಪಯ್ಯನವರು ಕನ್ನಡ ಭಾಷಾ ಪಂಡಿತರೂ, ಪುರಾಣ-ಪುಣ್ಯಕಥೆಯಲ್ಲಿ ವಿಶೇಷ ಶ್ರದ್ಧೆಯುಳ್ಳವರೂ ಆಗಿದ್ದರು. ಪ್ರಾಚೀನ ಕಾವ್ಯಗ್ರಂಥಗಳನ್ನು ಪ್ರತಿಮಾಡುವ ಕಾರ್ಯದಲ್ಲಿ ಇವರು ಅತ್ಯಂತ ಪರಿಶ್ರಮಪಡುತ್ತಿದ್ದರು. ಪ್ರಾಥಮಿಕ ಶಿಕ್ಷಣವನ್ನು ಮನೆಯಲ್ಲಿಯೇ ಪೂರೈಸಿ, ರಾಮಕೃಷ್ಣಯ್ಯನವರು ತಮ್ಮ

★ ಶ್ರೀಮದ್ರೇಣುಕ ವಿಜಯಂ ಎಂಬ ಕೃತಿಯು ಅಪೂರ್ಣವಿದ್ದು, ಕೃಷ್ಣರಾಜಾಭ್ಯುದಯ, ಮಾಲತೀಮಾಧವ, ಹರ್ಷಚರಿತ್ರೆ, ಎಂಬ ಗ್ರಂಥಗಳು ಅನುಪಲಬ್ಧವಾಗಿವೆ.

೧೪ನೇ ವಯಸ್ಸಿನಲ್ಲಿ ಮಂಗಳೂರಿಗೆ ಬಂದು ಮಿಶನ್ ಸ್ಕೂಲಿನಲ್ಲಿ ಇಂಗ್ಲೀಷ್ ಓದಿದರು. ಮುಂದೆ ಕೆಲಕಾಲ ಶಿಕ್ಷಣಶಾಖೆಯಲ್ಲಿ 'ಇನ್‌ಸ್ಪೆಕ್ಟಿಂಗ್ ಸ್ಕೂಲ್ ಮಾಸ್ಟರ್' ಆಗಿದ್ದು, ಕ್ರಿ. ಶ. ೧೮೭೮ರ ಸುಮಾರಿಗೆ ಮಂಗಳೂರು ಉಮಾಮಹೇಶ್ವರ ಶಾಲೆ (ಇಂದಿನ ಗಣಪತಿ ಹೈಸ್ಕೂಲ್)ಯ ಮುಖ್ಯಾಧ್ಯಾಪಕರಾದರು. ಎರಡು ವರ್ಷಗಳನಂತರ, ಅಲ್ಲಿಯೇ ಸೇಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ಪಂಡಿತರಾಗಿ ನಿಯಮಕ ಹೊಂದಿ ಕೊನೆಯವರೆಗೂ ಅದೇ ಕೆಲಸದಲ್ಲಿದ್ದರು. ಇದೇ ಸಮಯದಲ್ಲಿ ಫಾದರ್ ಮುಲ್ಲರ್ ಅವರ ಪರಿಚಯದಿಂದ ಹೋಮಿಯೋಪಥಿ ವೈದ್ಯಶಾಸ್ತ್ರದ ಅಭ್ಯಾಸಮಾಡಿ ಜನಪ್ರಿಯ ವೈದ್ಯರಾದರು. ದಶಾವತಾರದ ಮೇಳಕಟ್ಟುವುದರಲ್ಲಿ ಇವರು ಜಿಲ್ಲೆಯಲ್ಲಿ ಹೆಸರಾದವರಾಗಿದ್ದರು.

ಗ್ರಂಥಗಳು : ಕನ್ನಡ ವಚನಕೌಮುದಿ (ದ.೧೮೮೫), ಭಾರತಕಥಾಸಾರ, ಪಾಂಡವಾಶ್ವಮೇಧ, ಶ್ರೀರಾಮಚರಿತ್ರೆ, ವಿಕ್ಟೋರಿಯಾರಾಣಿ, ಸಂಕ್ಷಿಪ್ತ ರಾಮಾಯಣ.

ಶಿವರಾವ, ಭಾರದ್ವಾಜ

ಜ : ೧೮೪೩ ಮ : ೧೯೨೩

ಮಂಗಳೂರು. ಹೋಮಿಯೋಪಥಿ ಶಾಸ್ತ್ರಪಾರಂಗತರಾಗಿದ್ದ ಇವರು ವೈದ್ಯಕೀಯ ವ್ಯವಸಾಯವನ್ನು ಕೈಕೊಂಡಿದ್ದರು. ಮಂಗಳೂರು ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಅಚ್ಚು ತಿದ್ದುವ (Proof Reader)ಕೆಲಸವನ್ನೂ ಮಾಡುತ್ತಿದ್ದರು. ನಿಘಂಟು ರಚನೆಯಲ್ಲಿ ರೆ.ಕಿಟೆಲ್ಲರಿಗೆ ಇವರು ವಿಶೇಷ ನೆರವಾದರು.

ಗ್ರಂಥಗಳು : ಗೃಹೋಪಯೋಗದ ಹೋಮಿಯೋಪಥಿ (ಫ.೧೯೨೦, II), ರೋಗಚಿಕಿತ್ಸೆ (ಫ), ವ್ಯಾಯಾಮದೀಪಿಕೆ (ಫ.೧೮೯೬).

ವೆಂಕಟಕೃಷ್ಣಯ್ಯ, ಸುಬ್ಬಯ್ಯ, ಎಂ.

ಜ : ೧೮೪೪ ಮ : ೮-೧೧-೧೯೩೪

'ತಾತಯ್ಯ' ಎಂದು ಮೈಸೂರು ನಾಡಿಗೆ ಆ ಕಾಲದಲ್ಲಿ ಚಿರಪರಿಚಿತರಾಗಿದ್ದ ವೆಂಕಟಕೃಷ್ಣಯ್ಯನವರು ಹೆಗ್ಗಡದೇವನಕೋಟೆ ತಾಲೂಕು ಮಗ್ಗೆ ಎಂಬ ಗ್ರಾಮದವರು. ಸುಬ್ಬಯ್ಯನವರು ಸಂಸ್ಕೃತ ಹಾಗೂ ಆಂಧ್ರಭಾಷಾಪಂಡಿತರಾಗಿದ್ದರು. ವೆಂಕಟಕೃಷ್ಣಯ್ಯನವರು ಆ ಪ್ರಭಾವದಲ್ಲಿ ಬೆಳೆದು ಎಂಟನೆಯ ವಯಸ್ಸಿನಲ್ಲಿಯೇ ಅನೇಕ ನೀತಿಪದ್ಯಗಳನ್ನೂ, ಪುರಾಣದ ನೀತಿಕಥೆಗಳನ್ನೂ ಸರಾಗವಾಗಿ ಹೇಳಬಲ್ಲವರಾಗಿದ್ದರು.

ಆದಾಗ ಸ್ಥಾಪಿತವಾದ 'ರಾಜಾಸ್ ಫ್ರೀ ಸ್ಕೂಲ್' ಹಾಗೂ 'ವೆಸ್ಲಿಯನ್ ಮಿಶನ್ ಹೈಸ್ಕೂಲ್'ನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ, ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ವೆಂಕಟಕೃಷ್ಣಯ್ಯನವರು ಅಧ್ಯಾಪನವೃತ್ತಿಯನ್ನು ಸ್ವೀಕರಿಸಿದರು; ಜೊತೆಗೆ

ಪತ್ರಿಕಾವ್ಯವಸಾಯವನ್ನೂ ಪ್ರಾರಂಭಿಸಿದರು. ಇವರು ಗಂಜಿ ನರಸಿಂಹಯ್ಯನವರ ಸದ್ವಿದ್ಯಾ ಪಾಠಶಾಲೆ, ಗುರಿಕಾರ ಮಲ್ಲಪ್ಪನವರ ಹೈಸ್ಕೂಲ್ ಹಾಗೂ ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಸುಮಾರು ೫೦ ವರ್ಷ ಮುಖ್ಯಾಧ್ಯಾಪಕರಾಗಿದ್ದರು.

ಮೈಸೂರು ಜನತೆಯ ರಾಜಕೀಯ ಹಾಗೂ ಸಾಮಾಜಿಕ ಜೀವನವನ್ನು ರೂಪಿಸುವದರಲ್ಲಿ ಇವರು ಸಲ್ಲಿಸಿದ ಸೇವೆಯು ಅಮೋಘವಾದುದು. ಮೈಸೂರು ಪ್ರಜಾಪ್ರತಿನಿಧಿಯು ಸ್ಥಾಪಿತವಾದೊಡನೆ ವೆಂಕಟಕೃಷ್ಣಯ್ಯನವರು ಪ್ರತಿನಿಧಿಯಾಗಿ ಅಲ್ಲಿ ನಿಯಾಮಕಹೊಂದಿದರು. ಅಲ್ಲದೆ ನ್ಯಾಯವಿಧಾಯಕ ಸಭೆ, ಸಂಪದಭ್ಯುದಯ ಸಭೆ, ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಲ್ ಕೌನ್ಸಿಲ್ ಮುಂತಾದ ಸಂಸ್ಥೆಗಳ ಕಾರ್ಯಭಾರದಲ್ಲಿ ಸುಮಾರು ಅರ್ಧಶತಮಾನದ ಕಾಲ ಉತ್ಸಾಹದಿಂದ ಭಾಗವಹಿಸಿದರು. ಮೈಸೂರು 'ಅನಾಥಾಲಯ'ದ ಸಂಸ್ಥಾಪಕರಲ್ಲಿ ಇವರೂ ಒಬ್ಬರು. 'ವೆಲುನಾಡು ಮಹಾಸಭೆ', 'ಲಿಟರರಿ ಅಸೋಸಿಯೇಶನ್' ಮುಂತಾದ ಸಂಸ್ಥೆಗಳಿಗೆ ಕೆಲಕಾಲ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಸಮ್ಮೇಲನದ ಎಂಟನೆಯ ಅಧಿವೇಶನದ (ದಾವಣಗೆರೆ, ೧೯೨೨) ಅಧ್ಯಕ್ಷರು.

'ಹಿತಬೋಧಿನಿ' (ಸೆಪ್ಟಂಬರ್ ೧೮೮೩), ಮಾಸಪತ್ರಿಕೆ, 'ಉದಂತಚಿಂತಾಮಣಿ' (ವಾರಪತ್ರಿಕೆ), 'ವೃತ್ತಾಂತಚಿಂತಾಮಣಿ' (ದಿನಪತ್ರಿಕೆ), 'Wealth of Mysore', 'Mysore Patriot', 'The Civic & Social Journal', 'ಸಾಧ್ವಿ', 'ಸಂಪದಭ್ಯುದಯ', 'Nature Cure', ಮುಂತಾದ ಅನೇಕ ಪತ್ರಿಕೆಗಳನ್ನು ಪ್ರಾರಂಭಿಸಿ ನಡೆಸಿದರು.

ಗ್ರಂಥಗಳು : ಅರ್ಥಸಾಧನ (ರ), ಆರೋಗ್ಯಸಾಧನಪ್ರಕಾಶಿಕೆ (ಧ), ಚೋರಗ್ರಹಣತಂತ್ರ (ಇ), ಟೆಲಿಮಾಕಸ್ಸನ ಸಾಹಸ ಚರಿತ್ರೆ-ಭಾಗ ೧. ಭಾಗ ೨. ದೇಶಾಭಿಮಾನ (ಈ), ಪರಂತಪವಿಜಯ (ಧೀ), ಬುಕರ್ ಟಿ. ವಾಶಿಂಗ್ಟನ್‌ರ ಚರಿತ್ರೆ, ಹರಿಶ್ಚಂದ್ರ ಚರಿತ್ರೆ (ಧ-ಚ).

ವೆಂಕಟರಾವ್, ಗುಳವಾಡಿ

ಜ : ೧೮೪೪ ಮ : ೧೯೧೩

ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರ. ಇವರು ಪೋಲೀಸ್ ಶಾಖೆಯಲ್ಲಿ ಇನ್‌ಸ್ಪೆಕ್ಟರ್‌ರಾಗಿದ್ದರು. ನಿವೃತ್ತರಾದ ಬಳಿಕ 'ಮಿತ್ರೋದಯ'-ವೆಂಬ ಪತ್ರಿಕೆಯನ್ನು ಕೆಲಕಾಲ ನಡೆಸಿದರು. ಅಭಿಜಾತ ಲೇಖಕರಾಗಿದ್ದ ಇವರು ಕನ್ನಡ ಸ್ವತಂತ್ರ ಸಾಮಾಜಿಕ ಕಾದಂಬರಿಯ ಆದ್ಯಪ್ರವರ್ತಕರು ಎಂದು ಹೇಳಲಾಗುತ್ತಿದೆ.

ಗ್ರಂಥಗಳು : ಇಂದಿರಾಬಾಯಿ* (ಇ), ಭಾಗೀರಥಿ (ಇ), ಲಾಡುಪ್ರಿಯಾಚಾರ್ಯ (ಇ ೧೮೯೯), ಸೀಮಂತಿನಿ (ಇ ೧೯೦೭)

* 'ಕೌಚಮನ್' ಎಂಬುವರು ಇದನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ.

ಅನಂತಾಚಾರ್ಯ, ರಾಮಸ್ವಾಮಯ್ಯಂಗಾರ್ಯ, ಗೋಮಠಂ.

ಜ : ೧೮೪೫ ಮ : ೧೯೨೩

ಮೈಸೂರು ಸಂಸ್ಥಾನದ ಮೇಲುಕೋಟೆ. ಅಲ್ಲಿಯ ಸಂಸ್ಕೃತ ವಿದ್ಯಾಲಯ ಸಂಸ್ಥಾಪಕರಾದ ಮಹಾವಿದ್ವಾನ್ ಅಕ್ಕಾರಕನ್ನಿ ನರಸಿಂಹಾಚಾರ್ಯರಲ್ಲಿ ವ್ಯಾಸಂಗ. ಅನಂತಾಚಾರ್ಯರು ಪುರಾಣಪ್ರವಚನದಲ್ಲಿ ಸುಪ್ರಸಿದ್ಧರಾಗಿದ್ದರು.

ಗ್ರಂಥಗಳು : ಭಾವೋಪನ್ಯಾಸಮಾಲಾ, ಶ್ರೀರಾಮಪಟ್ಟಾಭಿಷೇಕಮ್, ಶ್ರೀರಾಮಾಯಣ ಸರ್ವಸ್ವ.

ದೇವೇಂದ್ರಗೌಡ, ಶಿವನಗೌಡ, ಪಾಟೀಲ

ಜ : ೧-೨-೧೮೪೫ ಮ : ೨೦-೧೧-೧೯೫೧

ರಾಮದುರ್ಗ ತಾಲ್ಲೂಕಿನ ಮೆಣಸಿಗಿ. ಇವರು ಮೆಣಸಿಗಿಯ ಪೋಲೀಸ್ ಪಾಟೀಲರಾಗಿದ್ದರು. ಜೊತೆಗೆ, ಕೃಷಿಕರ್ಮ, ವೈದ್ಯಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಹಳೆಗನ್ನಡ ಸಾಹಿತ್ಯವನ್ನು ಅಭ್ಯಸಿಸಿದ ಇವರು ಉಪಾಧ್ಯಾಯರೂ ಆಗಿ ಕೆಲಸ ಮಾಡಿದರು. ಲಾವಣಿ, ತತ್ತ್ವಪದ ಹಾಗೂ ಹಿರೇಆಟಗಳನ್ನು ಕಟ್ಟಿ ಆ ಭಾಗದಲ್ಲಿ ವಿಶೇಷ ಪ್ರಚಾರ ಮಾಡಿದರು.

ಗ್ರಂಥಗಳು : ದೇವಾಂಗಪುರಾಣ (ಅ), ನಾಗಲಿಂಗಪುರಾಣ (ಅ).

ವೆಂಕಟಾಚಾರ್, ಗರುಡಾಚಾರ್, ಬಿಂಡಿಗನವಲೆ

ಜ : ೧೮೪೫ ಮ : ೨೬-೬-೧೯೧೪

ಕೋಯಿಮತ್ತೂರು ಜಿಲ್ಲೆಯ ಕೊಳ್ಳೆಗಾಲ ಇವರ ಮೂಲಸ್ಥಳ. ಕಾರಣಾಂತರದಿಂದ ಇವರ ಹಿರಿಯರು ಮೈಸೂರು ಸಂಸ್ಥಾನದ ಚಿತ್ರದುರ್ಗಕ್ಕೆ ಬಂದರು. ಪ್ರಾರಂಭಿಕ ಶಿಕ್ಷಣವನ್ನು ವೆಂಕಟಾಚಾರ್ಯರು ಮನೆಯಲ್ಲಿಯೇ ಮಾಡಿದರು. ಅನಂತರ ತುಮಕೂರು ಇಂಗ್ಲೀಷ್ ಸ್ಕೂಲನ್ನು ಸೇರಿ ೪-೬ ವರ್ಷಗಳಲ್ಲಿ ಜ್ಯೂನಿಯರ್ ಮತ್ತು ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಚಿಕ್ಕವಯಸ್ಸಿನಲ್ಲಿಯೇ ಮೈಸೂರು ಸರಕಾರದಲ್ಲಿ ಕೆಲಸಕ್ಕೆ ಸೇರಿ, ಅನೇಕ ವರ್ಷ ಚಿತ್ರದುರ್ಗದಲ್ಲಿ ಅಕೌಂಟೆಂಟರಾಗಿದ್ದರು. ೧೮೭೪-೭೫ರ ಸುಮಾರಿಗೆ ಶಿವಮೊಗ್ಗ ಜಿಲ್ಲೆಯ ಹೆಡ್‌ಮುನ್ಷಿಯಾಗಿ ಕೆಲಕಾಲ ಅಧಿಕಾರ ನಿರ್ವಹಿಸಿ, ಅನಂತರ ಜಿಲ್ಲಾ ಕೋರ್ಟು ಶಿರಸ್ತೇದಾರರೂ, ಪಬ್ಲಿಕ್ ಪ್ರಾಸಿಕ್ಯೂಟರರೂ ಆಗಿ ಕೆಲಸಮಾಡಿದರು. ಆ ಕಾಲದಲ್ಲಿ ಶಿವಮೊಗ್ಗೆಯ ಶಿರಸ್ತೇದಾರರಾಗಿದ್ದ ಬಿ.ನಾರಾಯಣಯ್ಯಂಗಾರ್ಯರೆಂಬವರ ನೆರವಿನಿಂದ ಸ್ವರ್ಗೀಯ ಈಶ್ವರಚಂದ್ರ ವಿದ್ಯಾಸಾಗರರ ಸ್ನೇಹವನ್ನು ಸಂಪಾದಿಸಿ ವಂಗಭಾಷಾ ಸಾಹಿತ್ಯವನ್ನು ಅಭ್ಯಸಿಸಿದರು. ಹಾಗೂ ಆರು ತಿಂಗಳಲ್ಲಿಯೇ ಈಶ್ವರಚಂದ್ರರು ಬರೆದ 'ಭ್ರಾಂತಿವಿಲಾಸ'ವೆಂಬ ಕಾದಂಬರಿಯನ್ನು ಭಾಷಾಂತರಿಸಿದರು. ಅಲ್ಲದೆ ಗ್ರಂಥಾವಲೋಕನದಲ್ಲಿ ವಿಶೇಷ ಆಸಕ್ತಿಯುಳ್ಳವರಾದ

ಇವರು 'ವಂಗೀಯ ವಿಶ್ವಕೋಶ' ಮುಂತಾದ ಅಪೂರ್ವ ಗ್ರಂಥಗಳನ್ನು ಸಂಗ್ರಹಿಸಿದರು.

ಸ್ವಾಮಿ ವಿವೇಕಾನಂದರು ದಕ್ಷಿಣ ಹಿಂದೂಸ್ಥಾನದ ಸಂಚಾರದಲ್ಲಿದ್ದಾಗ ವೆಂಕಟಾಚಾರ್ಯರು ಪುದುಚೇರಿಯಲ್ಲಿ ಅವರನ್ನು ಸಂದರ್ಶಿಸಿದರು. ಮದ್ರಾಸ್ ನಾಗರಿಕರಿಗೆ ವಿವೇಕಾನಂದರ ಪರಿಚಯವನ್ನು ಮಾಡಿಕೊಟ್ಟವರು ಆಚಾರ್ಯರೇ. ವಂಗಭಾಷೆ ಹಾಗೂ ಸಾಹಿತ್ಯದ ಮೇಲಿನ ಆಚಾರ್ಯರ ಪ್ರೀತಿಯನ್ನೂ ಪ್ರಭುತ್ವವನ್ನೂ ಕಂಡು ವಿವೇಕಾನಂದರಿಗೆ ಆಶ್ಚರ್ಯವೆನಿಸಿತು.

ಮುಂದೆ ನಂಜನಗೂಡು, ಚಿಕ್ಕಬಳ್ಳಾಪುರ, ಕೋಲಾರ, ಮೈಸೂರು ಮುಂತಾದ ಸ್ಥಳಗಳಲ್ಲಿ ಅಧಿಕಾರ ನಿರ್ವಹಿಸಿ ಕೊನೆಗೆ ಹಾಸನದಲ್ಲಿದ್ದಾಗ ೧೯೧೨ರಲ್ಲಿ ನಿವೃತ್ತರಾದರು.

ವೆಂಕಟಾಚಾರ್ಯರು ಪ್ರಖ್ಯಾತ ಟೆನ್ನಿಸ್ ಆಟಗಾರರಾಗಿದ್ದು ನಗರ ಡಿವಿಜನ್ನಿನ 'ಚಾಂಪಿಯನ್'ರೆನಿಸಿದರು. ನಂಜನಗೂಡಿನಲ್ಲಿದ್ದಾಗ ಶ್ರೀ ಚಾಮರಾಜೇಂದ್ರ ಒಡೆಯರು ಆಗಾಗ್ಗೆ ಬಂದು ಇವರೊಡನೆ ಟೆನ್ನಿಸ್ ಆಟವಾಡುತ್ತಿದ್ದರು. 'ಅವಕಾಶ ತೋಷಿಣಿ' (ಬೆಂಗಳೂರು)ಯ ಸಂಪಾದಕರಾಗಿದ್ದರು (೧೯೦೬-೭)

ಗ್ರಂಥಗಳು : (ಹೆಚ್ಚಾಗಿ ವಂಗಭಾಷೆಯಿಂದ ಪರಿವರ್ತಿತವಾಗಿವೆ.) ಅಡವಿಯ ಹುಡುಗಿ (ಇ. ೧೯೧೬), ಅತ್ತಿಗೆ, ಅಮೃತಪುಲಿನ (ಇ. ೧೯೦೭), ಅಹಲ್ಯಾಬಾಯಿ, ಆನಂದಮಠ (ಇ. ೧೮೯೯), ಇಂದಿರೆ (ಇ. ೧೮೯೭), ಉನ್ಮಾದಿನಿ (ಇ), ಉಪವಾಸ (ಇ), ಕಪಾಲಕುಂಡಲ (ಇ. ೧೮೯೮), ಕಮಲಾಕಾಂತ (ಇ. ೧೯೦೯), ಕರ್ಮಕ್ಕೆ ತಕ್ಕ ಫಲ, ಕೃಷ್ಣಾಕಾಂತನ ಉಯಿಲು (ಇ. ೧೯೦೯), ಕಾಗೆ, ಕೋಹಿನೂರು (ಇ. ೧೯೩೦), ಗೀತೋಕ್ತ ಧರ್ಮ, ಚಂದ್ರಶೇಖರ, ಚಿತ್ರವಿಚಿತ್ರಾವಳಿ ಭಾಗ ೧, ಭಾಗ ೨, ಚಿರತ್ನ ನಾಟಕರತ್ನ, ದಾಡಿಯ ಹೇಳಿಕೆ, ದುರ್ಗೇಶನಂದಿನಿ, ದೇವಿಚೌಧುರಾಣಿ, ದೇಶಾಂತರಗಳಲ್ಲಿ ಪ್ರಾಚೀನ ಭಾರತ ಪುರುಷರು, ನವಾಬನಂದಿನಿ, ನೀರದೆ, ನೀಳಾಗೀತ, ನೊಂದ ನುಡಿ, ಪರಿಮಳಾ (ಇ, ೧೯೦೨), ಪ್ರಾಚೀನ ಮತ್ತು ನವೀನ ಕಾಲದ ಸ್ತ್ರೀಪುರುಷರು, ಭರತಖಂಡದ ಪೂರ್ವವೃತ್ತ, ಭಾರತಮಹಿಳಾ, ಭ್ರಾಂತಿವಿಲಾಸ, ಮನೋರಮಾ (ಇ. ೧೯೦೭), ಮೃಣ್ಮಯಿ, ಮೃಣಾಳಿನಿ, ಮಾಧವೀ ಲತಾ (ಇ. ೧೯೦೧), ಮಾಲತಿ, ಯುಗುಳಾಂಗುರೀಯ (ಇ), ರಜನಿ, ರಮಾಬಾಯಿ, ರಾಜಸಿಂಹ, ರಾಧಾರಾಣಿ, ರಾಮೇಶ್ವರನ ಅದೃಷ್ಟ, ಲೀಲೆ, ಲೋಕರಹಸ್ಯ ಭಾಗ ೧, ಭಾಗ ೨, ವಂಗವಿಜೇತ (ಇ), ವಿಷವೃಕ್ಷ (ಇ. ೧೯೦೦), ವೆನಿಸುನಗರದ ವಣಿಕ, ವೈಜ್ಞಾನಿಕ ಪ್ರಹಸನ, ಶಕುಂತಳಾ, ಶಾರದಾಸ್ತೋತ್ರಕದಂಬಕರ, ಶಾರದಾಸ್ತೋತ್ರ ನಿರ್ಮಿತ ಮಂಡಲಂ ಶಾಂತಿ-ಭಾಗ-೧, ಭಾಗ ೨, ಸಾಧನೆ, ಸೀತಾರಾಮ (ಇ.೧೯೦೧), ಸೀತಾವನವಾಸ (ಇ. ೧೮೮೪), ಸ್ತ್ರೀ ಶಿಕ್ಷೆಯ ರಹಸ್ಯ, ಸುಶಿಕ್ಷಿತ ಸಭ್ಯರಾದ ಹಿಂದುಗಳು, ಕ್ಷತ್ರಿಯ ರಮಣಿ.

ಸೋಲಮೋನಪ್ಪ, ದೇವಧರ (ರೆವರೆಂಡ್)

ಜ : ಸು : ೧೮೪೫ ಮ: ೧೯೧೦

ಧಾರವಾಡ. ೧೮೭೦ರಲ್ಲಿ ಹುಬ್ಬಳ್ಳಿಯಲ್ಲಿ ಕ್ರೈಸ್ತಮತಾಚಾರ ವಿಷಯದ ಅಭ್ಯಾಸವನ್ನು ಪೂರೈಸಿ, ಮುಂದೆ ಮಂಗಳೂರಿನ ವೇದವಿದ್ಯಾಲಯದಲ್ಲಿ ಮೂರುವರ್ಷ (೧೮೭೧-೭೪) ಓದಿದರು. ಕೊನೆಯ ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ತೇರ್ಗಡೆ ಹೊಂದಿ ಧರ್ಮೋಪದೇಶಕರಾದರು. ಹುಬ್ಬಳ್ಳಿ, ಬೆಟಗೇರಿ, ಮುಷ್ಟಿಗೇರಿ, ಕಟಕಿನ ಹಳ್ಳಿ, ಗುಳೇದಗುಡ್ಡ, ಧಾರವಾಡ ಮುಂತಾದ ಊರುಗಳಲ್ಲಿ ಕ್ರೈಸ್ತಮತಪ್ರಸಾರವನ್ನು ಮಾಡಿದರು.

ಗ್ರಂಥ : ವೇದಾಂತವಾದನಿರ್ಣಯ (ಧ)

ಗ್ಯಾರೆಟ್, ಜಾನ್

ಜ : (?) ಮ : ೧೮೫೬

ಕ್ರೈಸ್ತಮತ ಪ್ರಸಾರಕರಾಗಿ ಭಾರತಕ್ಕೆ ಬಂದು ಬೆಂಗಳೂರಲ್ಲಿ ನೆಲೆಸಿದರು. ೧೮೪೨ರಲ್ಲಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿ ಅಚ್ಚಿನ ವ್ಯವಸಾಯದಲ್ಲಿ ಈ ಭಾಗಕ್ಕೆ ಮೊದಲಿಗರಾದರು.

ಗ್ರಂಥಗಳು : ಚಿಕ್ಕವರಿಗೆ ತಕ್ಕಂಥ ಪಾಠಗಳು (ಧ. ೧೮೫೩, IV), ಬಾಯಬಲ್ (ಭಾಷಾಂತರ) (ಧ)

ಪರಿಷ್ಕೃತ : ಕಥಾಮಂಜರಿ (೧೮೬೬), ಪಂಚತಂತ್ರ (ದುರ್ಗಸಿಂಹಕೃತ) (೧೮೬೫), ಭಗವದ್ಗೀತಾ (ಚಾರ್ಲ್ಸ್‌ವಿಲ್ಸನ್ ಅವರ ಇಂಗ್ಲೀಷು ಗ್ರಂಥದ ಕನ್ನಡ ಭಾಷಾಂತರ, ವಾರನ್ ಹೇಸ್ಟಿಂಗ್ಸ್‌ರ ಮುನ್ನುಡಿಯೊಂದಿಗೆ) (೧೮೪೬-೪೮), ಶಬ್ದಮಣಿದರ್ಪಣ (ಕೇಶಿರಾಜಕೃತ) (೧೮೬೮)

ದಕ್ಷಿಣಾಮೂರ್ತಿಶಾಸ್ತ್ರೀ, ಯು.

ಜ : ಸು ೧೮೪೬ ಮ : ಸು. ೧೯೨೦

ಬೆಂಗಳೂರು. ಮೈಸೂರು ಗವರ್ನಮೆಂಟ್ ಓರಿಯಂಟಲ್ ಗ್ರಂಥಾಲಯದಲ್ಲಿ ಕನ್ನಡ ಪಂಡಿತರಾಗಿದ್ದರು.

ಗ್ರಂಥಗಳು : ಅಲಾದಿಯ ಅದ್ಭುತ ದೀಪಸ್ತಂಭದ ಕಥೆ (The Story of Alladin and the Wonderful Lamp ಪುಸ್ತಕದ ಭಾಷಾಂತರ (ಇ. ೧೮೯೦). ರಾಜಶೇಖರವಿಳಾಸಚಂದ್ರಿಕೆ (ಷಡಕ್ಷರಿಕವಿಕೃತ-ಟೀಕೆ, ಭಾವಾರ್ಥಗಳೊಂದಿಗೆ) (ಅ.ಥ. ೧೮೯೦), ವೈದಿಕಾರ್ಚನಚಂದ್ರಿಕೆ (ಮೂಲ ಸಂಸ್ಕೃತ ಮತ್ತು ಕನ್ನಡ ಟೀಕೆಯೊಂದಿಗೆ) (ಧ.೧೮೯೮), ಶಬ್ದಭಾಸ್ಕರ (ದ. ೧೮೭೧), ಹರಿಹರತಾರತಮ್ಯ ಶತಕವು (ಅ).

ಪರಿಷ್ಕೃತ : ಶಂಕರವಿಜಯವು,ವಾಗ್ಭೃತಿಯೆಂಬ ಟೀಕೆಯೊಂದಿಗೆ (೧೯೮೮)

ಕರಿಬಸವಶಾಸ್ತ್ರೀ, ರುದ್ರಪ್ಪ ಪಂಡಿತ, ಆಸ್ಥಾನ ಮಹಾವಿದ್ವಾನ್, ಕರ್ನಾಟಕ ಭಾಷಾರತ್ನ

ಜ : ೧೮೪೮ ಮ : ೩೦-೯-೧೯೩೧

ಮೈಸೂರು. ಪ್ರಾಥಮಿಕ ಶಿಕ್ಷಣದನಂತರ ಬಸವದೇವರು ಹಾಗೂ ಚಿಟಗಿ ಬಸವಲಿಂಗಪ್ಪನವರಲ್ಲಿ ಕೆಲಕಾಲ ಸಂಸ್ಕೃತ, ಕನ್ನಡ ಓದಿದರು. ಬಳಿಕ ಬಾಚಳ್ಳಿ ಶ್ರೀಕಂಠಶಾಸ್ತ್ರಿಗಳ ಶಿಷ್ಯರಾಗಿ ಸಂಸ್ಕೃತ ನಾಟಕ, ಕಾವ್ಯ ಮುಂತಾದವುಗಳನ್ನು ಅಭ್ಯಸಿಸಿದರು. ವೇದಾಂತ, ವೀರಶೈವ ಸಿದ್ಧಾಂತದ ವ್ಯಾಸಂಗವನ್ನು ಸ್ವತಂತ್ರವಾಗಿ ಮಾಡಿದರು.

ಅಧ್ಯಯನ ಮುಗಿದ ಬಳಿಕ ಆಗತಾನೇ ಮೈಸೂರಿನಲ್ಲಿ ಸ್ಥಾಪಿತವಾಗಿದ್ದ ವೆಸ್ಲಿಯನ್ ಮಿಶನ್ ಹಾಯ್‌ಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಸುಮಾರು ೧೫ ವರ್ಷ ಕೆಲಸಮಾಡಿ ಮುಂದೆ ರಾಜಾಸ್ಕೂಲು ಮಹಾರಾಜಾ ಕಾಲೇಜಿನಲ್ಲಿ ಪರಿವರ್ತನವಾದಾಗ (೧೮೭೯) ಅಲ್ಲಿ ಕನ್ನಡ ಪಂಡಿತರಾದರು.

ಶಾಸ್ತ್ರಿಗಳು ಮೈಸೂರು ಭಾಷೋಜ್ಜೀವಿನಿ ಸಂಸ್ಕೃತ ಪಾಠಶಾಲೆಯ ಸಂಸ್ಥಾಪಕರಲ್ಲೊಬ್ಬರಾಗಿಯೂ, ಅದೇ ಜಿಲ್ಲೆಯ ಮುಡುಕುತೊರೆ ಎಂಬಲ್ಲಿ 'ವೀರಶೈವ ಮತಸಂವರ್ಧಿನಿ ಸಭೆ'ಯನ್ನು ಸ್ಥಾಪಿಸಿ ಆಮರಣಪರ್ಯಂತ ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ೧೮೮೧ರಲ್ಲಿ ಮೈಸೂರು ಜನಗಣತಿಯ ಕಾಲಕ್ಕೆ ಉದ್ಭವಿಸಿದ ವೀರಶೈವ ಮತ ಪ್ರಾತಿನಿಧ್ಯವಿಷಯಕವಾದ ಆಂದೋಲನದಲ್ಲಿ ಇವರು ಪ್ರಮುಖರಾಗಿದ್ದರು. ವೀರಶೈವ ಮತ ಹಾಗೂ ಸಾಹಿತ್ಯಪ್ರಚಾರಕ್ಕಾಗಿಯೇ 'ಶಂಕರವಿಲಾಸ' ಮುದ್ರಣಾಲಯವನ್ನು ಸ್ಥಾಪಿಸಿ, 'ವೀರಶೈವ ಮತ ಪ್ರಕಾಶಿಕೆ' ಎಂಬ ಮಾಸಪತ್ರಿಕೆಯನ್ನು ನಾಲ್ಕುವರ್ಷ ಸಂಪಾದಿಸಿದರು. 'ಮೈಸೂರು ಸ್ಟಾರ್' ಪತ್ರಿಕೆಯ ಮುಖ್ಯ ಲೇಖಕರಾಗಿದ್ದರು. ದ್ವೈತಾದ್ವೈತ-ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲಿಯೂ ವ್ಯಾಕರಣ, ತರ್ಕ ಮುಂತಾದ ಶಾಸ್ತ್ರಗಳಲ್ಲಿಯೂ ಪಾರಂಗತರಾಗಿದ್ದ ಇವರು ಮೈಸೂರು ಆಸ್ಥಾನದಿಂದ'ಮಹಾವಿದ್ವಾನ್' ಗೌರವ ಪಡೆದ ವೀರಶೈವರಲ್ಲಿ ಮೊದಲಿಗರು. ಮಹಾರಾಜರಿಂದ 'ಕರ್ನಾಟಕ ಭಾಷಾರತ್ನ' ಎಂಬ ಪ್ರಶಸ್ತಿಯನ್ನೂ ವಜ್ರಕಂಕಣ-ಶಾಲು ಜೋಡಿಯ ಸನ್ಮಾನವನ್ನೂ ಪಡೆದವರು (೧೯೧೮).

ಗ್ರಂಥಗಳು : ಕನ್ನಡ : ಅನುಭವಸಾರ (ನಿಜಗುಣ ಶಿವಯೋಗಿ ಕೃತ ಗ್ರಂಥಕ್ಕೆ ಟೀಕೆ) (ಅ. ೧೯೦೪), ಕನ್ನಡ ಬಸವೇಶವಿಜಯ (ಶಂಕರಾರಾಧ್ಯಕೃತ ಸಂಸ್ಕೃತ ಗ್ರಂಥದ ಭಾಷಾಂತರ) (ಧ), ಜೈಮಿನಿ ಭಾರತ (ಲಕ್ಷ್ಮೀಶಕೃತ ಕಾವ್ಯಕ್ಕೆ ಟೀಕೆ) (ಅ), ನಯಶತಕ (ಅ), ಭಕ್ತಾಧಿಕ್ಯರತ್ನಾವಳಿ (ಷಡಕ್ಷರಿಕೃತ ಸಂಸ್ಕೃತ ಕಾವ್ಯಕ್ಕೆ ಟೀಕೆ) (ಅ), ವಿವಾಹ ವಿಧಿ (ಧ), ಶಿವಪೂಜಾವಿಧಿ (ಧ),. ಸಚಿತ್ರ ಕರ್ನಾಟಕ ಬಾಲಬೋಧೆ, ಸಂಕ್ಷೇಪ ಶಿವಪೂಜಾವಿಧಿ (ಧ), ಸ್ಟಾರ್ ಕರಸ್ಪಾಂಡನ್ಸ್ (ಧ-ಚ).

ಸಂಸ್ಕೃತ : ವೀರಶೈವೋತ್ಕರ್ಷ ಸಂಗ್ರಹ, ಗಣಸಹಸ್ರನಾಮಾವಳಿ ಸ್ತೋತ್ರ.

ಪರಿಷ್ಕೃತ : **ಕನ್ನಡ** : ಅನುಭವಸೂತ್ರ, ಕನ್ನಡ ಜೈಮಿನಿ ಭಾರತ, ಕನ್ನಡ ಮಹಾಭಾರತ (೧೯೨೮), ನಳಚರಿತ್ರೆ, ಪ್ರಹ್ಲಾದ ಚರಿತ್ರೆ, ಮಾಚಿದೇವ ಮನೋವಿಲಾಸ, ರಾಜಶೇಖರವಿಳಾಸ (೧೯೧೩), ವೀರಶೈವ ಪ್ರದೀಪಿಕಾ, ಶಬರಶಂಕರವಿಳಾಸ, ಸಿದ್ಧೇಶ್ವರ ಪುರಾಣ (೧೮೯೫).

ಸಂಸ್ಕೃತ : ಕ್ರಿಯಾಸಾರ, ತ್ರಿಕಾಂಡ ಅಮರಕೋಶ, ದಶಗ್ರಂಥ, ವೀರಶೈವದೀಕ್ಷಾವಿಧಿ (೧೮೯೭), ಲಿಂಗಧಾರಣಚಂದ್ರಿಕಾ, ಶಿವಭಕ್ತಿಸಾರ, ಶಿವಾದ್ವೈತಮಂಜರಿ, ಸಂಸ್ಕೃತ ಬಸವೇಶವಿಜಯ.

ಖಂಡೋ, ಕೃಷ್ಣ, ಗರ್ದೆ

ಜ : ೧೮೪೮ ಮ : ೧೯೨೬

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಗುರ್ಲಹೊಸೂರು. ಮುಂಬಯಿ ಸರಕಾರದ ವಿದ್ಯಾಖಾತೆಯನ್ನು ಸೇರಿ ಅಸಿಸ್ಟಂಟ್ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಹುದ್ದೆಯವರೆಗೆ ಪ್ರಗತಿ ಹೊಂದಿ ನಿವೃತ್ತರಾದರು. ಅದ್ವೈತವೇದಾಂತದಲ್ಲಿ ಪಾರಂಗತರಾದ ಇವರು ಹುಬ್ಬಳ್ಳಿಯ ಸಿದ್ಧಾರೂಢರ ಶಿಷ್ಯರಾಗಿದ್ದರು.

ಗ್ರಂಥ : **ಕನ್ನಡ** : ಪಂಚದಶೀ (ವಿದ್ಯಾರಣ್ಯಕೃತ ಗ್ರಂಥದ ಭಾಷಾಂತರ) (ನ,.೧೮೮೭)

ಮರಾಠಿ : ಬ್ರಹ್ಮಸಿದ್ಧಾಂತಮಾಲಾ, ಲಘುವಾಸುದೇವಮನನ, ಇಂಗ್ರಜೀತ ಭಾಷಾಂತರ ಕರಣ್ಯಾಚೆ ನಿಯಮ, ಗೀತಾಮೃತಶತಪದೀ, ಗೀತಾಪಂಚದಶೀ, ವಿಜನಪುರೀ.

ಬಾಬುರಾವ್, ನರಸಪ್ಪಯ್ಯ, ಬೋಳಾರ

ಜ : ೧೮೪೮ ಮ : ೨೫-೬-೧೯೧೯

ದಕ್ಷಿಣ ಕನ್ನಡ ಜಿಲ್ಲೆಯ ಬೋಳಾರ. ಮಂಗಳೂರು ಬಾಸೆಲ್ ಮಿಶನ್ ಸ್ಕೂಲಿನಲ್ಲಿಯೂ ಅನಂತರ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಓದಿ ಎಫ್.ಎ. ಪರೀಕ್ಷೆಯನ್ನು ಮುಗಿಸಿದರು. ಪ್ರಾರಂಭದಲ್ಲಿ ಜಿಲ್ಲಾ ಕಲೆಕ್ಟರ್ ಕಚೇರಿಯಲ್ಲಿ ಗುಮಾಸ್ತರಾಗಿ ಸೇರಿ ಬರಬರುತ್ತ ಹೆಡ್‌ಕ್ಲಾರ್ಕ್, ಡೆಪ್ಯುಟಿ ತಹಶೀಲ್ದಾರ, ಕೊನೆಗೆ ತಹಶೀಲ್ದಾರರಾಗಿ, ಕಾರ್ಕಳ, ಹೊಸದುರ್ಗ, ಕುಂದಾಪುರ, ಉಡುಪಿ, ಪುತ್ತೂರು, ಮಂಗಳೂರುಗಳಲ್ಲೆಲ್ಲ ಕೆಲಸ ಮಾಡಿ ನಿವೃತ್ತರಾದ ಬಳಿಕ ಮಂಗಳೂರಿನ ಎರಡನೇ ವರ್ಗದ ಬೆಂಚ್ ಮೆಜಿಸ್ಟ್ರೇಟ್ ಕೋರ್ಟಿನ ಅಧ್ಯಕ್ಷರಾಗಿಯೂ, ಮ್ಯುನಿಸಿಪಲ್ ಕೌನ್ಸಿಲರರಾಗಿಯೂ ಸಾರ್ವಜನಿಕ

ಸೇವೆಮಾಡಿದರು. ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿಯೆಂಬ ಸುಪ್ರಸಿದ್ಧ ಮೋಟಾರ್ ಕಂಪನಿಯ ಡೈರೆಕ್ಟರರಲ್ಲೊಬ್ಬರು. ಬೆನಗಲ್ಲ ರಾಮರಾಯರ ಸಂಪಾದಕತ್ವದಲ್ಲಿ ಮಂಗಳೂರಿನಲ್ಲಿ ಹೊರಟಿದ್ದ 'ಸುವಾಸಿನಿ' (೧-೭-೧೯೦೦) ಎಂಬ ಪ್ರೌಢ ಮಾಸಪತ್ರಿಕೆಯ ಮುಖ್ಯ ಬರಹಗಾರರಲ್ಲೊಬ್ಬರು. ಇವರು ಬರೆದ 'ವಾಗ್ದೇವಿ' ಎಂಬ ಸಾಮಾಜಿಕ ಕಾದಂಬರಿಯು ಸಮಕಾಲೀನ ಜೀವನದ ಒಂದು ಪ್ರಭಾವೀ ಚಿತ್ರಣವೆಂದು ಗಣಿಸಲ್ಪಟ್ಟಿದೆ.

ಗ್ರಂಥಗಳು : ಭಕ್ತಿಮಹಿಮೆ (ಅ.೧೯೧೯), ವಾಗ್ದೇವಿ (ಇ.೧೯೦೫), ಶಿವಲೀಲಾಮೃತ (ಧ.೧೯೧೦).

ಧೋಂಡೋ, ನರಸಿಂಹ, ಮುಳಬಾಗಲ

ಜ : ೧೮೪೮ ಮ : ೨೮-೯-೧೮೯೮

ಕೋಲಾರ ಜಿಲ್ಲೆಯ ಮುಳಬಾಗಲ ಇವರ ಮೂಲಸ್ಥಳ. ಸಂಸ್ಕೃತ-ಕನ್ನಡದಲ್ಲಿ ವಿಶೇಷ ಪಾಂಡಿತ್ಯ ಸಂಪಾದಿಸಿದ ಇವರು ಕಳೆದ ಶತಮಾನದ ಪ್ರತಿಭಾಶಾಲಿಯಾದ ಭಾಷಾಸೇವಕರಲ್ಲಿ ಪ್ರಮುಖರಾಗಿದ್ದರು. ಮುಂಬೈ ಸರಕಾರದ ಶಿಕ್ಷಣಶಾಖೆಯನ್ನು ಪ್ರವೇಶಿಸಿ ಉತ್ತರ ಕರ್ನಾಟಕದ ಹಲವಾರು ಸ್ಥಳಗಳಲ್ಲಿ ಕೆಲಸಮಾಡಿ, ೧೮೮೨ರಲ್ಲಿ ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರು.

ಗ್ರಂಥಗಳು : ಉತ್ತರರಾಮಚರಿತ್ರನಾಟಕವು, ಕನ್ನಡ ಕೈಪಿಡಿ (೨ ಭಾಗಗಳು) (ದ. ೧೮೯೦), ಛಂದಸ್ಸಾರ (ದ. ೧೮೯೨), ನುಡಿಗಟ್ಟು ಎಂಬ ಹೊಸಕನ್ನಡ ಸಂಕ್ಷಿಪ್ತ ವ್ಯಾಕರಣ (ದ. ೧೮೯೨), ಮೃಚ್ಛಕಟಿಕ (ಶೂದ್ರಕ ಕವಿಯ ಸಂಸ್ಕೃತ ನಾಟಕದ ಭಾಷಾಂತರ) (ಆ. ೧೮೯೦), ಮಾಳವಿಕಾಗ್ನಿಮಿತ್ರ (ಕಾಳಿದಾಸಕೃತ ಸಂಸ್ಕೃತನಾಟಕದ ಭಾಷಾಂತರ) (ಆ. ೧೮೯೭), ಹಿತೋಪದೇಶ (ಅ).

ಶಾಮರಾಯ, ವೆಂಕಟಾದ್ರಿ

ಜ : ೧೮೪೮ ಮ : ೧೯೧೭

ಮಡಿಕೇರಿ. ಕೊಡಗು. ಅರಣ್ಯಶಾಖೆಯಲ್ಲಿ ಕೆಲಸಮಾಡಿ ಮುಖ್ಯ ಗುಮಾಸ್ತರಾಗಿ ನಿವೃತ್ತರಾಗಿದ್ದರು. ಸಂಗೀತವಿದ್ವಾಂಸರೂ ನಾಟ್ಯಕಲಾವಿದರೂ ಆಗಿದ್ದರು. ವೆಂಕಟಾದ್ರೀಶ, ವೆಂಕಟಗಿರಿಪತಿ, ವೆಂಕಟಗಿರಿನಿಲಯ ಎಂಬ ಅಂಕಿತದಿಂದ ಹಲವಾರು ದೇವರನಾಮಗಳನ್ನು ರಚಿಸಿರುವರು.

ಗ್ರಂಥ : ಮಂಗಳಗೌರೀವ್ರತ (ಅ)

ಅಪ್ರಕಟಿತ : ಕಮಲಾವತಿ ಪರಿಣಯ (Shakespeare ಕೃತ As You Like It ನಾಟಕದ ಭಾಷಾಂತರ), ಚಂದ್ರಹಾಸ ನಾಟಕ, ಮದನಮೋಹನ ನಾಟಕ, ರತ್ನಾವಳಿ, ವಿಷಯಾ-ಚಂಪಕಮಾಲಿನೀಪರಿಣಯ.

ರಾಯಿಸ್, ಎಡ್ವರ್ಡ್, ಪೀಟರ್

ಜ : ೨೬-೪-೧೮೪೯ ಮ : ೧೯೩೬

ಇಂಗ್ಲೆಂಡ್‌ನಲ್ಲಿಯ ಹ್ಯಾರೋ ಎಂಬ ಪಟ್ಟಣ. ಇವರ ತಂದೆ ಬೆಂಜಮಿನ್ ಹಾಲ್ಸ್‌ರು ಬೆಂಗಳೂರಿನ ಲಂಡನ್ ಮಿಶನರಿ ಸೊಸೈಟಿಯಲ್ಲಿ ಕ್ರೈಸ್ತಮತಪ್ರಸಾರಕರಾಗಿದ್ದರು. ಇ.ಪಿ.ರೈಸರು ಬೈಬಲ್ಲಿನ ಭಾಷಾಂತರಕಾರ್ಯದಲ್ಲಿ. ತಂದೆಗೆ ತುಂಬ ನೆರವಾದರು. ಇವರು ೧೮೭೩ರಿಂದ ೧೯೫೫ರವರೆಗೆ ಬೆಂಗಳೂರು ಹಾಗೂ ಚಿಕ್ಕಬಳ್ಳಾಪುರ ಸುತ್ತಲಿನ ಪ್ರದೇಶದಲ್ಲಿ ಧರ್ಮಪ್ರಚಾರಕಾರ್ಯವನ್ನು ಮಾಡಿದರು. ಬೆಂಗಳೂರು ಲಂಡನ್ ಮಿಶನ್ ಹೈಸ್ಕೂಲಿಗೆ ಹಲವಾರು ವರ್ಷ ಮುಖ್ಯಾಧ್ಯಾಪಕರಾಗಿದ್ದು, ೧೯೧೫ರಲ್ಲಿ ನಿವೃತ್ತರಾಗಿ ಸ್ವದೇಶಕ್ಕೆ ತೆರಳಿದರು.

ಗ್ರಂಥಗಳು : ಮೋಸೆಯ ಧರ್ಮಶಾಸ್ತ್ರದಲ್ಲಿ ಆದಿಕಾಂಡವು (ಧ.೧೯೦೮), ಮೋಸೆಯ ಧರ್ಮಶಾಸ್ತ್ರದಲ್ಲಿ ಯಾತ್ರಾಕಾಂಡವು ಎಂಬ ದ್ವಿತೀಯ ಭಾಗವು (ಧ.೧೯೦೯).

ಇಂಗ್ಲೀಷ್ : History of Kannada Literature (೧೯೧೫)

ಅಣ್ಣಾಜಿರಾವ್, ಆರ್.ಮಲ್ಲೇಶ್ವರ

ಜ: ಸು.೧೮೫೦

ಬೆಂಗಳೂರು. ಬೆಂಗಳೂರು ಕಂಟ್ರೋಲರ್ ಕಚೇರಿಯಲ್ಲಿ ಸೂಪರಿಂಟೆಂಡೆಂಟರೆಂದು ನಿವೃತ್ತರಾಗಿದ್ದರು.

ಗ್ರಂಥಗಳು : ಅಣುಮಧ್ವವಿಜಯ (ಧ), ಆಲಿವರ್ ಟ್ವಿಸ್ಟ್ (ಇ), ಕುಸುಮಾಕರ (Shakespeare ಕೃತ Two Gentlemen of Verona ಪುಸ್ತಕದ ಭಾಷಾಂತರ) (೧೯೦೫), ಗೌರಿ, ಚಂದ್ರಹಾಸೋಪಾಖ್ಯಾನ, ಜಯಮುನಿಚರಿತಂ,ಪರಿಕಲಾಭ್ಯುದಯ (ಇ), ಮನೋರಮಾ (ಇ), ಮನೋರಂಜನಿ (ಇ), ಮಹೀಮಂಡನ (ಇ), ಮೂರು ಮುತ್ತುಗಳು (ಅ), ಶರಣಾಗತ (ಇ), ಸಂಯುಕ್ತ ಸಂಸ್ಥಾನಗಳ ಮೊದಲನೇ ಪ್ರೆಸಿಡೆಂಟ್ ಆಗಿದ್ದ ಜಾರ್ಜ್ ವಾಶಿಂಗ್ಟನ್ನನ ಜೀವನಚರಿತ್ರೆ.

ಆನಂದರಾವ್, ಬತ್ರಬೆಟ್ಟು

ಜ : ೧೮೫೦ ಮ : ೧೯೧೧

ಉತ್ತರಕನ್ನಡ ಜಿಲ್ಲೆಯ ಬ್ರಹ್ಮಾವರ, ಇವರು 'ಸಹಜಾನಂದ ಮಹಾರಾಜ' ಎಂಬ ಹೆಸರಿನಿಂದ ಪ್ರಸಿದ್ಧ ಯೋಗಿಗಳಾಗಿ ಹೋದರು.

ಗ್ರಂಥ : ಸುಬೋಧ ಖಣಿ (ಕನ್ನಡ, ಕೊಂಕಣಿ ಹಾಗೂ ಮರಾಠಿ ಕೀರ್ತನಸಂಗ್ರಹ).

ಕಾಶೀನಾಥ, ಬಾಪೂಜಿ, ಪಾಠಕ, ಬಿ.ಎ.

ಜ : ಸು. ೧೮೫೦ ಮ : ೧೯೩೩

ಬೆಳಗಾವಿ. ೧೮೭೭ರಲ್ಲಿ ಬಿ.ಎ. ಪದವೀಧರರಾಗಿ ಬೆಳಗಾವಿಯ ಸರದಾರ ಹಾಯಸ್ಕೂಲಿನಲ್ಲಿ ಅಧ್ಯಾಪಕರಾದರು. ಏಳು ವರ್ಷಗಳನಂತರ ಆ ಕೆಲಸವನ್ನು ಬಿಟ್ಟುಕೊಟ್ಟು ಮಿರಜ ಸಂಸ್ಥಾನದ ಅಧಿಪತಿಗೆ ರಾಜಗುರುವಾದರು. ಸ್ವಲ್ಪ ಕಾಲ ಮಾತ್ರ. ಮುಂದೆ ಮೈಸೂರು ಸರಕಾರದ ಪುರಾಣ-ವಸ್ತುಸಂಶೋಧನಾ ಇಲಾಖೆಯಲ್ಲಿ ಕೆಲಕಾಲ ಇದ್ದು, ಕೊನೆಗೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದರು. ೧೯೦೮ರ ವರೆಗೂ ಅದೇ ಅಧಿಕಾರದಲ್ಲಿದ್ದು ನಿವೃತ್ತರಾದರು.

ಇಂಡಿಯನ್ ಎಂಟಿಕ್ವೆರಿಯಲ್ಲಿಯ ಡಾ. ಫ್ಲೀಟ್ ಅವರ ಶಿಲಾಲಿಪಿವಿಷಯಕ ಲೇಖನಗಳಿಂದ ಪ್ರೇರಿತರಾಗಿ ಸಂಶೋಧನಾಕ್ಷೇತ್ರದ ಕಡೆಗೆ ಒಲಿದು ಗಾಢವಾದ ವ್ಯಾಸಂಗದಿಂದ ಅದರಲ್ಲಿ ಸ್ಪೃಹಣೀಯ ಯಶಸ್ಸು ಸಂಪಾದಿಸಿದರು. ಲಂಡನದಲ್ಲಿ ಸೇರಿದ International Conference of Orientialists ದ ೯ನೆಯ ಅಧಿವೇಶನಕ್ಕೆ Position of Kumarila In Digambar Jain Literature ಎಂಬ ಪ್ರಬಂಧವನ್ನು ಕಳಿಸಿದ್ದರು. ಕ್ರಿ.ಪೂ. ೩೧೫-೨೦ರ ಗುಪ್ತಕಾಲದ ಸಂಶೋಧನಾ ಕಾರ್ಯದಲ್ಲಿ ಡಾ.ಫ್ಲೀಟರಿಗೆ ಸಾಮಗ್ರಿಯನ್ನೊದಗಿಸಿ ನೆರವಾದರು. ಸುಮಾರು ೨೦ ಶಿಲಾಲೇಖಗಳನ್ನು ಸಂಶೋಧಿಸಿಯೂ ೫೦ಕ್ಕೆ ಮಿಕ್ಕಿ ಸಂಶೋಧನಪರ ಲೇಖನಗಳನ್ನು ಬರೆದೂ ಸುಪ್ರಸಿದ್ಧರಾಗಿದ್ದಾರೆ. ಮುಂಬಯಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಭಗವಾನಲಾಲ ಇಂದ್ರಜೀ ಲೆಕ್ಚರರಾಗಿ Inscriptions in the Kanarese Districts of the Bombay Presidency ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಪುಣೆಯ ಭಾಂಡಾರಕರ ರಿಸರ್ಚ್ ಇನ್ಸ್ಟಿಟ್ಯೂಟದವರು ೧೯೩೧ರಲ್ಲಿ, ಇವರ ೮೧ನೆಯ ಹುಟ್ಟುಹಬ್ಬದ ನಿಮಿತ್ತ ಅಭಿನಂದನಪರ ಗ್ರಂಥವನ್ನು ಅರ್ಪಿಸಿದರು. ಪಾಠಕರ ಅನೇಕ ಸಂಶೋಧನಾತ್ಮಕ ಲೇಖನಗಳು ಆ ಸಂಪುಟದಲ್ಲಿ ಪ್ರಕಟವಾಗಿವೆ.

ಗ್ರಂಥಗಳು : ಪರಿಷ್ಕೃತ : ಕನ್ನಡ : ಕವಿರಾಜಮಾರ್ಗಂ (ನೃಪತುಂಗ ಕವಿ ಕೃತ) (ಅ ೧೮೯೮)

ಸಂಸ್ಕೃತ : ಮೇಘದೂತ.

ಕೃಷ್ಣರಾಯ, ಗೋವಿಂದರಾಯ, ಹಾಗಲವಾಡಿ

ಜ : ೧೮೫೦ ಮ: ೧೯೧೦

ಕೋಲಾರ ಜಿಲ್ಲೆಯ ಶಿಡ್ಲಘಟ್ಟದವರು. ಆದರೆ ಹಾಗಲವಾಡಿಯ ಪಾಳೆಯಗಾರ

ವಂಶದ ನಾರಾಯಣರಾಯರಿಗೆ ದತ್ತಕಹೋಗಿ ಹಾಗಲವಾಡಿ ಕೃಷ್ಣರಾಯರಾದರು. ಸರಕಾರಿ ನೌಕರಿಯಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಬೇಲೂರು ಮೊದಲಾದ ಕಡೆಗೆ ಕೆಲಸಮಾಡಿ ಕೊನೆಗೆ ವಿರಕ್ತರಾಗಿ ಬೀರೂರು ಮಾರುತಿ ದೇವಾಲಯದಲ್ಲಿ ನೆಲೆಸಿ ಹರಿನಾಮಸ್ಮರಣೆಯಲ್ಲಿ ನಿರತರಾದರು. 'ವೇಣುಗೋಪಾಲ' ಎಂಬ ಅಂಕಿತದಿಂದ ಸುಮಾರು ೨೦೦ ಕೀರ್ತನೆಗಳನ್ನು ರಚಿಸಿರುವರು.

ಕೃಷ್ಣರಾವ್ ಲಿ. ಬಾದಾಮಿ

ಜ : ೧೮೫೦ ಮ : ೧೧-೭-೧೯೩೬

ಮೂಲತಃ ವಿಜಾಪುರ ಜಿಲ್ಲೆ. ಮೈಸೂರು ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರ್ ಅಧಿಕಾರದಲ್ಲಿದ್ದರು. 'ಬಾಲಮಿತ್ರ' ಎಂಬ ಹೆಸರಿನಿಂದ ಕನ್ನಡ ಓದುಗರಿಗೆ ಪರಿಚಿತರಾಗಿದ್ದರು.

ಗ್ರಂಥಗಳು : ಬಾಲಭಾರತ, ಬಾಲರಾಮಾಯಣ.

ನಾರಾಯಣಶಾಸ್ತ್ರೀ, ದೊಡ್ಡಬೆಲೆ, ಪಂಡಿತ

ಜ : ಸು. ೧೮೫೦

ಶೀಗೇಬೇಲಿ, ಬೆಂಗಳೂರು. ವೇದಶಾಸ್ತ್ರಪಾರಂಗತರಾದ ಇವರು ಕಳೆದ ಶತಮಾನದ ಉತ್ತರಾರ್ಧದಲ್ಲಿ ಅನೇಕ ಸಂಸ್ಕೃತಕಾವ್ಯಗಳನ್ನು ಕನ್ನಡಿಸಿಯೂ, ವೇದಾಂತವಿಷಯಕ ಗ್ರಂಥಗಳನ್ನು ರಚಿಸಿಯೂ ಭಾಷಾಸೇವೆ ಮಾಡಿರುವರು. ೧೯೧೦ರಲ್ಲಿ ಇವರು ಶೃಂಗೇರಿಯ 'ಶಾರದಾ' ಪತ್ರಿಕೆಯ ಸಂಪಾದಕರಾಗಿದ್ದರು.

ಗ್ರಂಥಗಳು : ಋಗ್ವೇದ ಸಂಜ್ಞಾರ್ಥವಿಚಾರ (ಧ.೧೯೧೨), ಕುಮಾರಸಂಭವ (ಕಾಳಿದಾಸ ಕವಿ ವಿರಚಿತ ಸಂಸ್ಕೃತಕಾವ್ಯದ ಭಾಷಾಂತರ), ಚಮತ್ಕಾರ ಚಿಂತಾಮಣಿ, ದೇವರ ಸೇವೆ, ನಿಜದೀಪಿಕಾ ಶಿರೋರತ್ನ (ರತ್ನಪ್ರಭಾ ಎಂಬ ಟೀಕೆಯೊಂದಿಗೆ, ಸೇಲಂ ಕೃಷ್ಣರಾಜರ ಗ್ರಂಥದ ಭಾಷಾಂತರ) (೧೮೯೩), ಮುಕುಂದಮಾಲಾ, ಯಕ್ಷಪ್ರಶ್ನೆ, ರಘುವಂಶ (ಕಾಳಿದಾಸಕವಿ ವಿರಚಿತ ಸಂಸ್ಕೃತಕಾವ್ಯದ ಭಾಷಾಂತರ), ರಾಘವೇಂದ್ರ ಸ್ತೋತ್ರ, ರಾಮಾಯಣ ಸುಂದರಕಾಂಡ, ವಿವೇಕಚೂಡಾಮಣಿ, ಶಂಕರಾಚಾರ್ಯ ಅವರ ಚರಿತ್ರೆ (ಧ-ಚ) ಶಿವಾಪರಾಧಸ್ತೋತ್ರ, ಶ್ರೀಕೃಷ್ಣಬೋಧಾಮೃತವೆಂಬ ಹನ್ನೆರಡು ರಾಜಪುತ್ರರುಗಳ ಕಥೆ (ಶೇಷಾಚಲ ನಾಯಡು ಕೃತ ತೆಲುಗು ಪುಸ್ತಕದ ಭಾಷಾಂತರ) (ಇ.೧೮೯೮), ಶ್ರೀಮದದ್ವೈತಸಿದ್ಧಾಂತಸಾಗರಮಾದ ಶ್ರೀವಾಸುದೇವಮನನ (ವಾಸುದೇವಯತಿಕೃತ ಸಂಸ್ಕೃತಗ್ರಂಥದ ಭಾಷಾಂತರ (ಧ.೧೮೯೭), ಶ್ರೀಮದ್ವೆಂಕಟಪುರ ವೈಷ್ಣವಾದಿ ನಾನಾಮತೋತ್ಪತ್ತಿ ಸಿದ್ಧಾಂತಸುಧಾರಸ (೧೮೯೪), ಶ್ರೀಹರಿಸ್ತುತಿ, ಸಟೀಕಾ

ಪರಮಾನುಭವಬೋಧೆ (ನಿಜಗುಣಶಿವಯೋಗಿಕೃತ) (ಪ.೧೮೯೨), ಸಂಧ್ಯಾವಂದನೆಯ ಅರ್ಥವಿಚಾರ (ಧ), ಸ್ವಪ್ನಮಂಜರಿ (೧೮೯೬), ಸುಭಾಷಿತ ಗ್ರಂಥ.

ಪರಿಷ್ಕೃತ : ಕಠೋಪನಿಷತ್, ಜೈಮಿನಿ ಭಾರತ, ಶ್ರೀಮದ್ದಶೋಪನಿಷದಃ, ಶುಕ್ರನೀತಿ.

ಪದ್ಮರಾಜ, ಪಂಡಿತ ಬ್ರಹ್ಮಸೂರಿ

ಜ : ಸು.೧೮೫೦

ಬೆಂಗಳೂರು. ಜೈನಸಿದ್ಧಾಂತವಿಶಾರದರೂ ಸಂಸ್ಕೃತವಿದ್ವಾಂಸರೂ ಆಗಿದ್ದ ಇವರು ವಿವಿಧ ಬಗೆಯ ಬರವಣಿಗೆಯಿಂದ ಕಳೆದ ಶತಮಾನದ ಕನ್ನಡಸಾಹಿತ್ಯವನ್ನು ಕಳೆಗೊಳಿಸಿದ್ದಾರೆ. ಇವರ ಜೀವನಪರಿಚಯ ಇನ್ನೂ ಆಗಬೇಕಾಗಿದೆ.

ಗ್ರಂಥಗಳು : ಅಕಲಂಕಾಷ್ಟಕ (ಸಟೀಕ), (ಧ.೧೮೯೩), ಕಾರ್ಕಳಚರಿತ್ರೆ (ಧ.೧೮೯೨), ಗೋಲಕ್ಷಣ (೧೯೦೫), ಚತುರ್ದಶ ನೋಂಪಿ ಕಥೆ (ಧ.೧೮೯೩), ಜಿನಮುನಿತನಯ (ಧ.೧೮೯೨), ಪಾರ್ಶ್ವನಾಥಸ್ವಾಮಿ ಚರಿತ್ರೆ ಪುರಾಣ (ಗುಣಭದ್ರಾಚಾರ್ಯಕೃತ ಸಂಸ್ಕೃತಗ್ರಂಥದ ಕನ್ನಡಭಾಷಾಂತರ), (ಧ.೧೮೯೩), ಬಾಗಿಲು ತಡೆಯುವ ಮತ್ತು ಚಂಡಾಡುವ ಹಾಡು (ಅ.೧೮೯೭), ಬುಧಜನಮನೋರಂಜಿನಿ (೧೮೯೦), ಭವ್ಯಾಮೃತ (೧೮೯೨), ಮಹಿಸೂರು ಶಾಂತೀಶ್ವರಪ್ರತಿಷ್ಠಾ (೧೮೯೭), ಮಹಾಪುರಾಣಂ ಭಾಗ ೧, ಭಾಗ ೨ (ಜಿನಸೇನಮಹಾಮುನಿಕೃತ ಸಂಸ್ಕೃತಗ್ರಂಥದ ಕನ್ನಡಭಾಷಾಂತರ) (ಧ.೧೮೯೬, ೧೮೯೭), ವಚನಮೇಘಮಾಲಾ (೧೮೯೪), ವ್ರತಲಕ್ಷಣ (ಧ.೧೮೯೩), ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ವಡೆಯರವರ ಪಟ್ಟಾಭಿಷೇಕ ಚರಿತ್ರೆ (೧೯೦೨), ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜ ವಡೆಯರವರ ಮತ್ತು ಸೌಭಾಗ್ಯವತಿ ಪ್ರತಾಪಕುಮಾರಿಬಾಯಿ ಮಹಾದೇವಿಯವರ ಪರಿಣಯವು (೧೯೦೦), ಸಜ್ಜನಚಿತ್ತವಲ್ಲಭ (ಮಲ್ಲಿಷೇಣ ವಿರಚಿತ ಸಂಸ್ಕೃತಗ್ರಂಥದ ಕನ್ನಡ ಭಾಷಾಂತರ) (ಧ.೧೮೯೧), ಸಟೀಕಾ ಸ್ತುತಿಸಂಗ್ರಹ (೧೮೮೮), ಸಟೀಕಾ ಸಾಮಾಯಿಕಾ (೧೯೦೪), ಸಮ್ಯಗ್ದರ್ಶನಾಷ್ಟಾಂಗ ಪಂಚಾಣುವ್ರತ ಕಥೆಗಳು (ಧ.೧೮೯೩), ಸಂಸ್ಕೃತ ಜಿನೇಂದ್ರಮಾಲಾ (ಉಪೇಂದ್ರಾಚಾರ್ಯಕೃತ ಸಂಸ್ಕೃತಗ್ರಂಥದ ಕನ್ನಡ ಭಾಷಾಂತರ) (೧೮೮೯), ಸುಜ್ಞಾನಚಂದ್ರಿಕಾ (೧೯೦೫), ಸೂಕ್ತಿಮುಕ್ತಾವಳಿ (೧೮೯೨).

ಪರಿಷ್ಕೃತ : ಉದಯರಾಗ, ಕನ್ನಡ ಗಾದೆಗಳ ಮೊದಲನೇ ಪುಸ್ತಕವು.

ರಾಮಚಂದ್ರ, ವೆಂಕಟೇಶ, ಹೊದಲೂರ

ಜ : ಸು.೧೮೫೦ ಮ : ಸು ೧೯೩೫

ಬೆಳಗಾವಿ. ಮ್ಯಾಟ್ರಿಕ್ ಪಾಸಾದನಂತರ ಪೋಲೀಸ್ ಇಲಾಖೆಯಲ್ಲಿ ಗುಮಾಸ್ತರಾದರು. ಕನ್ನಡ-ಮರಾಠಿ ಎರಡೂ ಭಾಷೆಗಳನ್ನು ಬಲ್ಲವರಾದುದರಿಂದ

ಇವರು ಮುಂದೆ ಮುಂಬೈ ಸರಕಾರದ ಶಿಕ್ಷಣಶಾಖೆಯನ್ನು ಸೇರಿ, ಕೊನೆಗೆ 'ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್' ಕಚೇರಿಯಲ್ಲಿ ಅಕೌಂಟೆಂಟರಾಗಿದ್ದು ೧೯೦೬-೭ರ ಸುಮಾರಿಗೆ ಸೇವಾನಿವೃತ್ತರಾದರು. ವಿಜಾಪುರದ ಬೆಳ್ಳುಬ್ಬಿ ಅಣ್ಣಯ್ಯಾಚಾರ್ಯರಲ್ಲಿ ವೇದಾಂತ, ಧರ್ಮಶಾಸ್ತ್ರವನ್ನು ಕೆಲಕಾಲ ವ್ಯಾಸಂಗ ಮಾಡಿದರು. 'ಭಗವದ್ದಾಸ' ಎಂಬ ಅಂಕಿತದಿಂದ ಗ್ರಂಥರಚನೆ ಮಾಡಿದ್ದಾರೆ.

ಗ್ರಂಥಗಳು : ಪ್ರಕಟಿತ : ಅಕ್ರೂರಾನುಭವ (ಅ), ಗಜೇಂದ್ರಮೋಕ್ಷ (ಅ), ಜ್ಯೋತಿರ್ಭಾಂಡಾರ (ಬ), ತತ್ವಸಿದ್ಧಾಂತ (ಜಾನೂರಕರ್ ಕೃತ ಮರಾಠಿ ಗ್ರಂಥದ ಭಾಷಾಂತರ) (ನ), ಬ್ರಹ್ಮಸೂತ್ರಾರ್ಥದರ್ಶನ (ನ), ಭಗವದ್‌ಗೀತಾರ್ಥದರ್ಶನ (ನ), ಭಾಗವತಸಾರ (ಧ).★

ರಾಮಣ್ಣ¹, ವೆಂಕಟಸುಬ್ಬಯ್ಯ, ಹುಲ್ಲುಹಳ್ಳಿ

ಜ : ೧೮೫೦ ಮ : ೧೫-೧೨-೧೯೬೩

ನಂಜನಗೂಡು ತಾಲೂಕಿನ ಹುಲ್ಲುಹಳ್ಳಿ. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಮುಂದೆ ಮೈಸೂರಿನಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ ನಾರ್ಮಲ್ ಸ್ಕೂಲಿನಲ್ಲಿ ವ್ಯಾಸಂಗಮಾಡಿ ಸ್ವಗ್ರಾಮದಲ್ಲಿ ಉಪಾಧ್ಯಾಯರಾದರು. ಮೈಸೂರಿನಲ್ಲಿದ್ದಾಗಲೇ ವೀಣೆ, ಪಿಟೀಲು, ಭರತಶಾಸ್ತ್ರದಲ್ಲಿ ತಕ್ಕಮಟ್ಟಿಗೆ ಅಭ್ಯಾಸವಾಗಿತ್ತು. ಅಲ್ಲದೆ ಶಿಲ್ಪ ಹಾಗೂ ಚಿತ್ರಕಲೆಯಲ್ಲಿ ಇವರು ವಿಶೇಷ ಪರಿಜ್ಞಾನವುಳ್ಳವರಾಗಿದ್ದರು. ಕೊನೆಗೆ ಉಪಾಧ್ಯಾಯ ವೃತ್ತಿಯನ್ನು ಬಿಟ್ಟುಕೊಟ್ಟು ಹರಿಕಥಾಪ್ರಚಾರದಲ್ಲಿ ಕಾಲಕಳೆದರು. ಮೈಸೂರಿನಲ್ಲಿ ನಂಜರಾಜ ಬಹದ್ದೂರ್ ಅವರ ಸಮ್ಮುಖದಲ್ಲಿ 'ನಂಜರಾಜವಿಲಾಸ' ಎಂಬ ಕವಿತಾರಚನೆಗಾಗಿ ಇವರು ಸನ್ಮಾನಿಸಲ್ಪಟ್ಟರು. ಅದರಂತೆ ಗದ್ವಾಲದ ರಾಜರಿಂದ ಬಹುಮಾನವನ್ನೂ ವರ್ಷಾಶನವನ್ನೂ ಪಡೆದಿದ್ದರು. 'ತೃಣಪುರೀಶ' ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿರುವರು.

ಗ್ರಂಥಗಳು : ಕನಕಾಂಗಿಕಲ್ಯಾಣ (ಅ), ಗಿರಿಜಾಕಲ್ಯಾಣ (ಅ), ಚಂದ್ರಾಂಗದಚರಿತ್ರೆ (ಅ), ದೂರ್ವಾಸಚರಿತ್ರೆ(ಅ), ಧ್ರುವಚರಿತ್ರೆ(ಅ), ರುಕ್ಮಾಂಗದಚರಿತ್ರೆ (ಅ), ರುಕ್ಮಿಣೀಕಲ್ಯಾಣ (ಅ) ಸೀತಾಕಲ್ಯಾಣ (ಅ).

ರಾಮಸ್ವಾಮಿಶಾಸ್ತ್ರೀ, ಚಾವಲಿ

ಜ : ಸು. ೧೮೫೦ ಮ : (?)

ಚನ್ನಪಟ್ಟಣ. ಇವರು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದರು (೧೮೯೬).

★ ('ವಿಜಯಸೇನ' ಎಂಬ ಕಾದಂಬರಿಯನ್ನೂ ರಚಿಸಿರುವುದಾಗಿ ತಿಳಿಯುತ್ತದೆ. ಹಸ್ತಪ್ರತಿಗಳು ಧಾರವಾಡ 'ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್'ದಲ್ಲಿ ಇವೆ. 'ಜ್ಯೋತಿರ್ಭಾಂಡಾರ'ವು ಪ್ರಕಟವಾದಂತೆ ತೋರುತ್ತದೆ.)

ಗ್ರಂಥ : ಕರ್ಣಾಟಕಛಂದೋಲಂಕಾರಸಾಹಿತ್ಯಲಕ್ಷಣಸಂಗ್ರಹ (ದ.೧೮೯೫)

ಪರಿಷ್ಕೃತ : ಜಗನ್ನಾಥವಿಜಯಂ (ರುದ್ರಭಟ್ಟಕೃತ)

ರಾವಜಿ, ಬಾಳಾಜಿ, ಕರಂದೀಕರ

ಜ :ಸು. ೧೮೫೦ ಮ : (?)

ಜಮಖಂಡಿ. ಧಾರವಾಡ ಹೈಸ್ಕೂಲ್ ಹಾಗೂ ಶಿಕ್ಷಣಮಹಾವಿದ್ಯಾಲಯದಲ್ಲಿ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದ ಇವರು ಕೆಲಕಾಲ ದಕ್ಷಿಣಭಾಗದ ಶಿಕ್ಷಣಾಧಿಕಾರಿಯಾಗಿ ನಿವೃತ್ತರಾದರು.

ಗ್ರಂಥ : ಆರೋಗ್ಯವಿದ್ಯೆಯು (ಧ.೧೮೯೮).

ವೆಂಕಣ್ಣಾಚಾರ್ಯ, ಅಗಳಗಟ್ಟಿ

ಜ : ಸು. ೧೮೫೦ ಮ : (?)

ಖಾನಾಪುರ ತಾಲೂಕಿನ ಹಲಸಿಗಿ. ಅದ್ವಿತೀಯ ಸಂಸ್ಕೃತ ಪಂಡಿತರೂ ರಸಿಕರೂ ಆಗಿದ್ದರು. ಉತ್ತರ ಕರ್ನಾಟಕದ ಪ್ರಥಮ ನಾಟಕ ಸಂಘವೆನಿಸಿದ 'ಹಲಸಿಗಿ ನಾಟಕ ಕಂಪನಿ'ಯ ಸ್ಥಾಪಕರು (೧೮೭೬); ಖ್ಯಾತನಾಮ ನಟರು. 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಗ್ರಂಥ ರಚಿಸಿರುವರು. ಕೆಳಗೆ ಕಾಣಿಸಿದ ನಾಟಕಗಳನ್ನು ರಚಿಸಿರುವುದಾಗಿ ತಿಳಿಯುತ್ತದೆ.

ಗ್ರಂಥಗಳು : ಕೀಚಕವಧೆ, ದ್ರೌಪದೀ ವಸ್ತ್ರಾಪಹರಣ, ಭೌಮಾಸುರ ವಧೆ, ಮದಾಲಸಾ ಪರಿಣಯ, ಶ್ರೀಮತೀ ಪರಿಣಯ.

ಶ್ರೀನಿವಾಸ, ಕೋನ್ಹೇರ, ರೊದ್ದ, ಸಿ.ಆಯ್.ಇ.

ಜ : ೧೭-೯-೧೮೫೦ ಮ : ೪-೮-೧೯೨೨

ಧಾರವಾಡ. ಪ್ರಾರಂಭಿಕ ಶಿಕ್ಷಣವನ್ನು ಅಲ್ಲಿಯೇ ಪೂರೈಸಿ ಕೆಲದಿನ ಉಪಾಧ್ಯಾಯರಾಗಿ ಕೆಲಸಮಾಡಿದ ಬಳಿಕ ಬೆಳಗಾವಿಯ ನಾರ್ಮಲ್ ಸ್ಕೂಲಿನಲ್ಲಿ ಒಂದು ವರ್ಷ ಮತ್ತೆ ಅಭ್ಯಾಸಮಾಡಿದರು. ೧೮೭೦ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿ ಪುಣೆಯ ಡೆಕ್ಕನ್ ಕಾಲೇಜು ಸೇರಿದ್ದರು. ಆದರೆ ಮನೆತನದ ತಾಪತ್ರಯದ ಕಾರಣದಿಂದ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟುಕೊಟ್ಟು ೧೮೭೨ರಲ್ಲಿ ಕಾರವಾರ ಹೈಸ್ಕೂಲಿನ ಅಧ್ಯಾಪಕರಾಗಿ ವಿದ್ಯಾ ಇಲಾಖೆಯಲ್ಲಿ ಕಾಲಿಟ್ಟು ೮ ವರ್ಷ ಹೈಸ್ಕೂಲಿನ ಅಧ್ಯಾಪಕರೂ, ೧೮ ವರ್ಷ ಜಿಲ್ಲೆಯ ಶಿಕ್ಷಣಾಧಿಕಾರಿಗಳೂ (ಡೆ.ಎ. ಇನ್‌ಸ್ಪೆಕ್ಟರ್), ಕೊನೆಯ ೧೦ ವರ್ಷ ಧಾರವಾಡ ಶಿಕ್ಷಣಮಹಾವಿದ್ಯಾಲಯದ ಮುಖ್ಯಾಧ್ಯಾಪಕರೂ ಆಗಿ ಕೆಲಸಮಾಡಿ ೧೯೦೮ (ಜುಲೈ)ರಲ್ಲಿ ಸೇವಾನಿವೃತ್ತರಾದರು.

ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಸಭಾಸದರು (೧೯೦೮-೧೫); ಧಾರವಾಡ ನಗರಸಭೆಯ ಅಧ್ಯಕ್ಷರು (೧೯೧೨-೧೫); ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರು (೧೯೧೭-೨೫). ಧಾರವಾಡ ಕರ್ನಾಟಕ ಕಾಲೇಜು ಸ್ಥಾಪನೆಗಾಗಿ ಬಹುಪರಿಯಾಗಿ ಶ್ರಮಿಸಿ ಕೃತಕಾರ್ಯರಾದವರು. ಅದರಂತೆ ಧಾರವಾಡ ಹೆಣ್ಣುಮಕ್ಕಳ ಶಿಕ್ಷಣವಿದ್ಯಾಲಯ, ಕರ್ನಾಟಕ ಹೈಸ್ಕೂಲ್, ಕರ್ನಾಟಕ ಮಹಿಳಾವಿದ್ಯಾಲಯ, ಬರಗಾಲ ನಿವಾರಕ ಸಂಘ (೧೮೭೬), ಮಿತ್ರಸಮಾಜ, ವ್ಯಾಪಾರೋತ್ತೇಜಕ ಸಂಘ ಮೊದಲಾದ ಸಂಸ್ಥೆಗಳ ಸ್ಥಾಪನೆ-ಪುರೋಭಿವೃದ್ಧಿಗಾಗಿ ತುಂಬ ಹೆಣಗಿದವರು. 'ಮಹಮ್ಮಡನ್ ಬರ್ಸರಿ ಫಂಡು', 'ಧಾರವಾಡ ಟ್ರೇನಿಂಗ್ ಕಾಲೇಜು ಜನರಲ್ ಪ್ರೈಜ್ ಫಂಡು', 'ಸರ್ ಜೇಮ್ಸ್ ಮಾಂಟೀಥ್ ಪ್ರೈಜ್ ಫಂಡು', 'ಧಿ ಆನರಬಲ್ ಇಜಾಯಿಲ್ಸ್ ಪ್ರೈಜ್ ಫಂಡು', 'ರಾ.ಬ. ಸಹಸ್ರಬುದ್ಧೆ ಮ್ಯುಜಿಕ್ ಪ್ರೈಜ್ ಫಂಡು','ವೆಂಕಾಸಾನಿ ಸ್ಕಾಲರ್‌ಶಿಪ್', ಇತ್ಯಾದಿ ವಿದ್ಯಾಸಹಾಯಕ ನಿಧಿಗಳನ್ನು ಏರ್ಪಡಿಸಿ ವಿದ್ಯಾರ್ಥಿವೃಂದಕ್ಕೆ ಬಹುವಿಧವಾಗಿ ಉಪಕಾರ ಮಾಡಿದರು.

ರಾವಬಹಾದ್ದೂರ (೧೯೦೯), ದಿವಾನಬಹಾದ್ದೂರ (೧೯೨೩), ಸಿ.ಆಯ್.ಇ. (೧೯೨೪) ಇತ್ಯಾದಿ ಗೌರವ ಪಡೆದವರು.

ಕನ್ನಡ ಸಾಹಿತ್ಯ ಸಮ್ಮೇಲನದ ಆರನೆಯ ಅಧಿವೇಶನದ ಅಧ್ಯಕ್ಷರು (ಹೊಸಪೇಟೆ, ೧೯೨೦).

ಗ್ರಂಥಗಳು : ನಂದಿನಿ (ಬುದ್ಧನ ಚರಿತ್ರೆ), ಸ್ತ್ರೀಶಿಕ್ಷಣದ ಅವಶ್ಯಕತೆ.

ಶ್ರೀನಿವಾಸ ಭಾಗವತ

ಜ : ಸು. ೧೮೫೦ ಮ : ೧೯೧೫

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ. ಪ್ರಸಿದ್ಧ ಯಕ್ಷಗಾನವಿಶಾರದರೂ, ಹರಿಕಥಾ ವಿದ್ವಾಂಸರೂ ಆಗಿದ್ದರು.

ಗ್ರಂಥಗಳು : ಗಾಯತ್ರ್ಯರ್ಥಭಾಸ್ಕರ (೧೯೧೬), ದತ್ತಾಕ್ಷಯಾಂಬರವಿಲಾಸ (ಅ.೧೯೧೭), ನವೀನ ಸೌಭದ್ರಾಪರಿಣಯ (ಅ.೧೯೧೫), ವಾಮನಚರಿತ್ರೆ (ಅ.೧೯೦೧).

ಶ್ರೀನಿವಾಸ, ರಾಮಚಂದ್ರ, ಸವದಿ

ಜ : ಸು. ೧೮೫೦

ಅಥಣಿ ತಾಲೂಕಿನ ಸವದಿ. ಅಣ್ಣಾರಾಯ ಎಂಬುದು ಇವರ ಬೇರೊಂದು ಹೆಸರು. ೧೮೯೯ರಲ್ಲಿ ಧಾರವಾಡದ ಶಿಕ್ಷಣಮಹಾವಿದ್ಯಾಲಯದಲ್ಲಿ ಮುಖ್ಯಾಧ್ಯಾಪಕರಾಗಿದ್ದರು.

ಗ್ರಂಥಗಳು : ದೀರ್ಘಾಯುಷ್ಯದ ಗುಟ್ಟು (ಠ), ಪ್ಲೇಗೆಂಬ ಪಿಡುಗು (ಠ).

ಸೂರ್ಯನಾರಾಯಣರಾವ್ ಎಂ.

ಜ : ೧೮೫೦

ಮೈಸೂರು. ಕಂದಾಯ ಖಾತೆಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿದ್ದರು.

ಗ್ರಂಥ : ಸ್ತ್ರೀಧರ್ಮನೀತಿ (ಪಂಡಿತಾ ರಮಾಬಾಯಿ ಕೃತ ಮರಾಠಿ ಪುಸ್ತಕದ ಭಾಷಾಂತರ; ಧ. ೧೯೦೮)

ಹಣಮಂತ, ಗೋವಿಂದ, ಜೋಶಿ

ಜ : ಸು. ೧೮೫೦

ಬೆಳಗಾವಿ ಜಿಲ್ಲೆಯ ಗೋಕಾಕ. ಪದವೀಧರರಾದ ನಂತರ ಶಿಕ್ಷಣಶಾಖೆಯಲ್ಲಿ ಪ್ರವೇಶಿಸಿದರು. ಕೆಲವು ಕಾಲ ಬೆಳಗಾವಿಯ ಸರದಾರ ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಅ.ಡೆ.ಎ. ಇನ್‌ಸ್ಪೆಕ್ಟರಾಗಿಯೂ ಕೆಲಸ ಮಾಡಿದರು.

ಗ್ರಂಥ : ಸಾಮತಿಸಂಗ್ರಹ (ಇಂಗ್ಲೀಷ್ ಪ್ರತ್ಯರ್ಥದೊಂದಿಗೆ-ಕನ್ನಡ ಗಾದೆಗಳ ಸಂಗ್ರಹ; ದ-ಏ.೧೮೯೪).

ಪಾಂಡುರಂಗ ವೆಂಕಟೇಶ, ಚಿಂತಾಮಣಿ, ಪೇಟಕರ

ಜ : ೧೮೫೧ ಮ : ೧೮೭೯

ಬೆಳಗಾವಿ. ಬಿ.ಎ. ಪದವೀಧರರಾಗಿ ಮುಂಬಯಿ ವಿದ್ಯಾಇಲಾಖೆಯನ್ನು ಸೇರಿದರು. ಕನ್ನಡ ಹಾಗೂ ಮರಾಠಿ ಭಾಷಾಪಂಡಿತರು; ಅಲ್ಲದೆ ಉರ್ದು, ಸಂಸ್ಕೃತ, ಗುಜರಾತಿ ಭಾಷೆಗಳನ್ನೂ ಬಲ್ಲವರಾಗಿದ್ದರು. ಬೆಳಗಾವಿಯಲ್ಲಿ ಡೆ.ಎ.ಇನ್‌ಸ್ಪೆಕ್ಟರ್ ಆಗಿದ್ದು ಅನಂತರ ಕೆಲವು ವರ್ಷ ಧಾರವಾಡದಲ್ಲಿ ಕನ್ನಡ ಭಾಷಾಂತರಕಾರರೆಂದು ಕೆಲಸ ಮಾಡಿದರು. ಅಕಾಲಿಕ ನಿಧನ.

ಗ್ರಂಥಗಳು : ಸಂಸ್ಕೃತ - ಕನ್ನಡ ಶಬ್ದವ್ಯುತ್ಪತ್ತಿ (ದ.೧೮೮೦)

ಮರಾಠಿ : ಗಂಗಾವರ್ಣನಾ

ಶ್ರೀನಿವಾಸ ಜೋಸ್ಯರ, ಗೋಮಠಂ, ಅರಮನೆಯ ಋತ್ವಿಕ್

ಜ : ೧೮೫೧ ಮ : ೧೯೩೪

ಮೈಸೂರು. ಋತ್ವಿಕ್ ಕೃಷ್ಣಜೋಸ್ಯರ ಮಕ್ಕಳು. ಸಂಸ್ಕೃತ ಅಧ್ಯಯನದೊಂದಿಗೆ ಇಂಗ್ಲಿಷ್ ಓದಿಕೊಂಡು ೧೮೮೦ರಲ್ಲಿ ಮೈಸೂರಿನಲ್ಲಿ ವಾಣೀವಿಲಾಸ ಮುದ್ರಾಶಾಲೆಯನ್ನು ಸ್ಥಾಪಿಸಿ, ಯಜುರ್ವೇದದ ಮುದ್ರಣಕಾರ್ಯವನ್ನು ಕೈಕೊಂಡರು. ೧೮೯೦ರಲ್ಲಿ ಜಗನ್ಮೋಹನ ಬ್ಯಾಂಕು ಸ್ಥಾಪಿಸಿ ಅದರ ವ್ಯವಸ್ಥಾಪಕರಾದರು. ಅಲ್ಲದೆ 'ಸ್ಟೀಂ ಆಯಿಲ್ ಮತ್ತು ರೈಸ್ ಫಾಕ್ಟರಿ'ಯನ್ನೂ ಸ್ಥಾಪಿಸಿದರು. ೧೯೩೩ರಲ್ಲಿ ಇವರ ಪಿತಾಮಹರ

ಹೆಸರಿನಲ್ಲಿ ಮೈಸೂರಿನಲ್ಲಿ 'ಖಾಸ್ ಋತ್ವಿಕ್ ಗೋಮಠಂ ಶ್ರೀನಿವಾಸ ಜೋಸ್ಯರ ಶಿಶುವಿಹಾರ' ಎಂಬ ವಿದ್ಯಾಸಂಸ್ಥೆಯ ಕಟ್ಟಡವನ್ನು ಕಟ್ಟಿಸಿದರು.

ಗ್ರಂಥಗಳು : ಆರಣ್ಯಕ, ಉದಕಶಾಂತ್ಯಾದಿ, ಪ್ರತಿರಾಖ್ಯ, ಬ್ರಾಹ್ಮಣ, ಮಹಾನ್ಯಾಸಾದಿ ಯಜುರ್ವೇದದ ತೈತ್ತಿರೀಯ ಸಂಹಿತೆ.

ವಾಸುದೇವಯ್ಯ, ವೆಂಕಟರಾಮಯ್ಯ, ಚನ್ನಪಟ್ಟಣ

ಜ : ೨-೮-೧೮೫೨ ಮ : ೨೬-೧೨-೧೯೪೩

ಹೊಸಗನ್ನಡ ಗದ್ಯವನ್ನು ರೂಪಿಸುವುದರಲ್ಲಿಯೂ ಅದರ ತೇಜಸ್ಸನ್ನು ಹೆಚ್ಚಿಸುವುದರಲ್ಲಿಯೂ ಚ. ವಾಸುದೇವಯ್ಯನವರು ಮಾಡಿದ ಕೆಲಸ ಚಿರಸ್ಮರಣೀಯವಾದುದು. ಇವರು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣದವರು. ಬಾಲ್ಯಶಿಕ್ಷಣವನ್ನು ಹುಟ್ಟೂರಿನಲ್ಲಿ ಪೂರೈಸಿ, ಮುಂದೆ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾಗಿ ಎಫ್.ಎ.ವರೆಗೆ ಓದಿದರು. ಹೆಚ್ಚಿನ ವ್ಯಾಸಂಗದ ಅನುಕೂಲವಿಲ್ಲದೆ ಓದನ್ನು ಅರ್ಧಕ್ಕೆ ನಿಲ್ಲಿಸಿ, ತಮ್ಮ ೧೯ನೆಯ ವಯಸ್ಸಿನಲ್ಲಿಯೇ ಕೆಲಸಕ್ಕೆ ಸೇರಿದರು. ಕೆಲಕಾಲ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು, ಅನಂತರ ವಿದ್ಯಾಇಲಾಖೆಯ ಕಚೇರಿಯಲ್ಲಿ ಮ್ಯಾನೇಜರರೂ, ಅಸಿಸ್ಟಂಟರೂ ಆಗಿದ್ದು ೧೯೧೦ರಲ್ಲಿ ನಿವೃತ್ತರಾದರು.

ಇವರು ಬೆಂಗಳೂರು ಮಲ್ಲೇಶ್ವರ ಸಹಕಾರೀ ಸಂಘದ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ಹಲವಾರು ವರ್ಷ ಶ್ರೀರಾಮಮಂದಿರದ ಅಧ್ಯಕ್ಷರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಲದ ಸಭಾಸದರಾಗಿ ಬಹುಕಾಲ ಕೆಲಸ ಮಾಡಿದರು. ಇವರ ಭಾಷಾಸೇವೆಯನ್ನು ಗೌರವಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು 'ಬಿನ್ನವತ್ತಳೆ'ಯನ್ನು ಸಮರ್ಪಿಸಿದರು.

ಗ್ರಂಥಗಳು : ಆರ್ಯಕೀರ್ತಿ ಭಾಗ ೧ (ಮ-ಚ), ಆರ್ಯಕೀರ್ತಿ ಭಾಗ ೨ (ಮ-ಚ ೧೯೨೮), ಭೀಷ್ಮಚರಿತ್ರೆ (ಬಂಗಾಲಿಯಿಂದ) (ಧ-ಚ), ಸರಳಾರೋಗ್ಯ (ಅ. ೧೯೨೩)

ವೆಂಕಟರಮಣಶಾಸ್ತ್ರೀ, ವಿಘ್ನೇಶ್ವರಶಾಸ್ತ್ರೀ, ಸೂರಿ

ಜ : ೧೮೫೨ ಮ : ೧೯೬೨

ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಗ್ರಾಮದವರು. ಸ್ವಂತ ಪರಿಶ್ರಮದಿಂದ ಭಾಷಾ ಪಾಂಡಿತ್ಯವನ್ನೂ, ಕಾವ್ಯಶಕ್ತಿಯನ್ನೂ ಪಡೆದುಕೊಂಡು, ಗ್ರಂಥಕರ್ತರಾಗಿಯೂ, ಪರಿಶೋಧಕ-ಪ್ರಕಾಶಕರಾಗಿಯೂ ಕಳೆದ ಶತಮಾನದಲ್ಲಿ ಕನ್ನಡದ ಸೇವೆಯನ್ನು ಮಾಡಿದರು. ಇವರು 'ಹವ್ಯಕ ಸುಬೋಧ' ಎಂಬ ಮಾಸಪತ್ರಿಕೆಯನ್ನು ೪-೬ವರ್ಷ ನಡೆಸಿದರು. 'ಹಿತೋಪದೇಶ' ಎಂಬ ಪತ್ರಿಕೆಯನ್ನು (೧೮೮೮) ಮುಂಬಯಿಯಿಂದ ಹೊರಡಿಸಿದ್ದರು. 'ಹವ್ಯಕ ಹಿತೇಚ್ಛು' ಎಂಬ ಹೆಸರಿನಲ್ಲಿ ಗ್ರಂಥರಚನೆ ಮಾಡಿದ್ದಾರೆ.

ಗ್ರಂಥಗಳು : ಅನಾರ್ಯರ ವಿವರ (ಮ.೧೮೮೯), ಇಗ್ಗಪ್ಪಾ ಹೆಗಡೆ ವಿವಾಹ ಪ್ರಹಸನ ಅಥವಾ ಕನ್ಯಾವಿಕ್ರಯದ ಪರಿಣಾಮವು (ಅ. ೧೮೮೭), ದಕ್ಷಿಣ ಯಾತ್ರಾ ಚರಿತ್ರೆ (ಧ-ಗ. ೧೮೮೫), ಪ್ರಾಚೀನ ನಾಟ್ಯಕಥಾವರ್ಣನ (ಇ.೧೮೮೮), ಹವಿಕ ದ್ರಾವಿಡ ಬ್ರಾಹ್ಮಣರ ಉತ್ಪತ್ತಿಯ ಇತಿಹಾಸವು (ಧ-ಘ.೧೮೮೬)

ಪರಿಷ್ಕೃತ : ಕೃಷ್ಣಸಂಧಾನ ಮತ್ತು ಭೀಷ್ಮಪರ್ವ ಕೂಡ (ಅ. ೧೮೮೬), ರತಿಕಲ್ಯಾಣ ಕೌಂಡಲಕ ವಧೆಯು (ಅ. ೧೮೮೬), ಘಟೋತ್ಕಜನ ಕಾಳಗವು (ಅ. ೧೮೮೯), ಬಿಲ್ಲಹಬ್ಬ ಅಥವಾ ಕಂಸವಧೆಯು (ಅ).

ಲಕ್ಷ್ಮಣ, ಬಾಬಣ, ಪೈ

ಜ: ೨೨-೪-೧೮೫೩ ಮ : ೧೯೨೭

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ. ಮನೆಯಲ್ಲಿಯೇ ಸಂಸ್ಕೃತ-ಕನ್ನಡ ಅಧ್ಯಯನವಾಯಿತು. ಇಂಗ್ಲೀಷನ್ನೂ ಬಲ್ಲವರಾಗಿದ್ದರು. ಸ್ವಾಧ್ಯಾಯದಿಂದಲೇ ಅಪಾರ ಪಾಂಡಿತ್ಯವನ್ನೂ ಗ್ರಂಥರಚನಾಸಾಮರ್ಥ್ಯವನ್ನೂ ಸಂಪಾದಿಸಿ ಚತುರ್ವೇದಗಳ ಕನ್ನಡ ಭಾಷಾಂತರಕಾರರಾದರು. ಮಂಗಳೂರು ಹೆಂಚಿನ ಕಾರಖಾನೆಯನ್ನು ಪ್ರಥಮತಃ ಉತ್ತರ ಕನ್ನಡದಲ್ಲಿ ಸ್ಥಾಪಿಸಿದ ಶ್ರೇಯಸ್ಸು ಇವರದು. ಪ್ರಮುಖ ಜಮೀನುದಾರರೂ, ಉದ್ಯೋಗಾಧಿಪತಿಗಳೂ ಎಂದು ಜಿಲ್ಲೆಯಲ್ಲಿ ಹೆಸರು ಪಡೆದವರಾಗಿದ್ದರು. ಪತ್ರಿಕಾವ್ಯವಸಾಯ, ದಸ್ತೈವಜ ಲೇಖನ ಮುಂತಾದ ಕೆಲಸಗಳಲ್ಲಿಯೂ ಇವರಿಗೆ ವಿಶೇಷವಾದ ಆಸ್ಥೆಯಿತ್ತು. ಪ್ರಖ್ಯಾತ ಯಕ್ಷಗಾನಕಲಾವಿದರು.

ಗ್ರಂಥಗಳು : ಅಪ್ರಕಟಿತ : ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವವೇದ, ಮಹಾಭಾರತ*

ಅಯ್ಯಾಶಾಸ್ತ್ರೀ, ಗರಳಪುರಿಶಾಸ್ತ್ರೀ, ಸೋಸಲೆ

ಜ : ೨೦-೩-೧೮೫೪ ಮ : ೧೭-೫-೧೯೩೪

ತಿರುಮಕೂಡಲು ನರಸೀಪುರ ತಾಲೂಕು ಸೋಸಲೆ ಎಂಬ ಹಳ್ಳಿಯವರು. ವೆಂಕಟಸುಬ್ಬಶರ್ಮ ಎಂಬುದು ಇವರ ಬೇರೊಂದು ಹೆಸರು. ಚಿಕ್ಕವಯಸ್ಸಿನಲ್ಲಿಯೇ ಮೈಸೂರಿಗೆ ಬಂದು ವೇ|| ಪೆರಿಯಾಸ್ವಾಮಿ ತಿರುಮಲಾಚಾರ್ಯರಲ್ಲಿ ವ್ಯಾಕರಣ ತರ್ಕ, ಅಲಂಕಾರಾದಿ ಶಾಸ್ತ್ರಾಧ್ಯಯನ ಪೂರೈಸಿದ ನಂತರ ಕುಂಭಕೋಣದ ಶೇಷಾಚಾರ್ಯರಲ್ಲಿ ಶೇಖರ ಪಾಠ ಓದಿದರು. ಅದರಂತೆ ಸಾಹಿತ್ಯ, ಸಂಗೀತ, ಚಿತ್ರಕಲೆಯಲ್ಲಿ ಕೂಡ ವಿಶೇಷ ವ್ಯಾಸಂಗ ಮಾಡಿ, ಗುರುಗಳಾದ ತಿರುಮಲಾಚಾರ್ಯರೇ ಮೈಸೂರಿನಲ್ಲಿ ಸ್ಥಾಪಿಸಿದ ಸದ್ವಿದ್ಯಾ ಪಾಠಶಾಲೆಯಲ್ಲಿ ಉಪಾಧ್ಯಾಯರಾದರು. ಮುಂದೆ ಕೆಲಕಾಲ

---

*ಪ್ರತಿಪದಾರ್ಥ ಭಾಷಾಂತರವನ್ನೊಳಗೊಂಡ ಸುಮಾರು ೮೦ ಸಂಪುಟಗಳು ಪ್ರಕಟವಾಗಲಿವೆ.

ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಪ್ರಾಚೀನ ಸಂಸ್ಕೃತ-ಕನ್ನಡಗ್ರಂಥ ಪರಿಶೋಧಕರಾಗಿದ್ದು ಕ್ರಿ.ಶ. ೧೮೮೮ರಿಂದ ಆಗತಾನೇ ಸ್ಥಾಪಿತವಾಗಿದ್ದ ಭಾಷೋಜ್ಜೀವಿನೀ ಸಭೆಯಲ್ಲಿ ಕನ್ನಡ ಪಂಡಿತರಾಗಿ ಸೇರಿದರು. ಕ್ರಿ.ಶ.೧೮೯೪ ರಿಂದ ೧೯೦೧ರ ವರೆಗೆ ಮೈಸೂರು ಅರಮನೆಯಲ್ಲಿ ರಾಜಗುರುಗಳಾಗಿದ್ದು, ಚಾಮರಾಜ ಪ್ರಭುಗಳೊಂದಿಗೆ ಮುಂಬಯಿ, ಪುಣೆ ಮುಂತಾದ ಕಡೆಗೆ ಸಂಚಾರ ಕೈಕೊಂಡರು: ಆ ಸಮಯದಲ್ಲಿ ಇವರಿಗೆ ಮರಾಠಿ, ಪಾರ್ಶಿ ರಂಗಭೂಮಿಯ ಪರಿಚಯವಾಯಿತು. ಅದರ ಪರಿಣಾಮವಾಗಿ ಮೈಸೂರಿನಲ್ಲಿ ನಾಟಕಸಂಘವೊಂದನ್ನೇರ್ಪಡಿಸಿ ಹಲವು ವರ್ಷ ವ್ಯವಸ್ಥಾಪಕರಾಗಿ ಕನ್ನಡ ನಾಟ್ಯಕಲೆಯ ಪುನರುಜ್ಜೀವನಕಾರ್ಯದಲ್ಲಿ ದುಡಿದರು.

ಮೈಸೂರು (ಕೋಟೆ) ಬಾಲಬೋಧಿನಿ ಪಾಠಶಾಲೆಯ ಸಂಸ್ಥಾಪಕರು (೧೮೯೪), ಹಲವಾರು ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯಲ್ಲಿಯೂ, ೧೯೧೩ರಿಂದ ೧೯೧೬ರ ವರೆಗೆ ಸಂಸ್ಕೃತ ಮಹಾಪಾಠಶಾಲಾ ಸಮಿತಿ ಹಾಗೂ ಸಂಸ್ಕೃತ ವಿದ್ಯಾಭಿವೃದ್ಧಿ ಸಮಿತಿಯ ಸದಸ್ಯರಾಗಿಯೂ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಸಭಾಸದರಾಗಿ ಕೆಲವು ವರ್ಷ ಕೆಲಸ ಮಾಡಿದರು. ಅಲ್ಲದೆ 'ಕರ್ನಾಟಕ ಕಾವ್ಯಕಲಾನಿಧಿ' ಗ್ರಂಥಮಾಲೆಯಲ್ಲಿ ಪರಿಶೋಧಕರಾಗಿದ್ದು ಅನೇಕ ಹಳಗನ್ನಡ ಗ್ರಂಥಗಳನ್ನು ಬೆಳಕಿಗೆ ತಂದರು.

ಅರಮನೆಯಿಂದ 'ಮಹಾವಿದ್ವಾನ್' (೧೯೦೫),. 'ಕವಿತಿಲಕ' (೧೯೧೨) ಮೊದಲಾದ ಪ್ರಶಸ್ತಿಗಳನ್ನು ಪಡೆದದ್ದಲ್ಲದೆ ಉತ್ತರ ಭಾರತದ ಜ್ಞಾನಸುಂದರಿಯೆಂಬ ವಿದುಷಿಯನ್ನು ತಮ್ಮ ಕವಿತಾಸಾಮರ್ಥ್ಯದಿಂದ ಸೋಲಿಸಿ ಮಹಾರಾಜರ ಮೆಚ್ಚಿಕೆಗೆ ಪಾತ್ರರಾಗಿದ್ದರು.

ಗ್ರಂಥಗಳು : ದಮಯಂತಿ ಚರಿತ್ರೆ (ಅ), ಕರ್ಣಾಟಕ ನಳಚರಿತ್ರ ನಾಟಕಂ, ಕರ್ಣಾಟಕ ಪ್ರತಾಪಸಿಂಹ ಚರಿತ್ರ ನಾಟಕಂ, ಮಹಿಶೂರ ಮಹಾರಾಜ ಚರಿತಂ (ಅ), ಯಕ್ಷ ಪ್ರಶ್ನೆ (ಅ), ರಾಜಭಕ್ತಿಲಹರಿ (ಅ), ಕರ್ಣಾಟಕ ರಾಮಾಯಣ ನಾಟಕಂ, ವಿಕ್ರಮೋರ್ವಶೀಯ (ಅ), ಶೇಷರಾಮಾಯಣ (ಅ).

ಪರಿಷ್ಕೃತ : ಕರ್ಣಾಟಕ ಶಬ್ದಾನುಶಾಸನಂ, ಕರ್ಣಾಟಕ ಕಾದಂಬರಿ, ಕರ್ಣಾಟಕ ಭಗವದ್ಗೀತೆ, ಕರ್ಣಾಟಕ ಮಹಾಭಾರತ.

ಸಂಸ್ಕೃತ : ಚಾಮರಾಜೇಂದ್ರಪಟ್ಟಾಭಿಷೇಕ, ಕೃಷ್ಣಾಂಬಾ ಪರಿಣಯ.

ಗುರುಬಸಪ್ಪ, ಫಕೀರಪ್ಪ, ಹಳಕಟ್ಟಿ

ಜ : ೨೪-೧೧-೧೮೫೪ ಮ : ೨೭-೮-೧೯೩೬

ಧಾರವಾಡ. ಅಲ್ಲಿಯ ಬಾಸೆಲ್ ಮಿಶನ್, ಆಂಗ್ಲೋ ವ್ಹರ್ನಾಕ್ಯುಲರ್ ಸ್ಕೂಲ್ ಹಾಗೂ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಣವಾಯಿತು; ೧೮೭೧ರಲ್ಲಿ ಪಬ್ಲಿಕ್ ಸರ್ವಿಸ್

ಸರ್ಟಿಫಿಕೇಟ್ ದೊರಕಿಸಿದರು. ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿ ಕೆಲವು ವರ್ಷ ಕೆಲಸ ಮಾಡಿ ಮುಂದೆ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಎರಡು ವರ್ಷಗಳ ನಂತರ ವಿದ್ಯಾಖಾತೆಯ ಕಚೇರಿಗೆ ವರ್ಗಾಯಿಸಲ್ಪಟ್ಟು ಮುಂದೆ ಸುಮಾರು ೨೫ ವರ್ಷ ಅದೇ ಶಾಖೆಯಲ್ಲಿ ಬೇರೆಬೇರೆ ಸ್ಥಳಗಳಲ್ಲಿ ಕೆಲಸ ಮಾಡಿದರು. ಇವರು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ೧೯೧೪ರಿಂದ ೨೦ರ ವರೆಗೆ ಸರಕಾರೀ ಪಠ್ಯಪುಸ್ತಕ ಸಮಿತಿಯ ಸಭಾಸದರು. 'ಕರ್ನಾಟಕವೃತ್ತ', 'ಮೈಸೂರು ಸ್ಟಾರ್', 'ವಾಗ್ಭೂಷಣ', 'ಲೋಕಶಿಕ್ಷಕ' ಮುಂತಾದ ಸಮಕಾಲೀನ ನಿಯತಕಾಲಿಕಗಳ ಪ್ರಮುಖ ಬರಹಗಾರರಾಗಿದ್ದರು.

ಗ್ರಂಥಗಳು : ಇಂಗ್ಲೆಂಡ್ ದೇಶದ ಇತಿಹಾಸ (ಮ.೧೮೯೪), ಏಕನಾಥ ಸಾಧುಗಳ ಚರಿತ್ರೆ, ಚಿಂತಾಮಣಿ ಅಥವಾ ಟ್ಯಾಲಿಸ್ಮನ್ (೧೯೧೧), ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆ, ನಾಮದಾರ ವಿಲಿಯಮ್ ಎವರ್ಟ್ ಗ್ಲಾಡ್‌ಸ್ಟನ್ ದೊರೆಗಳ ಚರಿತ್ರೆಯು, ನಿಜವಾದ ವೀರನು ಅಥವಾ ಜಗಮಲ್ಲ, ನೆಪೋಲಿಯನ್ ಬೋನಾಪಾರ್ಟನ ಚರಿತ್ರೆ (ಮ-೮೯೯), ಫ್ರಾನ್ಸ್ ದೇಶದ ರಾಜ್ಯಕ್ರಾಂತಿ (ಮ.೧೯೧೪), ಭೂಮಿತಿಯ ಪುಸ್ತಕಗಳು (೪ ಭಾಗಗಳು), ಸಿಕಂದರ ಬಾದಶಹನ ಚರಿತ್ರೆ (ಮ.೧೯೧೮).

ಪುಟ್ಟಣ್ಣ ಎಂ. ಎಸ್.

ಜ : ೧೮೫೪ ಮ : ೧೧-೫-೧೯೩೦

ಮೈಸೂರು. ಅಲ್ಲಿಯೇ ರಾಜಾ ಸ್ಕೂಲಿನಲ್ಲಿ ಶಿಕ್ಷಣದ ಪ್ರಾರಂಭ. ಮುಂದೆ ಇವರು ಬಿ.ಎ. ವರ್ಗದಲ್ಲಿದ್ದಾಗ ಬರಗಾಲವು ದೇಶವನ್ನು ಆವರಿಸಿತು. ಅದೇ ಕಾರಣದಿಂದ ಇವರು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟುಕೊಟ್ಟು ಕೋಲಾರ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿ ಕೆಲಸ ಹಿಡಿದರು. ಒಂದೆರಡು ವರ್ಷಗಳ ನಂತರ ಮಹಾರಾಜಾ ಕಾಲೇಜಿಗೆ ವರ್ಗಾಯಿಸಲ್ಪಟ್ಟರು. ಆದರೆ ೧೮೮೩ರಲ್ಲಿ ಮತ್ತೆ ವ್ಯಾಸಂಗವನ್ನು ಮುಂದುವರಿಸಿ ೧೮೮೫ರಲ್ಲಿ ಮದ್ರಾಸಿನಿಂದ ಬಿ.ಎ.ಪರೀಕ್ಷೆ ಪಾಸಾದರು; ಹಾಗೂ ಅಧ್ಯಾಪನವೃತ್ತಿಗೆ ರಾಜೀನಾಮೆ ಕೊಟ್ಟು ಮೈಸೂರು ಚೀಫ್‌ಕೋರ್ಟಿನಲ್ಲಿ ಭಾಷಾಂತರಕಾರರಾಗಿ ನಿಯಮಿಸಲ್ಪಟ್ಟರು. ೧೮೯೭ರ ವರೆಗೆ ಅದೇ ಸ್ಥಾನದಲ್ಲಿದ್ದು ಅನಂತರ ತಾಲೂಕು ಅಮಲ್ದಾರರಾಗಿ, ಚಿತ್ರದುರ್ಗ, ನೆಲಮಂಗಲ, ಬಾಗೇಪಲ್ಲಿ, ಮುಳಬಾಗಲ, ಹೊಸದುರ್ಗ ಮುಂತಾದ ಕಡೆಗೆ ೧೧ ವರ್ಷ ಕೆಲಸ ಮಾಡಿ ನಿವೃತ್ತರಾದರು.

ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪರೀಕ್ಷಕರೂ (೧೮೯೦, ೯೧, ೯೨) ಮೈಸೂರು ಸಂಸ್ಥಾನದ ಪಠ್ಯಪುಸ್ತಕದ ಸಮಿತಿಯ ಸದಸ್ಯರೂ ಆಗಿ ಕೆಲಸಮಾಡಿದರು. ಎಂ.ಬಿ.ಶ್ರೀನಿವಾಸ ಅಯ್ಯಂಗಾರ್ಯರ ಸಹಕಾರದಿಂದ 'ಹಿತಬೋಧಿನಿ' (೧೮೮೩) ಎಂಬ ಮಾಸಪತ್ರಿಕೆಯನ್ನು ಹೊರಡಿಸಿ, ತಮ್ಮ ಪ್ರೌಢವ್ಯಾಸಂಗಕ್ಕಾಗಿ ಮದ್ರಾಸಿಗೆ ಹೋಗುವಾಗ

ಅದನ್ನು ಎಂ.ವೆಂಕಟಕೃಷ್ಣಯ್ಯನವರಿಗೆ ಒಪ್ಪಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲೊಬ್ಬರಾದ ಇವರು ಆ ಸಂಸ್ಥೆಯ ಕಾರ್ಯದರ್ಶಿಗಳಾಗಿಯೂ ಹಲವು ವರ್ಷ ಕೆಲಸ ಮಾಡಿದರು.

ಸಮಕಾಲೀನ ಜನಜೀವನದ ಯಥಾರ್ಥ ನಿರೂಪಣೆಗೂ ಹೊಸಗನ್ನಡದ ದೇಸಿನಿಷ್ಠ ಶೈಲಿಗೂ ಇವರ ಕೃತಿಗಳು ಮಾದರಿಯಾಗಿವೆ.

ಗ್ರಂಥಗಳು : ಇಕ್ಕೇರಿ ಸಂಸ್ಥಾನದ ಚರಿತ್ರೆ, ಕುಣಿಗಲ್ಲು ರಾಮಾಶಾಸ್ತ್ರಿಗಳ ಚರಿತ್ರೆ, ಗುಮ್ಮನಾಯಕನ ಪಾಳೆಯದ ಪಾಳೆಯಗಾರರು, ಚಿತ್ರದುರ್ಗದ ಪಾಳೆಯಗಾರರು, ಚೀಣಾರಾಜ್ಯದ ಮಹಾಪುರುಷನಾದ ಕಾಂಫ್ಯೂಷನ ಚರಿತ್ರೆ (ಧ.೧೮೯೮), ಜಯಸಿಂಹ ರಾಜನ ಚರಿತ್ರೆ (Shakespeare ಕೃತ Cymbeline ನಾಟಕದ ರೂಪಾಂತರ) (ಇ. ೧೮೮೧), ನೀತಿಚಿಂತಾಮಣಿ-ಭಾಗ ೧, ಭಾಗ ೨, ಭಾಗ ೩ (ಎಂ.ಬಿ. ಶ್ರೀನಿವಾಸಯ್ಯಂಗಾರ್ಯರ ಜೊತೆಗೆ), ಪಾಳೆಯಗಾರರು, ಪೇಟೆ ಮಾತೇನಜ್ಜ?, ಬಹಾಮನಿ ಸಂಸ್ಥಾನದ ಮಹಮೂದ ಗವಾನ ಎಂಬ ಮಹಾಮಂತ್ರಿಯ ಚರಿತ್ರೆ (ಮ-ಚ.೧೯೨೨), ಮಾಡಿದ್ದುಣ್ಣೋ ಮಹಾರಾಯ (ಇ. ೧೯೧೫), ಮುಸುಕು ತೆಗೆಯೇ ಮಾಯಾಂಗನೆ (ಇ. ೧೯೨೮), ಸುಮತಿ ಮದನಕುಮಾರರ ಚರಿತ್ರೆ (Thomas Dey ಕೃತ Sanford & Merton ಪುಸ್ತಕದ ಅನುಕರಣೆ) (ಇ. ೧೮೯೩), ಹಾಗಲವಾಡಿ ಪಾಳೆಯಗಾರರ ಚರಿತ್ರೆ, ಹಿಂದೂ ಚರಿತ್ರದರ್ಪಣ ಭಾಗ ೧, ಭಾಗ ೨ (ಎಂ.ಬಿ. ಶ್ರೀನಿವಾಸಯ್ಯಂಗಾರರ ಜೊತೆಗೆ) (ಮ. ೧೮೮೧), ಹೇಮಚಂದ್ರರಾಜವಿಲಾಸ (Shakespeare ಕೃತ King Lear ನಾಟಕದ ಅನುವಾದ) (ಆ. ೧೮೯೯), ಹೈದರಾಬಾದ್ ಸಂಸ್ಥಾನದ ಮಂತ್ರಿ ಸರ್ ಸಾಲಾರ್ ಜಂಗ್‌ನ ಚರಿತ್ರೆ (ಮ-ಚ.೧೯೧೭).

ಭೀಮರಾವ್, ಸ್ವಾಮಿರಾವ್, ಕಮಲಾಪುರ

ಜ : ೧೮೫೪ ಮ : (?)

ಧಾರವಾಡ. ಸರಕಾರೀ ನೌಕರಿ. ಮಧ್ವಸಿದ್ಧಾಂತೋತ್ತೇಜಕ ಸಭೆಯ ಸಂಸ್ಥಾಪಕರಲ್ಲೊಬ್ಬರಾಗಿದ್ದ (೧೮೯೫) ಇವರು ಉತ್ತರಾದಿಮಠದ ಸತ್ಯಧೀರಸ್ವಾಮಿಗಳ ಹೆಸರಿನಲ್ಲಿ ಪಾಠಶಾಲೆಯೊಂದನ್ನು ಸ್ಥಾಪಿಸಿದರು.

ಗ್ರಂಥಗಳು : ಗೀತಾ ಉಪನ್ಯಾಸಗಳು (ನ), ಬ್ರಹ್ಮಸೂತ್ರರಚನಾಪ್ರಕಾಶ (ನಾಗರೀ ಲಿಪಿ) (ನ.೧೯೧೪), ಷಟ್‌ಶಾಸ್ತ್ರಸಾರ (ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸೆ, ಉತ್ತರಮೀಮಾಂಸೆ ಸಂಕ್ಷೇಪಿಸಲ್ಪಟ್ಟಿವೆ) (ನ.೧೯೧೫), ಸತ್ಕಥಾ (ಧ.೧೮೯೬).

ಅಪ್ರಕಟಿತ : ದ್ವೈತಸಿದ್ಧಾಂತಸಾರ

ಲಕ್ಷ್ಮಣಾಚಾರ್ಯ, ಗುಂಡ್ಲುಪಂಡಿತ

ಜ : ೧೮೫೪ ಮ : (?)

ಮೈಸೂರು. ಆಯುರ್ವೇದ, ವೇದಾಂತ, ವ್ಯಾಕರಣ, ಸಾಹಿತ್ಯ, ಜ್ಯೋತಿಷ್ಯ, ಶಿಲ್ಪ, ಚಿತ್ರ ಮೊದಲಾದ ವಿವಿಧ ಶಾಸ್ತ್ರ ಮತ್ತು ಕಲೆಗಳಲ್ಲಿ ಪಾರಂಗತರಾಗಿದ್ದರು. ಸುಪ್ರಸಿದ್ಧ ವೈದ್ಯರಾಗಿದ್ದ ಇವರು ಸರಕಾರದ ಆಯುರ್ವೇದ ಮಹಾವಿದ್ಯಾಲಯದ ಸದಸ್ಯರೂ ಪರೀಕ್ಷಕರೂ ಆಗಿ ಅನೇಕ ವರ್ಷ ಕೆಲಸಮಾಡಿದರು. ಮೈಸೂರು ಮಹಾರಾಜರಿಂದ 'ವೈದ್ಯರತ್ನಂ' ಪ್ರಶಸ್ತಿಯನ್ನೂ (೧೯೨೮) ದೇವಾಸ ಸಂಸ್ಥಾನಿಕರಿಂದ ಸುವರ್ಣ ಕಂಕಣಮರ್ಯಾದೆಯನ್ನೂ ಪಡೆದವರು. ಇವರ ಅನೇಕ ಸಂಶೋಧನಪರ ಲೇಖನಗಳಿಗೆ ದೇಶವಿದೇಶಗಳಲ್ಲಿ ಬಹುಮಾನ ದೊರೆತಿವೆ. ಇವರು ಆಯುರ್ವೇದದ ಪ್ರಚಾರಕ್ಕಾಗಿ ೧೫೦೦೦ ರೂಪಾಯಿಗಳನ್ನು ಮೈಸೂರು ಸರಕಾರಕ್ಕೆ ಅರ್ಪಿಸಿದ್ದರು.

ಗ್ರಂಥಗಳು : ಕಾಶೀಕ್ಷೇತ್ರಮಹಾತ್ಮ್ಯೆ, ಸಹಸ್ರಾಯುಚರಿತ್ರೆ, ಸೌಗಂಧಿಕಾಪರಿಣಯ.

ಸೋಮನಾಥಯ್ಯ, ಸೋಮಪ್ಪ, ಬೆಳ್ಳಾವೆ

ಜ : ೧೮೫೪ ಮ : ೧೯೧೪

ತುಮಕೂರು ಜಿಲ್ಲೆಯ ಬೆಳ್ಳಾವೆ. ಪ್ರಸಿದ್ಧ ಕನ್ನಡ ನಾಟಕಕಾರರಾದ ಬೆಳ್ಳಾವೆ ನರಹರಿಶಾಸ್ತ್ರಿಗಳ ಹಿರಿಯ ಸಹೋದರರು. ಬೆಂಗಳೂರು ವೆಸ್ಲಿಯನ್ ಮಿಶನ್ ಹೈಸ್ಕೂಲಿನಲ್ಲಿ ಓದಿ ಮ್ಯಾಟ್ರಿಕ್ ಪಾಸಾದರು. ಎಫ್.ಎ. ತರಗತಿಯಲ್ಲಿದ್ದಾಗ ವ್ಯಾಸಂಗವನ್ನು ನಿಲ್ಲಿಸಬೇಕಾಯಿತು.

ಸೋಮನಾಥಯ್ಯನವರ ಪರಮಸ್ನೇಹಿತರಾಗಿದ್ದ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರವರು ಇವರ ವಿದ್ವತ್ತು ಹಾಗೂ ಕಾರ್ಯಕೌಶಲವನ್ನು ಮನದಂದವರಾಗಿದ್ದು, ಲೋಕೋಪಕಾರಕವಾದ ವಿದ್ಯಾಪ್ರಚಾರದ ಕಾರ್ಯದಲ್ಲಿ ಇವರನ್ನು ತೊಡಗಿಸಿದರು. ಸ್ವತಂತ್ರವೃತ್ತಿಯವರಾದುದರಿಂದ ಸೋಮನಾಥಯ್ಯನವರು ಸ್ವತಂತ್ರವಾಗಿ ಒಂದು ಹೆಣ್ಣುಮಕ್ಕಳ ಶಾಲೆಯನ್ನು ೧೮೭೪ರಲ್ಲಿ ಬೆಂಗಳೂರು ಚಿಕ್ಕಪೇಟೆಯಲ್ಲಿ ಸ್ಥಾಪಿಸಿ, ಮೈಸೂರು ಸಂಸ್ಥಾನದಲ್ಲಿ ಸ್ತ್ರೀಶಿಕ್ಷಣದ ಸಸಿಯನ್ನು ನೆಟ್ಟರು. ಶ್ರದ್ಧೆ-ಉತ್ಸಾಹದಿಂದ ಅದನ್ನು ಬೆಳೆಸಿಕೊಂಡು ಬಂದು ಕಾಲಕ್ರಮೇಣ ವಿದ್ಯಾಇಲಾಖೆಗೆ ಆ ಶಾಖೆಯ ಆಡಳಿತೆಯನ್ನು ಒಪ್ಪಿಸಿದರು; ಹಾಗೂ ತಾವು ಅದೇ ಸಂಸ್ಥೆಯಲ್ಲಿ ಅನೇಕ ವರ್ಷ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಮುಂದೆ ಚಿಕ್ಕಬಳ್ಳಾಪುರ ಗರ್ಲ್ಸ್ ಸ್ಕೂಲ್‌ನಲ್ಲಿದ್ದಾಗ ಅನಾರೋಗ್ಯದ ಕಾರಣದಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಸೋಮನಾಥಯ್ಯನವರಿಗೆ ಸಂಸ್ಕೃತ, ಆಂಧ್ರ ಹಾಗೂ ಕನ್ನಡ ಭಾಷೆಯಲ್ಲಿ ಪಾಂಡಿತ್ಯವಿತ್ತು. ಗಣಿತ ಶಾಸ್ತ್ರದಲ್ಲಿಯಂತೂ ಇವರು ಅತ್ಯಂತ ಪ್ರತಿಭಾಶಾಲಿ ಎಂದು ಪ್ರಸಿದ್ಧರಾಗಿದ್ದರು. ಬಿ.ಎ., ಎಂ.ಎ ವರ್ಗದ ವಿದ್ಯಾರ್ಥಿಗಳು ಕೂಡ ಇವರ ಬಳಿಯಲ್ಲಿ

ಗಣಿತಪಾಠ ಹೇಳಿಸಿಕೊಳ್ಳುತ್ತಿದ್ದರು. ತಮ್ಮ ಹಲವಾರು ಪತ್ರಿಕಾ ಲೇಖನಗಳ ಮೂಲಕ ವಿದೇಶಗಳಲ್ಲಿಯೂ ಗಣಿತಶಾಸ್ತ್ರಪಾರಂಗತರೆಂದು ಖ್ಯಾತಿ ಪಡೆದಿದ್ದರು. ಅಲ್ಲಿಯ ಅನೇಕ ವಿದ್ವಾಂಸರು ಇವರೊಂದಿಗೆ ಪತ್ರವ್ಯವಹಾರವನ್ನು ಮಾಡುತ್ತಿದ್ದರು.

ಗ್ರಂಥಗಳು: ಗಯ್ಯಾಳಿಯನ್ನು ಸಾಧುಮಾಡುವಿಕೆ (Shakespeare ಕೃತ Taming of the Shrew ನಾಟಕವನ್ನವಲಂಬಿಸಿದ ವೀರೇಶಲಿಂಗಂ ಪಂತುಲು ಅವರ ತೆಲುಗು ಪುಸ್ತಕದ ಭಾಷಾಂತರ; ಆ. ೧೮೯೭), ಗೆದ್ದತ್ತೆ ಸೋತಳಿಯ, ಬೃಂದಾವನೋತ್ಸವ, ವಿವೇಕ ಚಂದ್ರಿಕೆ, ವಿಜ್ಞಾನದೀಪಿಕೆ, ಶ್ರೀರಂಗಪಟ್ಟಣವು ಹುಟ್ಟಿ ಬೆಳೆದ ಕಥೆ, ಶಂಕರಚರಿತ್ರಕಾಲವಿಚಾರ, ಶೃಂಗೇರಿ ಮಠದ ಚರಿತ್ರೆ, ಸತೀಮಣಿವಿಜಯ (Shakespeare ಕೃತ All's well that ends well ನಾಟಕವನ್ನು ಅವಲಂಬಿಸಿದ ವೀರೇಶಲಿಂಗಂ, ಅವರ ತೆಲುಗು ಪುಸ್ತಕದ ಭಾಷಾಂತರ (ಆ).

ಬಾಳಾಚಾರ್ಯ, ಗೋಪಾಳಾಚಾರ್ಯ, ಸಕ್ಕರಿ

ಜ : ೧೫-೧-೧೮೫೬ ಮ : ೧೬-೩--೧೯೨೦

'ಶಾಂತಕವಿ' ಎಂಬ ಹೆಸರಿನಿಂದ ಕನ್ನಡಿಗರಿಗೆ ಸುಪರಿಚಿತರಾದ ಇವರು ಧಾರವಾಡ ಜಿಲ್ಲೆಯ ಕೋಡ ತಾಲೂಕಿನ ಸಾತೇನಹಳ್ಳಿಯವರು. ಕನ್ನಡ ಪ್ರಾಥಮಿಕ ಶಿಕ್ಷಣದೊಂದಿಗೆ ಮನೆಯಲ್ಲಿ 'ಅಮರಕೋಶ', 'ಶಬ್ದರೂಪಾವಲಿ'ಗಳನ್ನು ಓದಿ ಸಂಸ್ಕೃತದ ಅಭ್ಯಾಸವನ್ನೂ ಪ್ರಾರಂಭಿಸಿದರು. ೧೮೭೦ರಲ್ಲಿ ಉಪಾಧ್ಯಾಯರಾಗಿ ಸೇರಿ, ಧಾರವಾಡ ಜಿಲ್ಲೆಯ ಅನೇಕ ಊರುಗಳಲ್ಲಿ ಸುಮಾರು ೪೦ ವರ್ಷ ಕೆಲಸ ಮಾಡಿ ನಿವೃತ್ತರಾದರು. ಇವರು ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ತರಬೇತು ಹೊಂದಿದವರಾಗಿದ್ದರು. ಸಂಗೀತದಲ್ಲಿ ತಕ್ಕ ಪರಿಶ್ರಮವುಳ್ಳ ಇವರು ರಾಷ್ಟ್ರೀಯ ಕೀರ್ತನಕಾರರೆಂದು ಹೆಸರಾಗಿದ್ದರು. ಸುಪ್ತಾವಸ್ಥೆಯಲ್ಲಿದ್ದ ಅಂದಿನ ಕರ್ನಾಟಕವನ್ನು ಬಡಿದೆಬ್ಬಿಸಿ ನಾಡು-ನುಡಿಯ ಸೇವೆಗಾಗಿ ಜನತೆಯನ್ನು ಹುರಿದುಂಬಿಸುವ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ, ಉತ್ಸಾಹದಿಂದ ನಿರ್ವಹಿಸಿದ ಇವರು ಕರ್ನಾಟಕತ್ವದ ಪಿತಾಮಹರೆಂಬ ಗೌರವಕ್ಕೆ ಪಾತ್ರರಾದರು. ಕವಿಗಳೂ ಕೀರ್ತನಕಾರರೂ ಅಲ್ಲದೆ ಇವರು ಪ್ರಸಿದ್ಧ ನಾಟಕಕಾರರೂ ಆಗಿದ್ದರು. ೧೮೭೩ರಲ್ಲಿ 'ಕರ್ನಾಟಕ ನಾಟಕ ಕಂಪನಿ'ಯನ್ನು ಸ್ಥಾಪಿಸಿ, ತಾವು ರಚಿಸಿದ ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ಉಪಕ್ರಮಿಸಿದರು. ಕನ್ನಡ ಭಾಷಾ-ಸಂಸ್ಕೃತಿಯು ಕ್ರಮಶಃ ಜರ್ಜರಿತವಾಗುತ್ತ ನಡೆದಿದ್ದ ಅಂದಿನ ವಿಷಮ ಪರಿಸ್ಥಿತಿಯಲ್ಲಿ ಸುಮಾರು ೨೦ ವರ್ಷಗಳಿಗೆ ಮಿಕ್ಕಿ ಕನ್ನಡ ರಂಗಭೂಮಿಯನ್ನು ಆರಾಧಿಸಿದರು. ರಾಷ್ಟ್ರೀಯತ್ವವು ಯುಗಧರ್ಮ ಎಂಬುದನ್ನು ಅರಿತು, ಅದರ ಪ್ರಚಾರಕ್ಕಾಗಿ ದುಡಿದ ಹಲವೇ ಕವಿಗಳಲ್ಲಿ ಇವರು ಅಗ್ರಗಣ್ಯರು. ಇವರು ಮಾಡಿದ ಅಪಾರ ಸಾಂಸ್ಕೃತಿಕ ಸೇವೆಯನ್ನು ಗೌರವಿಸಲು ೧೮೮೦ರಲ್ಲಿ ಧಾರವಾಡದಲ್ಲಿ ಸಾರ್ವಜನಿಕ ಸಮಾರಂಭವು ನಡೆದು ಶಾಂತಕವಿಗಳಿಗೆ ವಸ್ತ್ರಾಲಂಕಾರಗಳು ಸಮರ್ಪಿಸಲ್ಪಟ್ಟವು.

ಗ್ರಂಥಗಳು : ಅಡ್ಡಕಥೆಗಳ ಬುಕ್ಕು, ಅಲಂಕಾರಶಾಸ್ತ್ರ, ಆನಂದಲಹರಿ, ಆಂಜನೇಯವಿಜಯ, ಋತುಸಂಹಾರ, ಕನ್ನಡ ದಾಸಯ್ಯನ ಪದಗಳು, ಕನ್ನಡಿಗರಿಗೆ ಸವಾಲುಗಳು, ಕವಿಕಂಠಕುಠಾರ, ಕಾಲಮಹಿಮೆ, ಕಾಳಾಸುರ, ಕೀಚಕವಧೆ (ಅ), ಕೃಷ್ಣದಾನಾಮೃತ, ಕೃಷ್ಣಮೋಹಿನೀದುಂದುಮೆ (ಅ. ೧೮೯೩), ಕೃಷ್ಣರಾಧಿಕಾವಿಲಾಸ, ಗಜೇಂದ್ರ ಮೋಕ್ಷ (ಅ), ಗಾಲವಚಿತ್ರಸೇನ, ಗಿರಿಜಾಕಲ್ಯಾಣ, ಚಂದ್ರಾವಳೀಚರಿತ್ರೆ, ಜರಾಸಂಧ ವಧ, ದುಂದುಮೆಪದ, ನಾಗಾನಂದ, ನಾಟಕಪದಸಂಗ್ರಹ, ನಾರದಕುಚೇಷ್ಟೆ, ಪಾರ್ವತೀ ಪರಿಣಯ, ಬರಗಾಲರಸು (?) ಬಾಣಾಸುರನಾಟಕ, ಬೃಹಜ್ಜಂಬೂಚರಿತ್ರೆ, ಭುಜಂಗೋಪದೇಶ, ಮನೋರಮನಾಟಕ, ಮಯೂರಧ್ವಜಪ್ರತಾಪ, ಮುಕುಂದ ದಾನಾಮೃತ, ಮೃಚ್ಛಕಟಿಕ, ಮೇಘದೂತ (ಅ. ೧೮೯೩), ರಘುವಂಶ (೨ನೇ ಸರ್ಗ), ರಸಿಕಾರಸಿಕವಿಚಾರ, ರಾವಣವಧೆ, ರಾವಣ ವೇದವತಿ (೧೯೧೯) ಲಘುಕವಿತಾಪದ್ಧತಿ, ವತ್ಸಲಾಹರಣ (ಥ. ೧೮೯೭), ವ್ಯಭಿಚಾರಾನರ್ಥಸಿಂಧು, ವಾಸಪ್ಪನಾಯಕನ ಫಾರ್ಸು, ವಿದ್ಯಾರಣ್ಯಚರಿತ್ರೆ (ಅ), ವಿರಹತರಂಗ (ಅ. ೧೮೮೫), ವಿರಾಟಪರ್ವ, ವಿಶ್ವಾಮಿತ್ರ ತಪೋಭಂಗ ಅಥವಾ ಶಕುಂತಲೆಯ ಉತ್ಪತ್ತಿ-ಭಾಗ ೧, ಭಾಗ ೨, ವಿಷಕಂಠಖಡ್ಗ, ವೇಶ್ಯಾವಾಟಿಕಾಸಂಚಾರ, ಶಾಕುಂತಲ, ಶೃಂಗಾರಪದಸಂಗ್ರಹ-ಭಾಗ ೧, ಭಾಗ ೨, ಶೃಂಗಾರಸಾಗರ, 'ಶ್ರೀಮತಿ ಸ್ವಯಂವರ' (ಅ), ಶ್ರೀಯಾಳ ಸತ್ವಪರೀಕ್ಷಾ, ಸದ್ವರ್ತನ, ಸೀತಾರಣ್ಯಪ್ರವೇಶ, ಸೀತಾಸ್ವಯಂವರ, ಸುಧನ್ವವಧೆ, ಸೌಗಂಧಿಕಾಪರಿಣಯ, ಸೌಭದ್ರ, ಸುಂದೋಪಸುಂದವಧ (ಅ), ಸ್ಯಮಂತಕಮಣಿಚರಿತ್ರೆ, ಹರಗರ್ವಪರಿಹಾರ, ಹರಿಮಿತ್ರೋಪಾಖ್ಯಾನ, ಹರಿಶ್ಚಂದ್ರ ಸತ್ವಪರೀಕ್ಷಾ-ಭಾಗ ೧, ಭಾಗ೨.

ಮಂಜುನಾಥಯ್ಯ, ಬೆನಗಲ್ಲ

ಜ : ೧೮೫೬ ಮ : ೨೮-೫-೧೯೨೮

ಮಂಗಳೂರು, ಬೆನಗಲ್ಲ ರಾಮರಾಯರ ತಂದೆ. ವೇದಾಂತ ಹಾಗೂ ವೈದ್ಯ ಶಾಸ್ತ್ರದಲ್ಲಿ ಪಾರಂಗತರಾದ ಇವರು ಮದ್ರಾಸಿನಲ್ಲಿ 'ಬಿ.ಎಂ.ನಾಥ್ ಅಂಡ್ ಕೋ' ಎಂಬ ಹೆಸರಿನ ದವಾಖಾನೆಯನ್ನೂ ಔಷಧಿಯ ಕಾರಖಾನೆಯನ್ನೂ ಸ್ಥಾಪಿಸಿದ್ದರು. ಒಳ್ಳೆಯ ನಾಟ್ಯಕಲಾವಿದರು. ಕರ್ನಾಟಕ ಏಕೀಕರಣದಲ್ಲಿ ತುಂಬ ಆಸೆಯುಳ್ಳವರಾಗಿದ್ದು, ಅಖಿಲಕರ್ನಾಟಕ ಭೂಪಟವನ್ನು ಪರಿಶ್ರಮಪೂರ್ವಕ ಸಿದ್ಧಗೊಳಿಸಿ ಪ್ರಕಟಿಸಿದರು.

ಗ್ರಂಥ : ಲಾವಣ್ಯಮಯಿ (ಇ).

ಪರಿಷ್ಕೃತ : ಶಿವತತ್ವರತ್ನಾಕರ (ಕೆಳದಿಯ ಬಸವರಾಜಕೃತ ಸಂಸ್ಕೃತ ಗ್ರಂಥ)★

★ಇನ್ನೂ ಕೆಲವು ಕಾದಂಬರಿಗಳನ್ನೂ ಶಾಸ್ತ್ರೀಯ ಗ್ರಂಥಗಳನ್ನೂ ಬರೆದಿರುವರೆಂದು ಹೇಳಲಾಗುತ್ತಿದೆ.

ಸೂರ್ಯನಾರಾಯಣರಾವ್, ಬೆಂಗಳೂರು, ಬಿ.ಎ.

ಜ : ೧೨-೨-೧೮೫೬ ಮ : ೧೯೩೭

ಮೈಸೂರು ಪ್ರಾಂತದ ಹುಣಸೂರು ಎಂಬ ಗ್ರಾಮ. ಮದ್ರಾಸಿನಲ್ಲಿ ಕಾಯದೆ ಅಭ್ಯಾಸಮಾಡಿದನಂತರ ಬಳ್ಳಾರಿಯಲ್ಲಿ ವಕೀಲಿ ವ್ಯವಸಾಯವನ್ನು ಪ್ರಾರಂಭಿಸಿದರು. ಅಲ್ಪಾವಧಿಯಲ್ಲೇ ಆ ವ್ಯವಸಾಯವನ್ನು ಬಿಟ್ಟುಕೊಟ್ಟು ಸ್ವಗ್ರಾಮದಲ್ಲಿ ಹೋಗಿ ನೆಲೆಸಿ ಸುಮಾರು ೧೪ ವರ್ಷಗಳವರೆಗೆ ಗಾಢವ್ಯಾಸಂಗಮಾಡಿ ಜ್ಯೋತಿಷ್ಯ, ಖಗೋಲ ಹಾಗೂ ತತ್ಸಂಬಂಧವಾದ ಇತರ ಶಾಸ್ತ್ರಗಳಲ್ಲಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿದರು. ಇವರು ರಚಿಸಿದ ಗ್ರಂಥಗಳು ಇಂಗ್ಲೀಷಿನಲ್ಲಿಯೇ ಹೆಚ್ಚಾಗಿವೆ. ಹಿಂದುಸ್ಥಾನದ ನಾನಾ ಭಾಗಗಳಲ್ಲಿ ಸಂಚರಿಸಿ, ಭಾಷಣ-ಪ್ರವಚನದ ಮುಖಾಂತರ ಭಾರತೀಯ ಇತಿಹಾಸ-ಸಂಸ್ಕೃತಿಯ ಬಗ್ಗೆ ಜನಜಾಗೃತಿಯನ್ನು ಉಂಟುಮಾಡಿದರು. ಭಾರತೀಯ ಜ್ಯೋತಿಷ್ಯಶಾಸ್ತ್ರದ ಪ್ರಭಾವವನ್ನು ಜಾಗತಿಕರಂಗದಲ್ಲಿ ಬೆಳಗಿಸಲು ಇವರು ಬಹುಮಟ್ಟಿಗೆ ಶ್ರಮಿಸಿದರು. History of Vijayanagara or Never to be forgotten Empire ಎಂಬ ಇವರ ಗ್ರಂಥವು ಅತ್ಯಂತ ಆಧಾರಯುಕ್ತವೂ ಕನ್ನಡಿಗರಿಗೆ ಸ್ಫೂರ್ತಿದಾಯಕವೂ ಆದ ಕೃತಿಯೆನಿಸಿದೆ.

ಇವರು ಅಂತರ್‌ರಾಷ್ಟ್ರೀಯ ಕೀರ್ತಿಯನ್ನು ಸಂಪಾದಿಸಿದವರು. ಲಂಡನ್ನಿನ ರಾಯಲ್ ಎಸ್ಟ್ರಾನಾಮಿಕಲ್ ಸೊಸಾಯಿಟಿ, ನ್ಯೂಯಾರ್ಕಿನ ಮೆಡಿಕೋ ಲೀಗಲ್ ಸೊಸಾಯಿಟಿ, ಬಂಗಾಲದ ರಾಯಲ್ ಏಶಿಯಾಟಿಕ್ ಸೊಸಾಯಿಟಿ ಮೊದಲಾದ ಸಂಸ್ಥೆಗಳ ಗೌರವ ಸದಸ್ಯರಾಗಿದ್ದರು. ಬೆಂಗಳೂರಿನ 'ಎಸ್ಟ್ರಾಲಜಿಕಲ್ ಮ್ಯಾಗಜಿನ್' ಎಂಬ ಮಾಸಪತ್ರಿಕೆಯ ಸಂಸ್ಥಾಪಕರೂ ಹಲವು ವರ್ಷ ಸಂಪಾದಕರೂ ಆಗಿದ್ದರು.

ಗ್ರಂಥಗಳು : ಅಕ್ಷಯ ಮತ್ತು ಪ್ರಭವದ ಪರಿಣಾಮಗಳು (ಖ), ಇಂದ್ರಜಾಲ, ವಶಿಷ್ಠ ನಾರದ ತಪೋಬಲ, ವಿಶ್ವಾಮಿತ್ರ (ಇ), ವಿಕ್ಟೋರಿಯಾ ಮಹಾರಾಣಿ (ಯ-ರ), ಸ್ವಯಮ್ ಜ್ಯೋತಿರ್ಬೋಧಿನಿ (ಖ), ಸುಖದ ಶೋಧ.

ತೆಲುಗು : ಮುದಿರಾಜರ ಇತಿಹಾಸ, ಸ್ವಯಮ್ ಜ್ಯೋತಿರ್ಬೋಧಿನಿ.

ಇಂಗ್ಲೀಷ್ : Autobiography, Brihat Jataka, Fight against Fate, Five hundred combinations of Planets, History of Vijayanagara or Never to be forgotten Empire, Jaimini Sutras, Jathaka Chandrike, Jathaka Kalanidhi, Jyothisha Sudhasara Manjari, Life of Shankaracharya, Life of Vidyaranya, Life of Varaha Mihira, Manual of Chess, Revival of Astrology, Saraswatha Chintamani ಇತ್ಯಾದಿ.★

★ಇಂಗ್ಲೀಷಿನಲ್ಲಿ ಒಟ್ಟು ೭೫ ಗ್ರಂಥಗಳನ್ನು ರಚಿಸಿದ್ದಾರೆ.

ಕೃಷ್ಣಾಚಾರ್ಯ, ತಿಮ್ಮಣ್ಣಾಚಾರ್ಯ, ಗರಣಿ

ಜ : ೧೮೫೭ ಮ : ೧-೧೦-೧೯೧೮

ಮದ್ದಗಿರಿ ತಾಲೂಕು ಗರಣಿ. ಕೆಲಕಾಲ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿಯೂ ಅನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿಯೂ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು. ಪ್ರಸಿದ್ಧ ವೈಯಾಕರಣಿಯೆನಿಸಿದ ಇವರು ಮೈಸೂರು ಮಹಾರಾಜರಿಂದ ಆಸ್ಥಾನ ಮಹಾವಿದ್ವಾನ್ ಪ್ರಶಸ್ತಿಯನ್ನು ಪಡೆದು ತಮ್ಮ ಸಾತ್ವಿಕ ಜೀವನಕ್ರಮದಿಂದ ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆದವರಾಗಿದ್ದರು.

ಗ್ರಂಥಗಳು : ಆಯುರಾರೋಗ್ಯಸಂಗ್ರಹ (ಧ), ಕರ್ಣಾಟಕ ಭಾಷಾವಿಷಯವು (ದ-ಟ..೧೮೯೧), ಕರ್ಣಾಟಕ ಭಾಷಾಸಮೀಕರಣೋಪನ್ಯಾಸ (ದಟ), ಕಾದಂಬರೀ ಕಥೆ (ಬಾಣಕವಿ ಕೃತ ಸಂಸ್ಕೃತನಾಟಕದ ಕಥಾಸಾರ) (ಇ. ೧೮೯೯), ಗಜೇಂದ್ರಮೋಕ್ಷ ಟೀಕೆ (ಧ), ದೀರ್ಘಾಯುಸ್ಸೂತ್ರ (ಧ.೧೯೦೮), ನಾಗಾನಂದ ನಾಟಕಂ (ಹರ್ಷಕವಿ ಕೃತ ಸಂಸ್ಕೃತ ನಾಟಕದ ಕಥಾಸಾರ), (ಇ.೧೮೮೮), ನೀತಿಶತಕ (ಅ), ಭಗವತ್ಪ್ರಾರ್ಥನೆ (೨ ಭಾಗಗಳು), (ಅ.೧೯೧೧), ಮೃಚ್ಛಕಟಿಕ ಪ್ರಕರಣಂ (ಅ. ೧೮೯೦), ವಿಶೇಷಧರ್ಮಪ್ರಶ್ನೆ (ಧ), ಸತ್ಕಥಾ (ಧ.೧೯೧೨), ಸದ್ವೃತ್ತಾನುಷ್ಠಾನ (ಧ.೧೯೫೧), ಸನಾತನಾರ್ಯಧರ್ಮಸಾರ (೨ ಭಾಗಗಳು) (ಧ), ಸ್ಮೃತಿಧರ್ಮಪದ್ಧತಿ (ಧ), ಸಂಸ್ಕಾರವಿಶೇಷ ಪ್ರಶ್ನೆ (ಧ.೧೯೧೨), ಸಾಮಾನ್ಯ ಕರ್ಮಪ್ರಶ್ನೆ (ಧ.೧೯೧೨), ಹವ್ಯಪಾಕಪದ್ಧತಿ (ಣ.೧೯೧೧).

ಸಂಸ್ಕೃತ : ಧಾತುರೂಪಾವಳಿ, ಶಬ್ದರತ್ನಾವಳಿ ಇತ್ಯಾದಿ.

ಗುರುಸಿದ್ಧಪ್ಪ, ಗುಬ್ಬಿ

ಜ : ೧೮೫೭ ಮ : (?)

ಬೆಂಗಳೂರು. ಚಿಕ್ಕಪೇಟೆಯ ವೀರಶೈವ ಮಠದ ಸ್ವಾಮಿಗಳ ಬಳಿಯಲ್ಲಿ ವಿದ್ಯಾಭ್ಯಾಸ ಮಾಡಿದರು. ವೈದ್ಯಶಾಸ್ತ್ರದಲ್ಲಿ ತಕ್ಕಮಟ್ಟಿಗೆ ಅನುಭವವಿತ್ತು. ಪುಸ್ತಕ ವಿಕ್ರಯದಿಂದಲೂ, ವೈದ್ಯಕ ವ್ಯವಸಾಯದಿಂದಲೂ ಉಪಜೀವನ ನಡೆಸುತ್ತಿದ್ದರು. ಇವರು ಒಳ್ಳೆಯ ವಾಗ್ಮಿಗಳೂ ಲಾವಣಿಕಾರರೂ ಆಗಿದ್ದರು.★

ಗ್ರಂಥಗಳು : ಇಂದ್ರಸಭೆ (ಅ), ಕರ್ನಾಟಕ ಸಾರಂಗಧರ ನಾಟಕವು (ಅ. ೧೮೯೭), ಕಲಾವತೀ ಪರಿಣಯ (ಅ), ಕೃಷ್ಣಾರ್ಜುನರ ಕಾಳಗವೆಂಬ ಗಯನಾಟಕವು (ಅ. ೧೯೦೩), ಕಾಲಜ್ಞಾನ ಲಾವಣಿ (ಅ), ಚೋರಕಥಾ ನಾಟಕ (ಅ), ಧರ್ಮಪಾಲಚರಿತ್ರೆ (ಅ), ಪ್ಲೇಗಮಾರಿಯ ಲಾವಣಿ (ಅ. ೧೮೭೫), ಶರಣರ ವಚನಗಳ ಲಾವಣಿ (ಅ),

★ಅಲ್ಲದೆ ಗೋವಿನ ಕತೆ, ಚಂದ್ರಹಾಸನ ಕತೆ ಎಂಬ ಯಕ್ಷಗಾನಗಳನ್ನು ರಚಿಸಿದ್ದಾರೆಂದು ಕೆಲವರ ಅಭಿಪ್ರಾಯ.

ಸಾನಂದ ಗಣೇಶ ನಾಟಕವು (ಆ. ೧೮೯೫)ಸ್ಕಾಂದಪುರಾಣೋಕ್ತವಾದ ಮಾರ್ಕಂಡೇಯ ನಾಟಕವು (ಆ. ೧೮೯೭).

ನರಹರಿ, ರಾಮಚಂದ್ರ, ಕನಮಡಿ

ಜ : ೧೮೫೭ ಮ : ಸು ೧೯೨೮

ಬೆಳಗಾವಿ ಜಿಲ್ಲೆಯ ಅಥಣಿ. ಅಥಣಿ, ವಿಜಾಪುರ, ಕಲಾದಗಿಯಲ್ಲಿ ಶಿಕ್ಷಣ. ಒಂದು ವರ್ಷ ಪುಣೆಯಲ್ಲಿಯೂ ಅಭ್ಯಾಸಮಾಡಿದರು. ಆದರೆ ಮನೆತನದ ಅಡಚಣೆಗಳು ಇವರ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಿದವು. ಕಲಾದಗಿಯಲ್ಲಿ First Class Service commission ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪಬ್ಲಿಕ್ ವರ್ಕ್ಸ್ ಖಾತೆಯಲ್ಲಿ ಕಾರಕೂನರಾದರು. ಮುಂದೆ ೧೮೮೨ರಲ್ಲಿ ವಕೀಲಿ ಪರೀಕ್ಷೆಯನ್ನು ಪಾಸಾಗಿ ಸ್ವತಂತ್ರವಾಗಿ ವ್ಯವಸಾಯವನ್ನು ಕೈಕೊಂಡು ೧೯೧೭ರ ವರೆಗೆ ನಡೆಸಿದರು. ಈ ಅವಧಿಯಲ್ಲಿ ವಿಜಾಪುರ ನಗರಸಭೆಯ ಲೋಕನಿಯುಕ್ತ ಪ್ರಥಮ ಅಧ್ಯಕ್ಷರಾಗಿ ಅನೇಕ ಬಗೆಯ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸಿದರು.

ತಮ್ಮ ೫೦ನೆಯ ವಯಸ್ಸಿನಲ್ಲಿ ಸಂಸ್ಕೃತಭಾಷಾಭ್ಯಾಸವನ್ನು ಕೈಕೊಂಡು ಅದರಲ್ಲಿ ಸ್ಪೃಹಣೀಯವಾದ ಪ್ರಗತಿಯನ್ನು ಸಾಧಿಸಿದರು. ಅನೇಕ ಸಂಸ್ಕೃತಕಾವ್ಯಗಳನ್ನು ಭಾಷಾಂತರಿಸಿದರು.

ಗ್ರಂಥಗಳು : ಪಾರ್ವತೀಪರಿಣಯ (ಅ.೧೯೨೨), ಭಗವದ್ಗೀತೆ (ಅ)ರಘುವಂಶ* (ಅ. ೧೯೨೮)

ವಿನಾಯಕ, ಬಾಬಾಜಿ, ಜೋಶಿ

ಜ : ೧೮೫೮ ಮ : ೧೦-೧೨-೧೯೪೨

ಧಾರವಾಡ ಜಿಲ್ಲೆಯ ಧುಂಡಸಿ. ಕರ್ಜಗಿ, ಧಾರವಾಡದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ. ೧೮೮೪ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಿಂದ ಪದವೀಧರರಾಗಿ, ಕಾರವಾರ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದರು. ಮುಂದೆ ಕೆಲಕಾಲ ವಿಜಾಪುರ, ಬೆಳಗಾವಿ ಜಿಲ್ಲೆಗಳಲ್ಲಿ ಕೆಲಸಮಾಡಿ ಅನಂತರ ಧಾರವಾಡ ಶಿಕ್ಷಣ ಮಹಾವಿದ್ಯಾಲಯದ ಮುಖ್ಯಾಧಿಕಾರಿಗಳಾದರು. ಕೊನೆಗೆ ೧೯೧೭ರಲ್ಲಿ ದಕ್ಷಿಣ ಭಾಗದ ಶಿಕ್ಷಣಾಧಿಕಾರಿಗಳಾಗಿ, ನಿವೃತ್ತರಾಗುವವರೆಗೂ ಅದೇ ಅಧಿಕಾರದಲ್ಲಿದ್ದರು. ಇವರ ಕಾರ್ಯವನ್ನು ಮೆಚ್ಚಿ ಸರಕಾರದವರು ೧೯೧೧ರಲ್ಲಿ 'ರಾವಬಹಾದ್ದೂರ' ಪ್ರಶಸ್ತಿಯಿಂದ ಗೌರವಿಸಿದರು. ಆದರೆ ಅಸಹಕಾರ ಚಳುವಳಿಯ ಕಾಲದಲ್ಲಿ ಎಲ್ಲ ಪದವಿ-ಪ್ರಶಸ್ತಿಗಳನ್ನು ಇವರು ಬಿಟ್ಟುಕೊಟ್ಟರು. ಅನೇಕ ವರ್ಷ ಧಾರವಾಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಮುನಿಸಿಪಲ್ ಸ್ಕೂಲ್ ಬೋರ್ಡ್ ಚೇರ್ಮನ್ನರೂ, ರಾಷ್ಟ್ರೀಯ ಶಿಕ್ಷಣ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಪೀಪಲ್ಸ್ ಲೈಬ್ರರಿಯ ಸಂಸ್ಥಾಪಕರಲ್ಲೊಬ್ಬರಾದ ಇವರು

* ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನ ಪಡೆದ ಗ್ರಂಥ.

ರಾ.ಬ.ಕರಂದೀಕರ ಟ್ರಸ್ಟಿನ ವ್ಯವಸ್ಥಾಪಕರಾಗಿ ಸುಮಾರು ೨೫ ವರ್ಷ ಕೆಲಸ ಮಾಡಿದರು. ಮುಂಬಯಿ,ಬನಾರಸ, ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳ ಪರೀಕ್ಷಕರೂ, ಕರ್ನಾಟಕ ವಿದ್ಯಾವರ್ಧಕಸಂಘದ ಪ್ರಮುಖ ಕಾರ್ಯಕರ್ತರೂ ಆಗಿದ್ದರು.

ಗ್ರಂಥಗಳು : ಅರ್ಥಶಾಸ್ತ್ರದ ಮೂಲತತ್ತ್ವಗಳು (ರ), ಗೌಡಕುಲಕರ್ಣಿಯವರ ಕಾಯದೆಗಳ ಸಂಗ್ರಹ-ಭಾಗ ೧ (ಯ-ಅಂ ೧೮೮೭).

ನಂಜುಂಡ ಶಿವಯೋಗಿ

ಮ : ಸು. ೧೮೬೦

ತುಮಕೂರಿನ ಬಳಿಯ ಮತಕೂರಿನವರು (ಮೈದಾಳ). ಗುರುಮುಖವ್ಯಾಸಂಗದಿಂದ ಕನ್ನಡ-ಸಂಸ್ಕೃತ-ಆಂಧ್ರ ಸಾಹಿತ್ಯದಲ್ಲಿ ಪ್ರಾವೀಣ್ಯತೆಯನ್ನು ಸಂಪಾದಿಸಿ ಸ್ವಗ್ರಾಮದಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದರು. ಈ ಪಾಠಶಾಲೆ ಕೆಲವು ಕಾಲದನಂತರ ತುಮಕೂರು ಮುರುಘಾಮಠಕ್ಕೂ ಆ ಬಳಿಕ ಸಿದ್ಧಗಂಗಾ ಕ್ಷೇತ್ರಕ್ಕೂ ಸ್ಥಳಾಂತರಿಸಲ್ಪಟ್ಟಿತು. ಶ್ರೀಮದಟವೀಶಯೋಗಿಂದ್ರರ ಪ್ರಭಾವದಿಂದ ಶಿವಯೋಗಿಗಳು ಅಧ್ಯಾತ್ಮ ಸಾಧನೋನ್ಮುಖರಾಗಿ ಬಾಳಿದರು. ಸಂಗೀತ ಹಾಗೂ ಚಿತ್ರಕಲಾಪರಿಣತರಾದ ಇವರ ಅನೇಕ ಚಿತ್ರಗಳು ಜನಪ್ರಿಯವಾಗಿವೆ.

ಗ್ರಂಥಗಳು : ಅಟವೀಶ್ವರ ಗೀತಾಮಂಜರಿ (ಅ), ಮಾರ್ಕಂಡೇಯ ವಿಳಾಸ (ಅ), ಶ್ರೀಮದಟವೀಶ್ವರ ಗುರುಭಕ್ತಿಸಾರ (ಅ), ಸುರಾಭಾಂಡೇಶ್ವರೋಪಾಖ್ಯಾನ(ಅ), ಹಾಲಾಹಲ ಭಕ್ಷಣೆಯ ಕಥೆ (ಅ).

ವೆಂಕಟದಾಸ, ಯೋಗೇಂದ್ರ

ಜ : (?) ಮ : ೧೮೬೦

ಲಿಂಗಸೂಗೂರು. ಇವರು ಪ್ರಾಣೇಶದಾಸರ ಮಕ್ಕಳು. ಪ್ರಾಣೇಶದಾಸರ ಗುರುಗಳಾದ ಜಗನ್ನಾಥದಾಸರ ಬಳಿಯಲ್ಲಿ ವೆಂಕಟದಾಸರ ವಿದ್ಯಾಭ್ಯಾಸವಾಯಿತು. 'ಶ್ರೀಗುರುಪ್ರಾಣೇಶವಿಠ್ಠಲ' ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದ್ದಾರೆ.

ಇವರ ೧೮ ಕೀರ್ತನೆಗಳು 'ಶ್ರೀ ಪ್ರಾಣೇಶವಿಠ್ಠಲರ ಕೀರ್ತನೆಗಳು ಮತ್ತು ಶ್ರೀ ಗುರುಪ್ರಾಣೇಶವಿಠ್ಠಲರ ಕೀರ್ತನೆಗಳೂ ಶ್ರೀ ವರದೇಂದ್ರ ಸ್ವಾಮಿಗಳವರ ಸ್ವಪ್ನ ವೃಂದಾವನಾಖ್ಯಾನವೂ' ಎಂಬ ಪುಸ್ತಕದಲ್ಲಿ ಪ್ರಕಟವಾಗಿವೆ.

ಅಲೆಕ್ಸಾಂಡರ್, ಎರ್ಝಾ

ಜ : ಸು. ೧೮೬೦

ಇವರು ಮೈಸೂರಿನಲ್ಲಿ ಕ್ರೈಸ್ತಮತಪ್ರಚಾರಕರಾಗಿದ್ದರು.

ಗ್ರಂಥಗಳು : ಸತ್ಯವೇದಗ್ರಂಥದೀಪಿಕೆ (ಧ), ರೋಮ್ಯರ ಪತ್ರಿಕೆ (ಬಾಯಬಲ್ಲಿನ ಭಾಷಾಂತರ) (ಧ.೧೮೯೭).

ಕಾಡಸಿದ್ದಪ್ಪ, ಎಚ್.

ಜ : ೧೮೬೦

ಹೊಳೆನರಸೀಪುರ, ಗವ್ಹರ್ನಮೆಂಟ್ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು.

ಗ್ರಂಥ : ದೇವಾಂಗಮತಪ್ರಕಾಶಿಕೆಯು (ಮುದ್ದುಸಂಗಮುನಿ ಕೃತ ಗ್ರಂಥದ ಟೀಕೆ (ಥ. ೧೮೯೮).

ಕೃಷ್ಣ, ಶ್ರೀನಿವಾಸ, ಹುನಗುಂದ

ಜ : ೧೮೬೦ ಮ : ೧೯೨೫

ಬಿಜಾಪುರ. ಬಿ.ಎ. ಪಧವೀಧರರಾದ ಬಳಿಕ ಮುಂಬಯಿ ಸರಕಾರದ ವಿದ್ಯಾಖಾತೆಯನ್ನು ಸೇರಿ, ಅಧ್ಯಾಪಕರಾಗಿಯೂ ಅ.ಡೆ.ಎ.ಇನ್ಸ್‌ಪೆಕ್ಟರಾಗಿಯೂ ಕೆಲಸ ಮಾಡಿದರು. ಬಿಜಾಪುರದಿಂದ 'ಭಾಷಾಸೇವಕ' ಎಂಬ ಮಾಸಪತ್ರಿಕೆಯನ್ನು ಕೆಲಕಾಲ ನಡೆಸಿದ್ದರು.

ಗ್ರಂಥಗಳು : ಉತ್ತರರಾಮಚರಿತ್ರಕಥೆ, ಕುರುಹಿನ ಬಕುಲಹಾರ.

ಗುಂಡಭಟ್ಟ, ಬೆಳಗುಪ್ಪಿ

ಜ : ಸು. ೧೮೬೦

ಧಾರವಾಡ ಜಿಲ್ಲೆಯ ಹೊಂಬಳ. 'ಗಣೇಶೋಪಾಸಕ' ಎಂಬ ಹೆಸರಿನಿಂದ ಗ್ರಂಥ ರಚಿಸಿದ್ದಾರೆ.

ಗ್ರಂಥಗಳು : ಮಹಾಸಾಧು ಶ್ರೀ ತುಕಾರಾಮಾಖ್ಯಾನವು (ಧ-ಚ.೧೯೧೦), ರಂಭಾ-ಶುಕ ಸಂವಾದವು (ಇ. ೧೮೯೯)

ಗೂಳಪ್ಪ, ಕೊಟ್ರಪ್ಪ, ಅರಳಿ

ಜ : ಸು. ೧೮೬೦

ಧಾರವಾಡ ಜಿಲ್ಲೆಯ ಗಜೇಂದ್ರಗಡ. ಕನ್ನಡ ಶಾಲೆಯಲ್ಲಿ ಉಪಾಧ್ಯಾಯರು.

ಗ್ರಂಥ : ಕನ್ನಡಶೌರ್ಯಸಾಗರ (ಇ)

ಗೋವಿಂದ, ವೆಂಕಟೇಶ, ದೇಶಪಾಂಡೆ

ಜ : ೧೮೬೦ (ಡಿಸೆಂಬರ್) ಮ : ೧೯೪೫ (ಫೆಬ್ರುವರಿ)

ಸವಣೂರು. ಮೂರು ವರ್ಷ ಶಿಕ್ಷಣಮಹಾವಿದ್ಯಾಲಯದಲ್ಲಿ ವ್ಯಾಸಂಗಮಾಡಿ, ಶಿಕ್ಷಣಶಾಖೆಯಲ್ಲಿ ಸೇರಿ ಧಾರವಾಡ ಜಿಲ್ಲೆಯ ಬೇರೆ ಬೇರೆ ಊರುಗಳಲ್ಲಿ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದರು. ಮುಂದೆ ಕೆಲಕಾಲ ಧಾರವಾಡ ಪ್ರ್ಯಾಕ್ಟಿಸಿಂಗ್

ಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿದ್ದರು. ಕೊನೆಗೆ ಅ.ಡೆ.ಎ.ಇನ್‌ಸ್ಪೆಕ್ಟರ್ ಹುದ್ದೆಯನ್ನು ಪಡೆದು ೧೯೧೬ರಲ್ಲಿ ನಿವೃತ್ತರಾದರು. ಆದರ್ಶ ಶಿಕ್ಷಕರೆಂದು ಇವರು ಹೆಸರಾಗಿದ್ದರು.

ಗ್ರಂಥಗಳು : ಕಾರಡಗಿ ಮಹಾಲ ದೇಶಪಾಂಡೆಯವರ ಚರಿತ್ರೆ (ಮ. ೧೯೪೦)

ತಿರುಮಲರಾವ್ ಎ.

ಜ : ಸು. ೧೮೬೦

ಮದ್ರಾಸಿನಲ್ಲಿ ಅಡ್ವೋಕೇಟರಾಗಿದ್ದರು. ಮಧ್ವಸಿದ್ಧಾಂತಗ್ರಂಥಮಾಲಿಕಾ ಮಾಸಪತ್ರಿಕೆಯ ಸಂಪಾದಕರು (೧೯೦೭)

ಗ್ರಂಥಗಳು : ಶ್ರೀಭಗವದ್ಗೀತೆ (ನ. ೧೯೦೭)

ಪರಿಷ್ಕೃತ : ಶ್ರೀಹರಿಕಥಾಮೃತಸಾರ (ಜಗನ್ನಾಥದಾಸಕೃತ)

ನಂಜುಂಡಯ್ಯ, ಎಚ್.ವಿ., ಎಂಎ., ಎಲ್.ಸಿ.ಐ.ಇ. ರಾಜಮಂತ್ರಪ್ರವೀಣ

ಜ : ೧೩-೧೦-೧೮೬೦ ಮ : ೨-೫-೧೯೨೦

ಮೈಸೂರು ವೆಸ್ಲಿಯನ್ ಮಿಶನ್ ಸ್ಕೂಲಿನಲ್ಲಿಯೂ ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿಯೂ ಶಿಕ್ಷಣ ಪಡೆದು ೧೮೮೫ರಲ್ಲಿ ಮೈಸೂರು ಸರಕಾರದ ನ್ಯಾಯಶಾಖೆಯಲ್ಲಿ ಚೀಫ್‌ಕೋರ್ಟಿನ ನ್ಯಾಯಾಧೀಶರಾದರು (೧೯೦೪). ಕೆಲಕಾಲ ಕೌನ್ಸಿಲ್ ಸಭಾಸದರೂ ಅನಂತರ ಚೀಫ್ ಕೋರ್ಟಿನ ಮುಖ್ಯನ್ಯಾಯಾಧೀಶರೂ ಎಂದು ಕೆಲಸಮಾಡಿ ೧೯೧೬ರಲ್ಲಿ ನಿವೃತ್ತರಾದರು. ಮದ್ರಾಸ್ ವಿಶ್ವವಿದ್ಯಾನಿಲಯದ 'ಫೆಲೋ'; ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಗುರುಗಳಾಗಿ ಕೊನೆಯ ಕೆಲವು ಸಮಯ ಕಾರ್ಯನಿರ್ವಹಿಸಿದರು.

ಕನ್ನಡ ಸಾಹಿತ್ಯಪರಿಷತ್ತಿನ ಸಂಸ್ಥಾಪಕರಲ್ಲೊಬ್ಬರಾದ ಇವರು ಪರಿಷತ್ತಿನ ಪ್ರಾರಂಭದ ಮೂರು ಅಧಿವೇಶನಗಳ ಅಧ್ಯಕ್ಷರಾಗಿದ್ದರು (ಬೆಂಗಳೂರು-೧೯೧೫, ೧೯೧೬ ಹಾಗೂ ಮೈಸೂರು-೧೯೧೭).

ಗ್ರಂಥಗಳು : ಅರ್ಥಶಾಸ್ತ್ರ (ರ.೧೯೦೧), ಲೇಖ್ಯಬೋಧಿನಿ. ವ್ಯವಹಾರದೀಪಿಕೆ.

ನರಸಿಂಹಾಚಾರ್, ತಿರುನಾರಾಯಣ ಪೆರುಮಾಳ್, ರಾಮಾನುಜಪುರಂ, ಪ್ರಾಕ್ತನ ವಿಮರ್ಶವಿಚಕ್ಷಣ

ಜ : ೧೮೬೦ ಮ : ೬-೧೨-೧೯೩೬

ಮೈಸೂರು ಜಿಲ್ಲೆಯ ಮಂಡ್ಯದಲ್ಲಿ ಜನನ. ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ೧೮೮೨ರಲ್ಲಿ ಬಿ.ಎ. ಪದವಿಯನ್ನು ಪಡೆದು ಚಿಕ್ಕಮಗಳೂರಿನಲ್ಲಿ ಅಧ್ಯಾಪಕರಾದರು. ೧೮೯೩ರಲ್ಲಿ ಕನ್ನಡವನ್ನು ಮುಖ್ಯ ವಿಷಯವಾಗಿಟ್ಟುಕೊಂಡು ಮದ್ರಾಸ್ ವಿಶ್ವವಿದ್ಯಾನಿಲಯದ ಎಂ.ಎ.ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ಉತ್ತೀರ್ಣರಾದುದಕ್ಕಾಗಿ ಇವರಿಗೆ ದೇವರಾಜ್

ಬಹದ್ದೂರ್ ಸಹಾಯಕ ನಿಧಿಯ ಬಹುಮಾನ ದೊರೆಯಿತು. ಬಳಿಕ ಮೈಸೂರು ಸರಕಾರದ ವಿದ್ಯಾ ಇಲಾಖೆಯಲ್ಲಿ ಕನ್ನಡ ಭಾಷಾಂತರಕಾರರಾಗಿ ಐದು ವರ್ಷ ಕೆಲಸ ಮಾಡಿದನಂತರ ೧೮೯೦ರಲ್ಲಿ ಪ್ರಾಚೀನ ವಸ್ತು ಸಂಶೋಧನಾ ಇಲಾಖೆಯಲ್ಲಿ ಸಹಾಯಕರಾದರು. ೧೯೦೬ರಲ್ಲಿ ಆ ಇಲಾಖೆಯ ಮುಖ್ಯಾಧಿಕಾರಿಗಳಾಗಿ ೧೯೨೨ರಲ್ಲಿ ನಿವೃತ್ತರಾದರು.

೧೯೦೬ರಲ್ಲಿ 'ರಾವ್‌ಬಹಾದ್ದೂರ್' ಎಂಬ ಬಿರುದನ್ನೂ, ೧೯೧೩ರಲ್ಲಿ 'ಪ್ರಾಕ್ತನ ವಿಮರ್ಶವಿಚಕ್ಷಣ' ಎಂಬ ಪ್ರಶಸ್ತಿಯನ್ನೂ ಪಡೆದರು. ೧೯೨೫ರಲ್ಲಿ ನಿಖಿಲ ಭಾರತ ಸಾಹಿತ್ಯಸಂಘದವರಿಂದ 'ಕರ್ನಾಟಕ ಪ್ರಾಚ್ಯವಿದ್ಯಾವೈಭವ' ಎಂಬ ಗೌರವವು ಇವರಿಗೆ ದೊರೆಯಿತು. ಅಖಿಲ ಭಾರತ ಪ್ರಾಚ್ಯವಿದ್ಯಾಪರಿಷತ್ತಿನ ಪ್ರಾರಂಭದ ಎರಡು ಅಧಿವೇಶನಗಳಿಗೆ (ಪುಣೆ, ಕಲಕತ್ತೆ) ಮೈಸೂರು ಸರಕಾರದ ಪ್ರತಿನಿಧಿಗಳು. ಕನ್ನಡ ಸಾಹಿತ್ಯಪರಿಷತ್ತಿನ ನಾಲ್ಕನೆಯ ಅಧಿವೇಶನದ (ಧಾರವಾಡ, ೧೯೧೮) ಅಧ್ಯಕ್ಷರು. ಅಖಿಲಭಾರತ ಪ್ರಾಚ್ಯವಿದ್ಯಾ ಪರಿಷತ್ತಿನ ಎಂಟನೆಯ ಅಧಿವೇಶನದಲ್ಲಿ ಕನ್ನಡ ಶಾಖೆಯ ಅಧ್ಯಕ್ಷರು (ಮೈಸೂರು).

ಕರ್ನಾಟಕಕ್ಕೆ ಸಂಬಂಧಿಸಿದ ತಮಿಳು ಶಾಸನಗಳನ್ನು ಕನ್ನಡಿಸಿಯೂ ಹಲವು ಕನ್ನಡ ಮೂಲಶಾಸನಗಳನ್ನು ಸಂಗ್ರಹಿಸಿಯೂ 'ಎಪಿಗ್ರಾಫಿಕಾ ಕರ್ನಾಟಿಕಾ'ದಲ್ಲಿ ಪ್ರಕಟಿಸಿದರು. ಶ್ರವಣಬೆಳಗೊಳದ ಶಾಸನಗಳ ತಿದ್ದಿದ ಆವೃತ್ತಿಯನ್ನು ಪ್ರಕಟಿಸಿದ್ದಲ್ಲದೆ ಹೈದರಾಬಾದ್ ಶಿಲ್ಪಕಲೆಗೆ ಸಂಬಂಧಿಸಿದ ೭ನೆಯ ಸಂಪುಟವನ್ನು ಸಂಪಾದಿಸಿದರು.

ಕನ್ನಡ ಕವಿಚರಿತ್ರೆಗಳಿಗೆ ಆಚಾರ್ಯಪುರುಷರು. ಅವ್ಯಾಹತವಾದ ಪ್ರಯತ್ನದಿಂದ ೩೫ ವರ್ಷಗಳವರೆಗೆ ಪ್ರಾಚೀನ ಕನ್ನಡ ಗ್ರಂಥಸಂಪತ್ತನ್ನು ಸಂಶೋಧಿಸಿ ಸುಮಾರು ೧೧೫೦ ಕವಿಗಳ ಚರಿತ್ರೆಗಳನ್ನೂ ಕೃತಿ ಪರಿಚಯಗಳನ್ನೂ 'ಕವಿಚರಿತ್ರೆ'ಯ ಮೂರು ಭಾಗಗಳಲ್ಲಿ ಪ್ರಕಟಿಸಿದರು.

ಗ್ರಂಥಗಳು : ಕರ್ನಾಟಕ ಕವಿಚರಿತ್ರೆ ಭಾಗ ೧ (ಎಸ್.ಜಿ. ನರಸಿಂಹಾಚಾರ್ಯರ ಸಹಾಯದಿಂದ) (ಅ.ಚ.೧೯೦೭), ಭಾಗ ೨ (ಅ.ಚ. ೧೯೧೯), ಭಾಗ ೩ (ಅ-ಚ.೧೯೨೯) ನಗೆಗಡಲು (E.G.E Beschi) ಕೃತ ಪುಸ್ತಕದ ಭಾಷಾಂತರ (ಇ ೧೮೯೮), ನೀತಿಮಂಜರಿ ಭಾಗ ೧ (ತಮಿಳಿನಿಂದ ಪರಿವರ್ತಿತ) (ಅ. ೧೮೯೬), ಭಾಗ ೨ (ಅ.೧೯೧೧), ನೀತಿವಾಕ್ಯಮಂಜರಿ (ಧ.೧೮೮೭).

ಭೀಮಾಜಿ, ಶ್ರೀನಿವಾಸ, ಅಡಬಡ್ಡಿ

ಜ : ೧೮೬೦ ಮ : ೧೮೯೪

ಧಾರವಾಡ. ಅಲ್ಲಿಯ ಶಿಕ್ಷಣಮಹಾವಿದ್ಯಾಲಯದಲ್ಲಿ ನಾಲ್ಕು ವರ್ಷ ವ್ಯಾಸಂಗ ಮಾಡಿ, ಕಾಗಿನೆಲ್ಲಿಯಲ್ಲಿ ಉಪಾಧ್ಯಾಯರಾದರು. ಮುಂದೆ ಇವರು ಹುಬ್ಬಳ್ಳಿಯ ಒಂದನೇ ನಂಬರ್ ಶಾಲೆಯ ಮುಖ್ಯಾಧ್ಯಾಪಕರೆಂದು ವರ್ಗಾಯಿಸಲ್ಪಟ್ಟಾಗ ಶಾಂತಕವಿಗಳು ಅದೇ

ಊರಲ್ಲಿ ೨ನೇ ನಂಬರ್ ಶಾಲೆಯ ಮುಖ್ಯಾಧ್ಯಾಪಕರಾಗಿದ್ದರು. ಆ ಕಾಲದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆದ 'ಶೀಘ್ರಕವಿ' ಪರೀಕ್ಷೆಯಲ್ಲಿ 'ಪ್ರವಾಸ' ಎಂಬ ವಿಷಯದ ಮೇಲೆ ಒಂದು ತಾಸಿನಲ್ಲಿ ವಿವಿಧ ಛಂದಸ್ಸಿನ ೧೮ ಪದಗಳನ್ನು ರಚಿಸಿ, ಮೊದಲನೆಯ ಬಹುಮಾನ ಪಡೆದವರು ಅಡಬಡ್ಡಿಯವರು.★

ಗ್ರಂಥಗಳು : ಧಾತ್ವರ್ಥಪ್ರಕಾಶಿಕೆ, ನೀತಿದರ್ಪಣ (ಧ.೧೮೯೩), ಪೆಣ್ಣಡೆಗನ್ನಡಿ, ಸ್ತ್ರೀಧರ್ಮಸಾರ.

ಅಪ್ರಕಟಿತ : ಪದ್ಮಗಂಧೀಸ್ವಯಂವರ, ಮಾರ್ಕಂಡೇಯ, ಸುಧನ್ವಾನಾಟಕಂ.

ರಂಗಾಚಾರ್ಯ, ಮುದ್ಗಲ್ ಭಿಷಗ್ರತ್ನ

ಜ : ಸು. ೧೮೬೦

ಮೈಸೂರು. ಇವರು ೧೯೦೮ರಿಂದ ೧೯೧೬ರ ವರೆಗೆ ಅಭಿನಯವಿಶಾರದ ಜಿ. ನಾಗೇಶರಾವ್ ಮತ್ತು ದಿವಂಗತ ಕವಿತಾಕನಕಸಿಂಹ ಅವರ ನೇತೃತ್ವದಲ್ಲಿ ನಡೆದಿದ್ದ ಶ್ರೀ ಜೀವಾನಂದ ರತ್ನಾವಳಿ ನಾಟಕಸಭೆಗೆ ಕೆಲವು ನಾಟಕಗಳನ್ನು ಬರೆದುಕೊಟ್ಟರು.

ಗ್ರಂಥ : ಮಂಜುಘೋಷ (Shakespeare ಕೃತ Winters Tales ನಾಟಕವನ್ನಾಧರಿಸಿದ್ದು) (ಅ).

ರಾಮರಾವ್, ಆನವಟ್ಟಿ

ಜ : ಸು. ೧೮೭೦

ಶಿವಮೊಗ್ಗಜಿಲ್ಲೆಯ ಆನವಟ್ಟಿ. ಮೈಸೂರು ಆಸ್ಥಾನವಿದ್ವಾಂಸರು. ಇವರು ಪ್ರಖ್ಯಾತ ನಟರೂ ಆಗಿದ್ದರು. ಬಾಲರತ್ನಾಕರ ನಾಟಕ ಮಂಡಳಿಯಲ್ಲಿ ಕೆಲಕಾಲ ಇದ್ದರು (೧೯೨೫).

ಗ್ರಂಥಗಳು : ಆರ್ಯಮಹಿಳಾ (ಮ-ಚ), ಇಂಗ್ಲಂಡ್ ದೇಶದ ಮಹಾಕವಿಯಾದ ವಿಲಿಯಂ ಷೆಕ್ಸಪಿಯರ್ ಚರಿತ್ರೆ (ಆ-ಚ), ಕರ್ನಾಟಕ ಕವಿರತ್ನಮಾಲಾ (ಅ-ಚ), ಕಬೀರದಾಸ ಚರಿತ್ರೆ, ಕಾಳಿದಾಸ ಚರಿತ್ರೆ, ಕ್ರಿಸ್ಟೋಫರ್ ಕೋಲಂಬಸ್ ಎಂಬಾತನ ಜೀವಮಾನ ಚರಿತ್ರೆ, ಗೀತಮಂದಾರ, ಚೂಡಾಮಣಿದರ್ಶನ, ಜಾರ್ಜ್ ವಾಶಿಂಗ್ಟನ್ ಚರಿತ್ರೆ, ತ್ಯಾಗರಾಜರವರ ಚರಿತ್ರೆ, ನೀತಿಮಾರ್ಗದರ್ಶಕರಾದ ಮಹನೀಯರ ಚರಿತ್ರೆ-ಭಾಗ ೧ (ಧ-ಚ), ನೆಪೋಲಿಯನ್ ಮತ್ತು ಸಾಕ್ರೆಟಿಸ್ ಇವರುಗಳ ಚರಿತ್ರೆ (ಮ-ಚ), ಪುರಂದರದಾಸರ ಚರಿತ್ರೆ (ಪ-ಚ), ಬಾಲಕರ ನೀತಿಕಥಾವಳಿ-ಭಾಗ ೧, ೨, ೩ (ಇ), ರಣಧೀರನಾದ ಜಾರ್ಜ್ ವಾಶಿಂಗ್ಟನ್ ಎಂಬಾತನ ಚರಿತ್ರೆ (ಮ-ಚ), ವಸಂತ

★ ([illegible] ಪ್ರಕಟವಾದ 'ದೇವರ ಸ್ತೋತ್ರ' ಎಂಬ ಪುಸ್ತಕದಲ್ಲಿ 'ಧ್ರುವಪದವಿಠ್ಠಲ' ಎಂಬ ಅಂಕಿತ[illegible]ತಂದೆ ಶ್ರೀನಿವಾಸಾಚಾರ್ಯರು ರಚಿಸಿದ ಕೆಲವು ಪದಗಳು ಇವೆ.)

ಮಿತ್ರವಿಜಯನಾಟಕಂ, ವಿಜಯಶೂರ (ಇ), ಶ್ರೀಮನ್ಮಧ್ವಾಚಾರ್ಯರ ಚರಿತ್ರೆ (ಧ-ಚ), ಶ್ರೀರಂಗಪಟ್ಟಣದ ಹೈದರಾಲಿ ಚರಿತ್ರೆ (ಮ-ಚ), ಸನಾತನ ಧರ್ಮಬೋಧಿನಿ, ಪ್ರಶ್ನೋತ್ತರಮಾಲೆ, ಸಾಹಸಕೇಸರಿ.

ರಾಮಸ್ವಾಮಿ, ಅಯ್ಯಂಗಾರ್, ಕೋಮಂಡೂರು

ಜ : ಸು. ೧೮೬೦ ಮ: ಸು. ೧೯೨೫

ಮೈಸೂರು ಸಂಸ್ಥಾನದ ಮಾಗಡಿ. 'ಟೀಚರ್' ಪರೀಕ್ಷೆಯಲ್ಲಿಯೂ ದೇಶೀಯ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿ (ದೇಶೀಯ ಪರೀಕ್ಷೆಯಲ್ಲಿ ಬೆಳ್ಳಿಯ ಬಟ್ಟಲು ಹಾಗೂ ೩೦ ರೂಪಾಯಿ ಬಹುಮಾನವನ್ನು ಪಡೆದರು-೧೮೮೮), ಮುಖ್ಯೋಪಾಧ್ಯಾಯರಾಗಿ ಮಾಗಡಿ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದರು. ಆಸ್ಥಾನ ವಿದ್ವಾಂಸರೆಂದು ಗೌರವಿತರಾಗಿದ್ದರು.

ಗ್ರಂಥಗಳು : ಉಪದೇಶಮಾಲೆ (ಅ), ಒಳ್ಳೆಡೆಗನ್ನಡಿ (ಅ), ಕನ್ನಡ ಬಾಲಭಾಗವತ (ಧ), ಕನ್ನಡ ಬಾಲಭಾರತ (ಧ), ಕನ್ನಡ ಬಾಲರಾಮಾಯಣ (ಧ), ಕಪಿಲನ ಇತಿಹಾಸ (ಇ), ಕುಮಾರವ್ಯಾಸನ ಮಹಾಭಾರತದ ಸಂಗ್ರಹ (ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ, ಉದ್ಯೋಗಪರ್ವ, ಭೀಷ್ಮ-ದ್ರೋಣಪರ್ವ, ಕರ್ಣ-ಶಲ್ಯಸೌಪ್ತಿಕ-ಸ್ತ್ರೀಪರ್ವ (ಇ), ಕೌಸಲ್ಯಾಪರಿಣಯಂ (ಇ. ೧೯೧೨), ಚಂದ್ರಕಲಾ ಕಲ್ಯಾಣ (ಇ), ಚಾಣಕ್ಯತಂತ್ರ (ಇ), ಜೀರ್ಣವಿಜಯ ನಗರಾದರ್ಶ (ಇ), ದಾರಿದ್ರ್ಯಶತಕ (ಅ), ನೀತಿರಸಾಯನ (ಅ), ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ, ಬಾಲಭಾರತ (ಅ), ಬಾಲಿಕಾ ನೀತಿಮಾಲಿಕೆ (ಅ), ಮಕ್ಕಳ ಆಟಗಳು., ಮಹಾಭಕ್ತವಿಜಯ (ಧ), ಮುಕುಂದಮಾಲಾಸ್ತೋತ್ರ (ಅ), ರಂಗನಾಥರಾಮಾಯಣ (ಅ), ರಾಜತರಂಗಿಣಿ, ರಾಜಪುತ್ರ ರಮಣಿಯರು, ರಾಜಭಕ್ತಿಸಾರ, ರಾಜಾರಾಮಮೋಹನರಾಯನ ಚರಿತ್ರೆ (ಲ-ಚ), ಲೇಖ್ಯಪ್ರದರ್ಶಿನಿ, ವ್ಯವಸಾಯಚಂದ್ರಿಕೆ, ಸತ್ಯಾದ್ರೌಪದೀಸಂವಾದ (ಅ), ಸುಕನ್ಯಾಚರಿತ್ರೆ, ಸುಯಜ್ಞೋಪಾಖ್ಯಾನ, ಸಂಗೀತಕಲ್ಯಾಣಪಾರಿಜಾತ (ಅ), ಸಂಸಾರನಿರ್ವಾಹಕ್ರಮ ಮತ್ತು ಗೃಹಶಿಕ್ಷಣ, ಸಂಕ್ಷೇಪ ಮುದ್ರಾರಾಕ್ಷಸ (ಇ), ಹಿತಬೋಧಿನಿ ('ವಿನೋದಿನಿ'ಯಲ್ಲಿ ಅಚ್ಚಾದುದು) (ಅ), ಹಿತೋಪದೇಶ (ಅ).

ಪರಿಷ್ಕೃತ : ಆನಂದರಾಮಾಯಣ ಅಥವಾ ರಾಮಾಭ್ಯುದಯ ಕಥಾಕುಸುಮಮಂಜರಿ (ಸಹದೇವಪುರದ ತಿರುಮಲಾರ್ಯಕೃತ).

ಲಕ್ಷ್ಮಣ, ಬಾಳಾಜಿ, ಘಟಗಾರ

ಜ : ಸು. ೧೮೬೦

ಧಾರವಾಡ. ಇವರು ಸವಣೂರು ಸಂಸ್ಥಾನದಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡಿದರು. ಸಾರ್ವಜನಿಕ ಉತ್ಸಾಹಿ ಕಾರ್ಯಕರ್ತರು.

ಗ್ರಂಥ : ಗಜಾನನಸ್ತವನಂ (ಅ. ೧೮೯೭)

ವೆಂಕಟಸುಬ್ಬಮ್ಮ, ಉಡಿಪಿ

ಜ : ಸು. ೧೮೬೦

ದಕ್ಷಿಣ ಕನ್ನಡ ಜಿಲ್ಲೆಯ ಉಡಿಪಿ. ಶೀಘ್ರ ಕವಯಿತ್ರಿ, ಸುಮಾರು ೧೮೮೩ರಿಂದ ಪ್ರಚಾರದಲ್ಲಿದ್ದ 'ಸುದರ್ಶನ' ಎಂಬ ಮಾಸಪತ್ರಿಕೆಯಲ್ಲಿ ಇವರು ರಚಿಸಿದ ಅನೇಕ ದೇವರನಾಮಗಳು ಪ್ರಕಟವಾಗಿವೆ.

ವ್ಯಾಸರಾವ್, ವೆಂಕಟರಾವ್, ರೊದ್ದ

ಜ : ಸು. ೧೮೬೦ ಮ : ೧೯೩೦

ಧಾರವಾಡ. ಮುಂಬಯಿ ಸರಕಾರದ ಭಾಷಾಂತರ ಶಾಖೆಯಲ್ಲಿ ಕೆಲಸಮಾಡುತ್ತಿದ್ದ ಇವರು ಇಂಗ್ಲೀಷ್ ಭಾಷೆಯಲ್ಲಿ ಒಳ್ಳೆಯ ಲೇಖಕರೂ, ಸಮಾಜಸುಧಾರಣೆ ಹಾಗೂ ರಾಷ್ಟ್ರೀಯ ಜಾಗೃತಿಯ ಕಡೆಗೆ ವಿಶೇಷ ಒಲವುಳ್ಳವರೂ ಆಗಿದ್ದರು. ವಿದ್ಯಾರ್ಥಿ ವೇತನಕ್ಕಾಗಿ ಕರ್ನಾಟಕ ಕಾಲೇಜಿಗೆ ೧೦೦೦ ರೂಪಾಯಿ ದಾನ ಮಾಡಿದರು.

ಗ್ರಂಥ : ಚಂದ್ರಮುಖಿಯ ಘಾತವು (ಇ. ೧೯೦೦)

ಶಾಂತಿಬಾಯಿ, ಕೃಷ್ಣ, ನಾಡಘರ

ಜ : ೧೮೬೦ ಮ : ೧೯೦೧

ಶಿವಮೊಗ್ಗ ಜಿಲ್ಲೆಯ ಸಾಗರದ ಕೊಪ್ಪಿ ವೆಂಕಟೇಶಯ್ಯ ಎಂಮ ವಕೀಲರ ಮಗಳು.ತಂದೆಯ ಬಳಿಯಲ್ಲಿಯೇ ಕನ್ನಡ ಓದು-ಬರೆಹ ಕಲಿತರು. ಇವರಿಗೆ ಸಂಗೀತ ಮುಂತಾದ ಇತರ ಲಲಿತಕಲೆಗಳಲ್ಲಿಯೂ ತುಂಬಾ ಆಸಕ್ತಿ ಇದ್ದಿತು. ಭಟಕಳದ ಸುಪ್ರಸಿದ್ಧ ಕವಿಗಳೂ ಸತ್ಪುರುಷರೂ ಆಗಿದ್ದ ಅಪ್ಪಯ್ಯ ನಾಢಘರ ಮನೆತನದ ಕೃಷ್ಣರಾವ್ ಎಂಬವರೊಡನೆ ಇವರ ಲಗ್ನವಾಯಿತು.

ಅನೇಕ ಬಗೆಯ ಸಾಂಸಾರಿಕ ವಿಪತ್ತುಗಳನ್ನೆದುರಿಸಿದ ಶಾಂತಿಬಾಯಿಯ ಮನಸ್ಸು ಅಧ್ಯಾತ್ಮದ ಕಡೆಗೆ ಒಲಿಯಿತು. ವಿಠ್ಠಲ ಹಾಗೂ ದತ್ತಾತ್ರಯರ ಉಪಾಸಕರಾಗಿ ಹಲವಾರು ಕನ್ನಡ, ಮರಾಠಿ ಭಕ್ತಿಪರ ಪದ್ಯಗಳನ್ನು ರಚಿಸಿದರು. ಭಟಕಳದಲ್ಲಿಯ ನಾಢಘರ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ದತ್ತಮೂರ್ತಿಯ ಪ್ರತಿಷ್ಠಾಪನೆ ಮಾಡಿ, ಅಲ್ಲಿ ಪ್ರತಿವರ್ಷ ದತ್ತಜಯಂತಿ ಉತ್ಸವದ ಪರಂಪರೆಯನ್ನು ಹಾಕಿಕೊಟ್ಟರು.

ಗ್ರಂಥ : ಶ್ರೀಮತಿ ಜೀವನ್ಮುಕ್ತ ಕವಿ ಭಟಕಳ ನಾಡಘರ ಶಾಂತಿಬಾಯಿಯವರ ಪುಣ್ಯ ಚರಿತ್ರವೂ ಅವರು ರಚಿಸಿದ ಅಭಂಗಗಳು, ಪದಗಳು ಸಹ (ಅ. ೧೯೨೮).

ಶಾಮರಾವ, ಎಂ., ರಾಜಕಾರ್ಯಪ್ರಸಕ್ತ, ರಾವಬಹಾದ್ದೂರ್

ಜ : ೧೮೬೦ ಮ : ೫-೭-೧೯೩೯

ಮೈಸೂರು. ಎಂ.ಎ. ಪದವೀಧರರಾಗಿ, ಕಂದಾಯ, ಸಹಕಾರೀಸಂಘ, ದಿವಾನರ

ಆಪ್ತವರ್ಗ ಮುಂತಾದ ಮೈಸೂರು ಸರಕಾರದ ಖಾತೆಗಳಲ್ಲಿ ಕೆಲಸಮಾಡಿ ಒಳ್ಳೆಯ ಅಧಿಕಾರಿಗಳೆಂದು ಮಹಾರಾಜರಿಂದಲೂ ಭಾರತ ಸರಕಾರದಿಂದಲೂ ರಾಜಗೌರವ ಪಡೆದರು. ಮೈಸೂರು ಭಾಷೋಜ್ಜೀವಿನೀ ಪಾಠಶಾಲೆಯ ಸ್ಥಾಪಕರಲ್ಲೊಬ್ಬರಾಗಿದ್ದ ಇವರು 'ಹಿತಬೋಧಿನಿ', 'ವಿದ್ಯಾದಾಯಿನಿ', 'ಕರ್ನಾಟಕ ಗ್ರಂಥಮಾಲೆ' ಮುಂತಾದ ನಿಯತಕಾಲಿಕೆಗಳ ಉತ್ಕರ್ಷಗಾಗಿ ತುಂಬ ಹೆಣಗಿದರು. 'ಮಿಥಿಕ್ ಸೊಸಾಯಿಟಿ'ಗೆ ಹಲವಾರು ವರ್ಷ ಅಧ್ಯಕ್ಷರಾಗಿದ್ದರು.

ಗ್ರಂಥ : ಕನ್ನಡ : ಮೈಸೂರು ದೇಶದ ಚರಿತ್ರೆ

ಇಂಗ್ಲೀಷ್ : Modern Mysore (2 Vols.)

ಹಣಮಂತರಾವ್, ಸಗರ

ಜ: ಸು. ೧೮೬೦

ವಿಜಾಪುರದಲ್ಲಿ ಮಾಧ್ಯಮಿಕ ಶಿಕ್ಷಕರಾಗಿದ್ದರು. ಶೇಷಗಿರಿ ಜನಾರ್ದನ ಕೊಣ್ಣೂರ ಅವರ ಸಹಕಾರದಿಂದ 'ಭಾಷಾಸೇವಕ' ಎಂಬ ಮಾಸಪತ್ರಿಕೆಯನ್ನು ಕೆಲಕಾಲ ನಡೆಸಿದರು.

ಗ್ರಂಥ : ಅಂತಃಪುರದ ರಹಸ್ಯ (Love of Harem ಪುಸ್ತಕದ ಭಾಷಾಂತರ; ಇ)

ರಾಮಚಂದ್ರ, ಹಣಮಂತ, ದೇಶಪಾಂಡೆ

ಜ : ೧೮೬೧ ಮ : ೧೯೩೦

ಧಾರವಾಡ ಜಿಲ್ಲೆಯ ನರೇಂದ್ರ. ಪ್ರೌಢವ್ಯಾಸಂಗವು ಪುಣೆಯಲ್ಲಿ ಆಯಿತು. ರಾಬರ್ಟ್ಸನ್‌ರ ಸುವರ್ಣ ಪದಕ ಪಡೆದು ಎಂ.ಎ. ಪದವೀಧರರಾದರು. ಉತ್ತರ ಕರ್ನಾಟಕದಲ್ಲಿ ಎಂ.ಎ. ಆದವರಲ್ಲಿ ಇವರು ಮೊದಲಿಗರು. ಮುಂದೆ ಮುಂಬಯಿ ಸರಕಾರದ ಶಿಕ್ಷಣಶಾಖೆಯಲ್ಲಿ ಕೆಲಸ ಮಾಡಿ, ಕೊನೆಗೆ ಧಾರವಾಡ ಶಿಕ್ಷಣಮಹಾವಿದ್ಯಾಲಯದ ವೈಸ್‌ಪ್ರಿನ್ಸಿಪಾಲರಾಗಿ ೧೯೧೬ರಲ್ಲಿ ನಿವೃತ್ತರಾದರು. ಇವರು ಉಜ್ವಲ ಕನ್ನಡಾಭಿಮಾನಿಗಳೂ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರೂ, ಪ್ರಥಮ ಕಾರ್ಯದರ್ಶಿಗಳೂ ಆಗಿದ್ದರು.

ಗ್ರಂಥಗಳು : ಅಕಬರ ಚಕ್ರವರ್ತಿಯ ಚರಿತ್ರೆ, ಕರ್ನಾಟಕಸಾಮ್ರಾಜ್ಯ-ಭಾಗ ೧, ಭಾಗ ೨, ಚರಿತ್ರ ಸಂಗ್ರಹ (ಪೂರ್ವಾರ್ಧ-ಉತ್ತರಾರ್ಧ), ಛತ್ರಪತಿ ಶಿವಾಜಿ ಮಹಾರಾಜ, ಟೀಪೂಸುಲ್ತಾನನ ಚರಿತ್ರೆ, ನಾನಾ ಫಡಣವೀಸ (ಯ-ಚ.೧೮೯೮), ನೂರಜಹಾನ ರಾಣಿಯು (ಯ-ಚ.೧೮೯೭), ಬೀರಬಲ್ಲರ ಚರಿತ್ರೆ (ಕಥಾಸಹಿತ), ಭಾಗ ೧, ಭರತಖಂಡದ ಧರ್ಮಸ್ಥಾಪಕರೂ ಸುಧಾರಕರೂ, ಮೊಗಲ ಬಾದಶಾಹಿ, ರಣಜಿತಸಿಂಹನ ಚರಿತ್ರೆ.

ಶಾಮ, ಯದುಪತ್ಯಾಚಾರ್ಯ:

ಜ : ೨೫-೪-೧೮೬೧ ಮ : ೧-೫-೧೯೩೭

ಕೊಯಿಮುತ್ತೂರು. ಮಾಧ್ಯಮಿಕ ಶಿಕ್ಷಣ ಪೂರ್ತಿಯಾದನಂತರ ಚೆಂಗಲ್‌ಪುಟ್‌ದಲ್ಲಿ ಶಿಕ್ಷಕರಾದರು. 'ತಂದೆಪುರಂದವಿಠ್ಠಲ ಶ್ರೀರಂಗ ಒಲಿದ ಚಿಕ್ಕದಾಸರು' ಎಂಬ ಅಂಕಿತದಿಂದ ಅನೇಕ ಪದ, ಸುಳಾದಿ, ಉಗಾಭೋಗಗಳನ್ನು ರಚಿಸಿರುವರು.

(ನಾಗರೀ ಲಿಪಿಯಲ್ಲಿ ಪ್ರಕಟವಾದ ಈ ದಾಸರ ಕನ್ನಡ ಪದಸಂಗ್ರಹವನ್ನು ಎಂ. ಲಕ್ಷ್ಮಣರಾವ ಕಡಲೂರ್ (ದಕ್ಷಿಣ ಆರ್ಕಾಟ್) ಅವರು ೧೯೩೮ರಲ್ಲಿ ಪ್ರಕಟಿಸಿರುವರು.)

ತಮ್ಮಣ್ಣಪ್ಪಾ, ಸತ್ಯಪ್ಪಾ, ಚಿಕ್ಕೋಡಿ

ಜ : ೨-೯-೧೮೬೨ ಮ : ೬-೧೨-೧೯೩೪

ಬೆಳಗಾವಿ ಜಿಲ್ಲೆಯ ಬನಹಟ್ಟಿ. ಮರಾಠಿ, ಇಂಗ್ಲೀಷ್ ಬಲ್ಲವರು. ಕೆಲಕಾಲ ಉಪಾಧ್ಯಾಯರಾಗಿದ್ದರು. ಬನಹಟ್ಟಿಯಲ್ಲಿ ಕನ್ನಡ ಹೈಸ್ಕೂಲನ್ನು ಸ್ಥಾಪಿಸಿದರಲ್ಲದೆ, ಕನ್ನಡಭಾಷಾಪ್ರಚಾರದ ಕಾರ್ಯದಲ್ಲಿ ವಿವಿಧ ರೀತಿಯಿಂದ ದುಡಿದರು.

ಇವರು 'ರಾಮಲಿಂಗಸುತ' ಎಂಬ ಅಂಕಿತದಿಂದ ಸಾಹಿತ್ಯರಚನೆ ಮಾಡಿದ್ದಾರೆ.

ಗ್ರಂಥಗಳು : ಉಷಾಪರಿಣಯನಾಟಕ (ಅ), ಗಿರಿಜಾಸ್ವಯಂವರ (ಅ), ಭೀಮದೇವ (ಅ), ಶಾರದಾ (ಅ).

ರಾಮಾನುಜಯ್ಯಂಗಾರ್, ಎಂ.ಎ

ಜ : ೧೮೬೨ ಮ : ೨೭-೬-೧೯೩೭

ಮಂಡ್ಯ. ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತ ಅಭ್ಯಾಸವಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿಯೂ, ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿಯೂ ಪ್ರೌಢವ್ಯಾಸಂಗ ಮಾಡಿ, ಬಿ.ಎ. ಪದವೀಧರರಾಗಿ ಮೈಸೂರು ವೆಸ್ಲಿಯನ್ ಮಿಶನ್ ಸ್ಕೂಲಿನಲ್ಲಿ ಉಪಾಧ್ಯಾಯರಾದರು. ಕೆಲವು ವರ್ಷಗಳನಂತರ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು (೧೯೧೪) ಕೊನೆಗೆ ಮೈಸೂರು ಸರಕಾರದ ಭಾಷಾಂತರಕಾರರೆಂದು ನಿವೃತ್ತರಾದರು.

ಇವರು ೧೮೯೪ರಲ್ಲಿ 'ಆರ್ಯಮತ ಸಂಜೀವಿನೀ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ನಾಲ್ಕೈದು ವರ್ಷಗಳವರೆಗೆ ನಡೆಸಿದರು. ಅನಂತರ ಎಂ.ಕೆ.ತಿರುಮಲಾಚಾರ್ ಮೊದಲಾದವರ ಸಹಕಾರದಿಂದ 'ಕಾವ್ಯಮಂಜರಿ' ಎಂಬ ಪತ್ರಿಕೆಯನ್ನು ಪ್ರಕಟಿಸಲು ಉಪಕ್ರಮಿಸಿದರು. ಕಾಲಾವಧಿಯಲ್ಲಿ ಅದನ್ನೇ 'ಕಾವ್ಯಕಲಾನಿಧಿ' ಎಂದು ಮಾರ್ಪಡಿಸಿ, ಅದರ ಮುಖಾಂತರ ೧೯೧೮ರ ವರೆಗೂ ಕನ್ನಡ ಪ್ರಾಚೀನ ಕಾವ್ಯಗಳನ್ನು ಪರಿಶೋಧಿಸಿ

ಪ್ರಕಟಿಸಿದರು. 'ಕಾವ್ಯಕಲಾನಿಧಿ'ಯು ಸಾಹಿತ್ಯಾಭ್ಯಾಸಿಗಳಿಗೆ ನಿಜವಾಗಿಯೂ ಅಕ್ಷಯನಿಧಿಯೇ ಸರಿ. ಸುಮಾರು ೨೫ ವರ್ಷಗಳ ಇವರ ಅವಿಶ್ರಾಂತ ಪರಿಶ್ರಮದ ಪರಿಣಾಮವಾಗಿ ಅನೇಕ ಹಳಗನ್ನಡ ಗ್ರಂಥಗಳು ಬೆಳಕಿಗೆ ಬಂದವು. ಎಸ್. ಜಿ. ನರಸಿಂಹಾಚಾರ್ಯರು ಇವರ ಸಹಾಯಕರಾಗಿದ್ದರು. ಇವರು ತಮಿಳುಭಾಷೆಯಲ್ಲಿಯೂ ಪಂಡಿತರಾಗಿದ್ದರು.

ಗ್ರಂಥಗಳು : ಕವಿಕಾರ್ಯಪ್ರಶಂಸೆ (೧೯೧೩), ಕವಿಸಮಯಂ (ದ. ೧೯೦೮), ಪ್ರಬಂಧಾವಳಿ ಅಥವಾ ಐಹಿಕಸುಖಸಾಧನಂ, ಪ್ರಮಾಣಪ್ರಮೇಯವಿವೇಕ, ಬಾಗಿಲು ಭದ್ರ (ನ), ಮಹಾಭಾರತಕಥಾ ಪ್ರಸಂಗ ಮತ್ತು ಇತರ ಕಥೆಗಳು (ಧ), ಸಭಾಪರ್ವ, ಸುವೃತ ಅಥವಾ ಕರ್ಮವಿಲಾಸ (ಇ. ೧೯೧೫).

ಪರಿಷ್ಕೃತ : ಪಂಪಾಶತಕಂ (ಹರಿಹರಕವಿ), ಭಾವಚಿಂತಾರತ್ನಂ (ಗುಬ್ಬಿ ಮಲ್ಲಣಾರ್ಯ), ವಚನಕಾದಂಬರಿ, ವರ್ಷವರ್ಧಂತೀಶತಕಂ (ಶ್ರೀನಿವಾಸಕವಿ), ಚಂದ್ರಪ್ರಭಪುರಾಣಂ (ಅಗ್ಗಳದೇವ), ರಾಮಾಶ್ವಮೇಧ (ಮುದ್ದಣ), ಚಿಕ್ಕದೇವರಾಜವಂಶಾವಳಿ, ಚಿಕ್ಕದೇವರಾಜ ವಿಜಯಂ (ತಿರುಮಲೆಯಾರ್ಯ), ಕವಿಕಂಠಹಾರ (ಸೂರ್ಯಕವಿ), ಅಭಿನವದಶಕುಮಾರಚರಿತೆ (ಚೌಂಡರಸ), ಲೀಲಾವತಿಪ್ರಬಂಧ (ನೇಮಿಚಂದ್ರ), ಶಾಂತೀಶ್ವರ ಪುರಾಣಂ (ಕಮಲಭವ), ಶ್ರೀರಾಮಪಟ್ಟಾಭಿಷೇಕಂ (ಮಹಾಲಕ್ಷ್ಮೀ), ಸುಭಾಷಿತ ಮುಕ್ತಕಶತಕಂ, ಹದಿಬದೆಯ ಧರ್ಮ (ಹೊನ್ನಮ್ಮ), ಮೋಹನತರಂಗಿಣಿ (ಕನಕದಾಸ), ಅರ್ಧನೇಮಿಪುರಾಣಂ, ಚಿಕ್ಕದೇವರಾಜ ಬಿನ್ನಪಂ, ಕರ್ಣವೃತ್ತಾಂತಕಥೆ, ಪಂಚತಂತ್ರಂ (ದುರ್ಗಸಿಂಹ), ಗಯಚರಿತ್ರೆ (ಕೋನಯ್ಯ), ಜಯನೃಪಕಾವ್ಯಂ (ಮಂಗರಸ), ಆದಿಪುರಾಣ (ಪಂಪಕವಿ) ಇತ್ಯಾದಿ.

ಸುಬ್ರಹ್ಮಣ್ಯ, ಟಿ.ವಿ. (ಕವಿಸುಬ್ರಹ್ಮಣ್ಯ)

ಜ : ೧೮೬೨ ಮ : ೧೯೧೮

ಚಳ್ಳಕೆರೆ ತಾಲೂಕು ಇಕ್ಕನೂರು. ಕನ್ನಡದ ಹಿರಿಯ ವಿದ್ವಾಂಸರಲ್ಲೊಬ್ಬರಾಗಿದ್ದ ಟಿ.ಎಸ್‌ವೆಂಕಣ್ಣಯ್ಯನವರ ತಂದೆ. ರಸಿಕರೂ, ವರಕವಿಯೂ ಎಂದು ಪ್ರಸಿದ್ಧರಾಗಿದ್ದ ಇವರು ತಳುಕಿನ ಧರ್ಮಛತ್ರದ ಪಾರುಪತ್ಯಗಾರರಾಗಿ ಕೆಲಸ ಮಾಡಿದರು.

ಗ್ರಂಥ : ದೂರ್ವಾಸ ಶಾಪ (ಅ)

ಅಪ್ರಕಟಿತ : ಅರ್ಜುನತೀರ್ಥಯಾತ್ರೆ, ಚಂದ್ರಹಾಸ, ಚೋರಕಥೆ, ಮದನಮಂಜರಿವಿಳಾಸ, ಲವಕುಶರ ಕಾಳಗ, ಶನಿಮಹಾತ್ಮ್ಯೆ, ಶಿವಜಲಂಧರ, ಸುಧನ್ವಕಾಳಗ, ಹರಿಶ್ಚಂದ್ರ.

ನಾರಾಯಣರಾವ್, ಪರಮೇಶ್ವರಯ್ಯಾ, ಹತ್ತಂಗಡಿ

ಜ : ೧೧-೨-೧೮೬೩ ಮ : ೧೭-೬-೧೯೨೧

ಕಾರ್ಕಳದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿ ಮಂಗಳೂರು ಗವರ್ನಮೆಂಟ್ ಕಾಲೇಜಿನಿಂದ ೧೮೭೭ರಲ್ಲಿ ಮ್ಯಾಟ್ರಿಕ್ಯುಲೇಶನ್ ಪಾಸಾದರು. ಪ್ರೌಢ

ಶಿಕ್ಷಣವನ್ನು ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿ ಮುಗಿಸಿ ೧೮೮೪ರಲ್ಲಿ ಪದವೀಧರರಾದರು. ಮುಂದೆ ಮದ್ರಾಸ್ ಶಿಕ್ಷಣಶಾಖೆಯನ್ನು ಸೇರಿ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು, ಕೆಲವು ವರ್ಷಗಳನಂತರ ಆ ವ್ಯವಸಾಯವನ್ನು ಅರ್ಧಕ್ಕೇ ಬಿಟ್ಟು ಹೆಚ್ಚಿನ ಅಭ್ಯಾಸಕ್ಕಾಗಿ ಮದ್ರಾಸಿಗೆ ತೆರಳಿ ೧೮೯೫ರಲ್ಲಿ ಬಿ.ಎಲ್. ಪದವಿಯನ್ನು ಸಂಪಾದಿಸಿ ವಕೀಲರಾದರು. ಸಾಹಿತ್ಯ, ಕಲೆ ಹಾಗೂ ಇತರ ಸಾಮಾಜಿಕ ವಿಷಯಗಳಲ್ಲಿ ವಿಶೇಷ ಆಸ್ಥೆಯುಳ್ಳ ಇವರು ಪತ್ರಿಕಾಪ್ರಪಂಚದಲ್ಲಿ ಕಾಲಿಟ್ಟು 'Indian Social Reformer' ಎಂಬ ಸುಪ್ರಸಿದ್ಧ ವಾರಪತ್ರಿಕೆಗೆ ಸಂಪಾದಕರಾದರು. ಕೆಲಕಾಲದನಂತರ ಮುಂಬೈಗೆ ಹೋಗಿ ಆ ಕಾಲದ ಪ್ರಮುಖ ಸುಧಾರಕರಾಗಿದ್ದ ಶೇಠ ಬಿ.ಎಂ. ಮಲಬಾರಿಯವರ ಸಹಕಾರಿಯಾಗಿ 'East & West' ಮತ್ತು 'Indian Spectator' ಎಂಬ ಪತ್ರಿಕೆಗಳ ಸಂಪಾದಕತ್ವ ವಹಿಸಿದರು.ಮಲಬಾರಿಯವರ ಮರಣದ ನಂತರ ಪತ್ರಿಕೆಗಳು ನಿಂತವು; ನಾರಾಯಣರಾಯರ ಪ್ರತ್ಯಕ್ಷ ಸಂಬಂಧವು ತಪ್ಪಿದರೂ ಆ ಕಾಲದ ಪ್ರಸಿದ್ಧ ಪತ್ರಿಕೆಗಳಿಗೆ ಲೇಖನ ಒದಗಿಸುವುದನ್ನು ಅವರು ಆಮರಣ ನಡೆಸಿಕೊಂಡು ಬಂದರು. ಮದ್ರಾಸ್, ಮುಂಬಯಿ ವಿಶ್ವವಿದ್ಯಾನಿಲಯಗಳ ಕನ್ನಡ ಪರೀಕ್ಷಕರು.

ಗ್ರಂಥಗಳು : ಆಂಗ್ಲಕವಿತಾವಳಿ (ಅ. ೧೯೧೯), ಇಂಗ್ಲೀಷು-ಕನ್ನಡ ನಿಘಂಟು (ದ-ಏ.೧೯೧೯), ಕನ್ನಡ ಕಥಾನಕ, ಕನ್ನಡ ಕವಿತೆಯ ಭವಿತವ್ಯ.

ರಿಷ್, ಹೆರ್ಮನ್,ರೆವರಂಡ್

ಜ :೨೮-೪-೧೮೬೩ ಮ : ೧೬-೭-೧೯೨೮

ಜರ್ಮನಿಯವರು. ಧಾರವಾಡ ಜಿಲ್ಲೆಯ ಬೆಟಗೇರಿಯು ಇವರ ಕರ್ಮಭೂಮಿಯಾಗಿತ್ತು. ಅಲ್ಲಿಯ ಅನಾಥಾಲಯದ ಕಟ್ಟಡವನ್ನು ಕಟ್ಟಿಸಿದವರು ಇವರೇ. ೧೯೦೮ರಲ್ಲಿ ಬಾಸೆಲ್ ಮಿಶನ್ನಿನ ಅಧ್ಯಕ್ಷರೂ, ಕೆಲಕಾಲ ಮಂಗಳೂರು ಥಿಯಾಲಾಜಿಕಲ್ ಸಂಸ್ಥೆಯಲ್ಲಿ ಅಧ್ಯಾಪಕರೂ ಆಗಿದ್ದರು.೧೯೧೧ರಿಂದ ೧೯೧೬ರ ವರೆಗೆ ಬೈಬಲ್ ಪರಿಷ್ಕರಣ ಸಮಿತಿಯ ಅಧ್ಯಕ್ಷರಾಗಿದ್ದರು.

ಗ್ರಂಥ : ಯೇಸುಕ್ರಿಸ್ತನ ಮೂಲಕ ಸ್ಥಾಪಿತವಾದ ಹೊಸ ಒಡಂಬಡಿಕೆ ಎಂಬ ಗ್ರೀಕ್ ಭಾಷೆಯಿಂದ ನೂತನವಾಗಿ ಭಾಷಾಂತರಿಸಿದ್ದು (ಧ.೧೯೦೬).

ರಾಮಯ್ಯ, ಸಂಪಂಗಿ, ಭಾರತಿ

ಜ : ೧೮೬೪ ಮ : ೧೯೪೦

ಬೆಂಗಳೂರು ಜಿಲ್ಲೆಯ ಹೊಸಕೋಟೆ. ಅನೇಕ ವರ್ಷಗಳವರೆಗೆ 'ಸವಿನುಡಿ' (೧೮೯೮) ಹಾಗೂ 'ಭಾಷಾನಿಧಿ' ಎಂಬ ಪತ್ರಿಕೆಗಳ ಸಂಪಾದಕರಾಗಿದ್ದರು. 'ಸವಿನುಡಿ' ಗ್ರಂಥಮಾಲೆಯ ಮುಖಾಂತರ ಹಲವಾರು ಪುಸ್ತಕಗಳನ್ನು ಪ್ರಕಟಿಸಿರುವರು.

ಗ್ರಂಥಗಳು : ನೆಲದ ಅಳತೆ, ಪಂಚತಂತ್ರ (ಇ), ಮಾಧವೀಕಂಕಣ (ಭಾಷಾಂತರ), (ಇ. ೧೯೧೪), ವಿವೇಕಾನಂದಸ್ವಾಮಿ (ಪ-ಚ), ಶಕ್ತಿ, ಶ್ರೀಮದ್ವಾಲ್ಮೀಕಿರಾಮಾಯಣ ಕಥಾಸಂಗ್ರಹ (ಇ), ಸಾವಿತ್ರಿ, ಹಿಂದೀ ಭಾಷಾಪ್ರವೇಶ.

ಪರಿಷ್ಕೃತ : ದಶಪರ್ವಭಾರತ

ವೆಂಕಣ್ಣಾಚಾರ್ಯ, ಭೀಮಾಚಾರ್ಯ, ಮಂಡಗಿ

ಜ : ೧೮೬೪ ಮ : ೩೦-೧-೧೯೨೫

ಬೆಳಗಾವಿ. ೧೮೮೨ರಲ್ಲಿ ಮುಲಕೀ ಪರೀಕ್ಷೆ ಪಾಸಾಗಿ ಮೂರು ರೂಪಾಯಿ ಸಂಬಳದ ಮೇಲೆ ಉಪಾಧ್ಯಾಯರಾದರು. ಅನಂತರ ಕೆಲವು ಕಾಲ ಪೋಲೀಸ್ ಖಾತೆಯಲ್ಲಿ ಕೆಲಸ ಮಾಡಿ ೧೯೦೭ರ ಸುಮಾರಿಗೆ ರಾಜಕೀಯ ಮತಭೇದದಿಂದ ಆ ನೌಕರಿಗೂ ರಾಜೀನಾಮೆ ಕೊಟ್ಟು ಬೆಳಗಾವಿಯಲ್ಲಿ ಒಂದು 'ಸ್ವದೇಶೀ ಸ್ಟೇಶನರಿ' ಅಂಗಡಿಯನ್ನು ತೆರೆದು ಸ್ವತಂತ್ರ ಜೀವನೋಪಾಯ ಕೈಕೊಂಡರು. ರಂಗಭೂಮಿಯಲ್ಲಿ ವಿಶೇಷ ಆಸ್ಥೆಯುಳ್ಳ ಇವರು ೧೯೧೫ರಲ್ಲಿ ಕೊಣ್ಣೂರ ನಾಟಕ ಕಂಪನಿಯ ವ್ಯವಸ್ಥಾಪಕರಾಗಿದ್ದರು.

ಗ್ರಂಥಗಳು : ನಾರಾಯಣರಾವ್ ಪೇಶವೆ ಫಾರ್ಸು, ಸಂಗೀತ ಶನಿಪ್ರಭಾವ (ಅ. ೧೯೧೭), ಸಂಗೀತ ಶಾರದಾ (ಅ).

ಶಿವಶಂಕರಶಾಸ್ತ್ರೀ, ಸಿದ್ಧಾಂತಿ, ಮಹಾಮಹೋಪಾಧ್ಯಾಯ, ವಿದ್ಯಾನಿಧಿ

ಜ : ೧೮೬೪ ಮ : ೧೯೪೨

ಬೆಂಗಳೂರು, ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿಯೂ ಅನಂತರ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಕನ್ನಡ ಪ್ರಾಧ್ಯಾಪಕರಾಗಿ ಕೆಲಸಮಾಡಿ ೧೯೨೧ರಲ್ಲಿ ನಿವೃತ್ತರಾದರು. ಕನ್ನಡ ಸಾಹಿತ್ಯ ಸಮ್ಮೇಲನದ ೯ನೆಯ ಅಧಿವೇಶನ (ಬಿಜಾಪುರ ೧೯೨೩) ದ ಅಧ್ಯಕ್ಷರು. ೧೯೩೮ರಲ್ಲಿ ಮೈಸೂರು ಮಹಾರಾಜರಿಂದ 'ವಿದ್ಯಾನಿಧಿ' ಎಂಬ ಪ್ರಶಸ್ತಿಯನ್ನು ಪಡೆದರು.

ಗ್ರಂಥಗಳು : ಅಭಿನವಕಾದಂಬರಿ, ಕರ್ನಾಟಕ ಕಥಾಸರಿತ್ಸಾಗರದಲ್ಲಿ ಮೊದಲನೆಯ ಪೀಠಿಕಾ ಲಂಬಕವು (ಇ. ೧೯೦೬), ಕರ್ನಾಟಕ ನರಕಾಸು ವಿಜಯವ್ಯಾಯೋಗಂ, ಕರ್ನಾಟಕ ನಳೋಪಾಖ್ಯಾನ, ದ್ವಾತ್ರಿಂಶತ್ಸಾಲಭಂಜಿಕೆಗಳಿಂದ ಹೇಳಲ್ಪಟ್ಟ ವಿಕ್ರಮಾರ್ಕಚರಿತ್ರೆ, ಪ್ರಶ್ನೋತ್ತರರತ್ನಮಾಲಿಕೆ, ಶ್ರೀಕಾವೇರಿಮಹಾತ್ಮ್ಯವು, ಶ್ರೀಶಂಕರಕಥಾಮೃತಂ.

ಅನಂತ, ಅಣ್ಣಾಜಿ, ಮಂಟಗಣೇಕರ

ಜ : ಸು. ೧೮೬೫

ಹೊಳೆಮಣ್ಣೂರು. ಕನ್ನಡ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು.

ಗ್ರಂಥಗಳು : ಕರ್ಮವೀರ ಗಾಂಧೀಜಿಯವರು (ಯ-ಚ. ೧೯೧೮), ನೀತಿಶತಕ (ಅ. ೧೯೧೬), ಶ್ರೀ ಸ್ವಾಮಿ ವಿವೇಕಾನಂದ (ಧ-ಚ.೧೯೧೨).

ಕುಂಡಲಗಿರಿಯಾಚಾರ್ಯ, ಬ್ರಹ್ಮವೆಂಕಟಾಚಾರ್ಯ, ಆಸ್ಥಾನವಿದ್ವಾನ್

ಜ : ೧೮೬೫ ಮ : ೧೯೦೪

ನಂಜನಗೂಡು ಬಳಿಯ ಕಳಲೆ ಗ್ರಾಮ. ನರಸೀಪುರ ತಾಲೂಕ ತಿರುಮಕೂಡ್ಲಿನಲ್ಲಿ ೧೫ ವರ್ಷ ವೇದಾಧ್ಯಯನ ಮಾಡಿ ಮೈಸೂರಿಗೆ ಬಂದು, ಅರಮನೆಯ ವಿದ್ಯಾರ್ಥಿ ವೇತನದಿಂದ ಅಲ್ಲಿಯ ತಿರುಮಲಾಚಾರ್ಯರ ಪಾಠಶಾಲೆಯಲ್ಲಿ ಎಂಟು ವರ್ಷ ವ್ಯಾಕರಣ ಓದಿದರು. ಬಳಿಕ ಶ್ರವಣಬೆಳಗೊಳ, ಬೆಂಗಳೂರು ಸಂಸ್ಕೃತ ಪಾಠಶಾಲೆಯಲ್ಲಿ ಹಾಗೂ ಮೈಸೂರು ನಾರ್ಮಲ್ ಸ್ಕೂಲ್ ಮುಂತಾದ ಕಡೆಗೆ ಸುಮಾರು ೨೧ ವರ್ಷ ಸಂಸ್ಕೃತ ಪಂಡಿತರಾಗಿದ್ದರು. ಬಡೋದೆಯ ಸಂಸ್ಥಾನದಿಂದ ರಾಜಮರ್ಯಾದೆಯನ್ನೂ ತ್ರಾವಣಕೋರ ಮಹಾರಾಜರಿಂದ ವರ್ಷಾಶನವನ್ನೂ ಪಡೆದಿದ್ದರು.

ಗ್ರಂಥಗಳು : ಜೀವಂಧರಚರಿತಂ (ವಾದೀಭಸಿಂಹಕೃತ ಸಂಸ್ಕೃತ ಕ್ಷೇತ್ರಚೂಡಾಮಣಿಯ ಭಾಷಾಂತರ) (೧೮೯೫), ಜೈಮಿನಿಭಾರತಕಥಾಸಂಗ್ರಹ, ಧರ್ಮಶರ್ಮಾಭ್ಯುದಯ (೧೯೦೧), ಹರ್ಷಚರಿತ್ರೆ (ಬಾಣಕವಿಕೃತ ಸಂಸ್ಕೃತ ನಾಟಕದ ಭಾಷಾಂತರ) (೧೯೦೦)

ಪರಿಷ್ಕೃತ : ಶಬ್ದಾನುಶಾಸನಪ್ರಕಾಶಿಕೆ (೧೯೦೫)

ಗುರುರಾವ್, ರಾಘವೇಂದ್ರ, ಮಮದಾಪುರ

ಜ : ಸು ೧೮೬೫

ಧಾರವಾಡ. 'ಲೋಕಬಂಧು' ವಾರಪತ್ರಿಕೆಯ ಸಂಪಾದಕರು (೧೯೧೫). ಮುದ್ರಣ ವ್ಯವಸಾಯ.

ಗ್ರಂಥಗಳು : ಆರೋಗ್ಯವಿದ್ಯಾ (ಫ೧೮೮೯), ಕೃಷ್ಣಾಕುಮಾರಿ (ಅ), ದ್ರೌಪದೀವಸ್ತ್ರಾಪಹರಣ (ಅ), ಪ್ರಮೀಲಾ ಸ್ವಯಂವರ (ಆ.೧೮೮೮), ಪುಂಡಲೀಕ ನಾಟಕ (ಅ), ಶೃಂಗಾರಪದಗಳ ಸಂಗ್ರಹವು, ಭಾಗ ೧ (ಸಂಪಾದಿತ) (೧೮೮೯), ಸಂಗೀತ ಬಲಸಿಂಹ ತಾರಾ (ಅ), ಸಂಗೀತ ಇಂದ್ರಸಭಾ (ಅ ೧೮೯೩), ಸಂಗೀತ ಇಂದಿರಾ.

ತಮ್ಮಯ್ಯ, ಗಿರಿಭಟ್ಟರ

ಜ : ಸು. ೧೮೬೫ ಮ : ಸು. ೧೯೨೦

ಮೈಸೂರು. ಅಲಿಯ ಲಿಂಗರಾಜ ಅರಸರ ಆಶ್ರಯದಲ್ಲಿ ಬೆಳೆದ ಕಲಾವಿದರು. ಸಂಗೀತವಿಶಾರದರೂ ಯಕ್ಷಗಾನಕಲಾನಿಪುಣರೂ ಆಗಿದ್ದ ಇವರು ಮೈಸೂರು ಅರಮನೆ ನಾಟಕ ಸಂಘದಲ್ಲಿ ಪ್ರವೇಶಿಸಿ ಅದರ ಪ್ರತಿಷ್ಠೆಯನ್ನು ಬೆಳೆಸಲು ಕಾರಣರಾದರು. ಕಣ್ವಮುನಿ, ವಿಶ್ವಾಮಿತ್ರ, ಉತ್ತರ, ವೀರಸಿಂಹ, ವೀರಬಾಹುರಾಕ್ಷಸ ಮುಂತಾದ ಪಾತ್ರಗಳನ್ನು ಒಳ್ಳೇ ರಸವತ್ತಾಗಿ ಅಭಿನಯಿಸುತ್ತಿದ್ದರಂತೆ.

ಗ್ರಂಥಗಳು : ಗಯಚರಿತ್ರೆ, ದ್ರೌಪದೀಸ್ವಯಂವರ, ನೀತಿಚೂಡಾಮಣಿ, ವಿರಾಟಪರ್ವ, ಸುಧನ್ವಚರಿತ್ರೆ.

ರಾಮಚಂದ್ರ, ಲಕ್ಷ್ಮಣ, ಲಕ್ಷ್ಮೇಶ್ವರ (ಶಿವಾನಂದ ಸುಬ್ರಹ್ಮಣ್ಯ)

ಜ : ಸು.೧೮೬೫ ಮ : ೧೯೪೧

ವಿಜಾಪುರ ಜಿಲ್ಲೆಯ ಅಗಸನಕೊಪ್ಪ. ಶಿರಹಟ್ಟಿಯ ಸುಪ್ರಸಿದ್ಧ ಲಕ್ಷ್ಮೀಪ್ರಸಾದಿಕ ಕಂಪನಿಯ ಒಡೆಯರಾದ ವಾಮನರಾವ್ ಮಾಸ್ತರರ ಸೋದರಮಾವಂದಿರು, ಪ್ರಾರಂಭಿಕ ಶಿಕ್ಷಣವು ಪೂರೈಸಿದ ನಂತರ ಕಾಶಿಯಲ್ಲಿ ಸುಮಾರು ೧೦ ವರ್ಷ ವೇದಾಧ್ಯಯನವನ್ನೂ ಯೋಗಾಭ್ಯಾಸವನ್ನೂ ಮಾಡಿ ೧೯೧೧ರಲ್ಲಿ ಮೈಸೂರಿಗೆ ಬಂದರು. ಕೆಲಕಾಲ ಅಲ್ಲಿಯ ಅರಮನೆಯಲ್ಲಿ ಪಾಠಪ್ರವಚನವನ್ನೂ ನಡೆಯಿಸಿದರು. ಇವರ ವೇದಶಾಸ್ತ್ರಪಾಂಡಿತ್ಯಕ್ಕಾಗಿ ಅರಮನೆಯಿಂದ ವರ್ಷಾಶನವು ದೊರೆಯುತ್ತಿತ್ತು. ಕೆಲಕಾಲದನಂತರ ನೀರಬೂದಿಹಾಳದಲ್ಲಿ ಅನುಷ್ಠಾನ ಕೈಕೊಂಡು ೧೨ ವರ್ಷ ತಪಶ್ಚರ್ಯವನ್ನು ಮಾಡಿದರು. ಅನಂತರ ಭಾರತಾದ್ಯಂತ ತೀರ್ಥಯಾತ್ರೆಯನ್ನು ಮಾಡಿ ೧೯೪೧ರಲ್ಲಿ ಅಗಸನಕೊಪ್ಪಕ್ಕೆ ಬಂದು ದೇಹವನ್ನಿಟ್ಟರು. ತೆಲುಗು, ಹಿಂದೀ, ಇಂಗ್ಲೀಷಿನಲ್ಲಿಯೂ ಇವರಿಗೆ ಸಾಕಷ್ಟು ಪರಿಜ್ಞಾನವಿತ್ತು. ಇವರು ಸುಪ್ರಸಿದ್ಧ ವಾಗ್ಮಿಗಳೂ ಆಗಿದ್ದರು.

ಅಗಸನಕೊಪ್ಪದಲ್ಲಿ ಇವರ ಸಮಾಧಿ ಇದ್ದು ಪ್ರತಿವರುಷ ಭಾದ್ರಪದ ಶುದ್ಧ ಪಂಚಮಿಗೆ ಸ್ವಾಮಿಗಳ ಆರಾಧನೆ ನಡೆಯುತ್ತದೆ.

ಗ್ರಂಥಗಳು : ಆತ್ಮಾನುಭವಪ್ರಕಾಶಿಕೆ (ನ.೧೯೦೨), ಜೀವನ್ಮುಕ್ತಿಗೀತಾ (ಶಂಕರಾಚಾರ್ಯ ಕೃತ ಗ್ರಂಥದ ಟೀಕೆ), (ನ.೧೯೦೪), ವಿಚಾರದೀಪಿಕೆ (ಬ್ರಹ್ಮಾನಂದಸ್ವಾಮಿ ಪರಮಹಂಸರ ಹಿಂದೀ ಗ್ರಂಥದ ಭಾಷಾಂತರ) (ನ.೧೯೦೨), ವಿಜ್ಞಾನನೌಕಾ (ಶಂಕರಾಚಾರ್ಯಕೃತ ಗ್ರಂಥದ ಟೀಕೆ), (ನ.೧೯೨೨), ವೇದಾಂತಯುಕ್ತಿಪ್ರಕಾಶ (ಹಿಂದೀ ಗ್ರಂಥದ ಭಾಷಾಂತರ), (ನ.೧೯೨೨), ವೇದಾಂತದೀಪಿಕೆ (ನ.೧೮೯೫), ಶ್ರೀಮದ್‌ಭಗವದ್ಗೀತಾ ಗೂಢಾರ್ಥದೀಪಿಕಾ (ಸಟೀಕಾ) ಭಾಗ ೧ (ನ.೧೯೧೩), ಭಾಗ ೨ (ನ.೧೯೧೬).

ಹನುಮಂತಗೌಡ, ಪಿ.

ಜ : ಸು ೧೮೬೫ ಮ : (?)

ಹೊಸಪೇಟೆ. ೧೮೮೨ರಲ್ಲಿ ಎಫ್.ಎ. ಪರೀಕ್ಷೆ ಪಾಸಾದರು. ಬಳ್ಳಾರಿಯ ಸರಸವಿನೋದಿನಿ ನಾಟಕಸಭೆಯ ಅಧ್ಯಕ್ಷರಾಗಿದ್ದ ಇವರು 'ಕರ್ನಾಟಕ ನಾಟಕ ಭೂಷಣ' ಎಂಬ ಪ್ರಶಸ್ತಿಯನ್ನು ಪಡೆದಿದ್ದರು. ನಟರೂ, ನಾಟಕಕಾರರೂ, ಸಂಘಟಕರೂ ಆಗಿ ಕನ್ನಡ ರಂಗಭೂಮಿಗೆ ಬಹುವಿಧದ ಸೇವೆಯನ್ನು ಸಲ್ಲಿಸಿದರು.

ಗ್ರಂಥಗಳು : ಉತ್ತರರಾಮಚರಿತ್ರೆ (ಅ), ಕಮಲಾಸುಂದರಿ (ಅ), ಪ್ರಚ್ಛನ್ನ ಪಾಂಡವೀಯ (ಅ), ಪ್ರಮೀಳಾರ್ಜುನೀಯ (ಅ), ಪ್ರಹ್ಲಾದಚರಿತ್ರರೂಪವಾದ ಭಕ್ತಿವಿಜಯ ನಾಟಕವು (ಅ), ವೇಣುಪುರಿಯ ವರ್ತಕ (ಅ), ಶ್ರೀ ವಿದ್ಯಾರಣ್ಯ ನಾಟಕವು (ಅ), ಸುಭದ್ರಾರ್ಜುನೀಯ (ಅ).

ಅನಂತನಾರಾಯಣಶಾಸ್ತ್ರೀ, ಸುಬ್ಬಾಶಾಸ್ತ್ರೀ, ನಂಜನಗೂಡು, ಆಸ್ಥಾನ ವಿದ್ವಾನ್

ಜ : ೧೮೬೬ ಮ : ೧೯೧೮

ಮೈಸೂರು. ಸಂಸ್ಕೃತ, ಕನ್ನಡ ಹಾಗೂ ಆಂಧ್ರಭಾಷಾವಿಶಾರದರು. ಅನೇಕ ಕ್ರೈಸ್ತಮತಪ್ರಚಾರಕರಿಗೆ ಕನ್ನಡ ಬೋಧಕರಾಗಿದ್ದರು. ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಹಿರಿಯ ಅಣ್ಣಂದಿರಾದ ಇವರು ಬಹಳ ಚಿಕ್ಕವಯಸ್ಸಿನಲ್ಲಿಯೇ ತೀರಿಕೊಂಡರು.

ಗ್ರಂಥಗಳು : ಕರ್ನಾಟಕ ನಾಗಾನಂದ, ಕರ್ಪೂರಮಂಜರೀ ಪರಿಣಯಂ, ಸತ್ಯವತೀ ಚರಿತ್ರೆ (ಕೆ. ವೀರೇಶಲಿಂಗಂ ಪಂತುಲು ಕೃತ ತೆಲುಗು ಕಾದಂಬರಿಯ ಭಾಷಾಂತರ) (ಇ. ೧೯೯೭)

ವಾಸುದೇವಾಚಾರ್ಯ, ಸ್ವಾಮಿರಾಚಾರ್ಯ, ಕೆರೂರ

ಜ : ೧೮೬೬ ಮ :೧೧-೧-೧೯೨೧

ವಿಜಾಪುರ ಜಿಲ್ಲೆಯ ಬಾಗಿಲುಕೋಟೆ. ಸ್ವಾಮಿರಾಚಾರ್ಯರು ದಕ್ಷಿಣ ಭಾರತದ ಅಗ್ರಶ್ರೇಣಿಯ ವಿದ್ವಾಂಸರೆನಿಸಿಕೊಂಡವರು. ಮನೆಯಲ್ಲಿ ಪ್ರಾರಂಭಿಕ ಸಂಸ್ಕೃತ ಅಭ್ಯಾಸವನ್ನೂ ಧಾರವಾಡದಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಮುಗಿಸಿ ವಾಸುದೇವಾಚಾರ್ಯರು ೧೮೮೪ರಲ್ಲಿ ಮ್ಯಾಟ್ರಿಕ್ಯುಲೇಶನ್ ಪಾಸಾದರು. ಪ್ರೌಢವ್ಯಾಸಂಗಕ್ಕಾಗಿ ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದರೂ, ಗೃಹಕೃತ್ಯದ ಅನಾನುಕೂಲತೆಯಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು. ಆ ಬಳಿಕ ಮನೆಯಲ್ಲಿಯೇ ಅಭ್ಯಾಸಮಾಡಿ ೧೮೮೮ರಲ್ಲಿ ಎಚ್.ಪಿ.ಪರೀಕ್ಷೆ ಪಾಸಾಗಿ ಬಾಗಿಲುಕೋಟೆಯಲ್ಲಿ ವಕೀಲರಾದರು.

ಉದ್ದಾಮಪಂಡಿತರೂ ರಸಿಕಕಲಾವಿದರೂ ಪ್ರತಿಭಾನ್ವಿತ ಸಾಹಿತ್ಯಿಕರೂ ಆಗಿದ್ದ ವಾಸುದೇವಾಚಾರ್ಯರನ್ನು ಕನ್ನಡದ 'Sir Walter Scott' ಎಂದು ಅನೇಕರು ಕರೆದಿದ್ದಾರೆ. ಇವರು ಪ್ರಸಿದ್ಧ ಪತ್ರಿಕಾಕರ್ತರೂ ತೀಕ್ಷ್ಣ ಟೀಕಾಕಾರರೂ ಆಗಿದ್ದರು. ಬಿಂದುರಾವ್ ಮುತಾಲೀಕ ದೇಸಾಯಿಯವರಿಂದ ಸಂಪಾದಿತವಾಗುತ್ತಿದ್ದ 'ಸಚಿತ್ರ ಭಾರತ' (೧೯೧೩) ಮಾಸಪತ್ರಿಕೆಗೆ ಇವರು ಪ್ರಮುಖ ಲೇಖಕರಾಗಿದ್ದರು; ಹಾಗೂ ನಾಲ್ಕು ವರ್ಷಗಳನಂತರ 'ಶುಭೋದಯ'ವೆಂಬ ವಾರಪತ್ರಿಕೆಯನ್ನು ಸ್ವತಃ ಹೊರಡಿಸಿದರು.

ಗ್ರಂಥಗಳು : ಇಂದಿರಾ (ಇ), ಗೀತಾರಹಸ್ಯ (ನ. ೧೯೧೯), ತೊಳೆದ ಮುತ್ತು (ಇ), ನಳದಮಯಂತಿ (ಆ), ನೀಳ್ಗತೆಗಳು (ಇ), ಪತಿವಶೀಕರಣ (Goldsmithಕವಿಯ she stoops to conquer ನಾಟಕದ ಆಧಾರ), ಪ್ರೇಮವಿಜಯ (ಇ), ಬೆಳಗಿದ ದೀಪಗಳು (ಇ), ಭ್ರಾತೃಘಾತಕನಾದ ಔರಂಗಜೇಬ (ಇ), ಯದುಮಹಾರಾಜ (ಇ) ವಸಂತಯಾಮಿನಿ ಸ್ವಪ್ನಚಮತ್ಕಾರ (Shakespeare ಕೃತ A Midsummer Night's Dream ನಾಟಕದ ಭಾಷಾಂತರ), ವಾಲ್ಮೀಕಿ ವಿಜಯ (ಇ), ಸುರತನಗರದ ಶ್ರೇಷ್ಠಿ (Shakespeare ಕೃತ The Merchant of Venice ನಾಟಕದ ಭಾಷಾಂತರ).

ಹಣಮಂತ, ವೆಂಕಟೇಶ, ಚಿನ್ನಮುಳಗುಂದ

ಜ : ೧೮೬೬ ಮ : ೧೮-೨-೧೯೪೮

ಬೆಳಗಾವಿ ಜಿಲ್ಲೆಯ ಚಿನ್ನಮುಳಗುಂದ. ಬೆಳಗಾವಿ, ಧಾರವಾಡದಲ್ಲಿ ಪ್ರಾರಂಭಿಕ ಶಿಕ್ಷಣ. ಪುಣೆಯ ಡೆಕ್ಕನ್ ಕಾಲೇಜಿನಿಂದ ೧೮೮೬ರಲ್ಲಿ ಬಿ.ಎ. ಪದವೀಧರರಾಗಿ ಅರ್ನಾಲ್ಡ್ ಸ್ಕಾಲರ್‌ಶಿಪ್ ಪಡೆದರು. ೧೮೮೮ರಲ್ಲಿ ಎಲ್‌ಎಲ್.ಬಿ. ಪದವಿಯನ್ನು ಸಂಪಾದಿಸಿದರು. ೧೮೯೧ರ ವರೆಗೆ ಧಾರವಾಡದಲ್ಲಿ ವಕೀಲರಾಗಿದ್ದು, ಅನಂತರ ನ್ಯಾಯಾಧೀಶರಾಗಿ ೩೦ ವರ್ಷ ಕೆಲಸ ಮಾಡಿದರು.

೧೯೨೪ರಲ್ಲಿ 'ರಾವ್‌ಬಹಾದ್ದೂರ್' ಪ್ರಶಸ್ತಿ ಪಡೆದರು. ಪುಣೆಯಲ್ಲಿ ಫರ್ಗ್ಯುಸನ್, ವಾಡಿಯಾ ಮುಂತಾದ ಶಿಕ್ಷಣಸಂಸ್ಥೆಗಳ ವ್ಯವಸ್ಥಾಪಕ ಮಂಡಲದಲ್ಲಿದ್ದರು. ಲಿಬರಲ್ ಪಕ್ಷ, ಋಗ್ವೇದೀ ಬ್ರಾಹ್ಮಣ ಸಭೆ ಹಾಗೂ ಡೆಕ್ಕನ್ ಸಭೆಯ ಉಪಾಧ್ಯಕ್ಷರು. ಅಸ್ಖಲಿತ ಭಾಷಣಕಾರರು.

ಗ್ರಂಥಗಳು : ಹಿಂದೂಧರ್ಮಶಾಸ್ತ್ರವು (ಧ.೧೮೯೬)

ಅಣ್ಣಾಚಾರ್ಯ, ಭೀಮಾಚಾರ್ಯ, ಮಂಡಗಿ

ಜ : ೧೮೬೭ ಮ : ೯-೯-೧೯೩೨

ಬೆಳಗಾವಿ. ಮೊದಲಿನಿಂದಲೂ ರಂಗಭೂಮಿಯ ಕಡೆಗೆ ಒಲವುಳ್ಳ ಇವರು ಶಿರಹಟ್ಟಿ, ಕೊಣ್ಣೂರ ಮುಂತಾದ ನಾಟಕ ಕಂಪನಿಗಳಲ್ಲಿ ದುಡಿದವರಲ್ಲದೆ ಬೆಳಗಾವಿ ಜಿಲ್ಲೆಯ ಹಲಸಿಗಿಯಲ್ಲಿ ಒಂದು ಸ್ವತಂತ್ರ ನಾಟಕ ಕಂಪನಿಯನ್ನು ಕೂಡ ಸ್ಥಾಪಿಸಿದ್ದರು. ೮-೧೦ ನಾಟಕಗಳನ್ನು ರಚಿಸಿ-ರಂಗಭೂಮಿಯ ಮೇಲೆ ತಂದಿದ್ದರಂತೆ. ಆದರೆ ಯಾವುದೂ ಅಚ್ಚಾದಂತೆ ತೋರುವುದಿಲ್ಲ.

ಕುಮಾರಸ್ವಾಮಿ, ಹಾನಗಲ್ಲ

ಜ : ೧೮೬೭ ಮ : ೧೯-೨-೧೯೩೦

ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಜೋಯಿಸರ ಹರಳಹಳ್ಳಿ. ಇವರ ಪೂರ್ವಾಶ್ರಮದ ಹೆಸರು ಹಾಲಯ್ಯ. ಬಸವಯ್ಯ ಎಂಬುವರು ಇವರ ತಂದೆ. ಮುಲಕೀ ಪರೀಕ್ಷೆ ಪಾಸಾದ ಬಳಿಕ ಕುಮಾರಸ್ವಾಮಿಗಳು ಉಪಾಧ್ಯಾಯರಾದರು. ಅಲ್ಪಾವಧಿಯಲ್ಲಿಯೇ ಅದನ್ನು ಬಿಟ್ಟುಕೊಟ್ಟು ಮುಂದೆ ಹುಬ್ಬಳ್ಳಿಯ ಸಿದ್ಧಾರೂಢರ ಬಳಿಯಲ್ಲಿ ಕೆಲವು ಕಾಲ ವೇದಾಂತ ವ್ಯಾಸಂಗಮಾಡಿ ಎಳಂದೂರ ಬಸವಲಿಂಗಸ್ವಾಮಿಗಳ ಆಶ್ರಯದಲ್ಲಿ ಅಧ್ಯಯನ ಪ್ರಾರಂಭಿಸಿದರು. ನಿಜಗುಣಶಿವಯೋಗಿಗಳ ಷಟ್‌ಶಾಸ್ತ್ರ ಹಾಗೂ ಅಷ್ಟಾಂಗಯೋಗದಲ್ಲಿ ಪಾರಂಗತರಾಗಿ ಹಾನಗಲ್ಲಮಠದ ವಿರಕ್ತಪೀಠಾಧಿಕಾರವನ್ನು ಸ್ವೀಕರಿಸಿದರು.

ಮಠಾಧಿಕಾರಿಗಳಾಗಿ ಧರ್ಮಪ್ರಸಾರ ಹಾಗೂ ವೇದಾಂತಸಾಧನೆಯಲ್ಲಿ ತೊಡಗಿದಾಗ, ಇತ್ತ ಸಮಾಜಸಂಘಟನೆಯ ಇತರ ಲೌಕಿಕ ಮಾರ್ಗಗಳನ್ನು ಕುರಿತು ಯೋಜಿಸಿದರು. ೧೯೦೪ರಲ್ಲಿ ಧಾರವಾಡದಲ್ಲಿ ನೆರೆದ ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಥಮ ಅಧಿವೇಶನದ ಅಧ್ವರ್ಯು ಇವರೇ. ವಿದ್ಯಾಪ್ರಸಾರದ ಅವಶ್ಯಕತೆಯನ್ನು ಮನಗಂಡು ಲಿಂಗಾಯತ ವಿದ್ಯಾವರ್ಧಕ ಫಂಡುಸ್ಥಾಪನೆಗೆ ಸ್ವಾಮಿಗಳು ಪ್ರೇರಕರಾದರು. ಅದರಂತೆಯೇ ಸಂಸ್ಕೃತದ ಮಹತ್ವವನ್ನು ಅರಿತು, ಅನಂತಪುರ, ಚಿತ್ತಾಪುರ, ಕೆಳದಿ, ನೀರಡಗುಂಭ, ಹಾವೇರಿ, ಹಾನಗಲ್ಲ, ಅಬ್ಬೀಗೇರಿ, ರೋಣ, ಇಲಕಲ್ಲ, ಹುನಗುಂದ ಇತ್ಯಾದಿ ಊರುಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿದರು; ಮತ್ತು ಹಲವು ಪಂಡಿತರ ಪ್ರೌಢವ್ಯಾಸಂಗಕ್ಕೆ ಪ್ರತ್ಯಕ್ಷ ಸಹಾಯ ಮಾಡಿದರು. ವೀರಶೈವಗುರುಕುಲವೂ, ಯೋಗಮಂದಿರವೂ, ಶಿವಾನುಭವಿಗಳ ಪವಿತ್ರಕ್ಷೇತ್ರವೂ ಆದ ಬಾದಾಮಿಯ ಶಿವಯೋಗಮಂದಿರವು ೧೯೦೮ರಲ್ಲಿ ಸ್ಥಾಪಿತವಾಗಿ ಕುಮಾರಸ್ವಾಮಿಗಳ ಶ್ರದ್ಧೆ ಹಾಗೂ ಕಾರ್ಯದಕ್ಷತೆಗೆ ಚಿರಂತನ ಸಾಕ್ಷಿಯಾಗಿ ನಿಂತಿದೆ. ಅಲ್ಲಿ ವಿಜಯ ಮಹಾಂತೇಶರ ಹೆಸರಿನಿಂದ ಗ್ರಂಥಾಲಯವೊಂದನ್ನು ಸ್ಥಾಪಿಸಿ, ಯೋಗ, ವೇದಾಂತ, ವೀರಶೈವ ಜಿಜ್ಞಾಸೆಗೆ ಸಂಬಂಧಿಸಿದ ಹೊತ್ತಿಗೆಗಳನ್ನು ಸಂಗ್ರಹಿಸಿದರು; ಅನೇಕ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿದರು. ಪ್ರಸಿದ್ಧ ಸಂಗೀತಜ್ಞರಾದ ಕೈ.ಪಂಚಾಕ್ಷರಿ ಗವಾಯಿಯವರಿಗೆ ಪ್ರೋತ್ಸಾಹ ನೀಡಿ, ನಾಡಿನಲ್ಲಿ ಸಂಗೀತ-ಕಲಾಪ್ರಚಾರಕ್ಕಾಗಿ ಯತ್ನಿಸಿದರು. ಸ್ವಾಮಿಗಳು ಆಯುರ್ವೇದ ಪಂಡಿತರಾಗಿದ್ದು, ಆಶ್ರಮದಲ್ಲಿ ಅನೇಕ ಬಗೆಯ ವನೌಷಧಿಗಳ ಪ್ರಯೋಗಶಾಲೆಯನ್ನು ಏರ್ಪಡಿಸಿದ್ದರು.

ಗ್ರಂಥಗಳು : ನೀತಿಸಂಗ್ರಹ (ಧ.೧೯೨೮), ಬಸವಭಾಷೆ (ಧ.೧೯೨೬), ಭಜನಾವಳಿ (ಅ).

ಗುರುನಾಥ, ವೆಂಕಟೇಶ, ಕಿತ್ತೂರ

ಜ : ೧೮೬೭ ಮ : ಸು.೧೯೩೦

ಬೆಳಗಾವಿ ಜಿಲ್ಲೆಯ ಸಂಪಗಾಂವಿ. ಪದವೀಧರರಾಗಿ ಮುಂಬಯಿ ಸರಕಾರದ ಶಿಕ್ಷಣ ಶಾಖೆಯನ್ನು ಸೇರಿದರು. ಕೆಲಕಾಲ ಅಸಿಸ್ಟೆಂಟ್ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೂ ಆಗಿದ್ದರು. ಸಂಸ್ಕೃತ-ಕನ್ನಡ ಪಂಡಿತರು.

ಗ್ರಂಥಗಳು: ಕಾಲಿದಾಸಚರಿತ್ರೆ (ಥ-ಚ.೧೯೧೨), ಆರ್ಯವಿದ್ಯಾದರ್ಶವು (ಬ.೧೯೦೪)

ರಾಮಶೇಷಶಾಸ್ತ್ರೀ, ಸಾಂಬಶಾಸ್ತ್ರೀ, ಮೋಟಗಾನಹಳ್ಳಿ, ಆಸ್ಥಾನವಿದ್ವಾನ್

ಜ : ೧೮-೯-೧೮೬೭ ಮ : ೧೬-೨-೧೯೩೪

ಮೈಸೂರುಸಂಸ್ಥಾನದ ಮಾಗಡಿ ತಾಲೂಕಿನ ಮೋಟಗಾನಹಳ್ಳಿ. ಚಿಕ್ಕಂದಿನಲ್ಲಿ ವಿದ್ಯಾಭ್ಯಾಸದ ಅನುಕೂಲವಿಲ್ಲದ್ದರಿಂದ ೨೦ನೆಯ ವಯಸ್ಸಿನ ನಂತರ ಬೆಂಗಳೂರಿಗೆ ಬಂದು, ವಿದ್ಯಾನಿಧಿ ವಾಸುದೇವಶಾಸ್ತ್ರೀ, ಪಂಡಿತರತ್ನಂ ಸೀತಾರಾಮಶಾಸ್ತ್ರೀ,

ಸೊಂಡೇಕೊಪ್ಪದ ನಾರಾಯಣಶಾಸ್ತ್ರೀ, ಗಂಗಾಧರಶಾಸ್ತ್ರೀ, ಚಪ್ಪಲ್ಲ ವೀರೇಶ್ವರಶಾಸ್ತ್ರೀ ಮೊದಲಾದ ವಿದ್ವಾಂಸರ ಬಳಿಯಲ್ಲಿ ಇದ್ದು ತರ್ಕ, ವ್ಯಾಕರಣ, ಸಾಹಿತ್ಯಾದಿಗಳಲ್ಲಿ ಪಾರಂಗತರಾಗಿ, ಅಲ್ಲಿಯೇ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿಯೂ ಅನಂತರ ಬಾಲಕರ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿಯೂ ಕೆಲಸಮಾಡಿದರು. ಅಲ್ಲದೆ United Theological College ಹಾಗೂ ನಾರ್ಮಲ್ ಸ್ಕೂಲಿನಲ್ಲಿ ಕೆಲಕಾಲ ಇದ್ದು ೧೯೧೯ರಲ್ಲಿ ಮೈಸೂರು ಮಹಾರಾಣೀ ಕಾಲೇಜಿನಲ್ಲಿ ಸಂಸ್ಕೃತ ಕನ್ನಡ ಪ್ರಾಧ್ಯಾಪಕರಾಗಿ ನಿಯಮಕ ಹೊಂದಿ ೧೯೨೬ರಲ್ಲಿ ಸೇವಾನಿವೃತ್ತರಾದರು. ಇವರು ಕೆಲವು ಕಾಲ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಪಂಡಿತರೂ ಆಗಿದ್ದರು.

೧೯೧೮ರಲ್ಲಿ 'ಆಸ್ಥಾನವಿದ್ವಾನ್' ಪ್ರಶಸ್ತಿ ಪಡೆದರು. ಸೇವಾನಿವೃತ್ತಿ ಪಡೆದ ನಂತರ ರಾಜಗುರುಗಳಾಗಿ, ಶ್ರೀ ಜಯಚಾಮರಾಜರಿಗೆ ಸಂಸ್ಕೃತ-ಕನ್ನಡ ಪಾಠ ಹೇಳುತ್ತಿದ್ದರು. ಶಿವಗಂಗಾಕ್ಷೇತ್ರದಿಂದ ಹೊರಡುತ್ತಿದ್ದ 'ಶಾರದಾ'ಎಂಬ ಮಾಸ ಪತ್ರಿಕೆಗೆ ಸಂಪಾದಕರಾಗಿದ್ದರು (೧೯೧೫). ೧೯೨೪ರಲ್ಲಿ ಮೈಸೂರು ಅರಮನೆಯಲ್ಲಿ ನಡೆದ ಆಶುಕವಿತಾ ಸ್ಪರ್ಧೆಯಲ್ಲಿ ಮಹಾರಾಜರಿಂದ ಇವರಿಗೆ ವಿಶೇಷ ಬಹುಮಾನವು ಲಭಿಸಿತು.ಇವರು ಪ್ರತಿಭಾಶಾಲಿಯಾದ ವಾಗ್ಗೇಯಕಾರರಾಗಿದ್ದರು.

ಗ್ರಂಥಗಳು : ಕನ್ನಡ : ಕರ್ನಾಟಕ ಹಿತೋಪದೇಶಂ, ಬಾಲಿಕಾಗೀತಾವಳಿ (೨), ಮುಕುಂದಾನಂದ ಭಾಣದ ಕನ್ನಡ ಅನುವಾದ, ಮುದ್ರಾರಾಕ್ಷಸನಾಟಕಂ (ಭಾಷಾಂತರ) (ಆ.೧೯೦೮), ಯಕ್ಷಗಾನ ಸಾನಂದಗಣೇಶನ ಕಥೆ (ಆ. ೧೮೯೧), ವಿಪ್ರಲಂಭಾದ್ಭುತ ಪ್ರದರ್ಶಿನಿ ಎಂಬ ಪರಸ್ಪರ ದ್ರವ್ಯಸಹಾಯದ ಕಂಪನಿ ನಾಟಕಂ (ಆ ೧೮೯೦), ಶ್ರೀಭಾಗವತ ಪುರಾಣ (ಟೀಕಾತಾತ್ಪರ್ಯಸಹಿತ).

ಸಂಸ್ಕೃತ : ಜಗದ್ಗುರುವಿಜಯಂ.

ಅಪ್ರಕಟಿತ : ಪ್ರಬೋಧಚಂದ್ರೋದಯ, ವಾಮನವಿಜಯ, ವಿಚಾರಸಾಗರ.

ವೆಂಕಟರಮಣಯ್ಯ, ಚೆನ್ನರಾಯಪಟ್ಟಣಂ

ಜ : ೧೮೬೭ - ಮ : ೧೬-೭-೧೯೪೭

ಇವರು ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಮುಖ್ಯಾಧ್ಯಾಪಕರೂ, ಹಲವು ವರ್ಷ ಸಂಸ್ಕೃತ ಶಾಲಾ ಇನ್‌ಸ್ಪೆಕ್ಟರರೂ ಆಗಿದ್ದರು.

ಗ್ರಂಥ : ನೀತಿಧರ್ಮಸಂಗ್ರಹ★

★ ಕನ್ನಡದಲ್ಲಿ ರಂಗಮಂಟಪವನ್ನು ಕುರಿತ ಒಂದು ಗ್ರಂಥವನ್ನೂ, ಸಂಸ್ಕೃತದಲ್ಲಿ ಹಲವಾರು ಗ್ರಂಥಗಳನ್ನೂ ಬರೆದಿರುವರಂತೆ (ಕ. ನು. ೨೬-೭-೧೯೪೭).

ಸುಬ್ಬರಾಯ, ಬಾಪು

ಜ : ೧೮೬೭ ಮ : ೧೯೨೧

ಮೈಸೂರು. ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವೀಧರರಾದರು. ಮುಂದೆ ಅದೇ ಕಾಲೇಜಿನಲ್ಲಿ ಚರಿತ್ರೆಯ ಪ್ರಾಧ್ಯಾಪಕರಾಗಿ ಕೊನೆಯವರೆಗೂ ಕೆಲಸ ಮಾಡಿದರು.'ವಿದ್ಯಾದಾಯಿನಿ' ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದರು. 'ಕರ್ನಾಟಕ ಗ್ರಂಥಮಾಲೆ'ಯ (೧೮೯೩) ಸಂಪಾದಕರಾಗಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ಮೈಸೂರಿನ, **'ಗ್ರಾಜ್ಯುಏಟ್ಸ್ ಟ್ರೇಡಿಂಗ್ ಅಸೋಶಿಯೇಶನ್'**ನ ಸದಸ್ಯರು.

ಗ್ರಂಥಗಳು : ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದಗಳಲ್ಲಿ ಒಂದಾದ ಸಿಂದಬಾದ ನಾವಿಕ (ಇ.೧೯೧೧), ಚಂಡಮಾರುತ (ಇ), ನಿರ್ಭಾಗ್ಯ ಮುರಾದ (ಇ).

ಅಣ್ಣಾಜಿ, ಕೃಷ್ಣ, ವರ್ಣಾರು

ಜ : ೨೦-೭-೧೮೬೮ ಮ : ೨೫-೧೧ -೧೯೨೭

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಬಳಿಯ ಹಂಗ್ಳೂರು ಗ್ರಾಮ. ಇವರು ಸಂಸ್ಕೃತ, ಕನ್ನಡ ಭಾಷಾವಿಶಾರದರೂ, ಗಣಿತ, ಜ್ಯೋತಿಷ್ಯ ಮುಂತಾದ ಶಾಸ್ತ್ರಗಳಲ್ಲಿ ಪ್ರವೀಣರೂ ಆಗಿದ್ದರು. ಪಂಚಾಂಗಗಳನ್ನು ಸಿದ್ಧಪಡಿಸಿ ಕೆಲವು ವರ್ಷ ಪ್ರಕಟಿಸಿದರು. ಗ್ರಾಮಪುರೋಹಿತರಾಗಿದ್ದು ವೈದಿಕವ್ಯವಸಾಯವನ್ನು ಇವರು ಅವಲಂಬಿಸಿದ್ದರು.

ಗ್ರಂಥಗಳು : ಪದ್ಮಾಕ್ಷನ ಕಾಳಗವು (ಅ. ೧೮೯೯), ಸೀತಾ ಉದಯವು (ಅ. ೧೮೯೯),. ಮದನಸುಂದರೀ ಸ್ವಯಂವರವು (ಅ. ೧೯೦೦) (ಮೂರೂ ಕೃತಿಗಳ ಕಥಾವಸ್ತು ಆನಂದರಾಮಾಯಣದಿಂದ ಆಯ್ದುಕೊಂಡದ್ದು).

ಅಪ್ರಕಟಿತ : **ಕನ್ನಡ** : ಚಂಪಕಾಸ್ವಯಂವರ (ಅ), ದ್ವಿಜಾಧಮ ಚರಿತ್ರೆ (ಅ).

ಸಂಸ್ಕೃತ : ಪ್ರಯೋಗಭಾಸ್ಕರ, ಸುಬೋಧಗಣಿತಂ.

ನಾರಾಯಣರಾವ್ ಎಚ್., ರಾವ್‌ಬಹಾದ್ದೂರ್

ಜ : ೧೮೬೮ ಮ : (?)

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು. ಬಂಟವಾಳ, ಮೂಡಬಿದರೆ, ಮಂಗಳೂರು ಮುಂತಾದ ಕಡೆಗೆ ಪ್ರಾರಂಭಿಕ ಶಿಕ್ಷಣ; ೧೮೯೬ರಲ್ಲಿ ಮದ್ರಾಸ್ ಕ್ರಿಶ್ಚನ್ ಕಾಲೇಜಿನಿಂದ ಎಂ.ಎ ಪದವೀಧರರಾದರು. ಶಿಕ್ಷಣಶಾಖೆಯಲ್ಲಿ ಕೆಲಸ ಮಾಡಿ ೧೯೨೩ರಲ್ಲಿ ಸೇವಾನಿವೃತ್ತರಾದರು. ಇವರು ಬೆನಗಲ್ಲ ರಾಮರಾಯರ ಭಾವಮೈದುನ. ಜೀವನ ತತ್ತ್ವಜ್ಞಾನವಿಷಯಕವಾದ ಒಂದು ಪುಸ್ತಕವನ್ನು ಬರೆದಿರುವರಾಗಿ ತಿಳಿಯುತ್ತದೆ.

ಗ್ರಂಥ : ಭೂಮಿಶಾಸ್ತ್ರ (ಝ.೧೯೦೦)

ವೀರಪ್ಪಶಾಸ್ತ್ರಿ, ಸಾವರದಪ್ಪ, ಮಾಗಡಿ

ಜ : ೧೮೬೮ ಮ: : ೭-೨-೧೯೨೬

ಬೆಂಗಳೂರು ಜಿಲ್ಲೆಯ ಮಾಗಡಿ. ಅಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪಡೆದು, ಸಿದ್ಧಗಂಗಾಕ್ಷೇತ್ರದ ವೇದಪಾಠಶಾಲೆಯಲ್ಲಿ ಸಾಹಿತ್ಯ, ವ್ಯಾಕರಣ, ಅಲಂಕಾರ, ಜ್ಯೋತಿಷ್ಯ, ವೀರಶೈವಸಿದ್ಧಾಂತ ಇತ್ಯಾದಿ ವಿಷಯಗಳಲ್ಲಿ ಪ್ರೌಢವ್ಯಾಸಂಗವನ್ನು ಮುಗಿಸಿ, ೧೯೧೮ ರಲ್ಲಿ ಬೆಂಗಳೂರು ಗಂಜಾಂ ಮಠದ ಪಾಠಶಾಲೆಯಲ್ಲಿ ಅಧ್ಯಾಪಕರಾದರು.

ವೀರಶೈವ ಧರ್ಮ ಹಾಗೂ ಸಂಸ್ಕೃತಿಯ ಪ್ರಚಾರಕ್ಕಾಗಿ ಇವರು ತುಂಬ ಶ್ರಮಿಸಿದರು. 'ವೀರಶೈವಾನಂದಿನಿ' (೧೯೦೬-೧೯೦೭) ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರ ಮುಖಾಂತರ 'ಅಮೃತೇಶ್ವರಭಾಷ್ಯ', 'ದೀಕ್ಷಾಬೋಧೆ', 'ಸಿದ್ಧೇಶ್ವರಮಹಿಮೆ' ಎಂಬ ಗ್ರಂಥಗಳನ್ನು ಪ್ರಕಟಿಸತೊಡಗಿದರು. ಕಾಲಾಂತರದಲ್ಲಿ ಆ ಪತ್ರಿಕೆಯು ನಿಂತುಹೋಯಿತು. ಮುಂದೆ ೧೯೨೩ರಲ್ಲಿ 'ವೀರಶೈವಧರ್ಮಸಂಗ್ರಹ' ಎಂಬ ಬೇರೊಂದು ಮಾಸಪತ್ರಿಕೆಯನ್ನು ಪ್ರಾರಂಭಿಸಿ, 'ಶರಣಚಾರಿತ್ರ್ಯ', 'ಕವಿಕರ್ಣರಸಾಯನಂ', 'ಸೋಮನಾಥಭಾಷ್ಯಂ' ಎಂಬ ಗ್ರಂಥಗಳನ್ನು ಕ್ರಮಶಃ ಅದರಲ್ಲಿ ಪ್ರಕಟಿಸಿದರು. ಇದಾದರೂ ಕೆಲವೇ ದಿನಗಳಲ್ಲಿ ಅಸ್ತಿತ್ವವನ್ನು ಕಳೆದುಕೊಂಡಿತು.

ಗ್ರಂಥಗಳು : ಅಷ್ಟಾವರಣವಿಚಾರದರ್ಪಣ (ಧ), ಕೋಳೂರು ಕೊಡಗೂಸಿನ ಕಥೆ (ಅ), ಗುರುಭಜನ (ಅ), ಜಯದೇವಭಜಕಾನಂದಿನಿ (ಅ), ವೇಮನಾರಾಧ್ಯಕಥೆ (ಅ), ಶಿವಗೀತೆ (ಅ), ಶಿವಾಧಿಕ್ಯ (ಧ), ಸಿದ್ಧಲಿಂಗೇಶ್ವರ ಕಥೆ (ಅ).

ಪರಿಷ್ಕೃತ : ರಾಘವಾಂಕನ ಕಾವ್ಯ (ಚಿಕ್ಕನಂಜಾರ್ಯಕೃತ), ವೀರಶೈವಾಮೃತ ಮಹಾಪುರಾಣ (ಗುಬ್ಬಿ ಮಲ್ಲಣಾರ್ಯಕೃತ)

ಸಂಸ್ಕೃತ : ಸಿದ್ಧಲಿಂಗೇಶ್ವರ ಸ್ತೋತ್ರ.

ಸೀತಾರಾಮಶಾಸ್ತ್ರೀ, ಗುಂಡಾವಧಾನಿ, ಮೈಸೂರು

ಜ : ೨೬-೧೦-೧೮೬೮ ಮ : ೨೦-೧೨-೧೯೩೩

ಮೈಸೂರು ಹಳ್ಳದಕೇರಿಯಲ್ಲಿ ಜನ್ಮ ಹಾಗೂ ಬಾಲ್ಯ. ಗುಂಡಾವಧಾನಿಗಳು ಅರಮನೆಯಲ್ಲಿ ಶ್ರೀ ಚಾಮುಂಡೇಶ್ವರಿ ಪೂಜೆಯ ಸಮಯದಲ್ಲಿ ಸಹಸ್ರನಾಮಪಾರಾಯಣ ಮಾಡುತ್ತಿದ್ದರು. ಪ್ರಾಥಮಿಕ ಸಂಸ್ಕೃತಾಭ್ಯಾಸವಾದ ಬಳಿಕ ಸೀತಾರಾಮಶಾಸ್ತ್ರಿಗಳು ಅದೇ ನಗರದ ಕತ್ತವಾಡಿಪುರ ಅಗ್ರಹಾರದಲ್ಲಿ ದೊಡ್ಡಪುರ ವೇ॥ಚಂದ್ರಶೇಖರಶಾಸ್ತ್ರಿಗಳಲ್ಲಿ ಕಾವ್ಯವ್ಯಾಸಂಗವನ್ನು ಪೂರೈಸಿದರು. ಅದರೊಂದಿಗೆ ಕನ್ನಡ ಸಾಹಿತ್ಯದ ಅಭ್ಯಾಸವನ್ನೂ ಮಾಡಿ ಮೈಸೂರು ಸದ್ವಿದ್ಯಾಪಾಠಶಾಲೆಯಲ್ಲಿ ಉಪಾಧ್ಯಾಯರಾದರು. ಕೆಲವು ಕಾಲದನಂತರ

ಗವರ್ನಮೆಂಟ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಚನ್ನಪಟ್ಟಣ, ಕೋಲಾರ, ಮೈಸೂರು ಮುಂತಾದ ಕಡೆಗೆ ಕೆಲಸ ಮಾಡಿದರು. ಕೊನೆಗೆ ಟ್ರೇನಿಂಗ್ ಕಾಲೇಜಿನ ಪ್ರಾಧ್ಯಾಪಕರಾಗಿ ವರ್ಗಾಯಿಸಲ್ಪಟ್ಟು, ೧೯೨೯ರಲ್ಲಿ ಸೇವಾನಿವೃತ್ತಿಯನ್ನು ಪಡೆದರು.

'ಮೈಸೂರು ದೇಶಾಭ್ಯುದಯ' ಎಂಬ ವಿಷಯವಾಗಿ ಶ್ರೀಮನ್ಮಹಾರಾಜರು ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನವನ್ನೂ 'ಆಸ್ಥಾನಮಹಾವಿದ್ವಾನ್' ಎಂಬ ಪ್ರಶಸ್ತಿಯನ್ನೂ ಪಡೆದವರಾಗಿದ್ದರು.

ಗ್ರಂಥಗಳು : ಇಂದ್ರಕೀಲವಿಜಯ (ಅ), ಕರ್ಣಾಟಕ ಮಹೀಶೂರ ದೇಶಾಭ್ಯುದಯ, ಕರ್ಣಾಟ ಸ್ನುಷಾವಿಜಯಂ, ಕರ್ಣಾಟ ವಿಕ್ರಮಾರ್ಕಚರಿತಂ, ಕುಚೇಲೋಪಾಖ್ಯಾನ, ಕೃಷ್ಣಸಂಧಾನ, ಕೃಷ್ಣರಾಜವಂಶಾವಳಿವಿಜಯ, ಗೋಪಿಕಾಗೀತೆ (ಅ), ಗಂಗಾಶಂತನುವಿಲಾಸ, ಚತುರ್ದಶಮಂಜರಿ (ಅ), ತರಂಗಿಣೀ, ನವರತ್ನದರ್ಪಣ (ಝ), ಪದ್ಯಕದಂಬ (ಅ), ಪ್ರತಿಮಾನಾಟಕ, ಪ್ರಶ್ನೋತ್ತರಭಗವದ್ಗೀತಾ, ಪಾರ್ವತಿ ಪರಿಣಯ ನಾಟಕ (ಆ), ಪಂಚತಂತ್ರ, ಪಂಚಲಿಂಗಸ್ತುತಿ, ಬಾಲರಾಮಾಯಣ, ಭಕ್ತವಿಜಯ (ಮಹಿಪತಿ ವಿರಚಿತ ಮರಾಠಿ ಗ್ರಂಥದ ಭಾಷಾಂತರ), ಭಜಗೋವಿಂದ ಸ್ತೋತ್ರ (ಅ), ಭಾರತೋಪಾಖ್ಯಾನ, ಲಲಿತಾಸಹಸ್ರನಾಮಚಂದ್ರಿಕೆ, ವಿಕ್ರಮಾರ್ಕ ಚರಿತೆ, ವೇಣೀಸಂಹಾರನಾಟಕ, ಶಬ್ದಬೋಧಿನಿ, ಶಿವಾನಂದಲಹರಿ, ಸುದಾಮಚರಿತ್ರೆ, ಸೂಕ್ತಿಮಂಜರಿ (ಅ), ಸೂಕ್ತಿಮಾಲೆ, ಸೂಕ್ತಿತಾರಾವಳಿ, ಸಂಗೀತಸೂಕ್ತಿ ವಿಜಯ (ಅ), ಹಾಲಾಖ್ಯಮಹಾತ್ಮೆ.

ಸಂಸ್ಕೃತ : ಕೃಷ್ಣೋದಾಂತತರಂಗಿಣೀ, ಕೃಷ್ಣರಾಜವಂಶಾವಳಿವಿಜಯ,ಮೈಸೂರುದೇಶಾಭ್ಯುದಯ, ಲಕ್ಷ್ಮೀನರಸಿಂಹಪೂಜಾ, ಶಿವವತ್ಸರಾವಳಿ, ಶ್ರೀಕೃಷ್ಣರಾಜೇಂದ್ರಶೀರ್ನವರತ್ನಮಾಲಿಕಾ, ಸರಸ್ವತೀ ನಕ್ಷತ್ರಮಾಲಿಕಾ, ಸೀತಾರಾವಣಸಂವಾದಝುರಿ, ಸೂಕ್ತಿಸುಧಾಮಂಜರಿ.

ಪರಿಷ್ಕೃತ : ಶ್ರೀಮದ್ಭಗವದ್ಗೀತಾ ಮತ್ತು ಶ್ರೀವಿಷ್ಣುಸಹಸ್ರನಾಮ.

ವರದಾಚಾರ್ಯ, ಎ.ವಿ.

ಜ : ೨-೨-೧೮೭೯ ಮ : ೪-೪-೧೯೨೬

ಮೈಸೂರು ಸಂಸ್ಥಾನದ ಚಿತ್ರದುರ್ಗ. ಮಾಧ್ಯಮಿಕ ಶಿಕ್ಷಣವನ್ನು ಅಲ್ಲಿಯೇ ಮುಗಿಸಿ ಬೆಂಗಳೂರು ಸೆಂಟ್ರಲ್ ಕಾಲೇಜನ್ನು ಸೇರಿದರು. ಆದರೆ ಮನೆತನದ ಅನಾನುಕೂಲತೆಯ ಮೂಲಕ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಮೈಸೂರು ಸರಕಾರದ ಆರೋಗ್ಯಶಾಖೆಯಲ್ಲಿ ಗುಮಾಸ್ತರಾದರು. ಕೆಲಕಾಲ ಬೆಂಗಳೂರು ರೆಸಿಡೆಂಟ್ ಕಚೇರಿಯಲ್ಲಿಯೂ ಕೆಲಸಮಾಡಿದರು. ಜನ್ಮತಃ ಪ್ರತಿಭಾವಂತ ನಟರಾದ ವರದಾಚಾರ್ಯರು, ಹಲವು ಸ್ನೇಹಿತರ ನೆರವಿನಿಂದ 'ಬೆಂಗಳೂರು ಯೂನಿಯನ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ರಂಗಭೂಮಿಯ ಸೇವೆಗೆ ಉಪಕ್ರಮಿಸಿದರು. ಮುಂದೆ ೧೯೦೨ರಲ್ಲಿ ಸುಪ್ರಸಿದ್ಧ 'ರತ್ನಾವಳೀ ನಾಟಕ ಸಭೆ'ಯನ್ನು ಮೈಸೂರಿನಲ್ಲಿ ಸ್ಥಾಪಿಸಿ,ತಾವು ಅದರ ವ್ಯವಸ್ಥಾಪಕರಾದರು.

ವರದಾಚಾರ್ಯರ ಪ್ರತಿಭೆಯೂ ಕಲಾಪ್ರೌಢಿಮೆಯೂ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಅವರಿಗೆ ಒಂದು ಚಿರಂತನವಾದ ಸ್ಥಾನವನ್ನು ಕಲ್ಪಿಸಿವೆ. ಆಗಿನ ಕಾಲದಲ್ಲಿ ವರದಾಚಾರ್ಯರ ಹೆಸರು ಪರಪ್ರಾಂತಗಳಲ್ಲಿಯೂ ಮನೆಮಾತಾಗಿತ್ತು. ೧೯೧೦ರಲ್ಲಿ ಮೈಸೂರು ನಾಗರಿಕರು ಸರದಾರ್ ಎಂ.ಕಾಂತರಾಜ್ ಅರಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸತ್ಕಾರ ಸಮಾರಂಭವನ್ನು ಏರ್ಪಡಿಸಿ 'ವರನಟ' ಎಂಬ ಬಿರುದನ್ನೂ, ರತ್ನಖಚಿತವಾದ ಕೈಗಡಗವನ್ನೂ ಅರ್ಪಿಸಿದರು. ಅದರಂತೆ ೧೯೧೯ರಲ್ಲಿ ಶ್ರೀಮತಿ ಅನಿಬೇಸೆಂಟರ ಅಧ್ಯಕ್ಷತೆಯಲ್ಲಿ ತಿರುಚನಾಪಳ್ಳಿಯಲ್ಲಿ ಸತ್ಕಾರ ನಡೆದು 'ನಾಟಕಶಿರೋಮಣಿ' ಎಂಬ ಪ್ರಶಸ್ತಿಯು ಮಾನಪತ್ರದೊಂದಿಗೆ ಸಮರ್ಪಿಸಲ್ಪಟ್ಟಿತು.

ಗ್ರಂಥಗಳು : ಇಂದಿರಾನಂದ (ಅ), ಕಾಮಪಾಲ (Reynold's ಕೃತ The Kenneth ಕಾದಂಬರಿಯನ್ನವಲಂಬಿಸಿದ ನಾಟಕ), ಕಾಂತಿಮತಿ (ಅ), ವಲೀಮುಖಿಪರಿಣಯ (ಅ), ವಿಮಲಾವಿಜಯಂ (ಅ).

ವೆಂಕಟೇಶ, ತಿರಕೋ, ಕುಲಕರ್ಣಿ (ಗಳಗನಾಥ)

ಜ : ೫-೧-೧೮೬೯ ಮ : ೨೨-೪-೧೯೪೨

ಧಾರವಾಡ ಜಿಲ್ಲೆಯ ಗಳಗನಾಥ ಎಂಬ ಗ್ರಾಮದವರು. ಮುಲಕೀ ಪರೀಕ್ಷೆ ಆದ ಬಳಿಕ ಧಾರವಾಡ ಶಿಕ್ಷಣ ಮಹಾವಿದ್ಯಾಲಯವನ್ನು ಸೇರಿದರು. ಆಗಲೇ ಧೋಂಡೋ ನರಸಿಂಹ ಮುಳಬಾಗಲ ಅವರ ಕಣ್ಣರಿಕೆಯಲ್ಲಿ ಕನ್ನಡ ಸಾಹಿತ್ಯದ ವಿಶೇಷವಾದ ವ್ಯಾಸಂಗಮಾಡಿದರು. ಶಿಕ್ಷಣ ಪೂರೈಸಿದ ಬಳಿಕ ಅಧ್ಯಾಪನ ವೃತ್ತಿಯನ್ನು ಸ್ವೀಕರಿಸಿ, ಶಿರಗುಪ್ಪಿ, ನರೇಂದ್ರ, ಬಂಕಾಪುರ, ಉಪ್ಪಿನ ಬೆಟಗೇರಿ, ಗುತ್ತಲ ಮುಂತಾದ ಊರುಗಳಲ್ಲಿ ಮುಖ್ಯೋಪಾಧ್ಯಾಯರೆಂದು ಕೆಲಸಮಾಡಿ ಧಾರವಾಡಕ್ಕೆ ಬಂದು 'ಪ್ರ್ಯಾಕ್ಟೀಸಿಂಗ್ ಸ್ಕೂಲ್' ಮತ್ತು ಶಿಕ್ಷಣಮಹಾವಿದ್ಯಾಲಯಗಳಲ್ಲಿ ಕೆಲದಿನ ಅಧ್ಯಾಪಕರಾದರು. ನರೇಂದ್ರದಲ್ಲಿದ್ದಾಗಲೇ ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನಕ್ಕಾಗಿ 'ಪ್ರಬುದ್ಧ ಪದ್ಮನಯನೆ' ಎಂಬ ಕಾದಂಬರಿಯನ್ನು ರಚಿಸಿ ಸಾಹಿತ್ಯಕ್ಷೇತ್ರದಲ್ಲಿ ಕಾಲಿರಿಸಿದ್ದರು (೧೮೯೮). ಮಹಾರಾಷ್ಟ್ರದ ಪ್ರಸಿದ್ಧ ಕಾದಂಬರಿಕಾರರಾಗಿದ್ದ ಹರಿನಾರಾಯಣ ಆಪ್ಟೆಯವರ ಐತಿಹಾಸಿಕ ಕಾದಂಬರಿಗಳ ಅನುವಾದದಿಂದ ಇವರ ಸಾಹಿತ್ಯ ಸಂಪತ್ತು ಸಮೃದ್ಧಿಗೊಂಡಿತು. ೧೯೦೫ರಿಂದ ೧೯೦೭ರ ವರೆಗೆ ಮುಂಬಯಿ ಕರ್ನಾಟಕದ ಪಠ್ಯಪುಸ್ತಕ ಸಮಿತಿಯಲ್ಲಿ ರಾ.ಬ.ಕರಂದೀಕರರ ಜೊತೆಗೆ ಸಭಾಸದರಾಗಿದ್ದರು. ಅದೇ ವರುಷ ಸೇವಾನಿವೃತ್ತಿಯನ್ನು ಪಡೆದು ಧಾರವಾಡ ಜಿಲ್ಲೆಯ ಅಗಡಿ ಗ್ರಾಮದಲ್ಲಿ ವೈದಿಕವಿದ್ಯಾಪ್ರಸಾರಕ್ಕಾಗಿ ಗುರುಕುಲಾಶ್ರಮವೊಂದನ್ನು ಸ್ಥಾಪಿಸಿದರು. ಅದರೊಂದಿಗೆ ಶೇಷಾಚಲ ಮುದ್ರಣಾಲಯವನ್ನು ಪ್ರಾರಂಭಿಸಿ 'ಸದ್ಬೋಧಚಂದ್ರಿಕೆ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು (೧೯೧೦ ಏಪ್ರಿಲ್). ೧೯೨೨ರಲ್ಲಿ ಕಾರಣಾಂತರದಿಂದ ಅಗಡಿಯ ಆಶ್ರಮವನ್ನು ತ್ಯಜಿಸಿ, ಹಾವೇರಿಗೆ ಬಂದು

ನೆಲೆಸಿ ಬೇರೊಂದು ಮುದ್ರಣಾಲಯವನ್ನೂ 'ಸದ್ಗುರು' ಎಂಬ ಮಾಸಪತ್ರಿಕೆಯನ್ನೂ ಪ್ರಾರಂಭಿಸಿದರು. ಆಶ್ರಮ, ವೈದಿಕ ಪಾಠಶಾಲೆಗಳು ಇಲ್ಲಿಯೂ ಸ್ಥಾಪಿತವಾದವು. ಕೆಲವು ಸಮಯದನಂತರ ಆರ್ಥಿಕ ಕಾರಣಗಳಿಗಾಗಿ ಈ ಸಂಸ್ಥೆಗಳೂ ಕ್ಷೀಣಗೊಂಡು ಗಳಗನಾಥರ ಮೇಲೆ ಸಾಲದ ಭಾರವನ್ನು ಮಾತ್ರ ಹೆಚ್ಚಿಸಿದವು. ಸಂಸ್ಕೃತಿಪ್ರಚಾರ ಹಾಗೂ ವಾಙ್ಮಯ ಸೇವೆಯ ಹವ್ಯಾಸದಿಂದ ಅನೇಕಮುಖವಾಗಿ ಹೆಣಗಾಡಿ, ವ್ಯವಹಾರದಲ್ಲಿ ನಷ್ಟ ಸಹಿಸಿ 'ನಮ್ಮ ಸಾಲ ತೀರಿಸುವ ಪುಸ್ತಕಗಳು' ಎಂಬ ಗ್ರಂಥಮಾಲೆಯನ್ನೇ ಕೊನೆಗೆ ಇವರು ಆರಂಭಿಸಬೇಕಾಯಿತು. ಜನತೆಯ ಸ್ವಾಭಿಮಾನ ಜಾಗೃತಿಗಾಗಿ ಅತ್ಯಂತ ಕಳಕಳಿಯಿಂದ ದುಡಿದ ಇವರು ಕನ್ನಡ ಕಾದಂಬರಿಕಾರರಲ್ಲಿ ಅಗ್ರಗಣ್ಯರೆನಿಸಿಕೊಂಡರು.

ಗ್ರಂಥಗಳು : ಅದ್ಭುತಶೌರ್ಯ (ಇ), ಅನುಕರಣೀಯ ದಾಂಪತ್ಯ (ಇ), ಆನಂದ ರಾಮಾಯಣ (ಧ), ಈಶ್ವರೀಸೂತ್ರ (ಇ)ಉತ್ತರರಾಮಚರಿತಸಾರ (ಧ), ಕನ್ನಡಿಗರ ಕರ್ಮಕಥೆ (ಇ), ಕಣ್ವಸಂಹಿತೆ (ಧ) ಕಮಲಕುಮಾರಿ, ಕಲಿಕುಠಾರ, ಕುಟುಂಬ (ಈ), ಕುಮುದಿನಿ, ಕುರುಕ್ಷೇತ್ರ, ಗಿರಿಜಾಕಲ್ಯಾಣ (ಇ), ಗೀತಾವಲೋಕನೆ (ನ), ಗುರುಪ್ರಸಾದ, ಗೃಹಕಲಹ, ಚಿದಂಬರಚರಿತ್ರೆ (ಧ-ಚ), ಛತ್ರಪತಿ, ತಿಲೋತ್ತಮೆ, ತುಲಸೀ ರಾಮಾಯಣ, ದತ್ತಕಥಾಮೃತ (ಧ), ದುರ್ಗದ ಬಿಚ್ಚುಗತ್ತಿ-ಭಾಗ ೧-೨, ಧರ್ಮರಹಸ್ಯ, ಧಾರ್ಮಿಕ ತೇಜ (ಇ), ನಳಚರಿತ್ರೆ (ಇ. ೧೯೩೮), ನಿಬಂಧಶಿಕ್ಷಣ, ನಿರ್ಯಾಣಮಹೋತ್ಸವ, ಪ್ರಬುದ್ಧಪದ್ಮನಯನೆ (ಇ. ೧೮೯೮), ಪುನರ್ಜನ್ಮ (ಇ)ಫಕೀರೇಶ್ವರಪುರಾಣ (ಧ), ಭಕ್ತಿವಿಜಯ (ಧ), ಮರಾಟರ ಅಭ್ಯುದಯ, ಮಾಧವಕರುಣಾವಿಲಾಸ, ರಹಸ್ಯಗಳು, ರಾಣಾರಾಜಸಿಂಹ, ರಾಣೀ ಮೃಣಾಲಿನಿ (ಇ), ವರ್ಣಾಶ್ರಮಧರ್ಮ (ಧ) ವೀರಪ್ರತಾಪ (ಇ. ೧೯೪೯), ವೆಂಕಟೇಶ ಮಹಾತ್ಮ್ಯೆ (ಧ), ವೈಭವ, ಶಿವಪ್ರಭುವಿನ ಪುಣ್ಯ, ಶುಕಸಂಜೀವಿನಿ (ಇ), ಶ್ರೇಷ್ಠ ಸದುಪದೇಶ, ಶೈವಸುಧಾರ್ಣವ, ಸಚಿತ್ರ ಭಾಗವತಾಮೃತ, ಸಚಿತ್ರ ಮಹಾಭಾರತಾಮೃತ-ಆದಿಪರ್ವ, ಸಭಾಪರ್ವ, ಸತ್ತ್ವಸಾರ, ಸತ್ತ್ವಾದರ್ಶ (ಇ), ಸದ್ಗುಣಸಂಭ್ರಮ ಅಥವಾ ಭಗವತೀ ಕಾತ್ಯಾಯಿನೀ, ಸದ್ಗುರುಪ್ರಭಾವ, ಸಂಸಾರಸುಖ, ಸ್ವರಾಜ್ಯಸುಗಂಧ, ಸಾಧು ಸದಾಶಿವಲೀಲೆ (ಧ), ಸುಂದರಲೇಖನಸಮುಚ್ಚಯ, ಹಿಂದೂ ಸಮಾಜವ್ಯವಸ್ಥೆ, ಕ್ಷಾತ್ರತೇಜ.

ಅಪ್ರಕಟಿತ : ಆಧ್ಯಾತ್ಮರಾಮಾಯಣ, ಕಲಿಕುಠಾರ ಭಾಗ ೨, ದುರ್ಗದ ಬಿಚ್ಚುಗತ್ತಿ ಭಾಗ ೨, ನಿಬಂಧಲೇಖನ, ಮಹಾಭಾರತ-ವನಪರ್ವ, ವಿರಾಟಪರ್ವ, ಉದ್ಯೋಗಪರ್ವ, ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ, ಅನುಶಾಸನಪರ್ವ, ಅಶ್ವಮೇಧಪರ್ವ, ಆಶ್ರಮವಾಸಿಪರ್ವ, ಮಹಾಪ್ರಾಸ್ಥಾನಿಕಪರ್ವ, ಸ್ವರ್ಗಾರೋಹಣಪರ್ವ.

ಶಿವರುದ್ರಪ್ಪ, ಸೋಮಪ್ಪ, ಕುಲಕರ್ಣಿ

ಜ : ೧೮೬೯ ಮ : ೧೯೧೮

ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಮಲ್ಲೂರಿನವರು. ೧೮೯೦ರಲ್ಲಿ ಧಾರವಾಡ ಶಿಕ್ಷಣಮಹಾವಿದ್ಯಾಲಯದಿಂದ ಮೂರನೆಯ ವರುಷದ ಪ್ರಶಸ್ತಿ ದೊರಕಿಸಿ

ಆ ಜಿಲ್ಲೆಯಲ್ಲಿ ಉಪಾಧ್ಯಾಯರಾಗಿ ಅನೇಕ ಊರುಗಳಲ್ಲಿ ಕೆಲಸಮಾಡಿದರು. ಕನ್ನಡದಲ್ಲಿ ಸ್ವತಂತ್ರ ಸಣ್ಣ ಕತೆಗಳನ್ನು ರಚಿಸಿದವರಲ್ಲಿ ಇವರೇ ಮೊದಲಿಗರು ಎಂಬ ಒಂದು ಅಭಿಪ್ರಾಯವೂ ಉಂಟು. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕೆಲವು ವರ್ಷ ಕೆಲಸ ಮಾಡಿದರು. 'ಗೌರೀಶಂ' ಎಂಬುದು ಇವರ ಕಾವ್ಯನಾಮ.

ಗ್ರಂಥಗಳು : 'ನನ್ನ ತಾಯಿ (ಇ ೧೯೨೦), ನಾಡನೆಲೆಗಾರ (ಇ), ಬೇನಿಗರ ಲಘುಚಿಂತಾಮಣಿ (ಧ.೧೯೧೫), ಹಿತೋಪದೇಶ-ಭಾಗ ೧, ಭಾಗ ೨(ಧ).

ಅಪ್ರಕಟಿತ : ನನ್ನ ತಂದೆ, ನನ್ನ ಅಜ್ಜ, ಬೃಹತ್ ಚಿಂತಾಮಣಿ.

ಮಂಜಯ್ಯ, ಕಾಮತ, ಕಲ್ಲೀಕೋಟೆ

ಜ : (?) ಮ : ಸು. ೧೮೭೦

ಕೇರಳ ಪ್ರಾಂತದ ಕಲ್ಲೀಕೋಟೆ. ಇವರು ಅಲ್ಲಿಯ ಕಲೆಕ್ಟರ್ ಕಚೇರಿಯಲ್ಲಿ ಶಿರಸ್ತೆದಾರರಾಗಿದ್ದರು. ಆದರೂ ದಕ್ಷಿಣ ಕನ್ನಡದಲ್ಲಿಯ ತಮ್ಮ ಜ್ಞಾತಿಬಾಂಧವರ ಸಂಪರ್ಕದಿಂದ ಕನ್ನಡವನ್ನು ಕಲಿತು, ಕನ್ನಡದಲ್ಲಿ ಹಲವು ಪ್ರಾರ್ಥನಾಗೀತಗಳನ್ನು ರಚಿಸಿರುವರು. ಅಲ್ಲದೆ ಕೊಂಕಣಿ, ಮಲೆಯಾಳಿ ಭಾಷೆಯಲ್ಲಿಯೂ ಕವಿತೆಗಳನ್ನು ಹೆಣೆದಿರುವರು.

ಇವರ ಕೃತಿಗಳು ಪ್ರಕಟವಾದಂತೆ ತೋರುವುದಿಲ್ಲ.

ಕಬೀರದಾಸ

ಜ : ಸು ೧೮೭೦

ಹುಬ್ಬಳ್ಳಿ. ಚಿಕ್ಕ ವಯಸ್ಸಿನಲ್ಲಿ ಸಿದ್ಧಾರೂಢ ಸ್ವಾಮಿಗಳ ಆಶ್ರಿತರಾಗಿ ಸಾಧನೆ ಮಾಡಿದರು. ಮಠದಲ್ಲಿ ದಿನಾಲು ವೇದಾಂತಪ್ರವಚನ ಮಾಡುತ್ತಿದ್ದರು.

ಗ್ರಂಥ : ಸಿದ್ಧಾರೂಢ ಕಥಾಮೃತ (ಶಿ.ಲ.ಚಂದ್ರಗಿರಿಯವರಿಂದ ಮರಾಠಿಯಲ್ಲಿ ಪರಿವರ್ತಿತ) (ಧ.೧೯೧೦).

ಕೃಷ್ಣಶಾಸ್ತ್ರೀ, ಜಂಗಮ ಕೋಟೆ,

ಜ : ಸು. ೧೮೭೦ ಮ: ೭-೧-೧೯೩೩

ಬೆಂಗಳೂರು. ಮೈಸೂರು ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರಾಗಿ ಹಾಸನ ಮುಂತಾದ ಕಡೆಗೆ ಕೆಲಸ ಮಾಡಿದರು. 'ಸಾಹಿತ್ಯಸರಸ್ವತಿ', 'ವಿದ್ಯಾಭೂಷಣ' ಇತ್ಯಾದಿ ಪ್ರಶಸ್ತಿಗಳನ್ನು ಪಡೆದವರು.

ಗ್ರಂಥಗಳು : ಉತ್ತಮ (ಇ), ಉನ್ಮತ್ತೆ (ಇ), ಕಿಂಡರ್‌ಗಾರ್ಟನ್ ಕಥೆಗಳು (ಬ. ೧೯೨೩), ಕೀರ್ತಿಕುಮಾರ (ಇ), ಕುದುರೆಯ ಕಥೆ, ಜಪಾನ್ ಸಾಮ್ರಾಜ್ಯ, ನಡೆವಳಿ (೧೯೨೩), ನೀಲಗಿರಿಯೂ ಅಲ್ಲಿಯ ನಿವಾಸಿಗಳೂ, ಬೋಧನಕ್ರಮಸಂಗ್ರಹ (೧೯೨೩), ರಾಮಕೃಷ್ಣವಚನಾಮೃತ, ರಾಮಚಂದ್ರ (ಇ. ೧೯೨೮), ಸಾಗರಪ್ರಪಂಚ.

ಗದಿಗೆಯ್ಯಾ, ಹುಚ್ಚಯ್ಯಾ, ಹೊನ್ನಾಪುರಮಠ

ಜ : ೧೮೭೦ ಮ : ೭-೧-೧೯೩೩

ಧಾರವಾಡ. ಅಲ್ಲಿಯೇ ಶಿಕ್ಷಣ. ಮುಂದೆ ವಕೀಲಿಯ ವ್ಯವಸಾಯವನ್ನು ಕೈಕೊಂಡು ಸಾರ್ವಜನಿಕ ಜೀವನದ ಸ್ವಾತಂತ್ರ್ಯವನ್ನೂ ಪಡೆದರು. ಅಂದಿನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ನಾಡು-ನುಡಿಯ ಜಾಗೃತಿಗಾಗಿ ವಿವಿಧ ರಂಗಗಳಲ್ಲಿ ಶ್ರಮಿಸಿದ ಪ್ರಮುಖ ಮಹನೀಯರಲ್ಲಿ ಇವರೂ ಒಬ್ಬರು. ಹುಚ್ಚಯ್ಯನವರು 'ಚಂದ್ರೋದಯ' ಎಂಬ ವಾರಪತ್ರಿಕೆಯನ್ನು ಶಿಲಾಮುದ್ರಣದಿಂದ ೧೮೭೩ರಿಂದಲೇ ಹೊರಡಿಸುತ್ತಿದ್ದರು. ಗದಿಗೆಯ್ಯನವರು ೧೯೦೬ರಲ್ಲಿ 'ವಾಗ್ದೇವಿ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ೧೯೧೬ರಲ್ಲಿ ಅದು 'ಚಂದ್ರೋದಯ' ಎಂಬ ಮಾಸಪತ್ರಿಕೆಯಲ್ಲಿ ರೂಪಾಂತರ ಹೊಂದಿ, ೫-೬ ತಿಂಗಳಲ್ಲಿಯೇ ಮತ್ತೆ ವಾರಪತ್ರಿಕೆಯಾಯಿತು. ಇವರು ಧಾರವಾಡ ನಗರಸಭೆ, ಜಿಲ್ಲಾ ಬೋರ್ಡು ಮುಂತಾದ ಸ್ಥಾನಿಕ ಸಂಸ್ಥೆಗಳ ಸದಸ್ಯರಾಗಿಯೂ, ಇತರ ಅನೇಕ ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಕಾರ್ಯಕರ್ತರಾಗಿಯೂ ದುಡಿದರು. ಅ.ಭಾ. ವೀರಶೈವ ಮಹಾಸಭೆಯ ಸಂಸ್ಥಾಪಕರಲ್ಲಿ ಒಬ್ಬರೂ ೧೯೦೮ರಲ್ಲಿ ಆ ಸಂಸ್ಥೆಯ ಸ್ಟ್ಯಾಂಡಿಂಗ್ ಕಮಿಟಿಯ ಕಾರ್ಯದರ್ಶಿಗಳೂ ಆಗಿದ್ದರು.

ಗ್ರಂಥಗಳು : ಅದ್ಭುತಪ್ರೇಮ, ಅಬ್ರಹಾಮ್ ಲಿಂಕನ್, ಅಲ್ಲಾವುದ್ದೀನ ಮತ್ತು ಒಂದು ಸೋಜಿಗದ ಕಥೆ (ಇ), ಚಿಲ್ಲಾಳ ಚರಿತ್ರೆ, ತ್ರಾಟಿಕಾ ನಾಟಕ, ಧ್ರುವ ಚರಿತ್ರೆ (ಧ-ಚ), ನೀತಿಮಂಜರಿ, ಪ್ರಹ್ಲಾದಚರಿತ್ರೆ (ಧ-ಚ), ಬಾಲಭಾಗವತ (ಧ), ಬಾಲಭಾರತ, ಬಾಲರಾಮಾಯಣ, ಮೋಹಿನಿ ಅಥವಾ ನಿಂದಕರ ನಡಾವಳಿ (ಆ), ವೀರವಿದುಲಾ (ಆ), ಶ್ರೀಕೃಷ್ಣಚರಿತ್ರೆ (ಧ-ಚ), ಶ್ರೀಬಸವೇಶ್ವರಚರಿತ್ರೆ, ಶ್ರೀರಾಮಕೃಷ್ಣ ಪರಮಹಂಸರ ಸತ್ಕಥೆಗಳು, ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ಚರಿತ್ರೆ, ಶ್ರೀ ಸ್ವಾಮಿ ರಾಮತೀರ್ಥಚರಿತ್ರ, ಶ್ರೀ ಶನಿಮಹಾತ್ಮೆ (ಧ), ಶ್ರೀ ಶಿವಲೀಲಾಮೃತ ಕಥೆಗಳು (ಧ), ಸಾವಿತ್ರಿಚರಿತ್ರೆ (ಧ-ಚ), ಸುದಾಮಚರಿತ್ರೆ (ಧ-ಚ).

ಗುಡ್ಡೋಡಗಿ, ಮುಕುಂದ, ಉದಗಟ್ಟಿ, ಪಿ.ಇ.,ಎಸ್‌ಟಿ.ಸಿ.

ಜ : ಸು. ೧೮೭೦

ಗೋಕಾಕ ತಾಲೂಕಿನ ಉದಗಟ್ಟಿ ಗ್ರಾಮ. ಬೆಳಗಾವಿಯ ಸರದಾರ್ ಹೈಸ್ಕೂಲಿನಲ್ಲಿ ಕೆಲಕಾಲ ಅಧ್ಯಾಪಕರಾಗಿದ್ದರು.

ಗ್ರಂಥ : ಮಾನಸಶಾಸ್ತ್ರ * (ಫ.೧೯೦೮)

ಗುರುಲಿಂಗಮ್ಮಾ, ಸಿದ್ಧಮಲ್ಲಪ್ಪಾ, ಬಾಗೇವಾಡಿ

ಜ : ಸು. ೧೮೭೦

ಬೆಳಗಾವಿಯ ಬಳಿ ಹೊಸಟ್ಟಿಯವರು, ಇವರು ಕೀರ್ತನೆ ಹೇಳುವುದರಲ್ಲಿ ಪ್ರಸಿದ್ಧರಾಗಿದ್ದು 'ಕೀರ್ತನಸರಸ್ವತಿ' ಎಂಬ ಪ್ರಶಸ್ತಿಯನ್ನು ಪಡೆದವರಾಗಿದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನ ಪಡೆದಿದೆ.

ಗ್ರಂಥಗಳು : ಪದ್ಯರೂಪಾವಲಿ (ಅ.೧೯೧೬), ಶಿರಸಂಗಿ ದೇಸಾಯರ ಚರಿತ್ರೆ (ಅ).

ಚಿದಂಬರಯ್ಯ, ಹೊಸಕೆರೆ

ಜ : ೧೮೭೦ ಮ : ೧೭-೪-೧೯೩೮

ತಿರುಮಕೂಡಲು ನರಸೀಪುರ. ಚಿಕ್ಕಂದಿನಲ್ಲಿ ಶಾಲಾಭ್ಯಾಸಕ್ಕೆ ತಕ್ಕ ಅನುಕೂಲತೆ ದೊರೆಯದ್ದರಿಂದ ಕೇವಲ ಸ್ವಪ್ರಯತ್ನಬಲದಿಂದಲೇ ಕನ್ನಡ-ಸಂಸ್ಕೃತದಲ್ಲಿ ಪಾಂಡಿತ್ಯ ಸಂಪಾದಿಸಿದರಲ್ಲದೆ ತಕ್ಕಮಟ್ಟಿಗೆ ಇಂಗ್ಲೀಷಿನ ಪರಿಚಯವನ್ನೂ ಮಾಡಿಕೊಂಡರು. ಅನೇಕ ವರ್ಷ ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಉಪಾಧ್ಯಾಯರಾಗಿದ್ದು, ಅನಂತರ ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿ ಕನ್ನಡಪಂಡಿತರಾದರು. ನಿವೃತ್ತರಾದ ಬಳಿಕ ಡಾ. ಕುರ್ತಕೋಟಿ ಶಂಕರಾಚಾರ್ಯರ ಪರಿವಾರದಲ್ಲಿ ಕೆಲಕಾಲ ಇದ್ದು, ಅನಂತರ ಧಾರವಾಡದ ಕರ್ನಾಟಕ ರಾಷ್ಟ್ರೀಯ ಶಾಲೆಯಲ್ಲಿ ಅಧ್ಯಾಪಕರೂ (೧೯೨೪),'ಪರಮಾರ್ಥ', 'ಭಕ್ತಬಂಧು' ಮಾಸಪತ್ರಿಕೆಗಳ ಸಂಪಾದಕರೂ ಆಗಿದ್ದರು. ಧಾರವಾಡದ 'ಸ್ವಧರ್ಮ' ಪತ್ರಿಕೆಯ ಸಂಪಾದಕ ಮಂಡಲದಲ್ಲಿ ಒಬ್ಬರಾಗಿದ್ದರು. 'ಕರ್ನಾಟಕ ಕವಿರತ್ನ' ಎಂಬ ಪ್ರಶಸ್ತಿಯನ್ನು ಪಡೆದಿದ್ದರು.

ಗ್ರಂಥಗಳು : ಅನುಭವಾಮೃತ, ಆತ್ಮಶಕ್ತಿಯ ತೇಜಸ್ಸು (ಪ) ಆರ್ಯಧರ್ಮಪ್ರದೀಪ (ಧ), ಉಪದೇಶಪಂಚಕ (ಧ), ಉಪಾಧ್ಯಾಯರ ಯೋಗ್ಯತೆಗಳು (ಬ), ಕೃಷ್ಣಮಹೇಶ್ವರಿ (ಆ. ೧೯೧೦), ಕೀರ್ತನಕಂಠಾಭರಣ (ಧ), ಕೆಲವು ಉಪಾಖ್ಯಾನಗಳು (ಧ), ಗಣಿತಾಬ್ಜಭಾಸ್ಕರ (ಬ) ಗೀತಾರ್ಥಚಂದ್ರಿಕೆ (ನ), ಗೀತಾರ್ಥವಿವರಣೆ (ನ), ಗೀತೆಯ ಕೈಗನ್ನಡಿ (ನ), ಗೀತೆಯ ತಿರುಳು (ನ), ಗುಣನಿರೂಪಣೆ (ಧ), ಚರಿತ್ರಚೂಡಾಮಣಿ (ಧ-ಚ), ಚೂಡಾಲೆ (ಇ), ಜೀವನ್ಮುಕ್ತಿವಿವೇಕ (ಪ), ತಾರಾನಾಥ (ಧ-ಚ), ನೀತಿಗಳ ನೆಲೆಗಟ್ಟು, ಭಾಗ ೧, ೨, ೩ (ಧ), ನೀತಿಸಾರ (ಅ), ಪಂಚದಶೀ ತತ್ವಾರ್ಥ (ಪ), ಬ್ರಹ್ಮಸೂತ್ರಗಳ ಬೆಳಕು (ಪ), ಬೋಧನಕ್ರಮ (ಬ), ಭಗವದ್ಗೀತಾಸಾರವಿಚಾರ (ನ), ಭರತಖಂಡದ ಜೀವಜ್ಯೋತಿಗಳು, ಭಾಗ ೧, ೨ (ಧ-ಚ), ಭರತನ ಬಂಧುಪ್ರೇಮ (ಇ), ಭಾಗವತದ ಕೆಲವು ಕತೆಗಳು (ಇ), ಭಾರತದ ಕೆಲವು ಕಥೆಗಳು (ಇ), ಮಕ್ಕಳ ಕೈಗೀತೆ (ನ), ಮನಸ್ಸಿಗುಪದೇಶ (ಪ), ಮಾಧವರಾವ್ ಸಿಂಧೈ (ಮ-ಚ), ಮಾಂಡೂಕ್ಯಸಂವಾದ (ಪ), ರಾಜಭಕ್ತಿ, ರಾಮನಾಮದ ಮಹಿಮೆ (ಪ), ವಿದ್ಯಾರಣ್ಯಕಾವ್ಯ, ವೇದಾಂತದ ಜೀವಾಳ, ಶಂಕರ ಕಥಾಮೃತ (ಧ), ಶ್ರೀ ಶಂಕರಾಚಾರ್ಯರ ಆಖ್ಯಾನ (ಧ-ಚ), ಷಟ್ಪದಿರ್ಘೋಂಕಾರ, ಸ್ತ್ರೀಧರ್ಮಸಂಗ್ರಹ (ಧ), ಸುಶೀಲಾಪರಿಣಯ (ಆ).

ನರಸಿಂಹಾಚಾರ್ಯ, ಭೀಮಾಚಾರ್ಯ, ಪುಣೇಕರ ಕಾವ್ಯಾನಂದ

ಜ : ೨೭-೯-೧೮೭೦ ಮ : ೬-೮-೧೯೨೯

ಬೆಳಗಾವಿ ಜಿಲ್ಲೆಯ ಕಿತ್ತೂರು. ಹೆಚ್ಚಿನ ಶಿಕ್ಷಣ ಪಡೆಯುವ ಅನುಕೂಲತೆ ಇರಲಿಲ್ಲವಾದರೂ ಸಂಸ್ಕಾರಬಲದಿಂದಲೂ ಸ್ವಂತಪರಿಶ್ರಮದಿಂದಲೂ ಸಂಸ್ಕೃತ-ಕನ್ನಡದಲ್ಲಿ ಪಾಂಡಿತ್ಯ ಸಂಪಾದಿಸಿ ಕಾವ್ಯರಚನಾಸಾಮರ್ಥ್ಯವನ್ನು ಬೆಳೆಸಿಕೊಂಡರು. ಜ್ಯೋತಿಷ್ಯ ಹಾಗೂ ವೈದ್ಯಶಾಸ್ತ್ರದಲ್ಲಿ ಇವರಿಗೆ ವಿಶೇಷ ಪರಿಶ್ರಮವಿದ್ದಿತು.

ಚಚಡಿ. ಯರಗಟ್ಟ ದೇಸಾಯರಲ್ಲಿ ಕೆಲವು ವರ್ಷ ಕಾರಭಾರಿಯಾಗಿಯೂ ಅನಂತರ ಧಾರವಾಡ ವಿಕ್ಟೋರಿಯಾ ಹೈಸ್ಕೂಲ್, ರಾಷ್ಟ್ರೀಯ ಶಾಲೆಗಳಲ್ಲಿ ಅಧ್ಯಾಪಕರಾಗಿಯೂ ಕೆಲಸ ಮಾಡಿದರು. 'ಒಕ್ಕಲಿಗರೂ ಒಕ್ಕಲತನವೂ' (ಧಾರವಾಡ, ೧೯೧೧), ಮಾಸಪತ್ರಿಕೆಯ ಸಹಸಂಪಾದಕರು; 'ಕ್ಷೇಮಸಮಾಚಾರ' (ಧಾರವಾಡ, ೧೯೧೨), ವಾರಪತ್ರಿಕೆಯನ್ನು ಎರಡು ವರ್ಷ ನಡೆಸಿದರು. ೧೯೧೯ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿತವಾಗಿದ್ದ ಕನ್ನಡಿಗರ ಕೂಟದ ಪ್ರಮುಖ ಕಾರ್ಯಕರ್ತರಲ್ಲೊಬ್ಬರು. ಕಲಕತ್ತೆಯ ನಿಖಿಲಭಾರತ ಸಾಹಿತ್ಯಸಂಘದವರಿಂದ 'ಸಾಹಿತ್ಯರತ್ನಾಕರ', 'ವಿದ್ಯಾವಾಚಸ್ಪತಿ' ಎಂಬ ಪ್ರಶಸ್ತಿಗಳನ್ನು ಪಡೆದಿದ್ದರು. 'ಸಮಸ್ಯಾಪೂರ್ತಿ'ಯು ಇವರ ಕಾವ್ಯರಚನೆಯ ವೈಶಿಷ್ಟ್ಯವಾಗಿದ್ದಿತು.

ಗ್ರಂಥಗಳು : ಕಲಿವಿಲಾಸ, ಗರುಡಚೂರ್ಣಮಹಾತ್ಮೆ, ಗೃಹವೈದ್ಯಕ, ಗೃಹಿಣೀಭೂಷಣ, ಚಾಣಕ್ಯಶತಕ, ಧನವಂತನೇ ಬಲವಂತನು, ಪ್ರಶ್ನೋತ್ತರಮಾಲಿಕಾ, ಬಾಲರಂಜನ, ಮಗನಿಗೆ ತಂದೆಯ ಪತ್ರ, ಮದ್ಯಪಾನನಿಷೇಧ, ಮೃತ್ತಿಕಾವೃಷಭಪೂಜಾ, ಸತ್ಯನಾರಾಯಣ ಕಥೆ, ಸಭಾರಂಜನಶತಕ, ಸಾದೀಸುಭಾಷಿತಶತಕ.

ಪುಟ್ಟಯ್ಯ, ಬಿ.

ಜ: ೧-೬-೧೮೭೦ ಮ : ೧೯-೧೨-೧೯೪೪

ಬೆಂಗಳೂರು. ಮದ್ರಾಸ್ ವಿಶ್ವವಿದ್ಯಾಲಯದ ಬಿ.ಎ. ಪದವಿಯನ್ನು ಸಂಪಾದಿಸಿದ ಇವರು ೧೯೧೨ರಲ್ಲಿ ಮೈಸೂರು ಸರಕಾರದ ವಿದ್ಯಾರ್ಥಿವೇತನ ಪಡೆದು, ಮುದ್ರಣಶಾಸ್ತ್ರದಲ್ಲಿ ಪ್ರೌಢವ್ಯಾಸಂಗ ಮಾಡಲು ಪಾಶ್ಚಾತ್ಯ ದೇಶಕ್ಕೆ ತೆರಳಿದರು. ಮರಳಿ ಬಂದನಂತರ ಮೈಸೂರು ಸರಕಾರದ ಮುದ್ರಣಾಲಯದಲ್ಲಿ ಅಧಿಕಾರಿಯಾದರು. ೧೯೨೪ರಿಂದ ೩೪ರ ವರೆಗೆ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಿ ನಿವೃತ್ತರಾದರು. ಅನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟದ ಮೇಲ್ವಿಚಾರಕರೂ ಸಲಹೆಗಾರರೂ ಆಗಿದ್ದರು. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಸಮಿತಿ, ಬೆಂಗಳೂರು ಅಶಕ್ತಪೋಷಕ ಸಭೆ, 'ಸಿವಿಕ್ ಮತ್ತು ಸೋಶಲ್ ಪ್ರೋಗ್ರೆಸ್ ಅಸೋಸಿಯೇಶನ್', 'ನ್ಯಾಶನಲ್ ವಾರ್ ಫ್ರಂಟ್', ಇಂಗ್ಲೀಷ್-ಕನ್ನಡ ನಿಘಂಟು ಸಮಿತಿ ಮುಂತಾದ ವಿವಿಧ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದರು. ೧೯೦೭-೮ರಲ್ಲಿ ಒಕ್ಕಲಿಗರ ಸಂಘದ ಕಾರ್ಯದರ್ಶಿಯಾಗಿದ್ದರು. ಕೆಲಕಾಲ 'ಒಕ್ಕಲಿಗ' ಪತ್ರಿಕೆಯ ಕಾರ್ಯವೂ ಇವರ ಮೇಲಿತ್ತು.

ಗ್ರಂಥಗಳು : ಅಭಿವೃದ್ಧಿಸಂದೇಶ (ರ. ೧೯೨೧), ಮುದ್ರಣ ಕಸಬು (ಅ. ೧೯೧೫).

ಲಕ್ಷ್ಮೀನಾರಣಪ್ಪ, ತಮ್ಮಯ್ಯ,ನಂದಳಿಕೆ (ಮುದ್ದಣ)

ಜ : ೨೪-೧-೧೮೭೦ ಮ:೧೫-೨-೧೯೦೧

ಉಡುಪಿ ತಾಲೂಕಿನ ನಂದಳಿಕೆ. ಅಲ್ಲಿಯೇ ವಿದ್ಯಾಭ್ಯಾಸ ಪ್ರಾರಂಭವಾದದ್ದು.

ಆರ್ಥಿಕ ಅನಾನುಕೂಲತೆಯಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಉಡುಪಿಯ ಬೋರ್ಡ್ ಸ್ಕೂಲಿನಲ್ಲಿ ೧೮೮೯ (ಮೇ ತಿಂಗಳು)ರಲ್ಲಿ ವ್ಯಾಯಾಮ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಚಿಕ್ಕಂದಿನಿಂದಲೂ ಕಾವ್ಯವ್ಯಾಸಂಗದಲ್ಲಿ ಆಸಕ್ತಿಯುಳ್ಳವರಾದ ಇವರು ಹಳಗನ್ನಡ ಸಾಹಿತ್ಯದ ಜೊತೆಗೆ ಸಂಸ್ಕೃತ, ಮಲೆಯಾಳಿ, ಮರಾಠಿ ಹಾಗೂ ಇಂಗ್ಲೀಷ್ ಭಾಷಾಭ್ಯಾಸವನ್ನೂ ಸ್ವಪರಿಶ್ರಮದಿಂದ ಮಾಡಿದರು. ೧೮೯೨ರಿಂದ ಎರಡು ವರ್ಷ ಕುಂದಾಪುರದಲ್ಲಿದ್ದು ಮತ್ತೆ ಉಡುಪಿಗೆ ಬಂದು ಕ್ರಿಶ್ಚನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ೧೮೯೯ (ಫೆಬ್ರುವರಿ)ರವರೆಗೆ ಕೆಲಸ ಮಾಡಿದರು.

೧೮೯೪ರಲ್ಲಿ 'ಮುದ್ದಣ' ಕಾವ್ಯನಾಮದಿಂದ ಬರೆದು ಕಳುಹಿದ 'ರಾಮಾಶ್ವಮೇಧ'ವೆಂಬ ಅಸದೃಶವಾದ ಪ್ರೌಢಗದ್ಯಕಾವ್ಯ 'ಕರ್ನಾಟಕ ಕಾವ್ಯಕಲಾನಿಧಿ'ಯಲ್ಲಿ ಕ್ರಮಶಃ ಪ್ರಕಟವಾಗಿ ನಂದಳಿಕೆಯವರಿಗೆ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಚಿರಂತನವಾದ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿತು.

ಇವರು ಕ್ಷಯರೋಗಕ್ಕೆ ಬಲಿಯಾಗಿ ತಮ್ಮ ಪೂರ್ವ ವಯಸ್ಸಿನಲ್ಲಿಯೇ ಮರಣ ಹೊಂದಿದರು. ಮರಣದ ಪೂರ್ವದಲ್ಲಿ 'ಗೋದಾವರಿ' ಎಂಬ ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿದ್ದರಂತೆ.

ಗ್ರಂಥಗಳು : ಅದ್ಭುತರಾಮಾಯಣಂ (ಅ), ಕುಮಾರವಿಜಯ (ಅ), ಭಗವದ್ಗೀತೆ (ಅ), ರತ್ನಾವಳಿಕಲ್ಯಾಣ (ಅ), ರಾಮಾಶ್ವಮೇಧ, ಶ್ರೀರಾಮಪಟ್ಟಾಭಿಷೇಕಂ, ಶೇಷರಾಮಾಯಣ (ಅ).

ಶಾಮಾಶಾಸ್ತ್ರೀ, ಆರ್., ಪಿಎಚ್.ಡಿ., ಎಂ.ಆರ್.ಎ.ಎಸ್ :

ಜ : ೧೮೭೦ ಮ : ೨೩-೧-೧೯೪೪

ಮೈಸೂರು ಸಂಸ್ಥಾನದ ರುದ್ರಪಟ್ಟಣ. ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಪ್ರೌಢವ್ಯಾಸಂಗಮಾಡಿ ೧೮೯೯ರಲ್ಲಿ ಬಿ.ಎ. ಪದವೀಧರರಾದರು. ಪ್ರಾರಂಭದಲ್ಲಿ ಅಂದಿನ ದಿವಾಣರಾಗಿದ್ದ ಕೆ.ಶೇಷಾದ್ರಿ ಅಯ್ಯರರ ಕಾರ್ಯದರ್ಶಿಗಳಾಗಿದ್ದು ತುಸು ದಿನಗಳಲ್ಲಿಯೇ ವಿಶ್ವವಿದ್ಯಾಲಯದ ಅಧ್ಯಾಪಕ ವರ್ಗವನ್ನು ಸೇರಿದರು. ಮುಂದೆ ಗವರ್ನಮೆಂಟ್ ಓರಿಯೆಂಟಲ್ ಲೈಬ್ರರಿಯಲ್ಲಿ ಸಂಶೋಧಕರಾದ ಬಳಿಕ ಇವರ ಪಾಂಡಿತ್ಯ ಪ್ರಭಾವವು ದೇಶವಿದೇಶಗಳಲ್ಲಿ ಪ್ರಚಾರಗೊಂಡಿತು. ೧೯೨೧ರಲ್ಲಿ ಕೌಟಿಲೀಯ ಅರ್ಥಶಾಸ್ತ್ರವನ್ನು ಇಂಗ್ಲೀಷಿಗೆ ಭಾಷಾಂತರಿಸಿ ಅಮೋಘವಾದ ಕಾರ್ಯವನ್ನು ನಿರ್ವಹಿಸಿದರು. ತಮ್ಮ ವಿದ್ವತ್ಪೂರ್ಣವಾದ ಅನೇಕ ಲೇಖನಗಳಿಂದ ಪ್ರಾಚೀನ ವೈದಿಕ ವಾಙ್ಮಯದ ಮೇಲೆ ಹೊಸಬೆಳಕು ಬೀರಿದರು. ರಾಯಲ್ ಏಶಿಯಾಟಿಕ್ ಸಂಘದ ಕ್ಯಾಂಬೆಲ್ ಸುವರ್ಣ ಪದಕವನ್ನೂ, ಅರ್ಥಶಾಸ್ತ್ರವಿಶಾರದ, ವಿದ್ಯಾಲಂಕಾರ ಇತ್ಯಾದಿ ಪ್ರಶಸ್ತಿಗಳನ್ನೂ ಇವರು ಸಂಪಾದಿಸಿದ್ದರು. ಡಾ. ಶಾಮಾಶಾಸ್ತ್ರಿಗಳು ಕಲಕತ್ತಾ

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಬೋಧಕರೂ, ಬೆಂಗಳೂರು ಗವರ್ನಮೆಂಟ್ ಕಾಲೇಜಿನ ಮುಖ್ಯಾಧ್ಯಾಪಕರೂ, ಪ್ರಾಚ್ಯವಿದ್ಯಾಶಾಖೆಯ ಮುಖ್ಯಾಧಿಕಾರಿಗಳೂ ಆಗಿ ಕೆಲಸಮಾಡಿದರು.

ಗ್ರಂಥಗಳು : ಪರಿಷ್ಕೃತ: ಅಕ್ರೂರಚರಿತ್ರೆ (ಸೋಮನಾಥ ವಿಕೃತ; ೧೯೨೩), ಉದ್ಭಟಕಾವ್ಯ (ಸೋಮರಾಜ ಕವಿಕೃತ; ೧೯೨೧), ಕನ್ನಡ ಮಹಾಭಾರತ-ವಿರಾಟಪರ್ವ (ಕುಮಾರವ್ಯಾಸ ಕವಿಕೃತ; ೧೯೨೨), ಕನ್ನಡ ಮಹಾಭಾರತ--ಉದ್ಯೋಗಪರ್ವ (ಕುಮಾರವ್ಯಾಸ ಕವಿಕೃತ; ೧೯೨೦), ಕಂಠೀರವ ನರಸರಾಜವಿಜಯ (ಗೋವಿಂದವೈದ್ಯ ಕವಿಕೃತ, ೧೯೨೬), ಕೆಳದಿನೃಪವಿಜಯಂ (ಲಿಂಗಣ್ಣ ಕವಿಕೃತ; ೧೯೨೧), ಜಗನ್ನಾಥವಿಜಯ (ರುದ್ರಭಟ್ಟ ಕವಿಕೃತ; ೧೯೨೩), ಧರ್ಮಾಮೃತಂ-ಭಾಗ ೧ (ನಯಸೇನಕವಿಕೃತ, ೧೯೨೪), ಧರ್ಮಾಮೃತಂ-ಭಾಗ ೨ (ನಯಸೇನ ಕವಿಕೃತ; ೧೯೨೬).

ಶೇಷಗಿರಿ, ಜನಾರ್ದನ, ಕೊಣ್ಣೂರ, ಬಿ.ಎ.

ಜ: ಸು. ೧೮೭೦

ಗೋಕಾಕ ತಾಲೂಕಿನ ಕೊಣ್ಣೂರ. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿ ಮುಂಬೈ ಸರಕಾರದ ವಿದ್ಯಾಖಾತೆಯನ್ನು ಸೇರಿದರು. ಬೆಳಗಾವಿ, ವಿಜಾಪುರ ಮೊದಲಾದ ಕಡೆಗೆ ಮಾಧ್ಯಮಿಕಶಾಲಾಶಿಕ್ಷಕರಾಗಿ ಕೆಲಸಮಾಡಿದರು. 'ಭಾಷಾಸೇವಕ' (ವಿಜಾಪುರ) ಎಂಬ ಮಾಸಪತ್ರಿಕೆಯನ್ನು ಕೆಲಕಾಲ ನಡೆಸಿದರು.

ಗ್ರಂಥ :ಕೇಡು ತಂದ ಉಂಗುರ (ಕಾಲಿದಾಸ ಕವಿಯ 'ಶಾಕುಂತಲ' ನಾಟಕದ ರೂಪಾಂತರ; (ಇ. ೧೯೨೦)

ವೆಂಕಟನಾರಣಪ್ಪ, ಬೆಳ್ಳಾವೆ, ಎಂ.ಎ.

ಜ: ೧೮೭೧ ಮ : ೩-೮-೧೯೪೩

ಬೆಂಗಳೂರು. ವಿಜ್ಞಾನಶಾಸ್ತ್ರದ ಅಧ್ಯಾಪನವು ಇವರ ವ್ಯವಸಾಯಕ್ಷೇತ್ರವಾಗಿದ್ದರೂ, ತಮ್ಮ ಕನ್ನಡನಿಷ್ಠೆ ಹಾಗೂ ಕರ್ತವ್ಯಬುದ್ಧಿಯಿಂದ ಹೊಸಗನ್ನಡದ ಪ್ರಗತಿಗಾಗಿ ಬಹುಮೂಲ್ಯ ಸೇವೆಯನ್ನು ಸಲ್ಲಿಸಿದರು.೧೯೧೮ರಲ್ಲಿ ನಂಗಪುರ. ವೆಂಕಟೇಶಅಯ್ಯಂಗಾರ್ ಅವರ ಸಹಾಯದಿಂದ 'ವಿಜ್ಞಾನ' ಎಂಬ ಮಾಸಪತ್ರಿಕೆಯನ್ನು ಕೆಲಕಾಲ ನಡೆಸಿದರು. ಇವರು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಪ್ರಥಮ ಅಧ್ಯಕ್ಷರು; ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರೂ ಆಗಿದ್ದರು. ಕೋಶಾಧಿಕಾರಿ, ಕಾರ್ಯದರ್ಶಿ, ಪರಿಷತ್ ಪತ್ರಿಕೆಯ ಸಂಪಾದಕ ಮುಂತಾದ ಸ್ಥಾನಗಳಲ್ಲಿ ಕೆಲಸಮಾಡಿ ಪರಿಷತ್ತಿನ ಬಲವನ್ನು ಹೆಚ್ಚಿಸಿದರು. ಪಠ್ಯಪುಸ್ತಕ ಸಮಿತಿ, ವಿಶ್ವವಿದ್ಯಾನಿಲಯ ಸಿನೇಟ್, ವಿಶ್ವವಿದ್ಯಾನಿಲಯ ಗ್ರಂಥ ಪ್ರಕಟನ ಸಮಿತಿಗಳಲ್ಲಿ ಅನೇಕ ವರ್ಷ ಸಭಾಸದಸ್ಯರಾಗಿದ್ದರು. ಶ್ರೀರಾಮಕೃಷ್ಣ ವಿದ್ಯಾರ್ಥಿನಿಲಯ, ಬಸವನಗುಡಿ ಕಂದಾಯದಾರರ ಸಂಘ, ಸಹಕಾರಿ

ಸಂಘ ಹಾಗೂ ಇನ್ನಿತರ ಕೆಲವು ಧರ್ಮದರ್ಶಿ ಸಮಿತಿಗಳ ಅಧ್ಯಕ್ಷರಾಗಿದ್ದರು. ಬಸವನಗುಡಿ ಯೂನಿಯನ್ ವಿಹಾರಸಂಸ್ಥೆಗೆ ಅನೇಕ ವರ್ಷ ಕಾರ್ಯದರ್ಶಿಗಳಾಗಿದ್ದರು. ಅಲ್ಲಿಯ ಮಲ್ಲಿಕಾರ್ಜುನ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಹತ್ತಾರು ವರ್ಷ ಶ್ರಮಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ-ಇಂಗ್ಲೀಷ್‌ಕೋಶದ ಪ್ರಧಾನ ಸಂಪಾದಕರು (೧೯೨೯-೪೩). ಬೆಂಗಳೂರಿನ ಸಾರ್ವಜನಿಕರು ತಾ|| ೧-೧೧-೧೯೪೧ರಂದು ಮಾನಪತ್ರವನ್ನು ಸಮರ್ಪಿಸಿ ಇವರನ್ನು ಗೌರವಿಸಿದರು. ಇವರು ಕನ್ನಡ ಸಾಹಿತ್ಯ ಸಮ್ಮೇಲನದ ೨೩ನೇ ಅಧಿವೇಶನದ (ಜಮಖಂಡಿ, ೧೯೩೭) ಅಧ್ಯಕ್ಷರಾಗಿದ್ದರು.

ಗ್ರಂಥಗಳು : ಗುಣಸಾಗರ (ಇ, ೧೯೩೧), ಜೀವವಿಜ್ಞಾನ (ಜ)

ಪರಿಷ್ಕೃತ : ಪಂಪಭಾರತ, ಪಂಪರಾಮಾಯಣ, ಶಬ್ದಮಣಿದರ್ಪಣ, ಸೋಮೇಶ್ವರಶತಕ, ಕುಸುಮಾವಳಿ.

ಈಶ್ವರಭಟ್ಟ, ಜತ್ತಿ

ಜ : ೧೮೭೨ ಮ : ೧೯೪೫

ದಕ್ಷಿಣ ಕನ್ನಡ ಜಿಲ್ಲೆಯ ಬಾಯಾರು. ಇವರು ಯಕ್ಷಗಾನವಿಶಾರದರೂ ಹರಿಕಥಾವಿದ್ವಾಂಸರೂ ಆಗಿದ್ದರು.

ಗ್ರಂಥಗಳು : ಕೀರ್ತನತರಂಗ (ಅ. ೧೯೩೮), ವರಾಹ ಚರಿತ್ರಮ್ (ಅ,೧೯೪೦), ಸಂಪೂರ್ಣ ರಾಮಾಯಣ (ಧಾ.೧೯೩೮).

ಕರಿಬಸವಶಾಸ್ತ್ರೀ, ರುದ್ರಶಾಸ್ತ್ರೀ, ನಂಜನಗೂಡು, ಆಸ್ಥಾನ ವಿದ್ವಾನ್

ಜ : ೧೮೭೨ ಮ : ೯-೫-೧೯೨೩

ಮೈಸೂರು ಜಿಲ್ಲೆಯ ನಂಜನಗೂಡು. ಚಿಕ್ಕಂದಿನಲ್ಲಿಯೇ ಪಿತೃವಿಯೋಗವಾಗಿ ಮೈಸೂರಿಗೆ ಬಂದು ಯಜಮಾನ ವೀರಸಂಗಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಕೊನೆಯ ಕೆಲವು ವರ್ಷಗಳನ್ನು ಭಾಷೋಜ್ಜೀವಿನಿ ಪಾಠಶಾಲೆಯಲ್ಲಿ ವಿದ್ಯಾರ್ಥಿಯಾಗಿ ಕಳೆದರು. ಶಿಕ್ಷಣ ಮುಗಿದೊಡನೆ, ವೀರಸಂಗಪ್ಪನವರೇ ಹೊರಡಿಸಿದ 'ಮೈಸೂರ್ ಸ್ಟಾರ್' (೧೮೮೮) ಪತ್ರಿಕೆಯ ಉಪಸಂಪಾದಕರಾದರು. ಪ್ರಾಚೀನ ಗ್ರಂಥಪ್ರಕಾಶನದ ಉದ್ದೇಶದಿಂದ 'ವೀರಶೈವ ಗ್ರಂಥ ಪ್ರಕಾಶಿಕಾ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿಯೂ, 'ವೀರಶೈವ ಗ್ರಂಥ ಪ್ರಸಾರಕ ಮಂಡಲ'ದ ಪ್ರಮುಖ ಸಭಾಸದರಾಗಿಯೂ ವಿಶೇಷ ಕಾರ್ಯ ಮಾಡಿದರು.

ಗ್ರಂಥಗಳು :ಕರ್ನಾಟಕ ಶಬ್ದಮಂಜರಿ (ವಿರಕ್ತತೋಂಟದಾರ್ಯ ಕೃತ ಗ್ರಂಥಕ್ಕೆ ಟೀಕೆ) (ದ. ೧೮೯೧) ಚನ್ನಬಸವೇಶವಿಜಯಂ (ವಿರೂಪಾಕ್ಷಪಂಡಿತ ಕೃತ ಚನ್ನಬಸವಪುರಾಣದ ಗದ್ಯಾನುವಾದ) (ಧ, ೧೯೦೬), ಪಂಡಿತಾರಾಧ್ಯ ಚರಿತ್ರೆ (ಗುರುರಾಜಕವಿಕೃತ ಸಂಸ್ಕೃತ

ಗ್ರಂಥಕ್ಕೆ ಟೀಕೆ) (ಧ.ಚ-೧೯೦೮) ಬಸವರಾಜವಿಜಯಂ (ಷಡಕ್ಷರಿಕೃತ ವೃಷಭೇಂದ್ರವಿಜಯ ಹಾಗೂ ಭೀಮಕವಿಕೃತ ಬಸವಪುರಾಣದ ಗದ್ಯಾನುವಾದ) (ಧ-ಚ), ಬಸವೇಶ ಜನನ (ಧ-ಚ), ವೀರಶೈವ ಪೂಜಾವಿಧಿ (ಧ), ಶತಕತ್ರಯಂ (ಅ), ಸ್ತುತಿಮುಕ್ತಾವಳಿ (ಪ್ರಾಚೀನ ಕವಿಗಳ ಪ್ರಾರ್ಥನಾಗೀತ ಸಂಗ್ರಹ) (ಅ. ೧೯೦೮).

ಪರಿಷ್ಕೃತ : ಕನ್ನಡ : ಕೊಟ್ಟೂರು ಬಸವೇಶಪುರಾಣವು (೧೮೯೪), ತತ್ತ್ವಪ್ರಕಾಶಿಕಾ, ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲವು, ಪಾಲ್ಕುರಿಕೆ ಸೋಮೇಶ್ವರ ಪುರಾಣ, ರಕ್ಷಾಶತಕಂ, ರೇವಣಸಿದ್ಧೇಶ್ವರ ಪುರಾಣ, ಶತಸೂತ್ರರತ್ನ, ಶಂಕರಲಿಂಗಕಂದಂ, ಶಿವಯೋಗಪ್ರದೀಪಿಕಾ, ಸಟೀಕ ವೃಷಭೇಂದ್ರವಿಜಯ, ಸೌಂದರಪುರಾಣ (೧೯೦೯).

ಪರಿಷ್ಕೃತ : ಸಂಸ್ಕೃತ : ವೀರಶೈವದೀಕ್ಷಾವಿಧಿ, ವೀರಶೈವಧರ್ಮಶಿರೋಮಣಿ (೧೯೦೮).

ಕೃಷ್ಣಸ್ವಾಮಿ ಅಯ್ಯಂಗಾರ್, ರಾಘವಾಚಾರ್ಯ, ದೇವನಹಳ್ಳಿ

ಜ : ೧೮೭೨ ಮ : ೧೯೨೦

ಬೆಂಗಳೂರು. ಸಂಸ್ಕೃತದ ಪರಿಚಯವನ್ನು ಮನೆಯಲ್ಲಿಯೇ ಮಾಡಿಕೊಂಡು ಹಾಯಸ್ಕೂಲು ಸೇರಿ 'ಮ್ಯಾಟ್ರಿಕ್ಯುಲೇಶನ್' ಪರೀಕ್ಷೆಯವರೆಗೆ ಕಲಿತರು. ಅಭಿನಯ ನಿಪುಣರಾಗಿದ್ದ ಇವರು ಮೈಸೂರು ಚಾಮರಾಜೇಂದ್ರ ನಾಟಕ ಸಂಘದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದರು. ಹಾಗೂ ಚಾಮರಾಜ ಒಡೆಯರೊಂದಿಗೆ ಕಲಕತ್ತೆಗೆ ಹೋಗಿದ್ದ (೧೮೯೪) ನಾಟಕ ಮಂಡಲಿಯಲ್ಲಿ ಪ್ರಮುಖರಾಗಿದ್ದರು. ಅನಂತರ ಸರಕಾರೀ ನೌಕರಿಯಲ್ಲಿ ಸೇರಿ 'ಎಕ್ಸೈಜ' ಇಲಾಖೆ, ಮುನ್ಸೀಫ ಕೋರ್ಟುಗಳಲ್ಲಿ ಕೆಲಸಮಾಡಿದರು. ನೌಕರಿಯಲ್ಲಿದ್ದಾಗಲೂ ವರದಾಚಾರ್ಯರ ಕಂಪನಿಯಲ್ಲಿ ಆಗಾಗ್ಗೆ ರತ್ನಾವಳಿ, ಶಕುಂತಲಾ, ಗುಲೇಬಕಾವಲಿ ಮುಂತಾದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಆಯುರ್ವೇದವು ಇವರ ಪ್ರೀತಿಯ ಶಾಸ್ತ್ರವಾಗಿದ್ದು ಮೈಸೂರಿನಲ್ಲಿ ಅನೇಕ ವರ್ಷಗಳವರೆಗೆ ಆಯುರ್ವೇದ ಔಷಧಾಲಯವೊಂದನ್ನು ನಡೆಸಿದ್ದರು. ನಂಜನಗೂಡಿನ ಸುಪ್ರಸಿದ್ಧ ದಂತಮಂಜನವನ್ನು ಪ್ರಚಾರಕ್ಕೆ ತಂದವರು ಇವರೇ.

ಗ್ರಂಥಗಳು : ಗಣಿತಸಂಜೀವಿನಿ (ಖ.೧೯೦೩).

ಅಪ್ರಕಟಿತ : ತಾರಾಶಶಾಂಕ, ಸ್ವರ್ಣಲತ.

ಜಗದೀಶಶಾಸ್ತ್ರೀ, ವೀರೇಶ್ವರಸ್ವಾಮಿ, ನಾಲ್ವಾರ

ಜ : ೧೮೭೨

ಕಲಬುರ್ಗಿ ಜಿಲ್ಲೆಯ ನಾಲ್ವಾರ ಗ್ರಾಮ. ಹುಟ್ಟೂರಲ್ಲಿಯೇ ಪ್ರಾರಂಭಿಕ ವಿದ್ಯಾಭ್ಯಾಸ. ಕೆಲಕಾಲ ಕಲಬುರ್ಗಿ, ಬಳ್ಳಾರಿಯಲ್ಲಿ ಕನ್ನಡ-ಸಂಸ್ಕೃತವನ್ನಭ್ಯಸಿಸಿ, ಬೆಂಗಳೂರು ಮಾಮೂಲ್‌ಪೇಟೆಯ ಗಂಜಾಂ ಮಠದಲ್ಲಿ ಶ್ರೀನಿವಾಸ ಶಾಸ್ತ್ರಿಗಳ ಬಳಿಯಲ್ಲಿ ಪ್ರೌಢವ್ಯಾಸಂಗಕ್ಕೆ ನಿಂತರು. ೧೮೯೬ರಲ್ಲಿ ಕಾಶಿಗೆ ತೆರಳಿ ನ್ಯಾಯಶಾಸ್ತ್ರ, ವ್ಯಾಕರಣಶಾಸ್ತ್ರದಲ್ಲಿ

ಪ್ರಶಸ್ತಿ ಪಡೆದು ನಾಲ್ಕು ವರ್ಷಗಳ ನಂತರ ಸೊಲ್ಲಾಪುರದ ವೀರಶೈವ ವಾರದ ಸಂಸ್ಕೃತಪಾಠಶಾಲೆಯಲ್ಲಿ ಪ್ರಧಾನಾಧ್ಯಾಪಕರಾದರು. ತಾರೀಖು ೧೧-೨-೪೩ರಿಂದ ಅಲ್ಲಿಯೇ ಚನ್ನವೀರ ಶಿವಾಚಾರ್ಯ ರಿಂದ ಸ್ಥಾಪಿತವಾದ ವೀರಶೈವ ಗುರುಕುಲದ ಪ್ರಧಾನಾಧ್ಯಾಪಕರಾದರು.

'ಸಾಹಿತ್ಯರತ್ನ', 'ಕವಿಪತಿ', 'ಕವಿಕಂಠೀರವ', 'ಶಿವಾದ್ವೈತ ವಿದ್ಯಾ ಭೂಷಣ' ಇತ್ಯಾದಿ ಪ್ರಶಸ್ತಿಗಳನ್ನು ಪಡೆದ ಶಾಸ್ತ್ರಿಗಳ ೮೦ನೆಯ ವರ್ಷದ ಹುಟ್ಟುಹಬ್ಬವು ಸಾರ್ವಜನಿಕಗಿ ಸೊಲ್ಲಾಪುರದಲ್ಲಿ ನೆರವೇರಿತು. ಇವರು ಕಾಶೀಮಹಾಪೀಠದ ಆಸ್ಥಾನವಿದ್ವಾಂಸರು.

ಗ್ರಂಥಗಳು : ಶ್ರೀಮಜ್ಜಗದ್ಗುರು ಶಿದ್ಧಲಿಂಗವಿಜಯಮಹಾಪುರಾಣ (ಅ), ಶ್ರೀಮದ್ವಾರದ ಮಲ್ಲಪ್ಪಾರ್ಯರ ಅಷ್ಟೋತ್ತರಶತನಾಮಾವಲಿ (ಅ), ಶ್ರೀರುದ್ರಸೂಕ್ತ (ಧ).

ಸಂಸ್ಕೃತ : ಶ್ರೀರುದ್ರ, ಸಂಕ್ಷಿಪ್ತಶಿವಪೂಜಾವಿಧಿ, ಚನ್ನಬಸವವಿಜಯ, ಶ್ರೀಮಜ್ಜಗದ್ಗುರು ಶಿದ್ಧಲಿಂಗಶಿವಾಚಾರ್ಯ ಅಷ್ಟೋತ್ತರಶತನಾಮಾವಳಿ.

ಮರಾಠಿ : ಶ್ರೀರೇಣುಕವಿಜಯ, ವೀರಶೈವಾಂಚೆ ಸ್ಥಿತಿ, ಶ್ರೀಸಿದ್ಧರಾಮೇಶ್ವರಪುರಾಣ.

ಅಪ್ರಕಟಿತ : ಶ್ರೀಶೈಲಮಹಾತ್ಮೆ, ಶ್ರೀಶರಣಬಸವೇಶ್ವರವಿಜಯ.

ನಾರಾಯಣ, ರಾಮಪ್ಪ, ಕಾಮತ, ಬಂಗ್ಲೇಕರ

ಜ : ೧-೩-೧೮೭೨ ಮ : ೫-೬-೧೯೧೮

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ. ಸಮಾಜಸುಧಾರಕರಾದ ಇವರು ಸಾರಸ್ವತ ಬ್ರಾಹ್ಮಣರ ಐಕ್ಯವೃದ್ಧಿಗಾಗಿ ಬಹು ಪರಿಶ್ರಮಿಸಿದರು. ಕನ್ನಡ ಸಾಹಿತ್ಯದ ವ್ಯಾಸಂಗದ ಜೊತೆಗೆ ಇಂಗ್ಲೀಷ್, ಮರಾಠಿಭಾಷಾಪರಿಚಯವನ್ನು ಮಾಡಿಕೊಂಡರು.

ಸ್ವತಂತ್ರ ನಾಟಕ ಮಂಡಲಿಯೊಂದನ್ನು ಏರ್ಪಡಿಸಿ ತಾವು ರಚಿಸಿದ ನಾಟಕಗಳನ್ನು ರಂಗಭೂಮಿಯ ಮೇಲೆ ತರುತ್ತಿದ್ದರು. ಕೋಕಿಲಕಂಠರೆಂದು ಜಿಲ್ಲೆಯ ಖ್ಯಾತಿವೆತ್ತ ಗಾಯಕರಾದ ಇವರೇ ಎಲ್ಲ ನಾಟಕಗಳಲ್ಲಿಯೂ ಮುಖ್ಯಪಾತ್ರಧಾರಿ. ಕನ್ನಡ, ಕೊಂಕಣಿಯಲ್ಲಿ ಅದ್ಭುತ ಭಾಷಣಕಾರರು. ಮಹಾರಸಿಕರೂ ಶ್ರೀಮಂತ ಕುಲದವರೂ ಆದ ಇವರು ಶ್ರೀ ಮಂಜೇಶ್ವರ ಗೋವಿಂದ ಪೈ ಅವರ ಭಾವ.

ಗ್ರಂಥಗಳು: ಸಂಗೀತಚಂದ್ರಹಾಸ, ಸಂಗೀತದ್ರೌಪದೀವಸ್ತ್ರಹರಣ, ಸಂಗಿತಧ್ರುವಚರಿತ್ರ, ಸಂಗೀತನಳದಮಯಂತಿ, ಸಂಗೀತಪ್ರಹ್ಲಾದ ಚರಿತ್ರ, ಸಂಗೀತಪಾರ್ವತೀಪರಿಣಯ, ಸಂಗೀತಹರಿಶ್ಚಂದ್ರ (ಎಲ್ಲವೂ ನಾಟಕಗಳು).

ಅಪ್ರಕಟಿತ : ಹಲವು ದೇವರನಾಮಗಳು.

ರಾಘವೇಂದ್ರ, ಸುಬ್ಬರಾವ್, ಮೂಡಕಟ್ಟೆ

ಜ : ೧೮೭೨ ಮ : ೧೯೩೫

ದಕ್ಷಿಣ ಕನ್ನಡ ಜಿಲ್ಲೆಯ ಮೂಡಕಟ್ಟೆ. ಬಿ.ಎ. ಪದವೀಧರರಾಗಿ ಕಂದಾಯ ಶಾಖೆಯನ್ನು ಸೇರಿದರು. ಉತ್ತರಕರ್ನಾಟಕದ ಜಿಲ್ಲೆಗಳಲ್ಲಿ ಬೇರೆಬೇರೆ ಹುದ್ದೆಯಲ್ಲಿ ಕೆಲಸಮಾಡಿ ಕೊನೆಗೆ ಮಾಮಲೇದಾರರಾದರು. ಮರಾಠಿಭಾಷಾಪ್ರವೀಣರು. ಇವರು ರಚಿಸಿದ 'ಕನ್ನಡ ಜ್ಞಾನೇಶ್ವರಿ'ಗೆ ಮೈಸೂರು ಮಹಾರಾಜರಿಂದ ೫೦೦ ರೂ. ಬಹುಮಾನ ದೊರೆತಿದೆ.

ಗ್ರಂಥಗಳು : ಗುರುಚರಿತ್ರೆ (ಅ), ಸಾರ್ಥ ಕನ್ನಡ ಜ್ಞಾನೇಶ್ವರಿ (ಮರಾಠಿ ಗ್ರಂಥದ ಭಾಷಾಂತರ) (ನ.೧೯೩೨), ಹಿತೋಪದೇಶ (ಅ).

ವೆಂಕಟಾಚಾರ್ಯ, ತಿರುಮಲೆ, ವಿದ್ವಾನ್.

ಜ : ೧೮೭೩ ಮ : ೧೯೧೮

ಚಿಕ್ಕಬಳ್ಳಾಪುರ. ಅಲ್ಲಿಯ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರೂ, ಘನವಿದ್ವಾಂಸರೂ, ಉದ್ದಾಮ ಪಂಡಿತರೂ ಆಗಿದ್ದ ರಾಜಗೋಪಾಲಾಚಾರ್ಯರು ಇವರ ತಂದೆ. ಅವರ ಬಳಿಯಲ್ಲಿಯೇ ಸಂಸ್ಕೃತ ವ್ಯಾಸಂಗಮಾಡಿ, ಅದೇ ಪಾಠಶಾಲೆಯಲ್ಲಿ ಎರಡು ವರ್ಷ ಮುಖ್ಯೋಪಾಧ್ಯಾಯರಾಗಿದ್ದು [illegible]ರ ಸುಮಾರಿಗೆ ಬೆಂಗಳೂರಿನ ಸಿದ್ದಿಕಟ್ಟೆಯ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಉಪಾಧ್ಯಾಯರಾದರು. ಹಾಗೂ ಅದೇ ಸಮಯದಲ್ಲಿ ಸ್ಥಾಪಿತವಾಗಿದ್ದ ನಾಟಕಶಿರೋಮಣಿ ವರದಾಚಾರ್ಯರ 'ಬೆಂಗಳೂರು ಯೂನಿಯನ್' ಎಂಬ ನಾಟಕಸಂಘವನ್ನು ಸೇರಿ, ನಟರೂ ಚಿತ್ರಕಾರರೂ ಕವಿಗಳೂ ಆಗಿ ಕೆಲಸಮಾಡಿದರು.

ಗ್ರಂಥಗಳು : ಅನಸೂಯೆ (ಅ), ಕಲಾನಾಥ (ಇ), ಕೃಷ್ಣಲೀಲೆ (ಅ), ಗಾನರಾಮಾಯಣ, ಚಂದ್ರಾವಳಿ (ಅ), ಪ್ರಹ್ಲಾದಚರಿತ್ರೆ (ಅ), ಭೋಜಪ್ರಬಂಧ (ಅ).*

ಕೃಷ್ಣರಾಯ, ಹನುಮಂತರಾಯ, ಮುದವೀಡು

ಜ: ೨೪-೭-೧೮೭೪ ಮ : ೭-೯-೧೯೪೭

ಧಾರವಾಡ ಜಿಲ್ಲೆಯ ರಾಣೆಬೆನ್ನೂರು. ತಮ್ಮ ಏಳನೆಯ ವರ್ಷದಲ್ಲಿ ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿ ಕೆಲಕಾಲದನಂತರ ಕಾರವಾರಕ್ಕೆ ಹೋಗಿ ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸಿದರು. ಪರಿಸ್ಥಿತಿಗನುಗುಣವಾಗಿ ಆಗಲೇ ಮರಾಠಿಯನ್ನೂ ಕಲಿಯಬೇಕಾಯಿತು. ಸಾರ್ವಜನಿಕ ಕಾರ್ಯದ ಹುಮ್ಮಸ್ಸುಳ್ಳವರಾದ ಇವರು ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟುಕೊಟ್ಟು ಸುಮಾರು ೧೮೯೨ರಿಂದ ಧಾರವಾಡದಲ್ಲಿ

---

* ಶಿರಹಟ್ಟಿಯ ಮಹಾಲಕ್ಷ್ಮೀ ಪ್ರಾಸಾದಿಕ ನಾಟಕ ಮಂಡಳಿಯವರು ಮೈಸೂರು ಮಹಾರಾಜರ ಸಮ್ಮುಖದಲ್ಲಿ ಅಭಿನಯಿಸಿದಾಗ ಈ ನಾಟಕಕ್ಕೆ ೨೦೦೦ ರೂಪಾಯಿಗಳ ಗೌರವಧನ ದೊರೆಯಿತು.

ಸಾರ್ವಜನಿಕ ರಂಗಕ್ಕಿಳಿದರು. ಲೋಕಮಾನ್ಯ ಟಿಳಕರ ಅನುಯಾಯಿಯಾದುದರಿಂದ ಸಾರ್ವಜನಿಕ ಗಣೇಶೋತ್ಸವದ ಉತ್ಸಾಹಿಕೆಲಸಗಾರರಾದರು. 'ಧಾರವಾಡವೃತ್ತ'ವೆಂಬ ಮರಾಠಿ ಪತ್ರಿಕೆಗೆ ಕೆಲದಿನ ಸಂಪಾದಕರಾಗಿದ್ದರು. 'ಕರ್ನಾಟಕವೃತ್ತ', 'ಧನಂಜಯ' ಮುಂತಾದ ಪತ್ರಿಕೆಗಳ ಮುಖಾಂತರ ಸುಮಾರು ೧೮೯೭ರಿಂದ ೧೯೨೯ರವರೆಗೆ ಕನ್ನಡ ಪತ್ರಿಕಾಪ್ರಪಂಚದಲ್ಲಿ ದುಡಿದರು. ವ್ಯಾಯಾಮ, ರಂಗಭೂಮಿ ಇತ್ಯಾದಿ ರಂಗದಲ್ಲಿಯೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಧಾರವಾಡ 'ಭರತಕಲೋತ್ತೇಜಕ ಮಂಡಲ'ದ ಕಾರ್ಯದರ್ಶಿ (೧೯೦೫-೭). ನಾಟ್ಯವಿಲಾಸಿಯಾಗಿ ಅನೇಕ ನಾಟಕಗಳಲ್ಲಿಯೂ 'ಚಿರಂಜೀವಿ' ಎಂಬ ಕನ್ನಡ ವಾಕ್ಚಿತ್ರದಲ್ಲಿ 'ಚಿತ್ರಗುಪ್ತ' ಭೂಮಿಕೆಯಲ್ಲಿಯೂ ಅಭಿನಯಿಸಿದವರು. ರಾಷ್ಟ್ರೀಯ ಚಳವಳಿಯಲ್ಲಿ ಹಲವಾರು ಸಲ ಕಾರಾಗೃಹವಾಸವನ್ನು ಅನುಭವಿಸಿದರಲ್ಲದೆ ಕನ್ನಡನಾಡು-ನುಡಿಯ ಜಾಗೃತಿಗಾಗಿ ಸಂತತವಾಗಿ ಪರಿಶ್ರಮಿಸಿ 'ಕನ್ನಡದ ಕೃಷ್ಣರಾಯ'ರು ಎಂಬ ಪ್ರಸಿದ್ಧಿ ಪಡೆದರು. ಶ್ರೇಷ್ಠ ವಾಗ್ಮಿಯೆಂದೂ, ಬರಹಗಾರರೆಂದೂ ಅಖಿಲ ಕರ್ನಾಟಕಕ್ಕೆ ಇವರು ಪರಿಚಿತರಾಗಿದ್ದರು. ಕರ್ನಾಟಕ ಏಕೀಕರಣದ ಆಂದೋಲನದ ಪ್ರಮುಖ ಕಾರ್ಯಕರ್ತರಲ್ಲೊಬ್ಬರು. ಬೆಳಗಾವಿಯಲ್ಲಿ ನಡೆದ ೨೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು (೧೯೩೯).

ಗ್ರಂಥಗಳು : ಚಿತ್ತೂರ ಮುತ್ತಿಗೆ (ಇ, ೧೯೦೫), ಪ್ರೇಮಭಂಗ ('ಜಯಕರ್ನಾಟಕ' ಮಾಸಪತ್ರಿಕೆಯಲ್ಲಿ ಕ್ರಮಶಃ) (ಆ. ೧೯೨೪).

ಚನ್ನಕವಿ, ಬಸವಯ್ಯ, ಕಳಕೇ ಒಡೆಯರ ಮಠ

ಜ : ೧೮೭೪ ಮ : ೫-೩-೧೯೪೬

ಕೊಪ್ಪಳ ಜಿಲ್ಲೆಯ ದ್ಯಾಂಪುರ. ಗದಗ ತಾಲೂಕು ನಾರಾಯಣಪುರದಲ್ಲಿ ಸೋದರಮಾವನ ಬಳಿಯಲ್ಲಿ ಶಿಕ್ಷಣವಾಯಿತು. ಸ್ವಪರಿಶ್ರಮದಿಂದ ಸಂಸ್ಕೃತ, ಮರಾಠಿ ಹಾಗೂ ಉರ್ದು ಕಲಿತರು. ಕ್ರಿ.ಶ. ೧೮೮೮ರಿಂದ ಕ್ರಿ.ಶ.೧೯೦೨ರ ವರೆಗೆ ದ್ಯಾಂಪುರ, ಮ್ಯಾಗೇರಿ, ಸಂಗನಹಾಳ, ಕುಕನೂರ ಮುಂತಾದ ಸ್ಥಳಗಳಲ್ಲಿ ಉಪಾಧ್ಯಾಯರಾಗಿದ್ದರು. ತದನಂತರ ಶಿವಯೋಗಮಂದಿರದ ಕುಮಾರಸ್ವಾಮಿಗಳ ಬಳಿಯಲ್ಲಿ ವೀರಶೈವ ತತ್ತ್ವಾಧ್ಯಯನ ಮಾಡಿ, ಕೀರ್ತನೆ, ಪುರಾಣಪ್ರವಚನದ ಮುಖಾಂತರ ಧರ್ಮಪ್ರಚಾರದಲ್ಲಿ ತೊಡಗಿದರು. ಧಾರವಾಡದ ಮುರುಘರಾಜೇಂದ್ರ ಬೆಳ್ಳಿಯ ಹಬ್ಬದ ಸಮಯದಲ್ಲಿ ಇವರಿಗೆ 'ಕವಿರತ್ನ' ಪ್ರಶಸ್ತಿಯು ಅರ್ಪಿತವಾಯಿತು.

ಗ್ರಂಥಗಳು : ಅನ್ನದಾನೀಶ್ವರ ಜೋಗುಳ ಪದ, ಇಲಕಲ್ಲ ಮಹಾಂತಸ್ವಾಮಿಗಳು ಚರಿತ್ರೆ, ಕಲ್ಲಿನಾಥಶತಕ, ಕಾಲಕಾಲೇಶ್ವರಶತಕ, ಕುಮಾರೇಶ್ವರಶತಕ, ಕೊಟ್ಟೂರೇಶ್ವರ ಶತಕ, ಕಂಬಳಿಹಾಳ ದೊಡ್ಡಬಸವೇಶ್ವರಪುರಾಣ, ಗವಿಸಿದ್ಧೇಶ್ವರ ಮಂಗಲಗೀತೆಗಳು, ನಲ್ನುಡಿ, ನಾಲ್ವತ್ತವಾಡ ವೀರೇಶ್ವರಪುರಾಣ, ಬಸವತ್ರಿವಿಧಿ, ಬೀಗಿತ್ತಿಯರ ಹಾಡು, ಮನೋಬೋಧೆ, ಮುಳಗುಂದ ಬಾಲಲೀಲಾಮಹಾಂತೇಶ್ವರಪುರಾಣ (ಅ), ಮಂತ್ರರಹಸ್ಯ,

ಶಿರಹಟ್ಟಿ ಫಕೀರಸ್ವಾಮಿಗಳ ಚರಿತ್ರೆ, ಸದಾಶಿವಲೀಲೆ, ಹಾನಗಲ್ಲ ಕುಮಾರಸ್ವಾಮಿಗಳ ಪುರಾಣ, ಹಾಲಕೆರೆ ಅನ್ನದಾನಿ ಮಹಾಸ್ವಾಮಿಗಳ ಪುರಾಣ, ಹುಚ್ಚೇಶ್ವರ ಪುರಾಣ, ಹೇಮರಡ್ಡಿ ಮಲ್ಲಮ್ಮನ ಪುರಾಣ.

ಜೀವಾಜಿ, ವಿಷ್ಣು, ಗೋಠೆ

ಜ : ೧೬-೧೨-೧೮೭೪

ಧಾರವಾಡ ಜಿಲ್ಲೆಯ ನರಗುಂದ. ಮಾಧ್ಯಮಿಕ ಶಿಕ್ಷಣವು ಮುಗಿದನಂತರ ಗೋಕಾವಿಯ ಮುನಿಸಿಪಾಲಿಟಿ ಕಚೇರಿಯಲ್ಲಿ ಕೆಲಕಾಲ ಕಾರ್ಯದರ್ಶಿಯಾಗಿದ್ದರು. ಅನಂತರ ಶಿಕ್ಷಣಶಾಖೆಯನ್ನು ಸೇರಿ ದಕ್ಷಿಣಭಾಗದ ಶಿಕ್ಷಣಾಧಿಕಾರಿಗಳ ಮುಖ್ಯಕರಣಿಕರಾಗಿ ನಿವೃತ್ತರಾದರು.

ಗ್ರಂಥಗಳು : ಒಡವೆಯ ಪಾಠ, ಮಾತೃಪ್ರೇಮ, ರಾಮರಕ್ಷಾಸ್ತೋತ್ರ (ಧ.೧೯೩೪), ರಾಸೆಲಾಸ್,★ ವಿಶ್ವ★ (ಜ.೧೯೦೨), ಸಂಸಾರ ಕರ್ತವ್ಯ,★ ಹಾಸ್ಯ,★ ಹೆಣ್ಣುಮಕ್ಕಳ ಆರೋಗ್ಯವಿಚಾರ

ಅಪ್ರಕಟಿತ : ಹ್ಯಾಮ್ಲೆಟ್ ನಾಟಕ, ದಾದಾಭಾಯಿಯವರ ಚರಿತ್ರೆ, ಮಂಜುಳಾ, ಮಹಾಯುದ್ಧದ ಸಂಕ್ಷಿಪ್ತ ಇತಿಹಾಸ.

ನರಸಿಂಹ, ಲಕ್ಷ್ಮಣ, ನಾಯಕ

ಜ : ೮-೧೧-೧೮೭೪ ಮ : ೧೨-೪-೧೯೪೫

ದಕ್ಷಿಣ ಕನ್ನಡ ಜಿಲ್ಲೆಯ ಕುಂಬಳೆಯ ಒಂದು ಶ್ರೀಮಂತ ಕುಟುಂಬದವರಾದ ಇವರು ಪ್ರತಿಭಾವಂತ ಲೇಖಕರಾಗಿದ್ದರು. ಕುಂಬಳೆ ಗ್ರಾಮದ ಪಟೇಲಿಕೆಯೊಂದಿಗೆ ಕೆಲವು ವರ್ಷ ಅಡಿಕೆ ಹಾಗೂ ದವಸದ ವ್ಯಾಪಾರದಲ್ಲಿ ತೊಡಗಿದ್ದರು. ಕೊನೆಗೆ ನೂಲುವ-ನೇಯುವ ವ್ಯವಹಾರವನ್ನು ಪ್ರಾರಂಭಿಸಿ, ಅದರಲ್ಲಿ ಸೋತು ಮುಂಬಯಿಗೆ ತೆರಳಿ ಕೊನೆಯವರೆಗೆ ಅಲ್ಲಿಯೇ ನೆಲೆಸಿದ್ದರು.

ಗ್ರಂಥಗಳು : ಗಜೇಂದ್ರ ಮೋಕ್ಷ ('ಪ್ರಭಾತ' ಮಾಸಪತ್ರಿಕೆಯಲ್ಲಿ), ಜನಾರ್ದನ ಕಾಳಗ ಅಥವಾ ಶಿನ್ನದಂತಾಪಹಾರ, ಪಾದುಕಾಪ್ರಹಾರ ಅಥವಾ ನರಸಯ್ಯನ ಮಾನಭಂಗ (ಆ), ಭಗವದ್ಗೀತೆಯ ಅನುವಾದ (ನ), ರಂಭಾ-ಶುಕಸಂವಾದ (ಇ), ಸತ್ಯನಾರಾಯಣ ಕಥೆ, ಹರಿಶ್ಚಂದ್ರೋಪಾಖ್ಯಾನ.

ಕೊಂಕಣಿ : ಕೃಷ್ಣಸಂಧಾನ, ಸಂಗೀತಸಾವಿತ್ರಿ, ಸಂಗೀತಮಾನಸಚರಿತ್ರೆ.

★ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನ ಪಡೆದ ಗ್ರಂಥಗಳು.

ಮಂಗೇಶರಾವ್, ಪಂಜೆ (ಕವಿಶಿಷ್ಯ)

ಜ : ೧೮೭೪ ಮ : ೨೫-೧೦-೧೯೩೭

ಮಂಗಳೂರು ಜಿಲ್ಲೆಯ ಬಂಟವಾಳದವರು. ಬಾಲ್ಯದಲ್ಲಿ ಅತ್ಯಂತ ಕಷ್ಟದಿಂದ ವಿದ್ಯಾರ್ಜನೆ ಮಾಡಿದರು. ಬಿ.ಎ. ಪದವೀಧರರಾದನಂತರ ಮಂಗಳೂರಿನ ಗವ್ನರ್ಮೆಂಟ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಅನಂತರ ಎಲ್.ಟಿ. ಪರೀಕ್ಷೆಯಲ್ಲಿ ಯಶಸ್ವಿ ಆಗಿ ಮಂಗಳೂರು ರೇಂಜಿನಲ್ಲಿ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರಾಗಿಯೂ, ಕೆಲಕಾಲ ಮಂಗಳೂರು ಟ್ರೇನಿಂಗ್ ಕಾಲೇಜ್ ಹಾಗೂ ಮಡಿಕೇರಿಯ ಸರಕಾರಿ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿಯೂ ಕೆಲಸಮಾಡಿದರು. ಗಮಕಕಲೆ, ಶಿಶುಸಾಹಿತ್ಯಗಳಲ್ಲಿ ವಿಶೇಷ ಆಸ್ಥೆಯುಳ್ಳ ಪಂಜೆಯವರು ಮಂಗಳೂರು ಬಾಲಸಾಹಿತ್ಯ ಮಂಡಲದ ಸ್ಥಾಪಕರಲ್ಲೊಬ್ಬರಾಗಿ, ಕನ್ನಡ ಶಿಶುಸಾಹಿತ್ಯ ಹಾಗೂ ಸಣ್ಣಕತೆಯ ಜನಕರಲ್ಲೊಬ್ಬರಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯಪ್ರಚಾರವನ್ನು ಬಹುನಿಷ್ಠೆಯಿಂದ ಮಾಡಿದರು. ಕನ್ನಡ ಸಾಹಿತ್ಯಸಮ್ಮೆಲನದ ೨೦ನೇ ಅಧಿವೇಶನದ (ರಾಯಚೂರು, ೧೯೩೪) ಅಧ್ಯಕ್ಷರಾಗಿದ್ದರು.

ಗ್ರಂಥಗಳು: ಐತಿಹಾಸಿಕ ಕಥಾವಳಿ (ಇ. ೧೯೩೫), ಒಡ್ಡನ ಓಟ (ಊ), ಕನ್ನಡದಲ್ಲಿ ಸುಧಾರಣೆಗಳು, ಕೊಕ್ಕೊಕ್ಕೋಳಿ (ಊ), ಕೋಟಿಚೆನ್ನಯ (ಇ. ೧೯೨೪), ಗುಡುಗುಡು ಗುಮ್ಮಟದೇವರು (ಊ), ಪ್ರಾಣಿಗಳೂ ಪ್ರದೇಶಗಳೂ (ಊ), ಮೂಲವ್ಯಾಕರಣ, (ಹೇನು ಸತ್ತು ಕಾಗೆ ಬಡವಾಯಿತು.) (ಊ).

ಸಿದ್ಧರಾಮಪ್ಪ, ದುಂಡಪ್ಪ, ಪಾವಟೆ

ಜ : ೧೮೭೪ ಮ : ೧೯೩೯

ಗೋಕಾಕತಾಲೂಕಿನ ಮಮದಾಪುರ. ಕಾರವಾರ ಹಾಗೂ ಬೆಳಗಾವಿಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪೂರ್ತಿಮಾಡಿ ಸರದಾರ್ ಹೈಸ್ಕೂಲಿನಿಂದ ಮ್ಯಾಟ್ರಿಕ್ ಪಾಸಾದರು. ಪುಣೆಯಲ್ಲಿ ಪ್ರೌಢಶಿಕ್ಷಣವನ್ನು ಪಡೆದು ೧೮೯೯ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಪ್ರಥಮವರ್ಗದಲ್ಲಿ ಪಾಸಾದರು. ಇದಕ್ಕಾಗಿ ಇವರಿಗೆ ಸಂಸ್ಕೃತ ವಿಷಯದಲ್ಲಿ ಶಿಷ್ಯವೃತ್ತಿಯು ದೊರೆಯಿತು. ಮುಂದೆ ವಕೀಲಿ ಅಭ್ಯಾಸಮಾಡಿ ಉತ್ತರ ಕರ್ನಾಟಕದ ವೀರಶೈವರಲ್ಲಿ ಪ್ರಥಮ ಎಲ್‌ಎಲ್.ಬಿ. ಪದವೀಧರರಾಗಿ ಜ್ಯುಬಿಲಿ ಮೆಡಲ್ ಬಹುಮಾನ ಪಡೆದರು. ಹುಬ್ಬಳ್ಳಿಯಲ್ಲಿ ವಕೀಲಿ ವ್ಯವಸಾಯವನ್ನು ಕೈಕೊಂಡು ಅದರೊಂದಿಗೆ ವೀರಶೈವಸಿದ್ಧಾಂತ, ತತ್ವಜ್ಞಾನದ ಜಿಜ್ಞಾಸುವಾಗಿಯೂ ಹಲವಾರು ಬಗೆಯ ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಮುಂದಾಳುವಾಗಿಯೂ ಕಾರ್ಯಮಾಡಿದರು.

೧೯೨೭ರಲ್ಲಿ ಮದ್ರಾಸದಲ್ಲಿ ಕೂಡಿದ ಸರ್ವಧರ್ಮ ಪರಿಷತ್ತಿನಲ್ಲಿ ವೀರಶೈವಧರ್ಮದ ಪ್ರತಿನಿಧಿಗಳಾಗಿದ್ದರು. ೧೯೩೩ರಲ್ಲಿ ಹುಬ್ಬಳ್ಳಿಯಲ್ಲಿ ನೆರೆದ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರು.

ಗ್ರಂಥಗಳು : ಚನ್ನಬಸವತೈಜಸ (ಧ), ಬಸವಭಾನು (ಧ), ವೃಷಭೇಂದ್ರಭೂಷಣ, ಶ್ರೀಮದಲ್ಲಮವ್ಯೋಮ (ಧ), ಸುಪ್ರಭೇದಪ್ರಭಂಜನ (ಧ).

ಪರಮೇಶ್ವರಯ್ಯ, ಬಡಕಬೈಲು

ಜ : ಸು.೧೮೭೫

ದಕ್ಷಿಣ ಕನ್ನಡದ ಸುಪ್ರಸಿದ್ಧ ಹರಿಕಥಾವಿದ್ವಾಂಸರು. ಯಕ್ಷಗಾನವಿಶಾರದರೂ ಆಶುಕವಿಯೂ ಆಗಿದ್ದರು.

ಗ್ರಂಥಗಳು : ಆಲಿ ಸಹೋದರರು, ಕನ್ನಡ ಭಜಗೋವಿಂದ(ಅ.೧೯೧೬).

ಶಂಕರ, ಅಣ್ಣಾಜಿ, ಕುಲಕರ್ಣಿ

ಜ : ಸು.೧೮೭೫ ಮ : ಸು.೧೯೨೯

ಧಾರವಾಡ ಜಿಲ್ಲೆಯ ಗಜೇಂದ್ರಗಡ. ಕನ್ನಡ ಶಾಲೆಯ ಉಪಾಧ್ಯಾಯರಾಗಿ ಆ ಜಿಲ್ಲೆಯ ಅನೇಕ ಊರುಗಳಲ್ಲಿ ಕೆಲಸ ಮಾಡಿದರು. ಸಂಸ್ಕೃತ, ಮರಾಠಿ, ಬಂಗಾಲಿ ಭಾಷೆಗಳನ್ನು ಬಲ್ಲವರಾಗಿದ್ದರು.

ಗ್ರಂಥಗಳು : ಅರುಂಧತಿ (ಇ), ಕರ್ನಾಟಕಸಿಂಹಾಸನಸ್ಥಾಪನೆ, ಗಂಗಾಲಹರಿ (ಅನುವಾದ), ಗುರುಗೋವಿಂದಸಿಂಹ, ಜಕಣಾಚಾರ್ಯ (ಇ), ಜಯಪರಾಜಯ (ಇ.) ತುಳಸೀದಾಸ (ಇ), ಪನ್ನಾಮತಿ (ಇ), ಬೇಗಮ ಸಮರು (ಇ), ಭಯಂಕರಕೊಲೆ (ಇ. ೧೯೩೦,॥) ಭಾಮಿನಿ (ಇ), ಮಹಾರಾಣಾ ಪ್ರತಾಪಸಿಂಹ, ಮೋಜಿನ ಮರಣ (ಇ. ೧೯೩೦), ರಾಷ್ಟ್ರಸಭೆಯ ಇತಿಹಾಸ (ಯ-ಫ), ವಿಕಾರವಿನಾಶ, ವಿಚಿತ್ರವಿವಾಹ (ಇ) ಸತೀಶಿರೋಮಣಿ (ಇ), ಸಾಧ್ವೀಹೃದಯ (ಇ), ಸ್ವಾಮಿ ಶ್ರದ್ಧಾನಂದ, ಹರ್ಷಸಾಮ್ರಾಜ್ಯ (ಇ).

ಸುಂದರಶಾಸ್ತ್ರೀ, ಭಾಷ್ಯಂ

ಜ : ಸು.೧೮೭೫ ಮ : (?)

ಬೆಂಗಳೂರು. ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿ ಉತ್ತಮವರ್ಗದಲ್ಲಿ ಪಾಸಾದನಂತರ ಕೆಲವು ವರ್ಷ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದರು. ಮುಂದೆ ೧೯೧೬ರಲ್ಲಿ ಅನಂತಪುರದ ಸರಕಾರೀ ಕಾಲೇಜನ್ನು ಸೇರಿದರು. ೧೯೨೦ರಲ್ಲಿ ಮದ್ರಾಸ್ ಗವರ್ನಮೆಂಟ್ ಓರಿಯೆಂಟಲ್ ಲೈಬ್ರರಿಯಲ್ಲಿ ಉಪಗ್ರಂಥಾಲಯಾಧಿಕಾರಿಯಾದರು. ಶೃಂಗೇರಿಯ ಶಿವಗಂಗಾ ಸಂಸ್ಥಾನದಿಂದ 'ಸಾಹಿತ್ಯರತ್ನ' ಎಂಬ ಪ್ರಶಸ್ತಿಯನ್ನು ಪಡೆದಿದ್ದರು. ಭಾಸಕವಿಯ ಹಲವು ನಾಟಕಗಳನ್ನು ಕನ್ನಡಿಸಿರುವರು.

ಗ್ರಂಥಗಳು : ಅಭಿಷೇಕನಾಟಕ, ಊರುಭಂಗ (ಆ. ೧೯೨೩), ಕರ್ಣಭಾರ, ದೂತವಾಕ್ಯ, ದೂತಘಟೋತ್ಕಜ ಪಂಚರಾತ್ರ, ಪುರಾಣನಾಮಚೂಡಾಮಣಿ (ಧ-ಏ. ೧೯೪೧; ಬೆನಗಲ್ಲ ರಾಮರಾಯರೊಂದಿಗೆ), ಬಾಲಚರಿತ, ಶಿವತತ್ತ್ವರತ್ನಾಕರ (ಧ-ಏ), ಹಿತೋಪದೇಶ.

ಚಿದಂಬರಪಂಡಿತ, ಲಕ್ಷ್ಮೀನಾರಾಯಣಪಂಡಿತ, ತರೀಕೆರೆ

ಜ : ೧೧-೮-೧೮೭೬

ತರೀಕೆರೆ. ಋಗ್ವೇದ, ಸಂಸ್ಕೃತ ಸಾಹಿತ್ಯ, ಧರ್ಮಶಾಸ್ತ್ರ, ತರ್ಕಶಾಸ್ತ್ರಗಳಲ್ಲಿ ಪ್ರವೀಣರೂ ಆಯುರ್ವೇದ ಪಂಡಿತರೂ ಆಗಿದ್ದ ಲಕ್ಷ್ಮೀನಾರಾಯಣಪಂಡಿತರ ಬಳಿಯಲ್ಲಿಯೇ ಚಿದಂಬರಪಂಡಿತರ ಅಧ್ಯಯನ ಪ್ರಾರಂಭವಾಯಿತು. ಹತ್ತುವರ್ಷದವರಾದ ಬಳಿಕ ಕಾಶೀಭಟ್ಟರ ಸೀತಾರಾಮಭಟ್ಟರಲ್ಲಿ ಪಂಚದಶಸಂಸ್ಕಾರಗಳಿಗೆ ಬೇಕಾದ ಋಗ್ವೇದ ಮಂತ್ರಗಳನ್ನೂ ಸಾತ್ವಿಕ ರಾಮಾಚಾರ್ಯರಿಂದ ರುದ್ರಚಮಕ, ನಕ್ಷತ್ರೇಷ್ಟಿ ಹಾಗೂ ಉಪನಿಷತ್ತುಗಳನ್ನೂ ಕಲಿತುಕೊಂಡರು. ಹಾಗೆಯೇ ಕುಂಭಕೋಣದ ಯಜ್ಞದೀಕ್ಷಿತರಾದ ಸುಬ್ರಹ್ಮಣ್ಯ ದೀಕ್ಷಿತರಲ್ಲಿಯೂ ಮೈಸೂರು ಸಂಸ್ಕೃತಪಾಠಶಾಲೆಯಲ್ಲಿ ಋಗ್ವೇದ ಉಪಾಧ್ಯಾಯರಾಗಿದ್ದ ಘನಪಾಠಿ ಕೃಷ್ಣಾವಧಾನಿಗಳಲ್ಲಿಯೂ ಕೆಲಕಾಲ ವಿದ್ಯಾರ್ಜನೆಮಾಡಿ ತಮ್ಮ ೨೬ನೇ ವಯಸ್ಸಿನಲ್ಲಿ ಇಂಗ್ಲೀಷು ಶಾಲೆಯನ್ನು ಸೇರಿ ಒಂದೇ ವರ್ಷದ ವ್ಯಾಸಂಗದಿಂದ ಲೋವರ್ ಸೆಂಕಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

೧೯೦೫ರಿಂದ ೧೯೩೦ರವರೆಗೆ ಬಿರೂರಿನಲ್ಲಿ ವೈದ್ಯವ್ಯವಸಾಯದಲ್ಲಿದ್ದು ಅನಂತರ ಅದನ್ನು ಬಿಟ್ಟುಕೊಟ್ಟರು. ಕೆಲವು ಸಮಯ ಕೂಡಲಿ-ಶೃಂಗೇರಿ ಜಗದ್ಗುರುಗಳ ಪರಿವಾರದಲ್ಲಿ ಪಂಡಿತರೂ, ಐದು ವರ್ಷ ಮೈಸೂರು ಮಹಾರಾಣಿಯವರ ಸನ್ನಿಧಾನದಲ್ಲಿ ಆಯುರ್ವೇದ ಪಂಡಿತರೂ ಆಗಿದ್ದರು.

'ಕರ್ನಾಟಕ ಕಥಾಸರಿತ್ಸಾಗರ' (೧೯೨೧, ಬಿರೂರು), 'ವಿಚಾರತರಂಗಿಣಿ' (೧೯೩೦, ತರೀಕೆರೆ) ಎಂಬ ಮಾಸಪತ್ರಿಕೆಗಳು ಇವರ ಸಂಪಾದಕತ್ವದಲ್ಲಿ ಹೊರಟಿದ್ದವು.

ಗ್ರಂಥಗಳು : ಕರ್ನಾಟಕ ಕಥಾಸರಿತ್ಸಾಗರ (೧-೭ ಲಂಬಕ) (ಇ), ಕರ್ನಾಟಕ ಧರ್ಮಸಿಂಧುಸಾರ (ಧ).

ಅಪ್ರಕಟಿತ : ಕಥಾಸರಿತ್ಸಾಗರ (ಉಳಿದ ಭಾಗ), ಗ್ರಹಲಾಘವ, ಜ್ಯೋತಿಸ್ಸಿದ್ಧಾಂತಸಾರ ಸಂಗ್ರಹ, ಭಾವಪ್ರಕಾಶ, ಮಾಲತೀಮಾಧವ, ಸುಶ್ರುತಸಂಹಿತಾ-ಸೂತ್ರಸ್ಥಾನ.

ತಾತಾಚಾರ್ಯ, ರಾಜಕವಿ, ಎಂ.ಎ., ಎಲ್.ಟಿ.

ಜ : ೧೮೭೬. ಮ : ೩೦-೧೨-೧೯೩೨

ಎ.ವಿ.ವರದಾಚಾರ್ಯರಿಗೆ ಅನೇಕ ನಾಟಕಗಳನ್ನು ಬರೆದುಕೊಟ್ಟ ತಿರುಮಲೆ ವೆಂಕಟಾಚಾರ್ಯರು ಇವರ ತಂದೆ. ಪದವೀಧರರಾಗಿ ಮದ್ರಾಸ್ ವಿದ್ಯಾಇಲಾಖೆಯನ್ನು ಪ್ರವೇಶಿಸಿ ಕೆಲಕಾಲ ರಾಜಮಹೇಂದ್ರಿ ಗವರ್ನಮೆಂಟ್ ಕಾಲೇಜಿನಲ್ಲಿ ಪ್ರಾಧ್ಯಾಪಕರೂ, ಅನಂತರ ಮದ್ರಾಸ್ ಟೀಚರ್ಸ್ ಟ್ರೇನಿಂಗ್ ಕಾಲೇಜಿನ ವೈಸ್-ಪ್ರಿನ್ಸಿಪಾಲರೂ ಆಗಿ ಕೆಲಸಮಾಡಿದರು. ಮುಂದೆ ೧೯೨೦ರ ಸುಮಾರಿಗೆ ಜಿಲ್ಲಾ ವಿದ್ಯಾಧಿಕಾರಿಗಳಾದರು. ಜೈನ, ವೀರಶೈವ ತತ್ತ್ವಶಾಸ್ತ್ರಗಳಲ್ಲಿ ಇವರಿಗೆ ಗಾಢವ್ಯಾಸಂಗವಿತ್ತು. ಕನ್ನಡ ಸಾಹಿತ್ಯ

ಸಮ್ಮೇಲನದ ೧೩ನೆಯ ಅಧಿವೇಶನದ (ಮಂಗಳೂರು, ೧೯೨೭) ಅಧ್ಯಕ್ಷರಾಗಿದ್ದರು.

ಗ್ರಂಥಗಳು : ಗಿರಿಮಲ್ಲಿಕಾರ್ಜುನಶತಕಂ (ಅ. ೧೯೨೩), ಗುರುದತ್ತರಾಯನ ಚರಿತ್ರೆ (ನಯಸೇನವಿರಚಿತ 'ಧರ್ಮಾಮೃತ'ದಲ್ಲಿಯ ಒಂದು ಕಥೆ), (ಧ-ಚ. ೧೯೧೯), ಮರುನ್ನಂದನಶತಕ (ಅ).

ಬಸವಾರ್ಯ, ಚನ್ನಬಸವಾರ್ಯ, ರೇಮಠ

ಜ : ೧೮೭೬ ಮ : ೧೯೨೧

ಬೆಳಗಾವಿ ಜಿಲ್ಲೆಯ ಪಾರಿಶ್ವಾಡ. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ಮೂರು ವರ್ಷ ಶಿಕ್ಷಣ ಪಡೆದು ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ಇವರು ಅನೇಕ ಹಾಡುಗಳನ್ನೂ 'ಮಂಟೂರ ಲಾವಣಿ', 'ತ್ಯಾಗವೀರ ಶಿರಸಂಗಿ ಲಿಂಗರಾಜರ ಸ್ತವನ' ಮುಂತಾದ ಹಾಡುಗಬ್ಬಗಳನ್ನೂ ರಚಿಸಿದ್ದಾರೆ. ಸಮಾಜಸುಧಾರಣೆಯ ಉದ್ದೇಶದಿಂದ ಬರೆದ ಹಲವು ಲೇಖನಗಳು ಸಮಕಾಲೀನ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಕೆ. ಬಸವಾರ್ಯ ಎಂಬ ಕಾವ್ಯನಾಮದಿಂದ ಇವರು ಕೃತಿರಚನೆ ಮಾಡಿದ್ದಾರೆ.

ಗ್ರಂಥಗಳು : ಅಪ್ರಕಟಿತ : ಚಂದ್ರಿಕಾ (ನಾಟಕ), ಸಮಾಜಾದರ್ಶ (ಖಂಡಕಾವ್ಯ).

ರಾಮರಾವ್, ಮಂಜುನಾಥಯ್ಯ, ಬೆನಗಲ್ಲ

ಜ : ೩-೪-೧೮೭೬ ಮ : ೧೯೪೩

ಮಂಗಳೂರು. ಮೂಲ್ಕಿ, ಮಂಗಳೂರು, ಪುತ್ತೂರಲ್ಲಿ ಶಾಲೆಯ ಶಿಕ್ಷಣವೂ ಮಂಗಳೂರು ಗವರ್ನ್‌ಮೆಂಟ್ ಕಾಲೇಜು ಹಾಗೂ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೌಢವ್ಯಾಸಂಗವೂ ಆಯಿತು. ೧೮೯೬ರಲ್ಲಿ ಇಡಿಯ ಮದ್ರಾಸ್ ಪ್ರಾಂತಕ್ಕೆ ಎರಡನೆಯವರಾಗಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೮೯೭ರಿಂದ ೧೯೦೦ರ ವರೆಗೆ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪಂಡಿತರಾಗಿದ್ದು, ಅದೇ ಸಮಯದಲ್ಲಿ Renaissance in Modern Kannada ಎಂಬ ಪ್ರಬಂಧದಿಂದ ಎಂ.ಎ. ಪದವಿಯನ್ನು ಸಂಪಾದಿಸಿದರು. ಬಳಿಕ ಎರಡು ವರ್ಷ ಮೈಸೂರು ಗವರ್ನ್‌ಮೆಂಟ್ ಟ್ರೇನಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರೆಂದು ಕೆಲಸಮಾಡಿ, ಆ ಬಳಿಕ ೧೯೦೨ರಲ್ಲಿ ಮುಂಬಯಿ ಸರಕಾರದ ಭಾಷಾಂತರ ಶಾಖೆಯನ್ನು ಸೇರಿ ಎಂಟು ವರ್ಷ ಅಲ್ಲಿಯೇ ದುಡಿದರು. ಆಗಲೇ ಎಲ್‌ಎಲ್. ಬಿ. ಪದವೀಧರರಾಗಿ (೧೯೦೮) ಜೊತೆಗೆ ಮರಾಠಿ, ಸಂಸ್ಕೃತ, ಜ್ಯೋತಿಷ್ಯ, ಆಯುರ್ವೇದ ಮುಂತಾದ ಸಾಹಿತ್ಯ-ಶಾಸ್ತ್ರಗಳ ವ್ಯಾಸಂಗ ಮಾಡಿದರು. ೧೯೧೦ (ಏಪ್ರಿಲ್)ರಲ್ಲಿ ಮದ್ರಾಸ್ ಸರಕಾರದ ಭಾಷಾಂತರ ಶಾಖೆಗೆ ಬಂದು ೧೯೧೭ರಲ್ಲಿ ಅಲ್ಲಿಯ ಮುಖ್ಯಾಧಿಕಾರಿಯಾದರು. ಮುಂದೆ ಆ ಸ್ಥಾನದಿಂದಲೇ ಸೇವಾನಿವೃತ್ತಿಯನ್ನು ಪಡೆದರು.

ಕನ್ನಡದ ನವೋದಯಕಾಲದಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದ ಮಹನೀಯರಲ್ಲಿ ಇವರೂ ಒಬ್ಬರು. 'ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ' ಎಂಬ ಅವರ ಪದ್ಯವು ಆರಾಧ್ಯದೈವತದ ಬಗ್ಗೆ ಅವರಲ್ಲಿದ್ದ ಸರ್ವಸಮರ್ಪಣಭಾವವನ್ನು ಸೂಚಿಸುತ್ತದೆ. ಮಂಗಳೂರಲ್ಲಿ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ 'ಕರ್ಣಾಟಕ ವಿದ್ಯಾವರ್ಧಿನಿ' ಸಂಘ ಸ್ಥಾಪನೆಯಿಂದ ಮೊದಲ್ಗೊಂಡ ಇವರ ಕನ್ನಡ ಚಟುವಟಿಕೆಗಳು ವಿಧಾಯಕ ರೀತಿಯಲ್ಲಿ ವಿಸತವಾದವು. ಮದ್ರಾಸ್ 'ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ'ಯ ಕನ್ನಡ ವಿಭಾಗ, ಮದ್ರಾಸ್ ಸರಕಾರದ 'ಸೈಂಟಿಫಿಕ್ ಟರ್ಮ್ಸ್ ಕಮಿಟಿ', 'ಓರಿಯೆಂಟಲ್ ಲೈಬ್ರರಿ'ಯ ಸಲಹಾ ಸಮಿತಿ (೧೯೨೪), ಮದ್ರಾಸ್ ವಿಶ್ವವಿದ್ಯಾನಿಲಯದ ಸಿನೇಟ್, ಪಠ್ಯಪುಸ್ತಕ ಸಮಿತಿ ಮೊದಲಾದ ಮಂಡಲಗಳಲ್ಲಿ ಸದಸ್ಯರಾಗಿಯೂ ಕೆಲಸಮಾಡಿದರು. ಮದ್ರಾಸಿನ ಸುಗುಣವಿಲಾಸ ನಾಟಕ ಸಭೆಯ ಕನ್ನಡ ಶಾಖೆಯ ಕಾರ್ಯದರ್ಶಿಯಾಗಿಯೂ, 'ಸುವಾಸಿನಿ' (ಮಂಗಳೂರು), 'ವಾಗ್ಭೂಷಣ', (ಧಾರವಾಡ) ಪತ್ರಿಕೆಗಳ ಸಂಪಾದಕರಾಗಿಯೂ ರಂಗಭೂಮಿ ಹಾಗೂ ಪತ್ರಿಕಾಪ್ರಪಂಚದಲ್ಲಿ ದುಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರು. ಕನ್ನಡ ಸಾಹಿತ್ಯ ಸಮ್ಮೇಲನದ ೧೧ನೇ ಅಧಿವೇಶನದ (ಬೆಳಗಾವಿ, ೧೯೨೫) ಅಧ್ಯಕ್ಷರಾಗಿದ್ದರು.

ಗ್ರಂಥಗಳು : ಇರಾವತಿ (ಇ), ಕರ್ಣಾಟಕ ಕುಂದಮಾಲೆ (ಆ. ೧೯೨೩), ಕರ್ಣಾಟಕ ಘೋಷಯಾತ್ರೆ (ಆ. ೧೯೨೨), ಕಲಹಪ್ರಿಯಾ (ಅ), ಕೃಷ್ಣಾಕುಮಾರಿ (ಇ. ೧೮೯೯), ಚಿಕ್ಕ ಕಥೆಗಳು, ಜಯದೇವವಿಜಯ (ಅ), ತರುಬಾಲಾ (ಅ), ಪದ್ಮಾವತಿ (ಅ), ಪುರಾಣನಾಮಚೂಡಾಮಣಿ (ಪಾನ್ಯಂ ಸುಂದರಶಾಸ್ತ್ರಿ ಅವರೊಂದಿಗೆ) (ಧ-ವಿ. ೧೯೪೧), ಪೌರ್ವಾತ್ಯರ ವರ್ಣವ್ಯವಸ್ಥೆಯೂ ಪಾಶ್ಚಾತ್ಯರ ವರ್ಗವ್ಯವಸ್ಥೆಯೂ, ಮಹನೀಯರ ಚರಿತ್ರಮಾಲೆ, ರಮಾಮಾಧವ (ಆ. ೧೯೧೪), ಸತ್ಯಾರಾಜಾ ಪೂರ್ವ ದೇಶದ ಯಾತ್ರೆಗಳು-ಭಾಗ ೧, ಭಾಗ ೨ (ಆ. ೧೯೧೨), ಸದಾಚಾರವಿವೇಚನೆ, ಸುಭದ್ರಾವಿಜಯ (ಅ), ಸುಭದ್ರಾಹರಣ (ಅ).

ಪರಿಷ್ಕೃತ : ಕರ್ಣಾಟಕ ಪಾರ್ವತೀಪರಿಣಯ ನಾಟಕದ ವ್ಯಾಖ್ಯಾನ, ತಂಜಾವೂರಿನ ನಾಯಕ ಅರಸುಗಳ ಚರಿತ್ರೆ, ಬೀಳಗಿಯ ಅರಸುಗಳ ವಂಶಾವಳಿಯು, ಹಳೇಬೀಡು ಕೈಫಿಯತ್ತು, ಹೊಳೆಹೊನ್ನೂರು ಕೈಫಿಯತ್ತು.

ಅಪ್ರಕಟಿತ : ಕಮಲಾಚಲ ಕೋಟೆಯ ಕೈಫಿಯತ್ತು, ಕೋಮಟಿಗರ ಜಾತಿಯ ಕೈಫಿಯತ್ತು, ದೂತಾಂಗದ (ಭಾಷಾಂತರ), ಶಾಪಸಂಭ್ರಮ ನಾಟಕ (ಭಾಷಾಂತರ).

ವೆಂಕಟರಮಣಯ್ಯ, ಶ್ಯಾನುಭೋಗ, ಸಾತ್ಯನಿಧಿ

ಜ : ೧೮೭೬ ಮ : ೧೯೨೯

ಗೋರಿಬಿದನೂರು ತಾಲೂಕಿನ ಹಲಕೂರು. ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ

ಪೂರೈಸಿ ಮುಂದೆ ಸ್ವಾಧ್ಯಾಯದಿಂದ ಕನ್ನಡಸಾಹಿತ್ಯದಲ್ಲಿ ವಿಶೇಷವಾದ ಪ್ರೌಢಿಮೆಯನ್ನು ಸಂಪಾದಿಸಿದರು. ಇವರು ಶ್ಯಾನುಭೋಗರಾಗಿದ್ದು, ಸ್ವಗ್ರಾಮದಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿದ್ದರು. ರಾಮಕೋಟಿ ಜಪದಲ್ಲಿ ಆಯುಷ್ಯದ ಕೊನೆಯ ಭಾಗವನ್ನು ಕಳೆದರು.

ಗ್ರಂಥಗಳು : ಕರ್ನಾಟಕ ವಚನಸುಶೀಲಾಚರಿತ್ರಂ, ಕರ್ನಾಟಕ ಶ್ರೀವಿಶ್ವರೂಪಸಂದರ್ಶನಂ, ಕಲ್ಯಾಣಿ ನಾಟಕಂ (ಅ), ಚಂದ್ರಹಾಸ, ಮೈಸೂರು ರಾಜರ ಚರಿತ್ರೆ, ಯದುರಾಜ ವಿಜಯ ನಾಟಕಂ (ಅ), ಯಯಾತಿ ನಾಟಕಂ (ಅ), ವರದಕ್ಷಿಣಾಪ್ರಹಸನ (ಅ) ಸಾವಿತ್ರಿ ನಾಟಕಂ (ಅ).

ರಿಯಣ್ಣ, ಶಂಭು, ಹೆಬ್ಬಾರ

ಜ : ೧೮೭೬ ಮ : ೧೯-೩-೧೯೪೨

ದಕ್ಷಿಣ ಕನ್ನಡ ಬೈಂದೂರ ಬಳಿಯ ಬವುಲಾಡಿ. ಇವರು ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ)ನಿಗೆ ಗುರುಸ್ಥಾನದಲ್ಲಿದ್ದ ವೆಂಕಟರಮಣ ಹೆಬ್ಬಾರರ ತಮ್ಮಂದಿರು. ಅಣ್ಣನ ಬಳಿಯಲ್ಲಿಯೇ ವಿದ್ಯಾಭ್ಯಾಸವಾಯಿತು. ಮುಂದೆ ಕೆಲವು ಸಮಯ ಮೋಗೇರಿ ರಾಮಪ್ಪಡಿಗಳ ಸಹಾಯದಿಂದ ಕಾವ್ಯ, ವ್ಯಾಕರಣಾದಿ ವಿಷಯಗಳ ಅಧ್ಯಯನ ಮಾಡಿದರು. ಇವರು ಕೊಲ್ಲೂರಿನ ಗೋಪಾಲಕೃಷ್ಣ ದೇವಸ್ಥಾನದ ಅರ್ಚಕರಾಗಿ ಆರೇಳು ವರ್ಷ ಸೇವಿಸಿ, ಅನಂತರ ಹೊಸಕೋಟೆಗೆ ಹೋಗಿ ಕೃಷಿವ್ಯವಸಾಯವನ್ನು ಕೈಕೊಂಡರು. ರಾಷ್ಟ್ರೀಯ ಆಂದೋಲನದ ಕಾಲದಲ್ಲಿ ನಾಯಕನಕಟ್ಟೆಯಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಶಾಲೆಯಲ್ಲಿ ಹಿರಿಯಣ್ಣನವರು ಕೆಲಕಾಲ ಉಪಾಧ್ಯಾಯರಾಗಿದ್ದರು. ಕೊನೆಗೆ ಬೈಂದೂರಿನಲ್ಲಿ ವೆಂಕಟರಮಣ ಹೊಳ್ಳರಿಂದ ಸ್ಥಾಪಿತವಾದ ಸಂಸ್ಕೃತಪಾಠಶಾಲೆಯಲ್ಲಿ ಪಂಡಿತರಾಗಿದ್ದರು.

ಗ್ರಂಥಗಳು : ಪಾಂಡವವಿಜಯ (ಅ. ೧೯೨೪), ವಿಶ್ವಾಮಿತ್ರಪ್ರತಾಪ (ಅ. ೧೯೧೧).

ಅಪ್ರಕಟಿತ : *ದುಷ್ಯಂತಚರಿತ್ರೆ, ಭಾನುಮತಿ ಕಲ್ಯಾಣ.

ಅಳಸಿಂಗರಾಚಾರ್ಯ, ದೇವಶಿಖಾಮಣಿ

ಜ : ೧೮೭೭ ಮ : ೫-೧೨-೧೯೪೦

ಮೈಸೂರು ಸಂಸ್ಥಾನದ ಮೇಲುಕೋಟೆ. ಸುಪ್ರಸಿದ್ಧ ಪಂಡಿತವಂಶಜರಾದ ಇವರು ಸಂಸ್ಕೃತ-ಕನ್ನಡ ಸಾಹಿತ್ಯದಲ್ಲಿ ವಿಶೇಷವಾದ ಪ್ರೌಢಿಮೆಯನ್ನು ಪಡೆದು ಮೈಸೂರು ಮರಿಮಲ್ಲಪ್ಪನವರ ಹಾಯಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇರಿದರು. ಕೆಲಕಾಲದನಂತರ ಮದ್ರಾಸಿಗೆ ಹೋಗಿ ೧೯ ವರ್ಷ ಅಲ್ಲಿಯ ಕ್ರಿಶ್ಚನ್ ಕಾಲೇಜಿನಲ್ಲಿಯೂ, ೧೧ವರ್ಷ

---

*(ಇವರು ರಚಿಸಿದ ಅನೇಕ ಪದ್ಯಗಳು ಶ್ರೀ ಬ. ಹೆ. ಶ್ರೀಧರ, ಕೆನರಾ ಕಾಲೇಜ್ ಕುಮಟಾ, ಅವರ ಬಳಿಯಲ್ಲಿವೆ).

ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ, ಕೊನೆಯ ಕೆಲವು ವರ್ಷ ಕ್ವೀನ್ ಮೇರೀಜ್ ಕಾಲೇಜಿನಲ್ಲಿಯೂ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಇವರು ಕೆಲವು ವರ್ಷ ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ಅಭ್ಯಾಸಕ್ರಮ ಸಮಿತಿಯ ಸಭಾಸದರಾಗಿದ್ದರು (೧೯೩೨).

ಗ್ರಂಥಗಳು : ಕನ್ನಡ : ಆರ್ಯಮತೋಪಾಖ್ಯಾನ (ಧ), ಕನ್ನಡ ವಚನರಾಮಾಯಣ (೮ ಭಾಗಗಳು) (ಧ), ಘೋರ ಯುರೋಪು ಯುದ್ಧದ ಚರಿತ್ರೆ (ಮ), ಚಲ್ವನಾರಾಯಣ ಶತಕಂ (ಅ), ಚಂಡಕೌಶಿಕ (ಆ), ಚಾಣಕ್ಯತಂತ್ರ ಚಮತ್ಕಾರಂ ಪೌರನೀತಿ (ಲ), ಪಂಚಭಾಷಾಪ್ರಹಸನ (ಆ), ಪ್ರಥಮಚಿಕಿತ್ಸೆ (ಡಾ. ಯು. ರಾಮರಾಯರ ಇಂಗ್ಲೀಷು ಪುಸ್ತಕದ ಭಾಷಾಂತರ) (ಧ), ಪ್ರಾಣಿಶಾಸ್ತ್ರ (ಡ), ಭಾಗವತ (೮ ಭಾಗಗಳು, (ಧ), ಮನುಷ್ಯನ ಸಪ್ತಮ ವಯೋವಸ್ಥೆ, ಮಹಾಭಾರತ (ಧ), ಯುದ್ಧದ ಅನುಭವಗಳು, ಶ್ರೀಮತಿಪರಿಣಯಂ (ಆ), ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ (ಧ-ಚ), ಸಸ್ಯಶಾಸ್ತ್ರ (ಠ), ಸ್ವಪ್ನವಾಸವದತ್ತೆ (ಆ).

ಸಂಸ್ಕೃತ : ಪ್ರಬೋಧಿಕಾ, ಶತಾಲಂಕಾರನಿದರ್ಶನಂ, ಸನ್ಯಾಸಿಗೀತೆ, ಸೂಕ್ತಿಮಾಲಾ.

ತಮ್ಮಾಜಿ ನಾರಾಯಣ, ಅಮ್ಮಿನಭಾವಿ

ಜ : ೧೨-೪-೧೮೭೭

ಧಾರವಾಡ. ಶಿಕ್ಷಣಮಹಾವಿದ್ಯಾಲಯದಲ್ಲಿ ಮೂರು ವರ್ಷದ ಟ್ರೇನಿಂಗ್ ಮುಗಿದನಂತರ ಶಿಕ್ಷಣಶಾಖೆಯನ್ನು ಸೇರಿದರು. ಅನೇಕ ವರ್ಷ ಧಾರವಾಡ ಹೆಣ್ಣುಮಕ್ಕಳ ಶಿಕ್ಷಣಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದರು.

ಗ್ರಂಥಗಳು : ಅಂಕಿಯ ಪಾಠಗಳು, ಇಸೋಪನ ಚರಿತ್ರೆ (ಇ-ಚ.೧೯೨೦), ಬಾಜೀರಾವ್ ಬಲ್ಲಾಳ ಪೇಶವೆ (ಮ-ಚ. ೧೯೧೨). ಮಕ್ಕಳ ಸಲುವಾಗಿ ಕಥೆಗಳು (ಇ), ಮಹಾತ್ಮಾಬುದ್ಧ (ಧ-ಚ). ಮುರಾರರಾವ್ ಅಥವಾ ಗುಪ್ತ ಪೋಲೀಸರ ಚಾತುರ್ಯ, ರೂಢಿಗಳೂ ಚಟಗಳೂ, ವಾಕ್ಯರಚನೆಯೂ ನಿಬಂಧದ ಪೂರ್ವಸಿದ್ಧತೆಯೂ (ದ), ವೇಣೀಬಂಧನ (ಇ.೧೯೧೫). ಶಿಕ್ಷಣದ ಮೂಲತತ್ತ್ವಗಳು (ಬ), ಶ್ರೀಕೃಷ್ಣನ ಕಥೆ (ಧ-ಚ), ಶ್ರೀರಾಮನ ಕಥೆ (ಧ-ಚ), ಸೀತಾ (ಧ-ಚ), ಸೂತಪುತ್ರಕರ್ಣ (ಧ-ಚ), ಸೂರ್ಯಗ್ರಹಣ (ಇ).

ಬಾಳಾಜಿ, ಅನಂತ, ಕುಲಕರ್ಣಿ

ಜ : ೧೮೭೭ ಮ : (?)

ಬೆಳಗಾವಿ ಜಿಲ್ಲೆಯ ಪಾರಿಶ್ವಾಡ. ವತನದಾರ ಕುಲಕರ್ಣಿ ಮನೆತನದವರಾದ ಇವರು ವಿರಕ್ತರಾಗಿ ತಪಸ್ಸಾಧನೆಮಾಡಿ, 'ಬಾಲಮುಕುಂದ' ಅಥವಾ 'ಬಾಲಾವಧೂತ'

ಎಂಬ ಹೆಸರಿನಿಂದ ಪ್ರಸಿದ್ಧ ಯೋಗಿಗಳಾದರು. ಬಾಳೇಕುಂದ್ರಿ ಪಂತ ಮಹಾರಾಜರ ಗುರುಗಳಾಗಿದ್ದರು. ಹಲವು ಭಕ್ತಿಗೀತಗಳನ್ನು ರಚಿಸಿರುವರು. ಆದರೆ ಪುಸ್ತಕರೂಪದಲ್ಲಿ ಪ್ರಕಟವಾಗಿಲ್ಲ.

ರಾಮಚಂದ್ರ, ತ್ರ್ಯಂಬಕ, ಕರ್ಪೂರ

ಜ : ೧೮೭೭ ಮ : ಫೆಬ್ರುವರಿ ೧೯೫೫

ಧಾರವಾಡ ಜಿಲ್ಲೆಯ ಶಿರೋಳದವರು. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ, ಹಲವು ವರ್ಷ ಉಪಾಧ್ಯಾಯರಾಗಿ ಕೆಲಸಮಾಡಿದರು. ೧೯೧೮ರ ಸುಮಾರಿಗೆ ಅಗಡಿಯ 'ಆನಂದವನ' ಸಂಸ್ಥೆಯನ್ನು ಸೇರಿ, 'ಸದ್ಬೋಧ ಚಂದ್ರಿಕೆ'ಯ ಪ್ರಮುಖ ಲೇಖಕರಾದರು.

ಗ್ರಂಥಗಳು : ಕನ್ನಡಿಗರ ಕಾರಸ್ಥಾನ (ಇ) ಚಿಮಣಾಜಿ ಅಪ್ಪಾ (ಇ. ೧೯೨೮), ಪರುಶುರಾಮ ಪರಾಜಯ (ಇ. ೧೯೨೪), ಮನೋರಮಾ (ಇ), ಮರಾಟರ ಅವನತಿ (ಇ), ರಾಜದಂಡ (ಇ. ೧೯೫೫), ವಿಷಕುಂಭ (ಇ), ಶಂಕರಭಗವಾನ್ ಸರಸ್ವತೀಸ್ವಾಮಿಗಳ ಚರಿತ್ರೆ (ಧ-ಚ), ಸಂಕ್ರಮಣ (ಇ), ಸೌಭಾಗ್ಯತಿಲಕ (ಇ).

ವೀರಭದ್ರಪ್ಪ, ಬಿ. ಹಾಲಭಾವಿ

ಜ : ೧೮೭೭

ಬೆಳಗಾವಿ ಜಿಲ್ಲೆಯ ಗೋಕಾಕ. ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣವಾಯಿತು. ಪುಣೆಯ ಡೆಕ್ಕನ್ ಕಾಲೇಜಿನಿಂದ ೧೮೯೮ರಲ್ಲಿ ಬಿ.ಎ. ಪಾಸಾದರು. ಮೂರು ವರುಷಗಳ ನಂತರ ಎಲ್‌ಎಲ್.ಬಿ. ಪಾಸಾಗಿ ವಿಕ್ಟೋರಿಯಾ ಜ್ಯುಬಿಲಿ ಪಾರಿತೋಷಕ ಪಡೆದು ಧಾರವಾಡದಲ್ಲಿ ವಕೀಲಿ ವ್ಯವಸಾಯ ಪ್ರಾರಂಭಿಸಿದರು. ಆದರೆ ೧೯೦೭ರಲ್ಲಿ ಮುಂಬಯಿ ಸರಕಾರದ ನ್ಯಾಯಖಾತೆಯಲ್ಲಿ ನ್ಯಾಯಾಧೀಶರಾಗಿ ಸೇರಿ ೧೯೩೩ರಲ್ಲಿ ನಿವೃತ್ತರಾದರು.

ಬೆಳಗಾವಿಯ ಲಿಂಗರಾಜ್ ಕಾಲೇಜಿನ ಸಂಸ್ಥಾಪಕರಲ್ಲೊಬ್ಬರು. ೧೯೩೩ರಿಂದ ೪೪ರ ವರೆಗೆ ಆ ಸಂಸ್ಥೆಯ ವ್ಯವಸ್ಥಾಪಕ ಮಂಡಲದ ಸಭಾಸದರು. ವಿಜಾಪುರ ಬಸವೇಶ್ವರ ವಿದ್ಯಾವರ್ಧಕ ಸಂಘದ ವ್ಯವಸ್ಥಾಪಕ ಮಂಡಲದ ಸದಸ್ಯರು. ವಿಜಯನಗರ ಸಾಮ್ರಾಜ್ಯದ ಷಟ್‌ಶತಸಾಂವತ್ಸರಿಕೋತ್ಸವದ ಸ್ವಾಗತಾಧ್ಯಕ್ಷರು (೧೯೩೬). ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಹಾಗೂ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯ ಕಾರ್ಯಾಧ್ಯಕ್ಷರು. ಕಿತ್ತೂರು ಚೆನ್ನಮ್ಮ ಇತಿಹಾಸ ಸಂಶೋಧನ ಮಂಡಲದ ಅಧ್ಯಕ್ಷರು. ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ದಿನಾಂಕ ೯-೧೧-೫೭ರಂದು ಇವರಿಗೆ ಮಾನಪತ್ರವನ್ನು ಸಮರ್ಪಿಸಲಾಯಿತು.

ಗ್ರಂಥ : ವಿಜಯನಗರಸಾಮ್ರಾಜ್ಯ (ಮ. ೧೯೦೨)

ಪರಿಷ್ಕೃತ : ಶಂಕರದಾಸಿಮಯ್ಯನ ವಚನಗಳು (೧೯೪೧). ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನ.

ಬುದ್ಧಯ್ಯಾ, ಮಗೆಯ್ಯಾ, ಪುರಾಣೀಕ

ಜ : ೧೩-೬-೧೮೭೮

ಜಮಖಂಡಿ ತಾಲೂಕಿನ ತೇರದಾಳ. ತೇರದಾಳ, ಮುಧೋಳ, ಜಮಖಂಡಿ, ಸೊಲ್ಲಾಪುರ ಮುಂತಾದ ಕಡೆಗೆ ಶಿಕ್ಷಣ. ಒಂದೆರಡುವರ್ಷ ಉಪಾಧ್ಯಾಯರಾಗಿದ್ದು, ೧೯೦೪ರಿಂದ ೨೭ರ ವರೆಗೆ ಹಲಗಲಿ, ಹುನಗುಂದ, ಸೊನ್ನ, ಗಲಗಲಿ ಮೊದಲಾದ ದೇಸಗತ್ತಿಗಳ ಆಡಳಿತಗಾರ ಇಲ್ಲವೆ ಕಾರಭಾರಿಯಾಗಿ ಕೆಲಸಮಾಡಿದರು. ಇವರ ಪ್ರಾಮಾಣಿಕ ಹಾಗೂ ವಿಶ್ವಾಸಪೂರ್ಣಕಾರ್ಯದ ಪ್ರತೀಕವಾಗಿ ಮೇಲ್ಕಾಣಿಸಿದ ದೇಸಾಯರಿಂದ ಹಲವು ಬಗೆಯ ಗೌರವಗಳನ್ನೂ ಇನಾಮುಗಳನ್ನೂ ಪಡೆದರು.

ಕೊಲ್ಲಾಪುರದ ವೀರಶೈವ ಬೋರ್ಡಿಂಗ್ (೧೯೦೭) ಹಾಗೂ ಬಾಗಿಲುಕೋಟೆಯ ವಾರದ ಬೋರ್ಡಿಂಗ್ (೧೯೧೧) ಸ್ಥಾಪಕರಲ್ಲೊಬ್ಬರಾಗಿದ್ದರು. ವಿಜಾಪುರ ಜಿಲ್ಲೆಯ 'ಲಾಯಲ್ ಲೀಗ್'ದ ಸದಸ್ಯರಾಗಿ 'ರೆಡ್‌ಕ್ರಾಸ್' ಫಂಡು ಕೂಡಿಸಿದರು. ವತನದಾರ ಸಂಘದ ಸಂಸ್ಥಾಪಕರು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಬಾದಾಮಿಯ ಶಿವಯೋಗಮಂದಿರಕ್ಕೆ ಹಲವು ರೀತಿಯಿಂದ ಸಹಾಯ ಮಾಡಿದರು. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯಸಮಿತಿ, ಆ ಸಮಿತಿಯ 'ತ್ರೈಮಾಸಿಕ.' ಪತ್ರಿಕೆಯ ಸಂಪಾದಕ ಮಂಡಲ ಮುಂತಾದವುಗಳ ಸಭಾಸದರಾಗಿಯೂ, ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಸಂಶೋಧನ ಮಂಡಲದ ಆಜೀವ ಸಭಾಸದರಾಗಿಯೂ ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗವಹಿಸಿದರು.

ಗ್ರಂಥಗಳು : ಕನ್ನಡ : * ಅಲ್ಲಮಪ್ರಭು (ಧ-ಚ.೧೯೩೬), ಪುರಾಣಿಕರ ವಿಚಾರವಾಹಿನಿ (ಸಂ : ಎಂ.ಜಿ.ವಿರೂಪಾಕ್ಷನ್) (೧೯೫೩).

ಮರಾಠಿ : ಸುಖಸಾಮ್ರಾಜ್ಯ (೧೯೧೩)

ಪರಿಷ್ಕೃತ : ಪ್ರಭುದೇವರ ಪುರಾಣ (ಎಳಂದೂರ ಹರಿಹರಕವಿಕೃತ)

ಮಂಗೇಶರಾವ್, ಉಳ್ಳಾಲ

ಜ : ೧೮೭೮ ಮ : ೨೩-೪-೧೯೪೨

ಮಂಗಳೂರು. ಬಿ.ಎ.,ಎಲ್.ಟಿ. ಪಧವೀಧರರಾಗಿ ಮದ್ರಾಸ್ ಸರಕಾರದ ವಿದ್ಯಾ

---

* ಶ್ರೀ ಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೧೧ ಪುಸ್ತಕಗಳನ್ನು ಇವರು ರಚಿಸಿದ್ದಾರೆ. ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನ ಪಡೆದಿವೆ.

ಇಲಾಖೆಯನ್ನು ಸೇರಿದರು. ೧೯೨೪ರಲ್ಲಿ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೇನಿಂಗ್ ಶಾಲೆಯ ಮುಖ್ಯಾಧ್ಯಾಪಕರು. ಭಾಷಾವಿಶಾರದರೂ, ಶಿಕ್ಷಣಶಾಸ್ತ್ರಜ್ಞರೂ ಎಂದು ಅಖಿಲಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದರು. 'ಕನ್ನಡ ಸಹಕಾರಿ' (ಮಂಗಳೂರು, ೧೯೧೯) ಹಾಗೂ 'ಬಾಲಚಂದ್ರ' (ಉಡುಪಿ, ೧೯೩೪) ಎಂಬ ಮಾಸಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದರು.

ಗ್ರಂಥಗಳು : ಖಗೋಳವೈಚಿತ್ರ್ಯ (ಖ. ೧೯೩೦), ನಿಷ್ಕಾಮಪ್ರೇಮ (ಇ. ೧೯೩೬), ವಿಧಿಯ ವೈಚಿತ್ರ್ಯ (Alexandre Dumas ಕೃತ Count of Monte Christo ಪುಸ್ತಕದ ಭಾಷಾಂತರ), (ಇ. ೧೯೩೪), ಶಶಿಕಾಂತನ ವುಯಿಲು (ಆ. ೧೯೩೩), ಶಿಕ್ಷಣ (ಬ. ೧೯೩೩), ಸಮಾಜದ್ರೋಹಿ (Henrik Ibsen ಕೃತ An enemy of the of The People ಪುಸ್ತಕದ ಭಾಷಾಂತರ) (ಆ. ೧೯೩೨).

ಯಲ್ಲೋ, ಗುಡ್ಡೋ, ಕುಲಕರ್ಣಿ

ಜ : ೧೮೭೮ ಮ : ೧೯೫೫

ಹಾವೇರಿ ತಾಲೂಕಿನ ಗುತ್ತಲ. ಮಾಧ್ಯಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ಪುಣೆಯ ಡೆಕ್ಕನ್ ಕಾಲೇಜನ್ನು ಸೇರಿದರು. ಅಲ್ಲಿ ಮಹಾರಾಷ್ಟ್ರದ ದಾಸಪಂಥದ ಪ್ರಭಾವಕ್ಕೆ ಒಳಗಾಗಿ ಕಾಲೇಜು ಬಿಟ್ಟು ಅಧ್ಯಾತ್ಮದ ಕಡೆಗೆ ಒಲಿದರು. ಆಲೂರ ವೆಂಕಟರಾವ್ ಹಾಗೂ ಡಾಕ್ಟರ್ ಹರ್ಡೀಕರರ ಸಹಾಯದಿಂದ ಕೆಲಕಾಲ ಲೋಕಮಾನ್ಯ ಟಿಳಕರ ಮರಾಠಿ 'ಕೇಸರೀ' ಪತ್ರಿಕೆಯನ್ನು ಕನ್ನಡದಲ್ಲಿಯೂ ನಡೆಸಿದರು. ಮುಂದೆ ಆನಂದವನ ಅಗಡಿಯ ಶ್ರೀ ಶೇಷಾಚಲ ಸಾಧುಗಳ ಉಪದೇಶದ ಮೇರೆಗೆ ಸರ್ವಸಂಗಪರಿತ್ಯಾಗ ಮಾಡಿ ಗುರುವೇವೆಯಲ್ಲಿ ಕಾಲಕಳೆಯತೊಡಗಿದರು. ಕ್ರಿ.ಶ. ೧೯೦೬ರಲ್ಲಿ ವೆಂ.ತಿ.ಕುಲಕರ್ಣಿ (ಗಳಗನಾಥ), ಅವರ ಸಹಕಾರದಿಂದ ಅಗಡಿಯಲ್ಲಿ ಒಂದು ಪಾಠಶಾಲೆಯನ್ನು ಪ್ರಾರಂಭಿಸಿದರು. 'ಸದ್ಬೋಧಚಂದ್ರಿಕೆ' ಮಾಸಪತ್ರಿಕೆ ಹಾಗೂ ಶೇಷಾಚಲ ಮುದ್ರಣಾಲಯವನ್ನು ಸ್ಥಾಪಿಸಲು ಇವರೇ ಕಾರಣರು. ಕ್ರಿ.ಶ. ೧೯೫೩ರ ವರೆಗೆ ಆ ಪತ್ರಿಕೆಯ ಸಂಪಾದಕರಾಗಿದ್ದರು. 'ವಾಸುದೇವಾಗ್ರಜ' ಎಂಬ ಕಾವ್ಯನಾಮದಿಂದ ಕೆಲವು ಗ್ರಂಥಗಳನ್ನು ರಚಿಸಿರುವರು.

ಗ್ರಂಥಗಳು : ಏಕನಾಥಮಹಾರಾಜರ ಚರಿತ್ರೆ (ಪ-ಚ), ತುಕಾರಾಮಬುವಾ (ಮ-ಚ), ದಾಸಬೋಧ (ಭಾಗ ೧ರಿಂದ ೬) (ಭಾಷಾಂತರ), ಮಲ್ಲಾರಿ ಮಹಾತ್ಮ್ಯ (ಧ-ಚ), ಸಮರ್ಥ ಪಂಚಾಯತನ.

ರಾಮಸ್ವಾಮಯ್ಯಂಗಾರ್ಯ, ಅನಂತಾಚಾರ್ಯ, ಗೋಮಠಂ

ಜ : ೧೮೭೮

ಮೈಸೂರು ಸಂಸ್ಥಾನದ ಮೇಲುಕೋಟೆ. ಅಲ್ಲಿಯ ಸಂಸ್ಕೃತ ವಿದ್ಯಾಲಯದ

ಸಂಸ್ಥಾಪಕರಾದ ಅ.ನರಸಿಂಹಾಚಾರ್ಯರ ಬಳಿಯಲ್ಲಿ ಸಂಸ್ಕೃತ ಮತ್ತು ದ್ರಾವಿಡ ಭಾಷಾಸಾಹಿತ್ಯವ್ಯಾಸಂಗ ಮಾಡಿದರು.

ಗ್ರಂಥಗಳು : ಆತ್ಮನಿವೇದನಮ್, ಶ್ರೀ ರಾಮಾಯಣ-ಭಾಗವತ-ಮಹಾಭಾರತಾದಿ ಬಹುಮುಖ್ಯ ರಹಸ್ಯ ಶ್ಲೋಕಸಂಗ್ರಹ.

ಶಿವರಾಮಯ್ಯ, ಸುಬ್ರಾಯ, ಐರೋಡಿ

ಜ : ೧೮೭೮ ಮ : ೧೯೪೧

ಉಡುಪಿ ತಾಲೂಕಿನ ಕೋಟ ಮಾಗಣೆಯ ಐರೋಡಿ ಗ್ರಾಮದವರು. ಹಂಗಾರಕಟ್ಟೆ ಹಾಗೂ ಮಂಗಳೂರಿನಲ್ಲಿ ಶಿಕ್ಷಣ. ಅನಂತರ ಮೈಸೂರು ಲೋವರ ಮತ್ತು ಅಪ್ಪರ್ ಸೆಕೆಂಡರಿಯಲ್ಲಿ ತೇರ್ಗಡೆಹೊಂದಿದರು. ನಂದಳಿಕೆ ಲಕ್ಷ್ಮೀನಾರಣಪ್ಪನವರ ಆಪ್ತಮಿತ್ರರಾದ ಇವರು ಸ್ವಾಧ್ಯಾಯದಿಂದಲೇ ಕನ್ನಡದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದರು. ಬಾರ್ತಿಯ ವೈಯಾಕರಣಿ ಪುರುಷೋತ್ತಮ ಶಾಸ್ತ್ರಿಗಳಿಂದ ಕಾವ್ಯ ವ್ಯಾಕರಣವನ್ನೂ ಬಾಳೆಕುದರು ಶ್ರೀಮಠದ ಶಂಕರಾಶ್ರಮ ಸ್ವಾಮಿಗಳಿಂದ ನೈಷಧಾದಿ ಕಾವ್ಯಗಳನ್ನೂ ಕೋಟದ ಯಜ್ಞನಾರಾಯಣ ಸೋಮಯಾಜಿಗಳಿಂದ ಸಂಸ್ಕೃತ ಪಾಠಗಳನ್ನೂ ಹೇಳಿಸಿಕೊಂಡರು. ಇಂಗ್ಲೀಷಿನಲ್ಲಿಯೂ ತಕ್ಕಮಟ್ಟಿಗೆ ಪರಿಶ್ರಮವಿತ್ತು.

೧೯೧೪ರವರೆಗೆ ಕೋಟ ಮತ್ತು ಕಾರ್ಕಳದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಸಮಾಡಿ, ಅನಂತರ ಕುಂದಾಪುರದಲ್ಲಿ ಆಗತಾನೇ ಸ್ಥಾಪಿತವಾದ ಉಪಾಧ್ಯಾಯರ ಟ್ರೇನಿಂಗ್ ಶಾಲೆಯಲ್ಲಿ ಅಧ್ಯಾಪಕರಾದರು. ಕೊನೆಗೆ ಕುಂದಾಪುರ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಪಂಡಿತರಾದರು.

ಗ್ರಂಥಗಳು : ಆರ್ಯನೀತಿಕಥೆಗಳು-ಭಾಗ ೧, ೨ (ಇ, ೧೯೨೮), ಆರೋಗ್ಯಕ್ಕಾಗಿ ಯೋಗ (ಸ್ವಾಮಿ ಶಿವಾನಂದರ ಪುಸ್ತಕದ ಭಾಷಾಂತರ; ಧ. ೧೯೪೦), ಐರಾವತದ ಕಥೆ (ಇ.೧೯೩೫), ಕನ್ನಡ ಲಘುವ್ಯಾಕರಣ (ದ.೧೯೩೫), ಕನ್ನಡ ಪ್ರೌಢವ್ಯಾಕರಣ (ದ.೧೯೩೫), ಕಿರಾತಾರ್ಜುನೀಯ (ಇ. ೧೯೩೪), ಚಂದ್ರಹಾಸನ ಕಥೆ (ಇ. ೧೯೩೫), ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು (ಮ.೧೯೨೬), ನಾನಕನ ಚರಿತ್ರೆ (ಧ-ಚ೧೯೨೦), ನೈಷಧೀಯ ಚರಿತ್ರೆ (ಇ೧೯೨೬), ಮುದ್ರಾರಾಕ್ಷಸ ನಾಟಕ (ಆ.೧೯೨೪), ರಘುವಂಶಸಾರಸಂಗ್ರಹ (ಇ.೧೯೨೬), ಸದುಪದೇಶ (೧೯೩೪), ಸಂಕ್ಷಿಪ್ತ ವಾಲ್ಮೀಕಿರಾಮಾಯಣ (೧೯೨೪), ಸಂಕ್ಷಿಪ್ತ ಮಹಾಭಾರತ (೧೯೨೫), ಸಂಸ್ಕೃತ ನಾಟಕಗಳ ಕನ್ನಡ ಕಥಾವಳಿ (೧೯೨೭).

ಅಪ್ರಕಟಿತ : ಶಿಶುಪಾಲವಧಕಾವ್ಯ, ಸಿರಿಗನ್ನಡ ಅರ್ಥಕೋಶದ ಶಬ್ದಸಂಗ್ರಹ.

ಅಣ್ಣಾಜಿರಾವ್, ಗುಳವಾಡಿ, ಬಿ.ಎ., ಬಿ.ಎಲ್.

ಜ : ೧೮೭೯

ಮಂಗಳೂರು. ಕೆಲದಿನ ಅಲ್ಲಿಯೇ ವಕೀಲಿ ವ್ಯವಸಾಯ ಮಾಡಿ ಮುಂಬಯಿಗೆ ಹೋಗಿ ನೆಲಸಿದರು. ಸ್ವತಂತ್ರಸಾಮಾಜಿಕ ಆದ್ಯಕಾದಂಬರಿಕಾರರಲ್ಲಿ ಇವರೊಬ್ಬರು. ಪ್ರಸಿದ್ಧ ಪತ್ರಿಕಾಕರ್ತರಾಗಿದ್ದ ಇವರು ಇಂಗ್ಲೀಷಿನಲ್ಲಿಯೂ ಗ್ರಂಥರಚನೆ ಮಾಡಿದ್ದಾರೆ.

ಗ್ರಂಥಗಳು : ಕನ್ನಡ : ದಶಮಗ್ರಹ (ಇ), ನಗೆಗಡಲು (ಇ), ರೋಹಿಣಿ ಇಲ್ಲವೆ ಸಾರಸ್ವತ ಮಂಡಳ (ಇ.೧೯೦೬)

ಇಂಗ್ಲೀಷು : Battle of the Charkha, Congress Ditties, Folk songs of Canara,Folk Tales of the West Coast, Hundred and One Fables of the Orient, Life of Lala Lajpatrai, My God Ganesh.

ಆನಂದರಾವ್, ಬೈಂದೂರ, ಬಿ.ಎ.,ಬಿ.ಎಲ್.

ಜ : ೨೨-೧-೧೮೭೯

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು. ಮದ್ರಾಸಿನಲ್ಲಿ ಪ್ರೌಢಶಿಕ್ಷಣವನ್ನು ಪೂರೈಸಿಕೊಂಡು ಮಂಗಳೂರಲ್ಲಿ ವಕೀಲಿ ವ್ಯವಸಾಯಕ್ಕೆ ತೊಡಗಿದರು. ಪ್ರಸಿದ್ಧ ಜಮೀನುದಾರರು.

ಗ್ರಂಥಗಳು : ಗೃಹಶೀಲೆ (ಇ. ೧೯೧೧), ಚಿತ್ರಶಿಖಂಡಿ, (ಆ.೧೯೨೩), ನೂರಜಹಾನ (ಇ. ೧೯೨೩), ಪುತ್ತೂರು (ಅ. ೧೯೩೧), ಸಹಕಾರ (ಆ. ೧೯೨೧), ಸೌಭಾಗ್ಯ ಸೋಪಾನ (ಅ. ೧೯೩೬), ಶ್ರೀಚಿತ್ರಾಪುರ ಚರಿತ್ರ (ಅ. ೧೯೪೬).

(ಅಲ್ಲದೆ ಸುಮಾರು ೮೦ಕ್ಕೂ ಮಿಕ್ಕಿ ಲೇಖನಗಳನ್ನು ಪ್ರಕಟಿಸಿದ್ದು, ಅವುಗಳಲ್ಲಿ ನಾಟಕದ ವಿವಿಧಾಂಗಗಳನ್ನು ಕುರಿತು 'ಕಂಠೀರವ'ದಲ್ಲಿ ಪ್ರಕಟವಾದ (೧೯೨೪-೩೦), ಲೇಖನಗಳೂ, ಶಿವಾಜಿಯ ಚರಿತ್ರೆಯ ಬಗ್ಗೆ 'ಕರ್ನಾಟಕ ಕೇಸರಿ'ಯಲ್ಲಿ ಬಂದ (೧೯೨೭-೨೯) ಲೇಖನಗಳೂ ಸ್ವತಂತ್ರ ಗ್ರಂಥಗಳಾಗಲಿವೆ).

ಲಿಂಗೇಶಶರ್ಮಾ, ಕುರ್ತಕೋಟಿ (ಡಾ.)

ಜ : ೨೦-೫-೧೮೭೯

ಧಾರವಾಡ ಜಿಲ್ಲೆಯ ಕುರ್ತಕೋಟಿ. ಧಾರವಾಡದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದ ಬಳಿಕ ಕಲಕತ್ತಾ ಹಾಗೂ ಕಾಶಿಯಲ್ಲಿ ಕೆಲಕಾಲ ನೆಲೆಸಿ ಶಾಸ್ತ್ರ, ಸಾಹಿತ್ಯ, ವೇದಾಂತಗಳಲ್ಲಿ ಪರಿಣತರಾಗಿ 'ವಿದ್ಯಾಭೂಷಣ' ಪ್ರಶಸ್ತಿಯನ್ನು ಪಡೆದರು. ಕರವೀರ

ಹಾಗೂ ಸಂಕೇಶ್ವರ ಮಠದ ಜಗದ್ಗುರು ಶಂಕರಾಚಾರ್ಯರ ಪೀಠವನ್ನಲಂಕರಿಸಿ ಹಿಂದೂ ಧರ್ಮ ಹಾಗೂ ಸಂಸ್ಕೃತಿಪ್ರಚಾರದ ಕಾರ್ಯವನ್ನು ವಹಿಸಿಕೊಂಡರು. ಪುಣೆಯ 'ಭಾಂಡಾರಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್', ಅಮ್ಮಳನೇರದ 'ಇನ್‌ಸ್ಟಿಟ್ಯೂಟ್ ಆಫ್ ಫಿಲಾಸಫಿ', ಬೆಂಗಳೂರಿನ 'ಸಂಸ್ಕೃತ ಅಕೆಡಮಿ' ಇವೇ ಮುಂತಾದ ಸಂಸ್ಥೆಗಳ ಸಂಸ್ಥಾಪಕರು. ಕೆಲವು ಕಾಲ, ಅಕೆಡಮಿಯ ಆಶ್ರಯದಲ್ಲಿ ಹೊರಡುತ್ತಿದ್ದ 'ಸಂಸ್ಕೃತ ರಿಸರ್ಚ್' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ ಧಾರವಾಡದ 'ಲಿಟರರಿ ಸೊಸಾಯಿಟಿ' ಹಾಗೂ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ವ್ಯವಸ್ಥಾಪಕರೆಂದು ಕೆಲವು ಸಮಯ ಕೆಲಸಮಾಡಿದರು. ಪುಣೆಯ ಟಿಳಕ ವಿದ್ಯಾಪೀಠವನ್ನು ಸ್ಥಾಪಿಸಿ ಅದರ ಪ್ರಥಮ ಕುಲಗುರುಗಳಾದರು. ಹಿಂದೂ ಮಹಾಸಭೆಯ ಪ್ರಯಾಗ ಅಧಿವೇಶನ, ಲಾಹೋರ ಅಧಿವೇಶನ, ಹಂಪೆಯಲ್ಲಿ ಸೇರಿದ್ದ ವಿಜಯನಗರದ ಷಟ್ಶತಸಾಂವತ್ಸರಿಕೋತ್ಸವ (೧೯೩೬), ನಾಸಿಕದಲ್ಲಿ ಕೂಡಿದ 'ವರ್ಲ್ಡ್ ಫಿಲಾಸಫಿ ಆಫ್ ಫೇತ್' ಮೊದಲಾದ ಸಮ್ಮೇಲನಗಳ ಅಧ್ಯಕ್ಷರು. ಮುಂಬಯಿ ಸರಕಾರ ನಿಯುಕ್ತ Moral Education Consultation Committeeಯ ಸಭಾಸದರು (೧೯೧೭).

ಗ್ರಂಥಗಳು : ಕನ್ನಡ : ಭಗವದ್ಗೀತಾಸಾರವಿಚಾರ (ನ)

ಸಂಸ್ಕೃತ : ಅಷ್ಟೋತ್ತರಶತಶ್ಲೋಕಿ, ಷಡ್ದರ್ಶನಾದರ್ಶಃ, ಸಚ್ಚಿದಾನಂದಸ್ತವಃ, ಸಮತ್ವಗೀತಮ್, ಸಿದ್ಧಾಂತಸಾರಃ.

ಇಂಗ್ಲೀಷ್ : Spiritual Knowledge and How to obtain it, The Highest Goal of Human Life, The Study of Sanskrit - A Plea, Equality- A Study in Bhagavadgita, The Heart of Bhagavadgita.

ನರಹರಿಶರ್ಮಾ, ವಿದ್ವಾನ್ ಬಾಲಸರಸ್ವತಿ

ಜ : ೧೮೮೦ ಮ : ೨೮-೫-೧೯೩೮

ಮೈಸೂರು. ವ್ಯಾಕರಣ ಪಂಡಿತರಾಗಿದ್ದ ಅಣ್ಣಾಚಾರ್ಯರಲ್ಲಿ ಸಂಸ್ಕೃತ ಅಧ್ಯಯನ ಮಾಡುತ್ತ ಅದರೊಂದಿಗೆ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಮಹಾರಾಜಾ ಕಾಲೇಜಿನಲ್ಲಿ ಓದಿ ಎಫ್.ಎ.ಪಾಸಾದರು. ಚಿತ್ರಕಲಾಭಿರುಚಿಯುಳ್ಳವರಾಗಿದ್ದು ಪ್ರಸಿದ್ಧ ಕಲಾವಿದರಾಗಿದ್ದ ರಾಜಾ ರವಿವರ್ಮ ಅವರ ಬಳಿಯಲ್ಲಿ ವ್ಯಾಸಂಗಮಾಡಿ ಹೈಸ್ಕೂಲಿನಲ್ಲಿ ಚಿತ್ರ ಕಲಾಧ್ಯಾಪಕರಾದರು. ಕೆಲಕಾಲದನಂತರ ಉತ್ತರ ಹಿಂದುಸ್ಥಾನವನ್ನು ಸಂಚರಿಸಿ ಬೆಂಗಳೂರಿಗೆ ಹಿಂದಿರುಗಿ ಬಂದು ಒಂದು ಮುದ್ರಣಾಲಯವನ್ನು ಸ್ಥಾಪಿಸಿದರು. ಈ ಸಂಚಾರದ ಫಲವಾಗಿ ವಂಗಭಾಷಾಜ್ಞಾನವೂ ತತ್ಪರಿಣಾಮವಾಗಿ ಗ್ರಂಥ ಪ್ರಚಾರದ ಉತ್ಸುಕತೆಯೂ ಉಂಟಾಗಿ ಅನೇಕ ಚಿಕ್ಕ-ದೊಡ್ಡ ಗ್ರಂಥಗಳನ್ನು ರಚಿಸಿ ಪ್ರಕಟಿಸಿದರು. ಚಿತ್ರಗುಪ್ತನ

ದಪ್ತರ್, ತರಂಗಿಣೀ ಗ್ರಂಥಮಾಲೆ, ಬಾಲಕಥಾವಳಿ ಗ್ರಂಥಮಾಲೆ, ಬೋಧಾವಳಿ ಗ್ರಂಥಮಾಲೆ, ಅಡಗೂಲಜ್ಜಿ ಗ್ರಂಥಮಾಲೆ ಮೊದಲಾದ ಗ್ರಂಥಪ್ರಕಾಶನಗಳು ಇವರ ಸಾಹಸದ ಫಲ. ಆದರೆ ಈ ವ್ಯವಸಾಯವನ್ನು ಅರ್ಧಕ್ಕೆ ಬಿಟ್ಟುಕೊಟ್ಟು ಮೈಸೂರಿನಲ್ಲಿ ಲಿಂಗರಾಜ ಅರಸರ ಆಶ್ರಯದಲ್ಲಿ ಗುಮಾಸ್ತರಾದರು. ಕೆಲವು ದಿನಗಳನಂತರ ಮತ್ತೆ ಅಧ್ಯಾಪನವೃತ್ತಿಯನ್ನು ಕೈಕೊಂಡು ಅರಸು ಗರ್ಲ್ಸ್‌ಸ್ಕೂಲು, ಅರಸು ಬೋರ್ಡಿಂಗ್ ಸ್ಕೂಲು ಇತ್ಯಾದಿ ಸಂಸ್ಥೆಗಳಲ್ಲಿ ಸಂಸ್ಕೃತ-ಕನ್ನಡ ಶಿಕ್ಷಕರಾಗಿ ಕೆಲಸ ಮಾಡಿದರು. ಸಚ್ಚಿದಾನಂದ ಪಾಠಶಾಲೆ, ಬೆಂಗಳೂರಿನ ಆಚಾರ್ಯ ಪಾಠಶಾಲೆ, ಬಸವನಗುಡಿಯಲ್ಲಿಯ ಗುರುಕುಲವೆಂಬ ಶಿಶುವಿಹಾರ ಇತ್ಯಾದಿ ಸಂಸ್ಥೆಗಳ ಸ್ಥಾಪಕರು. ಇವರ ಕೃತಿಗಳೆಲ್ಲ ಹೆಚ್ಚಾಗಿ ಕತೆ-ಕಾದಂಬರಿಗಳು.

ಗ್ರಂಥಗಳು : ಕನ್ನಡ : ಅದೃಷ್ಟ ಬೇಕೇ ಅದೃಷ್ಟ?, ಅಮೃತ-ಗರಳ, ಅಕ್ಷಯಪಾತ್ರೆ, ಊರ ಬಾಗಿಲ ಹನುಮಂತ, ಕನ್ಯಾಕುಮಾರಿ, ಕಮಲಾಕಾಂತನ ಉಯಿಲು, ಕರ್ಮಸನ್ಯಾಸಿ, ಕಾಮಧೇನು, ಕುಮುದಿನಿ, ಕೂರ್ಮಾವತಾರ, ಕಂಠಾಭರಣಂ (ಆ.೧೯೨೯), ಗುಣವಿದ್ದರೂ ಋಣವಿದ್ದಷ್ಟೇ, ಗುರುತು ಕಂಡ ಕಳ್ಳ, ಗಂಗಾಪುತ್ರ, ಚೋರಚಕ್ರವರ್ತಿ, ಚೌತಿಯ ಚಂದ್ರ, ತಕ್ಕಡಿ ಬಿಕ್ಕಡಿ, ತ್ರಿಪುರಸುಂದರಿ, ದುಷ್ಟಚತುಷ್ಟಯ (ಇ. ೧೯೩೧), ದೇವರ ಮಹಿಮೆ, ದೊಡ್ಡ ದಡ್ಡ, ದೊಡ್ಡವರು ಯಾರು?, ಧೈರ್ಯವೇ ಧೈರ್ಯ, ನರಬಲಿ, ನರರಾಕ್ಷಸಿ (ಇ.೧೯೪೧, II) ನಾಮರೂಪಾವಳಿ, ನಾರಸಿಂಹಾವತಾರ, ನೀಲಾಂಬರಿ, ಪ್ರೀತಿವಿಜಯ, ಪ್ರೇಮಪಾಶ, ಭೂತಮರ್ದನ, ಮರದ ಬೊಂಬೆ, ಮತ್ಸ್ಯಾವತಾರ, ಮಾಯಾವಿನಿ, ಮೂರು ವರಗಳು, ಮೂಲಮಂತ್ರೋಪದೇಶ, ಯಾಮಿನಿ, ಯಾರಿಗೆ ಯಾರೋ ಭಗವಂತ, ಯೋಗ್ಯತೆಗೆ ತಕ್ಕ ಯೋಗ್ಯತೆ, ರಾಘವೇಂದ್ರತೀರ್ಥವಿಜಯ, ರಾಜಮಾರ್ತಾಂಡ, ಲಕ್ಷಾಧಿಕಾರಿಯಾದ ಭಿಕ್ಷಾಧಿಕಾರಿ, ವರಾಹಾವತಾರ, ವೃದ್ಧಭಾರ್ಯಾವಿಲಾಸ, ವಿಜಯದಶಮಿ, ವಿಜಯನಾರಸಿಂಹ, ವಿಜಯರಾಜವಿಜಯ, ವಿಯೋಗಿನಿ, ವಿಷಮುಹೂರ್ತ (ಇ.೧೯೪೧ II), ವಿಷವಿವಾಹ, ವೀರನಾರಸಿಂಹ, ಶ್ರೀಪಾದಯ್ಯನ ಪಾದರಕ್ಷೆ, ಶೋಣಿತತರ್ಪಣ, ಶೋಭನೆ, ಸತ್ಯನಾರಾಯಣ, ಸ್ವಯಂಕೃತಾಪರಾಧ, ಸೀತಾದೇವಿ, ಸೀತಾರಾಮ, ಸೌಭಾಗ್ಯಸಂಪತ್ಕುಮಾರ, ಹೆಂಡತಿ ಎಂದರೆ ಹೆಂಡತಿ.

ಅಪ್ರಕಟಿತ : ರಾಣೀಚೌಧುರಾಣಿ, ಬ್ರಹ್ಮಾನಂದ ಮಠ, ಮಹಾರಾಜ ಸಿಂಹ, ಬ್ರಾಹ್ಮಣರಮಣಿ, ಇಂದಿರಾ, ಮಾಲತೀಲತಾ.

ಸಂಸ್ಕೃತ: ಚಂದ್ರಶೇಖರಸಪ್ತತಿ, ಯತೀಂದ್ರಶತಕಂ, ಶ್ರೀಗುರುಸ್ತುತಿರತ್ನಮಾಲಾ.

ಫಕೀರಪ್ಪ, ಗುರುಬಸಪ್ಪ, ಹಳಕಟ್ಟಿ

ಜ : ೨-೭-೧೮೮೦

ಧಾರವಾಡ. ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ಅಲ್ಲಿಯೇ ಆಯಿತು.

೧೯೦೭ರಲ್ಲಿ ಬಿ.ಎ.; ಮುಂದೆ ೧೯೦೮ರಲ್ಲಿ ಎಲ್‌ಎಲ್.ಬಿ. ಪದವಿಯನ್ನು ಸಂಪಾದಿಸಿ ಬೆಳಗಾವಿಯಲ್ಲಿ ವಕೀಲಿ ವ್ಯವಸಾಯವನ್ನು ಪ್ರಾರಂಭಿಸಿದರು. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳಲ್ಲಿ ಆಸ್ಥೆಯುಳ್ಳವರೂ ಸಾರ್ವಜನಿಕ ಸೇವಾಕಾಂಕ್ಷಿಗಳೂ ಆದ ಇವರು, ಕೆಲವು ವರ್ಷಗಳನಂತರ ವಿಜಾಪುರದಲ್ಲಿ ಹೋಗಿ ನೆಲೆಸಿ ತಮ್ಮ ಕಾರ್ಯರಂಗವನ್ನು ವಿಸ್ತರಿಸಕೊಂಡರು. 'ಹಿತಚಿಂತಕ ಮುದ್ರಣಾಲಯ'ವನ್ನು ಸ್ಥಾಪಿಸಿ 'ಶಿವಾನುಭವ' (ಮಾಸಪತ್ರಿಕೆ, ೧೯೨೬, 'ನವಕರ್ನಾಟಕ' (ವಾರಪತ್ರಿಕೆ, ೧೯೨೮) ಎಂಬ ಪತ್ರಿಕೆಯನ್ನು ಪ್ರಾರಂಭಿಸಿ, ವಚನಸಾಹಿತ್ಯದ ಪ್ರಕಟನೆಯನ್ನು ಕೈಕೊಂಡು, ವೀರಶೈವ ಸಂಸ್ಕೃತಿ ಪ್ರಚಾರಕಾರ್ಯದಲ್ಲಿ ಬಹು ಅಮೂಲ್ಯಸೇವೆಯನ್ನು ಸಲ್ಲಿಸಿದರು. ವಚನಕಾರರ ಕೃತಿಗಳನ್ನೂ ಜೀವನ ಚರಿತ್ರೆಗಳನ್ನೂ ಬೆಳಕಿಗೆ ತಂದ ಶ್ರೇಯಸ್ಸಿಗೆ ಇವರು ಪಾತ್ರರು. ಶಿವಾನುಭವ ಸಂಘಗಳ ಪ್ರಚಾರದಿಂದ ವೀರಶೈವ ಸಮಾಜದ ಸಂಘಟನೆ ಮಾಡಿದರು. ವಿಜಾಪುರದಲ್ಲಿ ವೀರಶೈವ ಶಿಕ್ಷಣ ಫಂಡು, ಸಿದ್ಧೇಶ್ವರ ಧರ್ಮಾದಾಯ ಶಿಕ್ಷಣ ಫಂಡು, ಜಿಲ್ಲಾ ವೀರಶೈವ ವಿದ್ಯಾವರ್ಧಕ ಸಂಘ, ಸಿದ್ಧೇಶ್ವರ ಮಾಧ್ಯಮಿಕ ಶಾಲೆ ಮುಂತಾದ ಸಂಸ್ಥೆಗಳ ಸ್ಥಾಪನೆ ಹಾಗೂ ಕಾರ್ಯನಿರ್ವಹಣೆಯಲ್ಲಿ ತುಂಬ ಶ್ರಮಿಸಿ ಆ ಸಮಾಜದ ಶೈಕ್ಷಣಿಕ ಪ್ರಗತಿಗೆ ಕಾರಣರಾದರು. ವಿಜಾಪುರ ನಗರಸಭೆಯ ಸ್ಕೂಲ್ ಬೋರ್ಡಿನ ಅಧ್ಯಕ್ಷರಾಗಿದ್ದರು. ಅಲ್ಲದೆ ಮುಂಬಯಿ ಸರಕಾರದ ಪ್ರಾಥಮಿಕ ಶಿಕ್ಷಣ ಸಮಿತಿ, ಕನ್ನಡ ಪಠ್ಯಪುಸ್ತಕ ಸಮಿತಿ, ಪ್ರಾಥಮಿಕ ಶಿಕ್ಷಣದ ಅಭ್ಯಾಸಪತ್ರಿಕಾ ಸಮಿತಿ, ಧಾರವಾಡ ಕನ್ನಡ ಸಂಶೋಧನ ಮಂಡಲ, ಮುಂಬಯಿ ವಿಶ್ವವಿದ್ಯಾನಿಲಯದ ಸಿನೇಟ್ ಇತ್ಯಾದಿ ಸಮಿತಿಗಳಲ್ಲಿ ಅನೇಕ ವರ್ಷ ಸದಸ್ಯರಾಗಿದ್ದರು. ಕನ್ನಡ ಸಾಹಿತ್ಯ ಸಮ್ಮೇಲನದ ೧೨ನೇ ಅಧಿವೇಶನ (ಬಳ್ಳಾರಿ, ೧೯೨೬), ಧಾರವಾಡದಲ್ಲಿ ಸೇರಿದ್ದ ಕರ್ನಾಟಕ ಏಕೀಕರಣ ಸಮ್ಮೇಲನ, ೧೯೩೩ರಲ್ಲಿ ಕೂಡಿದ್ದ ವೀರಶೈವ ಮಹಾಸಭೆಯ ಅಧಿವೇಶನ, ಪುಣೆಯಲ್ಲಿ ಜರುಗಿದ್ದ ಮುಂಬಯಿ ಇಲಾಖೆಯ ನೇಕಾರರ ಸಮ್ಮೇಲನ ಇತ್ಯಾದಿ ಅಧಿವೇಶನಗಳಿಗೆ ಅಧ್ಯಕ್ಷರಾಗಿದ್ದರು.

ತಾ॥ ೨-೭-೧೯೪೩ರಂದು ಇವರ ೬೪ನೆಯ ವರ್ಧಂತಿಯ ಪ್ರಯುಕ್ತ ವಿಜಾಪುರದ ನಾಗರಿಕರ ಪರವಾಗಿ ಬಿನ್ನವತ್ತಳೆಯೂ ಸಂಕಲ್ಪಿತ ನಿಧಿಯೂ ಇವರಿಗೆ ಅರ್ಪಿಸಲ್ಪಟ್ಟವು. ಅದರಂತೆ ರಾಣೆಬೆನ್ನೂರು, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಸಾರ್ವಜನಿಕ ಸತ್ಕಾರ ನಡೆದು ಇವರ ಭಾಷಾಸೇವೆಯು ಗೌರವಿಸಲ್ಪಟ್ಟಿತು.

ಗ್ರಂಥಗಳು : ೭೭೦ ಅಮರಗಣಾಧೀಶ್ವರ ಚರಿತ್ರೆಗಳು, ಚನ್ನಬಸಪ್ಪಾ ಬಸಲಿಂಗಪ್ಪಾ ಧಾರವಾಡ ಅವರ ಚರಿತ್ರೆ, ವಚನಶಾಸ್ತ್ರಸಾರ ಭಾಗ-೧ (ಪೂರ್ವಾರ್ಧ) (ಉತ್ತರಾರ್ಧ), ಭಾಗ ೨, ಭಾಗ ೩ (ಪೂರ್ವಾರ್ಧ) (ಉತ್ತರಾರ್ಧ), ಶಿವಶರಣರ ಚರಿತ್ರೆಗಳು ಭಾಗ ೧, ಭಾಗ ೨, ಭಾಗ ೩, ಶಿವಾನುಭವ ಶಬ್ದಕೋಶ.

ಪರಿಷ್ಕೃತ ಹಾಗೂ ಪ್ರಕಾಶಿತ : (ಶಿವಾನುಭವ ಗ್ರಂಥಮಾಲೆ, ವಿಜಾಪುರ)

ಅವಧೂತಗೀತೆ, ಅಂಬಿಗರ ಚೌಡಯ್ಯನ ವಚನಗಳು, ಆದಯ್ಯನ ವಚನಗಳು, ಆದಿಶೆಟ್ಟಿಪುರಾಣ, ಉರಿಲಿಂಗಪೆದ್ದಿಯ ವಚನಗಳು, ಕಾಲಜ್ಞಾನದ ವಚನಗಳು, ಕೆಳದಿ

ಸಂಸ್ಥಾನದ ರಾಯರ ವಂಶಾವಳಿ, ಕೊಡಗು ಸಂಸ್ಥಾನದ ರಾಜೇಂದ್ರನಾಮೆ, ಗಣದಾಸಿ ವೀರಣ್ಣನ ವಚನಗಳು, ಘನಲಿಂಗನ ವಚನಗಳು, ಚೆನ್ನಬಸವೇಶ್ವರನ ವಚನಗಳು, ತೋಂಟದಾರ್ಯ ರಗಳೆ, ದೇವರ ದಾಸಿಮಯ್ಯನ ವಚನಗಳು, ನಿರಂಜನ ವಂಶರತ್ನಾಕರ, ಪ್ರಭುದೇವರ ವಚನಗಳು, ಬೀಳಗಿ ಅರಸುಗಳ ವಂಶಾವಳಿ, ಭಕ್ತಿಯ ವಚನಗಳು, ಮಡಿವಾಳ ಮಾಚಿದೇವನ ವಚನಗಳು, ಮೆರೆಮಿಂಡದೇವನ ವಚನಗಳು, ಲಿಂಗಮ್ಮನ ವಚನಗಳು, ವರದಾನಿ ಗುಡ್ಡಮ್ಮೆಯ ಚರಿತ್ರೆ, ವೀರಶೈವ ರಗಳೆ, ಶಿವಶರಣದ ಪದಗಳು-ಭಾಗ ೧-೨, ಸಂಗನಬಸವೇಶ್ವರನ ವಚನಗಳು, ಸಿದ್ಧರಾಮೇಶ್ವರನ ವಚನಗಳು, ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲ, ಸೋಮೇಕಟ್ಟೆ ಕೈವಲ್ಯಪದಗಳು, ಹಡಪದಪ್ಪಣ್ಣನ ವಚನಗಳು, ಹರಳಯ್ಯನ ತ್ರಿಪದಿ, ಹರಿಹರನ ವೃಷಭೇಂದ್ರ ರಗಳೆ ಭಾಗ ೧-೨-೩-೪-೫-೬, ೭, ಹೊಸಪದ್ಧತಿಯ ಬಸವೇಶ್ವರ ವಚನಗಳು.

ಭಾಗವತ, ವೆಂಕಟೇಶ, ಚಿನ್ನಮುಳಗುಂದ

ಜ : ೧೮೮೦ ಮ : ೧೯೩೬

ಬೆಳಗಾವಿ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವು ಅಲ್ಲಿಯೇ ಆಯಿತು. ೧೯೦೬ರಲ್ಲಿ ಮುಂಬಯಿ ವಿಲ್ಸನ್ ಕಾಲೇಜಿನಿಂದ ಬಿ.ಎ. ಪದವೀಧರರಾಗಿ ಮುಂಬಯಿ ಸರಕಾರದ ಪೋಲೀಸ್ ಶಾಖೆಯನ್ನು ಸೇರಿದರು. ಡೆಪ್ಯೂಟಿ ಸುಪರಿಟೆಂಡೆಂಟ್ ಹುದ್ದೆಯಲ್ಲಿದ್ದು ೧೯೩೧ರಲ್ಲಿ ನಿವೃತ್ತರಾಗಿ, ೧೯೩೬ರಲ್ಲಿ ಮರಣಹೊಂದಿದರು

ಗ್ರಂಥ : ಹೊರೇಸಿಯೋ (ಇ),

ಇಂಗ್ಲೀಷ್ : Police Manual

ಮಲ್ಲಿಕಾರ್ಜುನಪ್ಪ, ಶಿವಲಿಂಗಪ್ಪ, ರೈನಾಪೂರ

ಜ : ೧-೧-೧೮೮೦ ಮ : ೧೮-೪-೧೯೫೩

ಬೆಳಗಾವಿ ಜಿಲ್ಲೆಯ ಪರಸಗಡ ತಾಲ್ಲೂಕಿನ ರೈನಾಪುರದವರು. ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರೌಢವ್ಯಾಸಂಗವನ್ನೂ ಮಾಡಿ, ಬಿ.ಎ. ಪದವೀಧರರಾಗಿ ಮುಂಬಯಿ ಸರಕಾರದ ಕಂದಾಯ ಶಾಖೆಯನ್ನು ಸೇರಿದರು. ಸಂಸ್ಕೃತ, ಕನ್ನಡ ಸಾಹಿತ್ಯದಲ್ಲಿಯೂ ಜ್ಯೋತಿಷ್ಯಶಾಸ್ತ್ರದಲ್ಲಿಯೂ ಪಾರಂಗತರು. ೧೯೩೩ರಲ್ಲಿ ಮಾಮಲೇದಾರ್ ಹುದ್ದೆಯಿಂದ ನಿವೃತ್ತರಾದರು. ಶಿರಸಂಗಿಯ ಧರ್ಮನಿಧಿಯ ಸದಸ್ಯರಾಗಿದ್ದರು.

ಗ್ರಂಥಗಳು : ಅಭಿಜ್ಞಾನಶಾಕುಂತಲ (ಕಾಳಿದಾಸ ವಿರಚಿತ), (ಅ. ೧೯೩೩), ಮೇಘದೂತ (ಕಾಳಿದಾಸ ವಿರಚಿತ) (ಅ. ೧೯೧೦), ಲಿಂಗರಾಜರ ಚರಿತ್ರೆ (ಅ. ೧೯೪೯).

ಪರಿಷ್ಕೃತ : ಬಾಣಕಾದಂಬರಿ (ತೂರಮರಿಯವರಿಂದ ಭಾಷಾಂತರವಾದದ್ದು) ಕವಿಕರ್ಣ ರಸಾಯನ (ಷಡಕ್ಷರಿ ಕವಿಕೃತ ಸಂಸ್ಕೃತಗ್ರಂಥ).

ವೆಂಕಟರಾಯಕವಿ, ಹನುಮಾನ್

ಜ : ೨೧-೧೧-೧೮೮೦

ತುಮಕೂರು ತಾಲೂಕಿನ ಬೆಳ್ಳಾವೆ. ಶ್ರೀರಂಗಂ, ಕುಂಭಕೋಣಂ ಮೊದಲಾದ ಕಡೆಗೆ ಸಂಸ್ಕೃತ ವ್ಯಾಸಂಗಮಾಡಿ, ಕವಿಚರಿತೆಕಾರರಾದ ಆರ್. ನರಸಿಂಹಾಚಾರ್, ಎಸ್. ಜಿ. ನರಸಿಂಹಾಚಾರ್ ಹಾಗೂ ಎಂ.ಎ. ರಾಮಾನುಜ ಅಯ್ಯಂಗಾರ್ ಅವರೊಂದಿಗೆ ಹಳಗನ್ನಡ ಗ್ರಂಥಪರಿಶೋಧನೆಯಲ್ಲಿ ತೊಡಗಿದರು. ಇವರು ತುಮಕೂರು ಜಿಲ್ಲೆಯ ಕೆಲವು ಮಿಡಲ್ ಸ್ಕೂಲುಗಳಲ್ಲಿ ಮುಖ್ಯೋಪಾಧ್ಯಾಯರಾಗಿಯೂ, ಚಿಕ್ಕನಾಯಕನ ಹಳ್ಳಿ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿಯೂ ಇದ್ದು ನಿವೃತ್ತರಾದರು (೧೯೩೩).

೧೯೦೭-೮ರಲ್ಲಿ ಧಾರವಾಡದಲ್ಲಿ ನೆರೆದ ಗ್ರಂಥಕರ್ತರ ಸಮ್ಮೇಲನಕ್ಕೆ ಪ್ರತಿನಿಧಿಗಳಾಗಿದ್ದರು.

ಗ್ರಂಥಗಳು : ಕುರುಕುಲಕಲಹಂ, ಚಂದ್ರಹಾಸಾಭ್ಯುದಯಂ, ಜಾನಕೀಪರಿಣಯ ನಾಟಕಂ, ಭಾವನಾತ್ರಯಂ.

ಅಪ್ರಕಟಿತ : ಆರ್ಯಮತತತ್ತ್ವಂ, ಉತ್ತರರಾಮಚರಿತಂ, ಚಾರುದತ್ತಂ, ತಿರುಳ್ಗನ್ನಡದ ಪುರುಳ್, ಪೂರ್ವರಾಮಚರಿತಂ, ಬಾಲಕೃಷ್ಣಚರಿತಂ ಮುಕುಂದಾನಂದಂ, ವಾಸವದತ್ತವೃತ್ತಂ, ಸಂತಾಪಶತಕಂ*.

ವೆಂಕಟರಾವ್ ಭೀಮರಾವ್, ಆಲೂರ

ಜ : ೧೨-೭-೧೮೮೦

ಧಾರವಾಡ. ಅಲ್ಲಿಯೇ ಮಾಧ್ಯಮಿಕ ಶಿಕ್ಷಣಮುಗಿಸಿ ೧೮೯೭ರಲ್ಲಿ ಮ್ಯಾಟ್ರಿಕ್ ಪಾಸಾದರು. ೧೯೦೩ರಲ್ಲಿ ಬಿ.ಎ., ೧೯೦೫ರಲ್ಲಿ ಎಲ್‌ಎಲ್.ಬಿ. ಪದವೀಧರರಾಗಿ ಧಾರವಾಡದಲ್ಲಿ ವಕೀಲಿಯ ವ್ಯವಸಾಯವನ್ನು ಪ್ರಾರಂಭಿಸಿದರು.

ನವಕರ್ನಾಟಕ ನಿರ್ಮಾಣದ ಕಾರ್ಯದಲ್ಲಿ ಅಗ್ರಗಣ್ಯರಾಗಿ ದುಡಿದು ಅಖಿಲ ಕರ್ನಾಟಕಕ್ಕೆ 'ಕುಲಪುರೋಹಿತ'ರೆಂದು ಪರಿಚಿತರಾದ ಇವರು, ಸುಮಾರು ೩೦ ವರ್ಷಗಳ ಮೇಲ್ಪಟ್ಟು ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ ಜೀವನವನ್ನು ಪ್ರಬುದ್ಧಗೊಳಿಸಲು ಶ್ರಮಿಸಿದ್ದಾರೆ. ಕನ್ನಡದ ಮುಖಾಂತರ ಭರತವರ್ಷದ ಕಲ್ಯಾಣ ಸಾಧನೆಯನ್ನು ಧ್ಯೇಯವಾಗಿರಿಸಿಕೊಂಡು 'ಕರ್ನಾಟಕಾಂತರ್ಗತ ಭಾರತಮಾತೆಗೆ ನಮಸ್ಕಾರ' ಎಂಬ

* ಈ ಗ್ರಂಥಗಳೆಲ್ಲ ಸೆಂಟ್ರಲ್ ಜೈನ ಓರಿಯಂಟಲ್ ಲೈಬ್ರರಿ, ಆರಾ, ಭಾಂಡಾರಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಪೂನಾ, ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು- ಮೊದಲಾದ ಸ್ಥಳಗಳಲ್ಲಿ ಹಸ್ತಪ್ರತಿಯಾಗಿ ಕಾದಿಡಲ್ಪಟ್ಟವೆ.

ಮಂತ್ರವನ್ನು ಘೋಷಿಸಿ ಕನ್ನಡದ ಶ್ರೇಯೋಭಿವೃದ್ಧಿಗೆ ಇವರು ಮಾರ್ಗದರ್ಶಕರಾದರು.

ಕರ್ನಾಟಕ ಗ್ರಂಥಪ್ರಸಾರ ಮಂಡಲ (೧೯೦೮), ನವಜೀವನ ಗ್ರಂಥಭಾಂಡಾರ, ಗೀತಾಕುಸುಮಮಂಜರಿ ಎಂಬ ಗ್ರಂಥಪ್ರಕಾಶನ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ಎರಡು ಸಲ ನೆರೆಯಿಸಿ ಕನ್ನಡದ ಐಕ್ಯತೆಗೆ ನಾಂದಿಯನ್ನು ಹಾಕಿದರು (೧೯೦೭, ೧೯೦೮). ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖಪತ್ರವಾಗಿದ್ದ 'ವಾಗ್ಭೂಷಣ' (೧೯೦೮, ೧೯೧೬), 'ಕನ್ನಡಿಗ' ಧಾರವಾಡ, 'ಜಯಕರ್ನಾಟಕ' (೧೯೨೩ ನವಂಬರ್‌ದಿಂದ ೧೯೨೯ ಅಕ್ಟೋಬರ್), 'ಕರ್ಮವೀರ' (೧೯೨೦-೨೧) ಇತ್ಯಾದಿ ಪತ್ರಿಕೆಗಳ ಸಂಪಾದನ ಕಾರ್ಯವನ್ನು ನಿರ್ವಹಿಸಿದರು. ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ (೧೯೧೦-೨೦) ಶಾಂತೇಶ ವಾಚನಾಲಯ (೧೦ ವರ್ಷ), ಕರ್ನಾಟಕ ಇತಿಹಾಸ ಮಂಡಲ (೧೯೧೪-೩೦), ಕನ್ನಡಿಗರ ಸಂಘ ಮೊದಲಾದ ಸಂಸ್ಥೆಗಳ ಅಧ್ಯಕ್ಷರಾಗಿದ್ದರು. ೧೯೧೯ರಲ್ಲಿ ಪುಣೆಯಲ್ಲಿ ಕೂಡಿದ್ದ ಓರಿಯೆಂಟಲ್ ಕಾನ್ಫರನ್ಸಿಗೆ ಇತಿಹಾಸ ಮಂಡಲದ ಪ್ರತಿನಿಧಿಯಾಗಿದ್ದರು. ಕರ್ನಾಟಕ ಸಭೆಯ ಸಂಸ್ಥಾಪಕರು; 'ಪೈಸಾ ಫಂಡು', ೧೯೨೦ರಲ್ಲಿ ಧಾರವಾಡದಲ್ಲಿ ನೆರೆದ ಕರ್ನಾಟಕ ರಾಷ್ಟ್ರೀಯ ಪರಿಷತ್ತು, ಹಾಗೂ ಅಖಿಲ ಕರ್ನಾಟಕ ವಿಶ್ವವಿದ್ಯಾನಿಲಯ ಸಮಿತಿಗಳ ಕಾರ್ಯದರ್ಶಿಯಾಗಿದ್ದರು. ರಾಷ್ಟ್ರೀಯ ಪರಿಷತ್ತು (ಧಾರವಾಡ, ೧೯೨೮) ಹಾಗೂ ಧಾರವಾಡ ಜಿಲ್ಲೆಯ ಪ್ರಥಮ ಸಾಹಿತ್ಯ ಸಮ್ಮೇಳನದ (೧೯೩೬) ಸ್ವಾಗತಾಧ್ಯಕ್ಷರು; ವಿಜಯನಗರ ಸಾಮ್ರಾಜ್ಯದ ಷಟ್ಶತ ಸಾಂವತ್ಸರಿಕೋತ್ಸವ ಮಂಡಲ (೧೯೩೫), ಬೆಂಗಳೂರಿನ ಅಖಿಲ ಕರ್ನಾಟಕ ಕೀರ್ತನ ಸಮ್ಮೇಳನ, ಧಾರವಾಡ ಭರತಕಲೋತ್ತೇಜಕ ಮಂಡಲ (೧೯೦೬) ಗಳ ಉಪಾಧ್ಯಕ್ಷರು ಮಧ್ವಸಿದ್ಧಾಂತೋತ್ತೇಜಕಸಭೆಯ ನಿರ್ದೇಶಕರಲ್ಲೊಬ್ಬರು.

ಕನ್ನಡ ಸಾಹಿತ್ಯ ಸಮ್ಮೇಲನದ ೧೬ನೆಯ ಅಧಿವೇಶನದ ಅಧ್ಯಕ್ಷರು (ಮೈಸೂರು, ೧೯೩೦).

ಗ್ರಂಥಗಳು : ಅರವಿಂದರ ಕೊನೆಯ ರಾಜಕಾರಣದ ಮೃತ್ಯುಪತ್ರ, ಅರವಿಂದರು ತಮ್ಮ ಹೆಂಡತಿಗೆ ಬರೆದ ಪತ್ರ, ಕನ್ನಡಿಗನ ಭ್ರಮನಿರಸನ (ಈ. ೧೯೧೩), ಕರ್ನಾಟಕ ಗತವೈಭವ, ಕರ್ನಾಟಕ ವೀರರತ್ನಗಳು, ಗೀತಾಪರಿಮಳ, ಗೀತಾಪ್ರಕಾಶ, ಗೀತಾಭಾವಪ್ರದೀಪ ಭಾಗ ೧, ಭಾಗ ೨, ಗೀತಾರಹಸ್ಯ (ನ. ೧೯೧೯), ಗೀತಾಸಂದೇಶ, ಚಳವಳಿಗಳ ಆತ್ಮವು (ಯ. ೧೯೧೦), ನನ್ನ ಜೀವನಸ್ಮೃತಿಗಳು ಭಾಗ ೧, ಭಾಗ ೨, ನಾವು ಈಗ ಬೇಡುವ ಸ್ವರಾಜ್ಯ (ಯ. ೧೯೧೭), ಕರ್ನಾಟಕತ್ವದ ಸೂತ್ರಗಳು (ಈ. ೧೯೫೦), ಮಧ್ವಸಿದ್ಧಾಂತಪ್ರವೇಶಿಕೆ, ಮಧ್ವಾಚಾರ್ಯರ ಮೂಲಸಿದ್ಧಾಂತದ ವಿವರಣೆ (ನ.೧೯೫೨), ಮಿಕ್ಕ ಸುಧಾರಣೆಗಳ ನಿಷ್ಫಲತೆ (ಯ. ೧೯೧೭), ರಾಷ್ಟ್ರೀಯತ್ವದ ಮೀಮಾಂಸೆ (ಈ. ೧೯೪೦), ವಿಜಯನಗರ ಉತ್ಸವದ ವರದಿ (ಮ.-ಎ.೧೯೩೮) ವಿದ್ಯಾರಣ್ಯ ಚರಿತ್ರೆ (ಮ-ಚ.೧೯೦೭), ಶಿಕ್ಷಣಮೀಮಾಂಸೆ, ಸ್ವರಾಜ್ಯವನ್ನು ಕೊಡದೆ ಇರುವುದಕ್ಕೆ ಹೇಳುವ ನೆವ (ಯ. ೧೯೧೭), ಸ್ವರಾಜ್ಯವನ್ನೇ ಏಕೆ ಬೇಡುತ್ತೇವೆ? (ಯ. ೧೯೧೭), ಸ್ವರಾಜ್ಯವೆಂದರೇನು (ಯ. ೧೯೧೭).

ಅಪ್ರಕಟಿತ : ಗಾಂಧೀಯವರ ಚರಿತ್ರೆ, ನೀತಿಮೀಮಾಂಸೆ (Aristotle ಕೃತ Data of Ethics ಗ್ರಂಥದ ಭಾಷಾಂತರ), ಪೂರ್ವ ಮತ್ತು ಪಶ್ಚಿಮ, ಮ್ಯಾಝಿನಿ ಚರಿತ್ರೆ, ವಿವೇಕಾನಂದರ ಭಕ್ತಿಯೋಗ, ಸ್ವಾತಂತ್ರ್ಯ (Robert Mill ಕೃತ Liberty ಗ್ರಂಥದ ಭಾಷಾಂತರ), ಸುಖವೂ ಶಾಂತಿಯೂ.

ಆತ್ಮಾರಾಮಶಾಸ್ತ್ರೀ, ನಾಗೇಂದ್ರಶಾಸ್ತ್ರೀ, ಓಡ್ಲಮನೆ, ವಿದ್ಯಾವಾಚಸ್ಪತಿ

ಜ : ೧೮೮೧

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕು ಓಡ್ಲಮನೆ. ಸಾಂಗಲಿಯ ಸಂಸ್ಕೃತ ಪಾಠಶಾಲೆಯಲ್ಲಿಯೂ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸ ಮಾಡಿ ಪ್ರೌಢವ್ಯಾಸಂಗಕ್ಕಾಗಿ ಕಾಶಿಗೆ ತೆರಳಿದರು. ವ್ಯಾಕರಣ, ಅಲಂಕಾರ ಶಾಸ್ತ್ರಪಾರಂಗತರಾಗಿ ಬಂದು ಕ್ರಿಶ.೧೯೧೨ರಲ್ಲಿ ಮಂಗಳೂರು ಬಾಸೆಲ್ ಮಿಶನ್ ಹಾಯಸ್ಕೂಲಿನಲ್ಲಿ ಸಂಸ್ಕೃತ ಪಂಡಿತರಾಗಿ ನಿಯಮಕ ಹೊಂದಿದರು. ೧೯೨೬ರಲ್ಲಿ ಮಡಿಕೇರಿ ಸೆಂಟ್ರಲ್ ಸ್ಕೂಲಿಗೆ ಬದಲಿಸಲ್ಪಟ್ಟು ೧೯೩೯ರವರೆಗೂ ಅಂದರೆ ಸೇವಾನಿವೃತ್ತರಾಗುವವರೆಗೂ ಅಲ್ಲಿಯೇ ಇದ್ದರು.

ಶಾಸ್ತ್ರಿಗಳ ಧರ್ಮ-ವೇದಾಂತವಿಷಯಕ ಪ್ರಬಂಧಗಳಿಗೆ ಹುಬ್ಬಳ್ಳಿಯ ಶಂಕರಾಚಾರ್ಯೋತ್ಸವ ಸಮಿತಿಯಿಂದ ಸತತ ೫ ವರ್ಷ ಬಹುಮಾನ ದೊರೆತಿದೆ. 'ಧರ್ಮನಿತ್ಯೋರೇಕವಾಕ್ಯತಾ' ಎಂಬ ಲೇಖನದ ಬಗ್ಗೆ ಕಲಕತ್ತೆಯ ನಿಖಿಲ ಭಾರತ ಸಾಹಿತ್ಯ ಸಂಘದಿಂದ 'ವಿದ್ಯಾವಾಚಸ್ಪತಿ' ಪ್ರಶಸ್ತಿಯು ಇವರಿಗೆ ದೊರೆತಿದೆ (೧೯೧೯). (೧೯೧೬ರಿಂದ ೧೯೨೫ರ ವರೆಗೆ ಮಂಗಳೂರಿನ್ನ (ಸ್ವದೇಶಾಭಿಮಾನಿ' ವಾರಪತ್ರಿಕೆಯ ಸಂಪಾದಕರಾಗಿದ್ದರು. ಅ ಭಾ.ಸನಾತನ ವರ್ಣಾಶ್ರಮಸ್ವರಾಜ್ಯ ಸಂಘದ ಕರ್ನಾಟಕ ಶಾಖೆಯ ಅಧಿವೇಶನದ ಅಧ್ಯಕ್ಷರು (ಕುಂದಾಪುರ, ೧೯೩೪)

ಗ್ರಂಥಗಳು : **ಕನ್ನಡ** : ಕೇತುಭಂಗ (ಅ), ನಾಟಕ ಕಲೆ (ತ. ೧೨೦), ಶ್ರೀಕೃಷ್ಣಚರಿತಾಮೃತಂ (ಧ-ಚ), ಸನಾತನ ಧರ್ಮ (ಧ. ೧೯೩೬), ಸಂಕ್ಷೇಪ ಗೀತಾ (ಅ), ಹಿಂದುವ್ರತ ವಿವೇಕ (ಧ).

ಅಪ್ರಕಟಿತ : ಈಶ್ವರಜ್ಞಾನ.

ಸಂಸ್ಕೃತ : ಪುಷ್ಪಮಾಲಾ, ಸತ್ವಸಂಜೀವಿನಿ, ಗದ್ಯಪದ್ಯಸಂಗ್ರಹ, ವ್ಯಾವಹಾರಿಕ ಪರಮಾರ್ಥಂ, ಬ್ರಾಹ್ಮಣಾಬ್ರಾಹ್ಮಣವಾದಮೂಲಂ.

ಅಪ್ರಕಟಿತ : ಯೋಗೀಶಗೀತಾ, ಸಾವಿತ್ರಿಚರಿತಂ.

ಮರಾಠಿ : ಆರ್ಯಮಾತೇಚಾ ನಿರೋಪ, ಮರಾಠಿ ಲೇಖ ಸಂಗ್ರಹ.

ಚನ್ನಪ್ಪ, ಉತ್ತಂಗಿ, ರೆವರೆಂಡ್

ಜ : ೨೮-೧೦-೧೮೮೧

ಧಾರವಾಡ. ಧಾರವಾಡ ಹಾಗೂ ಮಂಗಳೂರಲ್ಲಿ ಶಿಕ್ಷಣ ಪಡೆದು ಧಾರವಾಡ ಮಿಶನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಸರ್ವಜ್ಞವಚನಸಂಗ್ರಹ ಪರಿಷ್ಕರಣ ಹಾಗೂ ಪ್ರಕಾಶನಕ್ಕಾಗಿ ಅವಿಶ್ರಾಂತ ಪರಿಶ್ರಮ ವಹಿಸಿ ಕನ್ನಡಭಾಷೆಯ ಒಂದು ಗುಪ್ತ ನಿಧಿಸಂಚಯವನ್ನು ಬೆಳಕಿಗೆ ತಂದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಈ ವಚನ ಸಂಗ್ರಹಗಳ ವಿವಿಧ ಆವೃತ್ತಿಗಳನ್ನು ಟೀಕೆ-ಟಿಪ್ಪಣಿಯೊಂದಿಗೆ ಪ್ರಕಟಿಸಿರುವರು. ಕನ್ನಡ ಸಾಹಿತ್ಯ ಸಮ್ಮೇಲನದ ೩೨ ನೆಯ ಅಧಿವೇಶನದ (ಕಲಬುರ್ಗಿ, ೧೯೪೯) ಅಧ್ಯಕ್ಷರು.

ಗ್ರಂಥಗಳು : ಅನುಭವಮಂಟಪ (ಧ.೧೯೩೨), ದೃಷ್ಟಾಂತದರ್ಪಣ (ಧ), ನಾರಾಯಣ ವಾಮನ ತಿಲಕ ಇವರ ಜೀವನಚರಿತ್ರೆ, ಬನಾರಸಕ್ಕೆ ಬೆತ್ಲೆಹೇಮಿನ ಸಂದೇಶ (ಧ.೧೯೧೫), ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ, ಹಿಂದೂ ಸಮಾಜ ಹಿತಚಿಂತನೆ (ಲ.೧೯೨೧).

ಪರಿಷ್ಕೃತ : ಸರ್ವಜ್ಞ ವಚನಗಳು.

ಸುಬ್ರಹ್ಮಣ್ಯಶರ್ಮ, ಯಲ್ಲಂಬಳಸೆ

ಜ : ೧೮೮೧

ಕಡೂರು ಜಿಲ್ಲೆಯ ಯಲ್ಲಂಬಳಸೆ ಗ್ರಾಮ. ಮದ್ರಾಸ್ ವಿಶ್ವವಿದ್ಯಾನಿಲಯದ ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಕೆಲಕಾಲ ವಿದ್ಯಾ ಇಲಾಖೆಯಲ್ಲಿ ಮುಖ್ಯಾಧ್ಯಾಪಕರಾಗಿ ಕೆಲಸಮಾಡಿದರು. ಅದೇ ಸಮಯದಲ್ಲಿ ಕೂಡ್ಲಿ ಜಗದ್ಗುರು ವಿರೂಪಾಕ್ಷಶಾಸ್ತ್ರಿಗಳಲ್ಲಿ ಶಾಂಕರವೇದಾಂತ ಹಾಗೂ ಕೆ.. ಕೃಷ್ಣಸ್ವಾಮಿ ಅಯ್ಯರರ ಬಳಿಯಲ್ಲಿ ಪಾಶ್ಚಾತ್ಯ ತತ್ತ್ವಶಾಸ್ತ್ರದ ಸಾಂಗೋಪಾಂಗ ವ್ಯಾಸಂಗವನ್ನು ಮಾಡಿದರು. ಹಾಗೂ ಶಾಂಕರಾದ್ವೈತ ವೇದಾಂತದಲ್ಲಿ ಭಾಷ್ಯ, ಪ್ರಸ್ಥಾನಗಳ ವ್ಯತ್ಯಾಸವನ್ನು ವಿವರಿಸುವ 'ಮೂಲವಿದ್ಯಾನಿರಾಸಃ' ಎಂಬ ಸಂಸ್ಕೃತ ಗ್ರಂಥವೊಂದನ್ನು ರಚಿಸಿದರು. ಹೊಳೇನರಸೀಪುರದಲ್ಲಿ 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ'ವನ್ನು ಏರ್ಪಡಿಸಿ, ಅಧ್ಯಾತ್ಮ ವಿದ್ಯಾನಿಲಯವನ್ನೂ, ಮುದ್ರಣಾಲಯವನ್ನೂ, ಅಧ್ಯಾತ್ಮ ಪುಸ್ತಕಭಂಡಾರ ವಾಚನಾಲಯವನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ೧೯೨೧ರಿಂದ 'ಅಧ್ಯಾತ್ಮ ಪ್ರಕಾಶ' ಮಾಸಪತ್ರಿಕೆಯೂ ಈ ಸಂಸ್ಥೆಯ ಆಶ್ರಯದಲ್ಲಿ ಹೊರಡುತ್ತಲಿದೆ. ಮೈಸೂರು ಮಹಾರಾಜರ ಆದೇಶದ ಮೇರೆಗೆ ಶಾಂಕರಭಾಷ್ಯಾದಿ ಕೃತಿಗಳನ್ನು ಕನ್ನಡಿಸಿ ಪ್ರಕಟಿಸುತ್ತಿದ್ದಾರೆ. ಅಧ್ಯಾತ್ಮತತ್ತ್ವ, ವೈದಿಕಧರ್ಮ ಹಾಗೂ ಅದ್ವೈತಸಿದ್ಧಾಂತದ ಪ್ರಚಾರದಲ್ಲಿ ತುಂಬ ನಿಷ್ಠೆಯಿಂದ ದುಡಿದ ಈ ಮಹನೀಯರ ಎಲ್ಲ ಕೃತಿಗಳೂ ಧರ್ಮ, ತತ್ತ್ವಶಾಸ್ತ್ರ ಹಾಗೂ ಅಧ್ಯಾತ್ಮವಿಷಯಗಳಿಗೆ ಸಂಬಂಧಪಟ್ಟಿವೆ. ಆಶ್ರಮ ಬದಲಾಯಿಸಿ ಸಚ್ಚಿದಾನಂದ ಸರಸ್ವತೀಸ್ವಾಮಿ ಎಂಬ ನಾಮಾಭಿಧಾನದಿಂದ ಲೋಕಸೇವೆಯನ್ನು ಮಾಡುತ್ತಿರುವರು.

ಗ್ರಂಥ... ಅಲಾತಶಾಂತಿಪ್ರಕರಣ, ಅಪರೋಕ್ಷಾನುಭೂತಿ (ಭಾವಾರ್ಥ, ವಿವರಣೆ),

ಅಧ್ಯಾತ್ಮವೆಂದರೇನು?, ಅಧ್ಯಾತ್ಮಗೀತಾವಳಿ (ಅ), ಅದ್ವೈತಸಿದ್ಧಾಂತ, ಆತ್ಮಬೋಧೆ (ಭಾವಾರ್ಥ, ಟಿಪ್ಪಣಿ), ಆತ್ಮವಿದ್ಯಾವಿಲಾಸ (ಭಾವಾರ್ಥ), ಈಶಾವಾಸ್ಯೋಪನಿಷತ್ತು, ಉಪದೇಶಸಾಹಸ್ರಿ (ನ.೧೯೩೨), ಉಪನಿಷತ್ತುಗಳ ಮೊದಲನೆಯ ಪರಿಚಯ, ಕಠೋಪನಿಷತ್ತು, ಕೇನೋಪನಿಷತ್ತು, ಕೇನೋಪನ್ಯಾಸಮಂಜರಿ, ಗಣೇಶಾಷ್ಟಕ (ಭಾವಾರ್ಥ, ವಿವರಣೆ; ಅ), ಗೀತೆಸಾರ್ಥ, ಗೀತಾಭಾಷ್ಯ, ಗುರುಭಕ್ತಿಸಾರ ಸಟೀಕ;(ಅ), ಚಿದಾನಂದ ರಗಳೆ ಸಟೀಕ;(ಅ), ಚಿದಾನಂದ ಸವಾಯಿ (ಅ), ಜಿಜ್ಞಾಸುಗಳ ತೊಡಕು, ತತ್ತ್ವಸಮಾಸ (ಸಾಂಖ್ಯಸೂತ್ರಗಳ ವಿವರಣ), ದೃಗ್ದೃಶ್ಯವಿವೇಕ, ಧಮ್ಮಪದ (ಬುದ್ಧಗೀತೆ), ಪರಮಾರ್ಥಚಿಂತಾಮಣಿ, ಪ್ರಶ್ನೋಪನಿಷತ್ತು, ಬ್ರಹ್ಮಸೂತ್ರ ಸಭಾಷ್ಯ, ಭಗವಚ್ಛರಣಸ್ತೋತ್ರ (ಭಾವಾರ್ಥ, ವಿವರಣೆ ಸಹಿತ), (ಅ), ಭಕ್ತಿಯೋಗ (ಸ್ವಾಮಿ ವಿವೇಕಾನಂದರ ಭಾಷಣ), ಭೀಷ್ಮಸ್ತವರಾಜ (ಅ), ಮಾಂಡೂಕ್ಯೋಪನಿಷತ್ತು, ಮುಂಡಕೋಪನಿಷತ್ತು, ಮುಂಡಕೋಪನ್ಯಾಸಮಂಜರಿ, ಮುಕುಂದಮಾಲಾಸ್ತೋತ್ರ (ಭಾವಾರ್ಥಸಹಿತ; ಅ), ಮೋಹಮುದ್ಗರ (ಭಜಗೋವಿಂದ ಸ್ತೋತ್ರ), ಲಕ್ಷ್ಮಣಶಾಸ್ತ್ರಿ ಉರುಫ್ ಹಸೇನ, ಲಕ್ಷ್ಮೀನರಸಿಂಹ ಪಂಚರತ್ನವಾಕ್ಯವೃತ್ತಿ (ಮೂಲ, ಟಿಪ್ಪಣಿ ಅರ್ಥ), ವಾಗ್ದೇವಿಸ್ತೋತ್ರ (ಅ), ವಿಲಕ್ಷಣ ಮೌನಿ (ಸಂಭಾಷಣೆ, ಉಪನಿಷತ್ತುಗಳ ತಾತ್ಪರ್ಯ) ವಿಶ್ವಧರ್ಮ ಸಮ್ಮೇಳನದಲ್ಲಿ (ಸ್ವಾಮಿ ವಿವೇಕಾನಂದರ ಭಾಷಣ), ವೇದಾಂತದರ್ಶನ (ಬ್ರಹ್ಮಸೂತ್ರದ ಪರಿಚಯ), ವೇದಾಂತಬಾಲಬೋಧೆ, ವೇದಾಂತಪ್ರವೇಶಿಕೆ (ಅದ್ವೈತಪಂಚರತ್ನದ ವಿವರಣೆ), ವೇದಾಂತಡಿಂಡಿಮ (ಭಾವಾರ್ಥ ಸಹ), ವೇದಾಂತವಿಚಾರದ ಇತಿಹಾಸ, ವೇದಾಂತ ಕಥಾವಳಿ (ಇ. ೧೯೨೩), ವೇದಾಂತೋಪನ್ಯಾಸಗಳು (ಸ್ವಾಮಿ ವಿವೇಕಾನಂದರ ಭಾಷಣಗಳು), ಶಿವನಾಮಾಷ್ಟೋತ್ತರಶತಕ (ಅರ್ಥ, ವಿವರಣೆ ಸಹ; ಅ), ಶಿವಕವಚ (ಅ), ಶ್ರೀಮದ್ಭಗವದ್ಗೀತಾಭಾಷ್ಯ (ಶಾಂಕರಭಾಷ್ಯದ ಭಾಷಾಂತರ ಅಧ್ಯಾಯ ೧-೮; ೧೯೪೬, II) ಶ್ರೀಮದ್ಭಗವದ್ಗೀತಾಭಾಷ್ಯ (ಶಾಂಕರಭಾಷ್ಯದ ಭಾಷಾಂತರ-ಅಧ್ಯಾಯ ೯-೧೮; ೧೯೪೭, II), ಶ್ರೀರಾಮಹೃದಯ, ಶ್ರೀರಾಮಗೀತಾ (ಅ), ಶಂಕರಸಿದ್ಧಾಂತ, ಶಂಕರಮಹಾಮನನ, ಸವಾರ್ತಿಕಪಂಚೀಕರಣ (ಸಾರ್ಥ) ಸದ್ಗುರುವಿನ ಅನುಗ್ರಹ, ಸರ್ವೇಷ್ಟಸಿದ್ಧಿ, ಸಮುದ್ರಮಥನ, ಸ್ವಾತ್ಮಪ್ರಕಾಶಿಕೆ (ಮೂಲ, ಅರ್ಥ ಟಿಪ್ಪಣಿ ಸಹ), ಹರಿಶರಣಾಷ್ಟಕ (ಭಾವಾರ್ಥ, ವಿವರಣೆಗಳೊಡನೆ; ಅ), ಜ್ಞಾನಯೋಗ (ಸ್ವಾಮಿ ವಿವೇಕಾನಂದರ ಭಾಷಣ).

ಸಂಸ್ಕೃತ : ಈಶಾವಾಸ್ಯೋಪನಿಷತ್ (ಸಟೀಕ), ಮೂಲವಿದ್ಯಾನಿರಾಸಃ (ಶ್ರೀಶಂಕರ ಹೃದಯಮ್), ವೇದಾಂತಡಿಂಡಿಮ.

ಕೃಷ್ಣಪ್ರಭು, ಬೋಳಂತೂರು

ಜ : ೧೮೮೨

ಬಂಟವಾಳದ ಬಳಿಯ ಬೋಳಂತೂರು. ಕೆಲವು ಕಾಲ ಬಂಟವಾಳ 'ಮೆಜಿಸ್ಟ್ರೇಟ್' ಕಚೇರಿಯಲ್ಲಿ ಗುಮಾಸ್ತರಾಗಿದ್ದು ೧೯೧೪ರಲ್ಲಿ ಅಲ್ಲಿಯೇ 'ವಿಕ್ಟೋರಿಯಾ ಪ್ರಿಂಟಿಂಗ್

ವರ್ಕ್ಸ್' ಎಂಬ ಮುದ್ರಣಾಲಯವನ್ನು ಸ್ಥಾಪಿಸಿ ಸ್ವತಂತ್ರ ಉದ್ಯೋಗ ಪ್ರಾರಂಭಿಸಿದರು.

ಗ್ರಂಥಗಳು : ಕನ್ನಡ : ಜಾತಕದರ್ಪಣ, ಡಕಾಯತಿ (ಇ.೧೯೧೬), ಮಹಾತ್ಮಾ ಕವಿ ಜಯದೇವ (ಅ-ಚ.೧೯೩೫), ಮೃಚ್ಛಕಟಿಕ (ಆ.೧೯೧೭), ಸುಬೋಧಶತಕ (ಅ.೧೯೩೬), ಸುವರ್ಣಸಂಪುಟ (ಇ).

ಕೊಂಕಣಿ : ಚಂದ್ರಹಾಸ, ವಸ್ತ್ರಾಪಹರಣ, ಶ್ರೀಕೃಷ್ಣಜನ್ಮಾಷ್ಟಮಿ, ಶ್ರೀಕೃಷ್ಣಸತ್ಯಭಾಮಾ, ಧ್ರುವಚರಿತ್ರೆ, ನಳಚರಿತ್ರೆ.

ನರಹರಿಶಾಸ್ತ್ರೀ, ಶೀಬಿನರಸಾವಧಾನಿ, ಬೆಳ್ಳಾವೆ, ಕರ್ನಾಟಕ ಕವಿಕೇಸರಿ

ಜ : ೧೮೮೨

ತುಮಕೂರಿನಲ್ಲಿ ಶಿಕ್ಷಣ. ಮ್ಯಾಟ್ರಿಕ್ಯುಲೇಶನ್ ಮುಗಿದನಂತರ ೧೯೦೦ರಲ್ಲಿ ಉಪಾಧ್ಯಾಯರಾದರು. ಮುಂದೆ ಟ್ರೈನಿಂಗ್ ಆದ ಬಳಿಕ ಕೋಲಾರದ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲಿನಲ್ಲಿಯೂ ಕೆಲವು ವರ್ಷ ಗ್ರಾಮಾಂತರ ಶಾಲೆಗಳ ಪರೀಕ್ಷಕರಾಗಿಯೂ ಕೊನೆಗೆ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರಾಗಿಯೂ ಸುಮಾರು ೩೮ವರ್ಷ ಕೆಲಸ ಮಾಡಿದರು. ಸಂಗೀತ, ಚಿತ್ರಕಲಾಕುಶಲರಾದ ಇವರ ಹಲವು ಚಿತ್ರಗಳಿಗೆ ಪ್ರಶಸ್ತಿಪತ್ರ ದೊರೆತಿವೆ. ೧೯೨೩ರಲ್ಲಿ ಎಂ. ವೆಂಕಟಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಶಾಸ್ತ್ರಿಗಳು ಕವಿತಾಷ್ಟವಧಾನವನ್ನು ನೆರವೇರಿಸಿದರು. ಅದೇ ವರುಷ ಕೋಲಾರದ ನಾಗರಿಕರಿಂದ 'ಕರ್ನಾಟಕ ಕವಿಕೇಸರಿ' ಎಂಬ ಪದವಿಯು ಇವರಿಗೆ ಅರ್ಪಿತವಾಯಿತು. 'ಗುಬ್ಬಿ ಚನ್ನಬಸವೇಶ್ವರ ಪ್ರಾಸಾದಿಕ ನಾಟಕ ಮಂಡಳಿ'ಯ ಪ್ರಮುಖ ನಾಟಕಕಾರರಾದ ಇವರು ಕೆಲವು ಚಲಚ್ಚಿತ್ರಗಳಿಗೆ ಕಥೆ-ಹಾಡುಗಳನ್ನು ರಚಿಸಿಕೊಟ್ಟಿದ್ದಾರೆ.

ಗ್ರಂಥಗಳು : ಆಕಾಶಗಮನಸಾಹಸ (ಭ. ೧೯೩೪), ಕಲ್ಯಾಣಗೀತಮಂಜರಿ (ಆ. ೧೯೧೩), ಜಲಂಧರ (ಆ. ೧೯೪೪),ದಶಾವತಾರ (ಆ. ೧೯೫೦), ದಾಮಾಜಿಪಂತ (ಭಕ್ತಿ ಸಾಮ್ರಾಜ್ಯ), (ಆ. ೧೯೪೭), ದ್ವಾದಶಮಂಜರಿ ಮತ್ತು ಚತುರ್ದಶಮಂಜರಿ (ಆ. ೧೯೩೦), ನಾಟಕಮಂಜರಿ (ಉತ್ತರಕುಮಾರ, ಖಾಂಡವದಹನ, ಜರಾಸಂಧವಧ, ಹರಿಹರಲೀಲೆ ಎಂಬ ಏಕಾಂಕ ನಾಟಕಗಳ ಸಂಗ್ರಹ) (ಆ. ೧೯೪೮), ಪರಶುರಾಮ ರಾಮಾಯಣ (ಬಬ್ಬೂರ ಕವಿಯ ಗ್ರಂಥವನ್ನು ಆಧರಿಸಿದ್ದು) (ಧ. ೧೯೩೮), ಪ್ರಭಾವತಿ (ಆ. ೧೯೧೩), ಪ್ರಹ್ಲಾದ (ಆ. ೧೯೪೯), ಪಾಪಿಯಾರು? (Victor Hugo ಕೃತೆ Les Miserables ಕಾದಂಬರಿಯ ಸಂಕ್ಷೇಪಾನುವಾದ) (ಇ. ೧೯೩೮), ಪಾಂಡವವಿಜಯ (ಆ. ೧೯೧೨), ಬಲಿಚಕ್ರವರ್ತಿ (ಆ. ೧೯೪೭) ಭೋಜಕಾಳಿದಾಸ (ಆ. ೧೯೨೪), ಮದನಮೋಹನರಾಜಚರಿತ್ರೆ (ಇ. ೧೯೧೨), ಮಹಾತ್ಮಾಬಸವೇಶ್ವರ (ಆ. ೧೯೫೧), ಮಾರ್ಕಂಡೇಯ (ಆ. ೧೯೩೨),ಮಹಾಭಾರತ (ಆದಿಪರ್ವ) (ಧ. ೧೯೫೧), ಮುರಳೀನಾದ (ಅ. ೧೯೩೬), ರಾಜಭಕ್ತಿಕಾವ್ಯ (ಅ. ೧೯೨೬), ರಾಜಶೇಖವಿಳಾಸ (ಆ. ೧೯೧೧),

ಲಂಕಾದಹನ (ಆ. ೧೯೧೨), ವಿಜಯವಿಲಾಸ (ಇ. ೧೯೩೪), ಶಬರಶಂಕರಲೀಲೆ (ಆ. ೧೯೨೦), ಶಂಕರವಿಜಯಸಂಗ್ರಹ (ಆ. ೧೯೫೧), ಶಾಕುಂತಲ (ಆ. ೧೯೧೨), ಶಾಲಾನಿತ್ಯಾನುಶಾಸನ (ಬ. ೧೯೩೦), ಶಾಲಾಸಂವಿಧಾನ (ಬ. ೧೯೨೪), ಶ್ರೀಕೃಷ್ಣಗಾರುಡಿ (ಆ. ೧೯೩೨), ಶ್ರೀಕೃಷ್ಣಪಾರಿಜಾತ (ಆ. ೧೯೩೨), ಶ್ರೀಕೃಷ್ಣಭಾಮಾಪರಿಣಯ (ಆ. ೧೯೩೯), ಶ್ರೀ ಕೃಷ್ಣರಾಜೇಂದ್ರರಜತೋತ್ಸವಾನಂದ ಲಹರಿ (ಆ. ೧೯೨೭), ಶ್ರೀಕೃಷ್ಣಲೀಲಾವಿನೋದ (ಆ. ೧೯೨೫) ಶ್ರೀಕೃಷ್ಣವಿಜಯ (ಆ. ೧೯೨೭) ಶ್ರೀ ರುಕ್ಮಿಣೀ ಸ್ವಯಂವರ (ಆ ೧೯೩೩), ಸತ್ಯಹರಿಶ್ಚಂದ್ರ (ಆ. ೧೯೧೩), ಸತೀಸುಲೋಚನಾ (ಆ. ೧೯೩೪), ಸದಾರಮಾ (ಆ. ೧೯೧೦), ಸಂಪೂರ್ಣ ರಾಮಾಯಣ (ಆ. ೧೯೪೯), ಸ್ಯಮಂತಕರತ್ನ ನಾಟಕ (ಆ. ೧೯೦೭), ಸಾಧ್ವಿ ಅನಸೂಯಾ (ಆ. ೧೯೪೯), ಸಾಧು ತುಕಾರಾಮ (ಆ. ೧೯೩೫), ಹಾಸ್ಯಕಲ್ಲೋಲ (ಆ. ೧೯೪೯).

ಅಪ್ರಕಟಿತ : ಚತುರನೀತಿಶತಕ, ರೇಣುಕವಿಜಯ, ಉಷಾಸ್ವಯಂವರ, ಸುರಾಮಹಿಮೆ, ಮೋಹಪಾಶ, ಸತ್ಯನಾರಾಯಣ, ಅವಿವೇಕಶಾಸನ, ಆಂಗ್ಲನಾಟಕಕಥಾಮಂಜರಿ, ಸಂಸ್ಕೃತನಾಟಕಕಥಾಮಂಜರಿ, ಮನೋರಂಜಿನಿ. ಮಹಾಭಾರತ-ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ, ಉದ್ಯೋಗಪರ್ವ, ಭೀಷ್ಮಪರ್ವ ಇತ್ಯಾದಿ.

ನಾರಾಯಣ, ಭೀಮರಾವ್, ಕಲಮದಾನಿ

ಜ: ೧೫: ೪: ೧೮೮೨

ಧಾರವಾಡ ಜಿಲ್ಲೆಯ ಗದಗ. ಮ್ಯಾಟ್ರಿಕ್ ಪರೀಕ್ಷೆಯನಂತರ ಪುಣೆಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಮುಂಬಯಿ ಸರಕಾರದ ಅರಣ್ಯಶಾಖೆಯಲ್ಲಿ ನೌಕರಿ ಹಿಡಿದರು. ಮೈಸೂರು ರೇಲ್ವೆ ಮತ್ತು ಮದ್ರಾಸ್ ಸದರ್ನ್ ಮರಾಠಾ ರೇಲ್ವೆಗಳಲ್ಲಿಯೂ ಎಂಜಿನಿಯರರಾಗಿ ಕೆಲಸಮಾಡಿ ನಿವೃತ್ತರಾದರು. ದಾಸಕೂಟದವರಾಗಿದ್ದು ಅಂಕಿತ ಪಡೆದವರು; ದ್ವೈತತತ್ತ್ವಜ್ಞಾನಪಾರಂಗತರಾದ ಇವರು ದಾಸಸಾಹಿತ್ಯವನ್ನು ವಿಪುಲವಾಗಿ ಸಂಗ್ರಹಿಸಿರುವರು.

ಗ್ರಂಥಗಳು : ಕನ್ನಡ : ಏಕಾದಶೀ ಮಹಾತ್ಮೆ (ಧ. ೧೯೧೫), ಜಗನ್ನಾಥದಾಸರ ಚರಿತ್ರೆ (ಧ-ಚ.೧೯೧೫), ದೇವರ ನಾಮಗಳು (ಆ. ೧೯೪೩), ಭಾಗವತ ಸಾರೋದ್ಧಾರ, ಶ್ರೀಮಧ್ವನಾಮ (ಧ.೧೯೩೯)

ಇಂಗ್ಲೀಷ್ : Mystic Teachings of Haridasas of Karnatak (Dr.A.P.Karmarkar ಅವರೊಂದಿಗೆ)

ಕಲ್ಲೋ, ಗಣೇಶ, ಬಿಜಾಪುರಕರ

ಜ : ೧೬-೮-೧೮೮೩

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕಾಗವಾಡ. ಧಾರವಾಡ ಶಿಕ್ಷಣಮಹಾ

ವಿದ್ಯಾಲಯದಲ್ಲಿ ಅಭ್ಯಾಸ ಪೂರೈಸಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾದರು. ಕೂಡಲೆ ಬೆಳಗಾವಿ ಜಿಲ್ಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ನಿಯಾಮಕ ಹೊಂದಿ ೧೯೦೫ರಿಂದ ೧೯೩೧ರ ವರೆಗೆ ಕೆಲಸಮಾಡಿದರು. ಸ್ವಂತ ವ್ಯಾಸಂಗದಿಂದ ಹಿಂದೀ, ಮರಾಠಿ ಭಾಷೆಗಳನ್ನು ಅವಗತಮಾಡಿಕೊಂಡರು. ಶಾಸ್ತ್ರೀಯ ಸಂಗೀತದಲ್ಲಿ ಪರಿಶ್ರಮವುಳ್ಳವರು. 'ಚದುರಂಗ', 'ಗಂಜೀಪ' ಆಟದಲ್ಲಿ ಹಲವು ಬಹುಮಾನಗಳನ್ನು ಪಡೆದಿದ್ದಾರೆ. ೧೯೦೫ರಲ್ಲಿ ಮಂಡಾಲೆಯ ಶಿಕ್ಷೆಯ ಪ್ರಸಂಗದಲ್ಲಿ ಲೋಕಮಾನ್ಯ ಬಾಳಗಂಗಾಧರ ಟಿಳಕರು ನ್ಯಾಯಾಸ್ಥಾನದಲ್ಲಿ ಕೊಟ್ಟ ಹೇಳಿಕೆಯನ್ನಾಧರಿಸಿ ಮರಾಠಿ ಕವಿತೆಯೊಂದನ್ನು ರಚಿಸಿ ಬಹುಮಾನಿಸಲ್ಪಟ್ಟರು. ಬೆಳಗಾವಿಯಲ್ಲಿ ಕೆಲಕಾಲ ನಡೆದ ವಾಙ್ಮಯವರ್ಧಕ ಗ್ರಂಥಮಾಲೆ (೧೯೧೪) ಹಾಗೂ ಭುವನೇಶ್ವರಿ ಗ್ರಂಥಮಾಲೆಯ ಸಂಚಾಲಕರಾಗಿದ್ದರು. ಕಾರ್ಯದರ್ಶಿ, ಸಂಘಟಕ ಹಾಗೂ ಕಾರ್ಯನಿರ್ವಾಹಕಮಂಡಲಿಯ ಸಭಾಸದರೆಂದು ಹಲವಾರು ಸಾಂಸ್ಕೃತಿಕ ಸಂಘಗಳಲ್ಲಿ ಸೇವೆಸಲ್ಲಿಸಿರುವರು.

ಗ್ರಂಥಗಳು : ಅಂಕಲಗಿ ಅಡಿವೆಪ್ಪನವರ ಚರಿತ್ರೆ (ಧ-ಚ.೧೯೨೫), ಈಶಸಂಕಲ್ಪ (ಇ.೧೯೧೪), ಎಂಟನೇ ಎಡ್ವರ್ಡ್‌ಬಾದಶಹರು (ಯ-ಚ.೧೯೩೬), ಏಳನೇ ಎಡ್ವರ್ಡ್ ಬಾದಶಹರು (ಯ-ಚ.೧೯೧೯), ಕನ್ನಡ ಕೇಸರಿ (ಆ. ೧೯೨೯), ಕರ್ಮವೀರ (ಇ. ೧೯೩೬), ಕಾವ್ಯ ಹೇಗೆ ಓದಬೇಕು? (ತ .೧೯೩೧), ಚಿದಂಬರ ಅದ್ಭುತ ಕಥಾಮಾಲೆ (ಧ-ಚ.೧೯೦೭), ಚಿದಂಬರ ದೀಕ್ಷಿತರ ಗುರುತು (ಧ-ಚ,೧೯೦೭), ಚಿದಂಬರ ವಿಜಯ (ಧ-ಚ.೧೯೧೯), ಜೈನಬಾಲಬೋಧೆ (ಧ. ೧೯೧೩), ದೇಹದಾನ (ಆ. ೧೯೩೪), ನಿಬಂಧ ಹೇಗೆ ಬರೆಯಬೇಕು? (೧೯೦೭), ಪಂಚಮ ಜಾರ್ಜರು (ಯ-ಚ.೧೯೧೧), ಬಾಜೀರಾಯರ ಆಖ್ಯಾಯಿಕೆ (ಮ. ೧೯೧೬), ಬುದ್ಧಿಬಂತು (ಇ. ೧೯೧೮), ಭೀಷಣ ಚಿತ್ರ (ಆ. ೧೯೧೯), ಮೋತೀಲಾಲ ನೆಹರೂ (ಯ.-ಚ೧೯೩೧), ವರದಕ್ಷಿಣೆ (ಇ. ೧೯೩೯), ವಿಚಿತ್ರಕೊಲೆ (ಇ.೧೯೩೩), ವಿವಿಧಕಲಾಶತಕ (೧೯೧೪), ಸದ್ಬೋಧಸಂಗ್ರಹ (ಧ. ೧೯೧೫), ಸಾಂಗಲಿ ಸಂಸ್ಥಾನದ ಚರಿತ್ರೆ (೧೯೩೫)

ಅಪ್ರಕಟಿತ : ರಾಜ್ಯಕ್ರಾಂತಿ, ಇದೇ ಫೋಟೋ, ರಾಷ್ಟ್ರಧ್ವಜ, ಶರಸಂಸಾರ, ರಾಜಭಕ್ತಿ, ಗರತೀ ಗುರುತು, ರೊಟ್ಟೀ ರಾಜ್ಯ.

ಚೆನ್ನಕೃಷ್ಣಯ್ಯ, ಮಾದನಹಳ್ಳಿ

ಜ : ೧೩-೭-೧೮೮೩

ಮಾದನಹಳ್ಳಿಯ ಶಾನುಭೋಗರ ಮನೆತನದವರು. ೧೯೦೮ರಲ್ಲಿ ಮೈಸೂರು ಸರಕಾರದ ವಿದ್ಯಾ ಇಲಾಖೆಯನ್ನು ಸೇರಿ ಗೋರಿಬದಿನೂರು, ಕೋಲಾರ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದರು.

ಗ್ರಂಥಗಳು : ಶ್ರೀ ಚೆನ್ನಕೇಶವಶತಕಂ (ಅ. ೧೯೧೧), ಲಲಿತಮಾರ್ಕಂಡೇಯ ಕಥಾಕಂದಮಾಲೆ (೧೯೩೬), ಹಾಡಿನ ಬೀಡು (ಅ. ೧೯೨೩).

ನರಸಿಂಹ, ಕಾಮತ (ಎಂ.ಎನ್.ಕಾಮತ)

ಜ : ೧೮೮೩ ಮ : ೧೯೪೦

ಮಂಗಳೂರು. ೧೯೦೧ರಲ್ಲಿ ಎಫ್.ಎ.ಪರೀಕ್ಷೆ ಮುಗಿಸಿ, Rose & company ಎಂಬ ಸಂಸ್ಥೆಯಲ್ಲಿ ಕೆಲಸ ಹಿಡಿದು ಮೊದಲಿನ ಎರಡು ವರ್ಷ ಮುಂಬಯಿಯಲ್ಲಿಯೂ ಮುಂದೆ ಎಂಟು ವರ್ಷ ಕಲಕತ್ತೆಯಲ್ಲಿಯೂ ಇದ್ದರು. ಪರಪ್ರಾಂತಗಳಲ್ಲಿ ಇದ್ದಾಗ, ಮರಾಠಿ, ಬಂಗಾಲಿ ಮೊದಲಾದ ಅನ್ಯಭಾಷಾಸಂಪರ್ಕವುಂಟಾಗಿ, ಲೋಕಸಂಗ್ರಹವನ್ನು ವೃದ್ಧಿಪಡಿಸಿಕೊಂಡರು. ೧೯೧೧ರಲ್ಲಿ ತಾಯ್ನಾಡಿಗೆ ಹಿಂದಿರುಗಿ ಕೆಲದಿನ ಮೂಲ್ಕಿಯಲ್ಲಿಯೂ, ಅನಂತರದ ಕೆಲವರ್ಷ ಬಂಟವಾಳದ ಶ್ರೀ ತಿರುಮಲದೇವಳದ ಶಾಲೆಯಲ್ಲಿಯೂ, ೧೯೧೮ರಿಂದ ನಿವೃತ್ತರಾಗುವವರೆಗೂ ಮಂಗಳೂರು ಕೆನರಾ ಹೈಸ್ಕೂಲಿನಲ್ಲಿಯೂ ಅಧ್ಯಾಪಕರಾಗಿದ್ದರು. ಈ ಮಧ್ಯೆ 'ಬೋಧಿನಿ' (ಜುಲೈ, ೧೯೧೫, 'ಆನಂದ' ಎಂಬ ಪತ್ರಿಕೆಗಳಿಗೆ ಸಂಪಾದಕರಾಗಿದ್ದರು. ಅಖಿಲಕರ್ನಾಟಕ ಕಥೆಗಾರರ ಪ್ರಥಮ ಸಮ್ಮೇಳನದ (ಬೆಂಗಳೂರು, ೧೯೮೦) ಅಧ್ಯಕ್ಷರು. ವಿನೋದ ಬರೆಹಗಳಿಗಾಗಿ ಹೆಸರಾದವರು. ಕನ್ನಡದಲ್ಲಿ ಏಕಾಂಕ ನಾಟಕಗಳಿಗೆ ಇವರು ಮೂಲಪುರುಷರು ಎಂದು ಹೇಳುವುದುಂಟು.

ಗ್ರಂಥಗಳು : ಅರ್ಜುನ ಚಾತುರ್ಮಾಸ್ಯ (ಅ), ಅಶ್ವತ್ಥಮೃಗ (ಆ. ೧೯೧೮), ಅಂಚೆಮನೆ (ರವೀಂದ್ರನಾಥ ಟಾಗೋರರ ನಾಟಕದ ಭಾಷಾಂತರ). (ಆ. ೧೯೨೪), ಅಂದಿನ ಆ ಊರು (ಇ. ೧೯೪೧), ಆರ್ಯಮತೋಪಾಖ್ಯಾನ (೧೯೩೮), ಕರ್ಣನ ಕಥೆ (ಇ), ಕೃಷ್ಣಸಂಧಾನ (ಅ), ಕಾಡುಮೃಗಗಳ ಕೂಡುವಿಕೆ (ಅ), ಕುಮಾರ ಭೀಮಸಿಂಹ (ಇ, ೧೯೧೪), ಗದಾಯುದ್ಧ (ಅ-ಛ.೧೯೨೮), ಚಂಚಲ (ಇ), ಚಂಡಕೌಶಿಕ (ಕ್ಷೇಮೇಂದ್ರಕವಿಯ ಸಂಸ್ಕೃತ ನಾಟಕದ ಕಥಾರೂಪ), (ಇ,೧೯೧೩), ಚಂದ್ರಹಾಸಾಭ್ಯುದಯ (ಆ.೧೯೧೪), ತುಕಾರಾಮ (ಪ-ಚ), ತೆನ್ನಾಲಿರಾಮ, ಉದ್ಧಾರಾನಂದ (ಆ. ೧೯೩೩) ನಮ್ಮ ನಾಟ್ಯಾಭಿನಯ(ಆ. ೧೯೩೯), ನಾಗಾನಂದ (ಇ), ಪುನರ್ಜನ್ಮ (ಆ.೧೯೩೪), ಬಾಲಕರ ಮಹಾಭಾರತ (ಇ) ಬಾಲಕರ ರಾಮಾಯಣ (ಇ), ಭೀಷ್ಮನ ಕಥೆ (ಇ. ೧೯೩೮), ಮಧ್ಯಮವ್ಯಾಯೋಗ (ಅ), ಮಹಾರಾಷ್ಟ್ರ (೧೯೨೦), ಮೆಂಬರ್ (ಅ), ಮೌರ್ಯಸಿಂಹಾಸನ (ಆ. ೧೯೧೯), ಯಾದವಕೃಷ್ಣ (ಇ. ೧೯೩೫), ವಜ್ರಮುಷ್ಟಿ, ವಟಪುರಾಧೀಶ್ವರಶತಕ (ಅ. ೧೯೧೮), ಶುಕಶಿಕ್ಷಣ (ಅ), ಸೀತಾರಾಮ (ಇ).

ಭೀಮರಾಜ, ಬಿ.

ಜ : ೧೫: ೧೨: ೧೮೮೩

ಚಿತ್ರದುರ್ಗ ಜಿಲ್ಲೆಯ ಮರಡೀಹಳ್ಳಿ. ಪ್ರಾರಂಭಿಕ ಶಿಕ್ಷಣದನಂತರ ಕನ್ನಡ, ಆಂಧ್ರ, ಸಂಸ್ಕೃತವ್ಯಾಸಂಗವನ್ನು ಮಾಡಿದರು. ೧೫ನೆಯ ವಯಸ್ಸಿನಿಂದಲೇ ಕವಿತಾ ರಚನೆಗೆ ತೊಡಗಿ ಹಲವಾರು ಯಕ್ಷಗಾನಗಳನ್ನು ಬರೆದು ಗ್ರಾಮಾಂತರಗಳಲ್ಲಿ ಅಭಿನಯಿಸಿದರು. ಪ್ರಸಿದ್ಧ ಭಾಗವತರೂ ಕೀರ್ತನಕಾರರೂ ಎಂದು ಹೆಸರಾದ ಇವರು ಅನೇಕ ವರ್ಷ ಉಪಾಧ್ಯಾಯರಾಗಿ ಕೆಲಸಮಾಡಿದರು. ಅನಂತರ 'ಕೀರ್ತನ ಕುಟುಂಬ'ದ

ಮುಖಾಂತರವಾಗಿ ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಲ್ಲಿ ಸಂಚರಿಸಿ ಸಂಸ್ಕೃತಿಪ್ರಚಾರ ಮಾಡಿ ಕರ್ನಾಟಕಾಂಧ್ರಕವಿ ಎಂದು ಪ್ರಸಿದ್ಧರಾದರು. 'ಮಹಾತ್ಮಾ ಗಾಂಧೀ ಸಾಹಿತ್ಯಮಂದಿರ' ಎಂಬ ಪ್ರಕಟನ ಸಂಸ್ಥೆಯನ್ನು ಚಿತ್ರದುರ್ಗದಲ್ಲಿ ಪ್ರಾರಂಭಿಸಿದರು.

ಗ್ರಂಥಗಳು : ಗಾಂಧೀಜಿ ಗುಣಗಾನ (ಅ. ೧೯೪೯), ಗಾಂದೀ ತತ್ತ್ವಗಳು (ಧ. ೧೯೪೯), ಗ್ರಾಮಾಭಿವೃದ್ಧಿ, (ಅ. ೧೯೪೯), ಪತಿತಪಾವನ ಗಾಂಧಿ (ಧ.ಚ. ೧೯೩೧), ಭಕ್ತಾಮೃತ (ಅ. ೧೯೨೪), ಭೋಜ-ಕಾಳಿದಾಸ ಕಥೆಗಳು (ಈ. ೧೯೨೭), ವೀರಬಾಲೆ (ಇ.೧೯೨೮), ವೇಮನ ಪದ್ಯಗಳು(ನ. ೧೯೨೧-೨೨) (ಮೂರು ಭಾಗಗಳು), ಸಿದ್ಧಗಂಗಾಕ್ಷೇತ್ರ (ಧ-ಘ.೧೯೩೧), ಶಿವಕೀರ್ತನಗಳು (ಅ. ೧೯೨೨).

ವಾಮನರಾವ್, ಸವಣೂರ

ಜ : ೧೮೮೩ ಮ : ೩-೧೦-೧೯೩೫

ರಬಕವಿ. ಪ್ರಾಥಮಿಕವಿದ್ಯಾಭ್ಯಾಸವು ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿಯೂ ಮುಂದಿನ ಶಿಕ್ಷಣವು ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿಯೂ ಆಯಿತು. ೧೯೦೪ರಲ್ಲಿ ರಬಕವಿಯಲ್ಲಿ ಉಪಾಧ್ಯಾಯವೃತ್ತಿಯನ್ನು ಸ್ವೀಕರಿಸಿ ಮೂರುವರ್ಷ ಕೆಲಸಮಾಡಿದರು. ಆದರೆ ಚಿಕ್ಕಂದಿನಿಂದಲೂ ರಂಗಭೂಮಿಯ ಪ್ರಭಾವದಿಂದ ಆಕೃಷ್ಟರಾದ ಇವರು ೧೯೦೭ರಲ್ಲಿ ಶಿರಹಟ್ಟಿ ಸಂಗೀತ ನಾಟಕ ಮಂಡಲಿಯನ್ನು ಸೇರಿ ನಟರೂ ಅಭಿನಯಶಿಕ್ಷಕರೂ ಆದರು. ಕೆಲವು ಕಾಲದನಂತರ ಸ್ವತಂತ್ರವಾಗಿ ಲಕ್ಷ್ಮೀ ಪ್ರಾಸಾದಿಕ ನಾಟಕ ಕಂಪನಿಯನ್ನೂ, ಅನಂತರ ೧೯೧೪ರಲ್ಲಿ ವಿಶ್ವಗುಣಾದರ್ಶನಾಟಕ ಸಂಘವನ್ನೂ ಸ್ಥಾಪಿಸಿ ಕನ್ನಡ ರಂಗಭೂಮಿಯ ಉನ್ನತಿಗಾಗಿ ಅನೇಕ ವರ್ಷ ಶ್ರಮಿಸಿದರು.

ಗ್ರಂಥಗಳು : ಕಲಹಪ್ರಿಯನಾರದ (ಅ), ಕೃಷ್ಣಾರ್ಜುನಯುದ್ಧ (ಅ. ೧೯೨೮), ದ್ರೌಪದೀ ವಸ್ತ್ರಾಪಹರಣ (ಅ. ೧೯೩೦), ಪಾರ್ವತೀಸತ್ತ್ವಪರೀಕ್ಷೆ (ಅ .೧೯೧೯), ಬಾಜೀರಾಯ ಪೇಶವೆ (ಅ. ೧೯೨೪), ಭಕ್ತಪುಂಡರೀಕ (ಅ. ೧೯೨೧), ಮಹಾನಂದಾ (ಅ), ಲಂಕಾದಹನ (ಅ), ವೀರ ಅಭಿಮನ್ಯು (ಅ. ೧೯೨೯), ಸಂತ ಸಖುಬಾಯಿ (ಅ. ೧೯೨೨), ಸಂದೇಹಸಾಮ್ರಾಜ್ಯ (ಅ. ೧೯೨೬).

ವೆಂಕಟಾದ್ರಿಶಾಸ್ತ್ರೀ, ಶ್ರೀನಿವಾಸಶಾಸ್ತ್ರೀ, ಎಂ.

ಜ : ೧೮೮೩ ಮ : ೧೩-೭-೧೯೩೭

ಕೋಲಾರ. ಇವರಿಗೆ ಚಿಕ್ಕಂದಿನಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವ ಅನುಕೂಲತೆ ಇರಲಿಲ್ಲ. ಮಾಧ್ಯಮಿಕಶಿಕ್ಷಣವನ್ನು ಅರ್ಧಕ್ಕೆ ಬಿಟ್ಟುಕೊಟ್ಟು ಕೊಲಾರದ ಡೆಪ್ಯುಟಿ ಕಮೀಶನರ್ ಕಚೇರಿಯಲ್ಲಿ ಗುಮಾಸ್ತರಾದರು. ಕೆಲವು ವರ್ಷಗಳಾದ ಬಳಿಕ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟು 'ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್' ಅವರ ಕಚೇರಿಯಲ್ಲಿ 'ಪ್ರೂಫ್' ತಿದ್ದುವ ಕೆಲಸವನ್ನು ವಹಿಸಿಕೊಂಡು ನಿವೃತ್ತರಾಗುವವರೆಗೂ ಅಲ್ಲಿಯೇ ಇದ್ದರು.

ಈ ಶತಮಾನದ ಎರಡನೆಯ ದಶಕದಲ್ಲಿ ವಂಗಸಾಹಿತ್ಯವನ್ನು ಕನ್ನಡಿಸುವ ಕಾರ್ಯವನ್ನು ವಿಪುಲ ರೀತಿಯಲ್ಲಿ ಕೈಕೊಂಡವರಲ್ಲಿ ಇವರೂ ಒಬ್ಬರು.

ಗ್ರಂಥಗಳು : *ದಾಮಿನಿ (ಇ), ನಿರ್ಮಲೆ (ಇ), ಪ್ರತೀಕಾರ (ಇ), ಮಾಯಾವಿ (ಇ), ಮುತ್ತಿನ ಸರ (ರಾಯಭಾರ, ಸನ್ಯಾಸಿನಿ, ಸುಷುಮಾ ಇತ್ಯಾದಿಗಳ ಸಂಕಲನ), ವಿಜಯಮಾಲೆ (ಇ), ವಿಷಮವಿವಾಹ (ಇ) ಸರಳ (ಇ), ಸೌದಾಮಿನಿ (ಇ).

ಅಪ್ರಕಟಿತ : ದಿಗ್ವಿಜಯ.

ಶ್ರೀಕಂಠಶಾಸ್ತ್ರೀ, ಗುಂಡಪ್ಪಶಾಸ್ತ್ರೀ, ಸಾಲಿಗ್ರಾಮ

ಜ : ಸು.: ೧೮೮೩

ಕೃಷ್ಣರಾಜನಗರ ತಾಲೂಕು ಸಾಲಿಗ್ರಾಮ. ಮೈಸೂರಿನಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿ ಅದರೊಂದಿಗೆ ಸಂಸ್ಕೃತ ಪಾಠಶಾಲೆಯಲ್ಲಿ ಚಂಪೂ ತರಗತಿಯವರೆಗೆ ಓದಿದರು. ಮೈಸೂರು ಅರಮನೆಯಲ್ಲಿದ್ದು ೧೯೪೭ರಲ್ಲಿ ಸೇವಾನಿವೃತ್ತರಾದರು. ಇವರು ಸುಮಾರು ೪೦-೪೫ ವರ್ಷಗಳವರೆಗೆ ಕುಮಾರವ್ಯಾಸಭಾರತ, ಜೈಮಿನಿಭಾರತ, ತೊರವೆರಾಮಾಯಣ, ಭಾಗವತ ಮುಂತಾದ ಕಾವ್ಯಗಳನ್ನು ಪುರಾಣ ಪ್ರವಚನರೂಪವಾಗಿ ಪ್ರಚುರಗೊಳಿಸಿದರು.

ಕೂಡ್ಲಿ ಶೃಂಗೇರಿ ಮಠಾಧೀಶರಿಂದ 'ಕುಮಾರಮಾಧವ', ಕಾಂಚೀ ಕಾಮಕೋಟಿ ಪೀಠದಿಂದ 'ನವಕಾಳಿದಾಸ', ಹಾಗೂ ದ್ವಾರಕಾಪೀಠದಿಂದ 'ಪೌರಾಣಿಕ ಶಿರೋಮಣಿ' ಇತ್ಯಾದಿ ಬಿರುದುಗಳನ್ನು ಶಾಸ್ತ್ರಿಗಳು ಪಡೆದಿರುವರು.

ಗ್ರಂಥಗಳು : ಮದಾಲಸೋಪಾಖ್ಯಾನ (ಅ), ವಾಮನಾವತಾರ (ಅ), ಶಂಕರವಿಜಯ (ಮಾಧವೀಯ ಶಂಕರವಿಜಯದ ಭಾಷಾಂತರ) (ಅ), ಶಂಕರವಿಜಯ (ಮೇಲಿನ ಗ್ರಂಥದ ಭಾಷಾಂತರ) (ಧ), ಶ್ರೀಮನ್ಮಹಾರಾಜರವರ ಮಾನಸಸರೋವರ ಮತ್ತು ಕೈಲಾಸಯಾತ್ರಾಪ್ರಕರಣ.

ಅಪ್ರಕಟಿತ : ದೇವೀಭಾಗವತ (ವೇದವ್ಯಾಸ ವಿರಚಿತ ದೇವೀಭಾಗವತ ಮಹಾಪುರಾಣದ ಭಾಷಾಂತರ-ಭಾಮಿನಿ ಷಟ್ಪದಿಯಲ್ಲಿ ಸುಮಾರು ೧೪೦೫೦ ಪದ್ಯಗಳು).

ಹಣಮಂತರಾವ್, ಗೋವಿಂದರಾವ್ ದೇಶಪಾಂಡೆ

ಜ : ೧೮೮೩ ಮ : ೧೯೪೩

ಧಾರವಾಡ. ಬಿ. ಎ. ಪದವೀಧರರಾಗಿ ಮುಂಬಯಿ ವಿದ್ಯಾಇಲಾಖೆಯನ್ನು ಸೇರಿದರು. ಹಲವು ವರ್ಷ ಧಾರವಾಡ ಟ್ರೇನಿಂಗ್ ಕಾಲೇಜಿನ ಪ್ರಧಾನಾಧ್ಯಾಪಕರಾಗಿದ್ದರು.

ಗ್ರಂಥಗಳು : ರೊದ್ದರಾಯರ ಚರಿತ್ರೆ (ಬ-ಚ), ಸಂಸಾರಸುಖ (೧೯೧೫).

---

*(ಎಲ್ಲಾ ಕೃತಿಗಳು ವಂಗಭಾಷೆಯಿಂದ ಅನುವಾದಿಸಲ್ಪಟ್ಟ ಕಥೆ, ಕಾದಂಬರಿಗಳು)

ನಾರಾಯಣರಾವ್, ಕೃಷ್ಣರಾವ್, ಹುಯಿಲಗೋಳ

ಜ : ೪-೧೦-೧೮೮೪

ಗದಗ. ಗದಗ, ಗೋಕಾಕ ಹಾಗೂ ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿ ೧೯೦೨ರಲ್ಲಿ ಮ್ಯಾಟ್ರಿಕ್ ಪಾಸಾದರು. ಸಂಸ್ಕೃತ ಮತ್ತು ಇಂಗ್ಲೀಷ್ ವಿಷಯಗಳನ್ನು ತೆಗೆದುಕೊಂಡು ೧೯೦೭ರಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜಿನಿಂದ ಬಿ.ಎ.ಪಾಸಾಗಿ ಕೆಲವು ಸಮಯ ಧಾರವಾಡದಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದರು. ಅನಂತರ ಮುಂಬೈಯಲ್ಲಿ ಕಾಯದೆ ಅಭ್ಯಾಸಮಾಡಿ ೧೯೧೧ರಲ್ಲಿ ವಕೀಲರಾಗಿ ಗದಗಿನಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದರು.

ರಸಿಕ ಕವಿಗಳೂ ಆದ ಸಾಮಾಜಿಕ ನಾಟಕಕಾರರೂ ಎಂದು ಪ್ರಸಿದ್ಧರಾದ ಇವರು ಈ ಶತಮಾನದ ಎರಡನೆಯ ದಶಕದಲ್ಲಿ ಕನ್ನಡರಂಗಭೂಮಿಯ ಸುಧಾರಣೆಗಾಗಿ ವಿವಿಧ ಪ್ರಯೋಗಗಳನ್ನು ಕೈಕೊಂಡರು. ತಮ್ಮ ನಾಟಕಗಳನ್ನು ರಂಗಭೂಮಿಯ ಮೇಲೆ ತಂದು ಧನಸಂಗ್ರಹಮಾಡಿ ಗದಗಿನ 'ವಿದ್ಯಾದಾನಸಮಿತಿ'ಯನ್ನು ಬಲಪಡಿಸಿದರು. 'ವಿದ್ಯಾದಾನಸಮಿತಿ' ಹಾಗೂ 'ಯಂಗ್ ಮೆನ್ಸ್‌ಫುಟ್ ಬಾಲ್-ಕ್ಲಬ್' ಸಂಸ್ಥೆಗಳ ಸ್ಥಾಪಕರಲ್ಲೊಬ್ಬರು. ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಗೂ ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಲನಕ್ಕೂ ಅಧ್ಯಕ್ಷರಾಗಿದ್ದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಲೋಕಪ್ರಿಯ ನಾಡಗೀತೆಯನ್ನು ರಚಿಸಿ, ಅ.ಭಾ.ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ (೧೯೨೪,ಬೆಳಗಾವಿ) ಉದ್ಘೋಷಿಸಿ ನವಕರ್ನಾಟಕದ ಅಭ್ಯುದಯವನ್ನು ಕೋರಿದರು. ಇವರು ಸುಮಾರು ೧೦೦ ದೇವರನಾಮಗಳನ್ನು ರಚಿಸಿರುವರು.

ಗ್ರಂಥಗಳು : ಧರ್ಮರಹಸ್ಯ (ಆ.೧೯೧೯), ಪತಿತೋದ್ಧಾರ★ (ಆ.೧೯೫೩), ಶಿಕ್ಷಣ ಸಂಭ್ರಮ (ಆ.೧೯೨೦).

ಅಪ್ರಕಟಿತ : ಅಜ್ಞಾತವಾಸ, ಉತ್ತರಗೋಗ್ರಹಣ, ಕನಕವಿಲಾಸ, ಪ್ರೇಮಾರ್ಜುನ, ಪ್ರೇಮವಿಜಯ, ಭಾರತಸಂಧಾನ, ಮೋಹಲಹರಿ, ರಾಮಕುಮಾರ, ವಜ್ರಮುಕುಟ, ವಿದ್ಯಾರಣ್ಯ.

ಬಸವರಾಜಶಾಸ್ತ್ರೀ, ಮಲ್ಲಿನಾಥಶಾಸ್ತ್ರೀ, ಕೋಡಿಕೊಪ್ಪಮಠ

ಜ : ೧೮೮೪ ಮ : ೧೯೫೩

ಧಾರವಾಡ ಜಿಲ್ಲೆಯ ಕೋಡಿಕೊಪ್ಪ ಗ್ರಾಮ. ಪ್ರಾಥಮಿಕ ಶಿಕ್ಷಣವಾದನಂತರ ರಾಜಶೇಖರವಿಳಾಸಾದಿ ಕನ್ನಡ ಕಾವ್ಯಗಳನ್ನೂ, ಪಂಚಕಾವ್ಯ, ನಾಟಕಾದಿ ಸಂಸ್ಕೃತ

★ ೧೯೫೪ ರಲ್ಲಿ ಮುಂಬೈ ಸರ್ಕಾರದಿಂದ ಬಹುಮಾನಿತವಾದ ನಾಟಕ.

ಸಾಹಿತ್ಯವನ್ನೂ ಅಭ್ಯಸಿಸಿ ಪ್ರೌಢವ್ಯಾಸಂಗವನ್ನು ಕಾಶಿ ಹಾಗೂ ಕಲಕತ್ತೆಗಳಲ್ಲಿ ಪೂರೈಸಿದರು. ವ್ಯಾಕರಣ, ನ್ಯಾಯ, ವೇದಾಂತ ಹಾಗೂ ಅಲಂಕಾರಶಾಸ್ತ್ರಗಳಲ್ಲಿ ಪಾರಂಗತರಾಗಿ, ೧೯೧೪ರಲ್ಲಿ ತಾಯ್ನಾಡಿಗೆ ಬಂದು ರೋಣ ತಾಲೂಕಿನ ಹಾಳಕೇರಿಯ ಶ್ರೀಮನ್ನಿರಂಜನ ಅನ್ನದಾನೀಶ್ವರ ಸಂಸ್ಕೃತಪಾಠಶಾಲೆಯಲ್ಲಿ ೧೯೨೪ರವರೆಗೆ ಅಧ್ಯಾಪಕರಾಗಿದ್ದರು. ಕೆಲಕಾಲ ಮದ್ರಾಸ್ ಓರಿಯಂಟಲ್ ಗ್ರಂಥಭಾಂಡಾರದಲ್ಲಿ ಗ್ರಂಥ ಪರಿಶೋಧಕರಾಗಿ ಕೆಲಸಮಾಡಿದರು. ೧೯೨೫ (ಆಗಸ್ಟ್) ರಿಂದ ೧೯೪೨ರವರೆಗೆ ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯ ಆಸ್ಥಾನಪಂಡಿತರೂ, ಸಿದ್ಧೇಶ್ವರ ಹೈಸ್ಕೂಲಿನಲ್ಲಿ ಸಂಸ್ಕೃತ-ಕನ್ನಡ ಅಧ್ಯಾಪಕರೂ ಆಗಿ ಸೇವೆಸಲ್ಲಿಸಿ ನಿವೃತ್ತರಾದರು. ಧಾರವಾಡ ಜಿಲ್ಲಾ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಗ್ರಂಥಸಂಸ್ಕರಣ ಸಮಿತಿಯ ಸದಸ್ಯರಾಗಿ 'ಚನ್ನಬಸವಪುರಾಣ'ದ ಚತುರ್ಥಖಂಡವನ್ನು ಪರಿಷ್ಕರಿಸಿದರು.

ಗ್ರಂಥಗಳು : ಉತ್ತರನಳಚರಿತೆ (ಇ.೧೯೪೨), ಕಿರಾತಾರ್ಜುನೀಯಸಾರ (ಇ. ೧೯೨೮), ಕುಮಾರಸಂಭವಸಾರ (ಇ. ೧೯೩೭), ನೈಷಧೀಯಸಾರ (ಇ. ೧೯೩೯), ರಘುವಂಶ ರಹಸ್ಯ (ಇ.೧೯೩೧), ರಾಜಶೇಖರವಿಳಾಸದ ತಿರುಳು (ಅ-ಛ.೧೯೪೮), ಶಂಕರದಾಸಿಮಯ್ಯನ ಚರಿತೆ (ಧ-ಚ.೧೯೪೭), ಶಂಕರಲಿಂಗಮಹಾರಾಜ ಚರಿತೆ (ಧ-ಚ.೧೯೩೯), ಶಿಶುಪಾಲವಧಸ್ತತ್ತ್ವ (ಇ.೧೯೩೩), ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಥಿರೀಕರಣಖಂಡನ (ಧ.೧೯೨೧), ಹರಿಶ್ಚಂದ್ರ ಮಹಾಕಾವ್ಯದ ತಿರುಳು (ಇ. ೧೯೪೭), ಹುಚ್ಚೀರಜ್ಜನ ಸಂಕ್ಷಿಪ್ತ ಚರಿತೆ (ಧ-ಚ.೧೯೪೦).*

ಸಂಸ್ಕೃತ : ಶ್ರೀ ಸಿದ್ಧರಾಮೇಶ್ವರಾಪರಾಧಕ್ಷಮಾಪನಸ್ತೋತ್ರ (೧೯೨೯)

ಭೀಮಾಜಿ, ಅನಂತ, ಕುಲಕರ್ಣಿ

ಜ : ೧೮೮೪ ಮ : ೨೬-೩- ೧೯೫೪

ಧಾರವಾಡ ಜಿಲ್ಲೆಯ ಕಲ್ಲೂರು. ಮುಂಬಯಿ ಸರಕಾರದ ಕಂದಾಯ ಖಾತೆಯಲ್ಲಿ ಕಾರಕೂನರೆಂದು ಸೇರಿ ಕೊನೆಗೆ ಮಾಮಲೇದಾರರಾಗಿ ೧೯೪೦ರಲ್ಲಿ ನಿವೃತ್ತರಾದರು. ಅನಂತರ ಒಂದೆರಡು ವರ್ಷ ಹಾವೇರಿ ಭಾಗದ ರೆಸಿಡೆಂಟ್ ಮ್ಯಾಜಿಸ್ಟ್ರೇಟರಾಗಿಯೂ ೧೯೪೪ರಿಂದ ೪೮ರವರೆಗೆ ಗುಡಗೇರಿ ಸಂಸ್ಥಾನದಲ್ಲಿ ತಾಲೂಕು ಅಧಿಕಾರಿಗಳಾಗಿಯೂ ಕೆಲಸ ಮಾಡಿದರು. ಕನ್ನಡದ ಪ್ರಸಿದ್ಧ ಬರಹಗಾರರಾದ ಕೃಷ್ಣಕುಮಾರ ಕಲ್ಲೂರರ ಹಿರಿಯ ಸಹೋದರರು.

ಗ್ರಂಥಗಳು : ನರಗುಂದ ಬಂಡಾಯ (ಮ), ಪರಶುರಾಮಪಂತ ಭಾವು ಪಟವರ್ಧನ ಇವರ ಚರಿತ್ರೆ (ಮ.೧೯೧೫), ರಾಮಭಜನೆ (ಧ).

*ಕನ್ನಡ ಗ್ರಂಥಗಳೆಲ್ಲವೂ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನ ಪಡೆದಿವೆ.

ಮಹಾದೇವ, ಪ್ರಭಾಕರ, ಪೂಜಾರ

ಜ : ೬-೮-೧೮೮೪

ಧಾರವಾಡ ಜಿಲ್ಲೆಯ ಬಂಕಾಪುರ. ಧಾರವಾಡ ಸಂಸ್ಕೃತ ಪಾಠಶಾಲೆಯಲ್ಲಿ ನಾಲ್ಕು ವರ್ಷ ವ್ಯಾಸಂಗಮಾಡಿ ಅಲಂಕಾರ, ನ್ಯಾಯ, ವೇದಾಂತಶಾಸ್ತ್ರಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಮುಂದೆ ಅಲ್ಲಿಯ ಶಿಕ್ಷಣಮಹಾವಿದ್ಯಾಲಯದಲ್ಲಿ ಮೂರು ವರ್ಷ ಅಭ್ಯಾಸಕ್ರಮವನ್ನು ಪೂರ್ತಿಗೊಳಿಸಿದರು. ಬಳಿಕ ೧೯೦೯ರಲ್ಲಿ ಮೈಸೂರು ಸರಕಾರದ ಪಂಡಿತ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

೧೯೧೩ರಿಂದ ೪೦ರ ವರೆಗೆ ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ಕನ್ನಡ ಪಂಡಿತರಾಗಿದ್ದು ನಿವೃತ್ತರಾದ ನಂತರ ಅಲ್ಲಿಯೇ 'ಕೆ.ಇ.ಬೋರ್ಡ್' ಆರ್ಟ್ಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಿದರು. ೧೯೧೪ರಿಂದ ೧೬ರವರೆಗೆ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ'ದ ಸಂಪಾದಕ ಮಂಡಲದಲ್ಲಿಯೂ, ಸುಮಾರು ೧೦-೧೫ವರ್ಷ ಆ ಸಂಘದ ಕಾರ್ಯಕಾರಿ ಮಂಡಲದಲ್ಲಿಯೂ ಇದ್ದರು. ೧೯೪೭ರಲ್ಲಿ ಮುಂಬಯಿ ಸರಕಾರದ ಕನ್ನಡ ಪಠ್ಯಪುಸ್ತಕ ಸಮಿತಿಯಲ್ಲಿದ್ದರು. ಪ್ರಾಚೀನ ಕವಿ-ಕಾವ್ಯವಿಷಯಕವಾಗಿ ಪಾಂಡಿತ್ಯಪೂರ್ಣವಾದ ಲೇಖನಗಳನ್ನು ಹಲವು ಪತ್ರಿಕೆಗಳಲ್ಲಿ ಬರೆದಿದ್ದಾರೆ. ವ್ಯಾಕರಣ, ಅಲಂಕಾರವಿಷಯಗಳನ್ನು ಕುರಿತು ಅಧಿಕಾರವಾಣಿಯಿಂದ ಹೇಳಬಲ್ಲ ಅಖಿಲ ಕರ್ನಾಟಕ ಪಂಡಿತರಲ್ಲಿ ಮ.ಪ್ರ.ಪೂಜಾರರೂ ಒಬ್ಬರು. 'ಸೋಮೇಶ್ವರ ಶತಕ'ದ ಪರಿಷ್ಕರಣ, 'ಪಂಪಭಾರತ ನಿಘಂಟಿ'ನ ರಚನೆಯಲ್ಲಿ ಕನ್ನಡಸಾಹಿತ್ಯ ಪರಿಷತ್ತಿಗೆ ಸಹಾಯ ಮಾಡಿದರು. ಅದೇ ಸಂಸ್ಥೆಯ ಆಶ್ರಯದಲ್ಲಿ ಸಿದ್ಧವಾಗುತ್ತಿರುವ ಶಬ್ದಕೋಶಕ್ಕೂ (ಷಟ್ಪದಿ ಗ್ರಂಥಗಳು) ಸಹಾಯಕರು. 'ಸೊಗಸಿನ ಓದು' ಎಂಬ ಕನ್ನಡ ವಾಚನ ಪಾಠಮಾಲೆಯ ಸಂಪಾದಕಮಂಡಲದಲ್ಲಿ ಒಬ್ಬರು.

ಗ್ರಂಥಗಳು : ಅಶೋಕ,★ ಜೈನಧರ್ಮಪರಿಭಾಷೆ, ಜೈನಪದ್ಮಪುರಾಣಸಾರ, ನುಡಿಗನ್ನಡಿ ಭಾಗ ೧ (ದ. ೧೯೨೯), ನುಡಿಗನ್ನಡಿ ಭಾಗ ೨ (ದ.೧೯೨೯), ನುಡಿಗನ್ನಡಿ ಮತ್ತು ಛಂದೋಮಂಜರಿ (ದ. ೧೯೨೯), ಪಂಚತಂತ್ರಸಾರ ಭಾಗ ೧ (ಇ.೧೯೨೦), ಭಾಗ ೨ (ಇ. ೧೯೨೧), ಭಾರತೀಯ ವಿದುಷಿಯರು★ (ಮ-ಚ.೧೯೧೪), ಭೀಷ್ಮಾಚಾರ್ಯ, ಮದುವೆ (೧೯೧೪), ಮಹಮ್ಮದ್ ಪೈಗಂಬರ್★, ಮೊಹರಂ (ಧ.೧೯೧೫), ರಾಮಾಶ್ವಮೇಧಸಾರಸಂಗ್ರಹ, ವಾಚನಪಾಠಮಾಲೆ-ಕವಿತಾಪಾಠಮಾಲೆ (ಎನ್.ವಿ.ಕುರಡಿಯ ವರೊಂದಿಗೆ), ಶಬ್ದಾನುಶಾಸನ- ವೃತ್ತಿಸಹಿತ (೪೨೧ರಿಂದ ೬೦೦ ಸೂತ್ರಗಳು), ಶೇರಶಹ, ಸತ್ಕಥಾಲಾಪ, ಸತಿಯೂ ಸುನೀತಿಯೂ (೧೯೧೫), ಸದ್ಗುಣಾದರ್ಶ.

★ಗ್ರಂಥಗಳೆಲ್ಲವೂ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನ ಪಡೆದಿವೆ.

ರಾಮಚಂದ್ರರಾವ್, ವೈ.ಕೆ.

ಜ : ೧೮೮೪ ಮ : ೪-೮-೧೯೫೬

ಮೈಸೂರು ಜಿಲ್ಲೆಯ ಯಳಂದೂರು. ಬೆಂಗಳೂರುಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ. ೧೯೦೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ೧೯೦೯ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ಎಲ್.ಸಿ.ಇ. ಪ್ರಶಸ್ತಿ ಪಡೆದರು. ಮೈಸೂರು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅಸಿಸ್ಟೆಂಟ್ ಎಂಜಿನಿಯರರಾಗಿ ಕೆಲಸಕ್ಕೆ ಸೇರಿ ೧೯೪೧ರಲ್ಲಿ ಮೈಸೂರು ರೇಲ್ವೆಯ ಜನರಲ್ ಮ್ಯಾನೇಜರರಾಗಿ ನಿವೃತ್ತರಾದರು. ಮುಂದೆ ಒಂದೆರಡು ವರ್ಷ ಜಯಪುರ ರೇಲ್ವೆಯ ಪ್ರಮುಖ ಆಡಳಿತಗಾರರಾಗಿಯೂ ಕಾರ್ಯನಿರ್ವಹಿಸಿದರು. ಮೈಸೂರು 'ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಎಂಜಿನೀಯರಿಂಗ್' ಸಂಸ್ಥೆಯ ಅಧ್ಯಕ್ಷರು ಹಾಗೂ ಯಳಂದೂರು ಶಿಕ್ಷಣಸಂಸ್ಥೆಯ ಕಾರ್ಯದರ್ಶಿಗಳಾಗಿ ಸುಮಾರು ೨೮ ವರ್ಷ ಕೆಲಸಮಾಡಿದರು.

ಗ್ರಂಥಗಳು : ಕಲಿಯುಗ (ಇ) ಗ್ಲ್ಯಾಡ್‌ಸ್ಟನ್‌ರವರ ಮಹಿಮೆ (ಭಾಷಾಂತರ) (ಯ-ಚ), ಜನರಲ್ಲಿ ಕಾರ್ಯನಿರ್ವಾಹಕಶಕ್ತಿಯನ್ನು ಹೆಚ್ಚಿಸುವುದು ಹೇಗೆ?, ಜೇಮ್ಸ್ ಏಬ್ರಾಹಾಂ ಗಾರ್‌ಫೀಲ್ಡ್, ದಯಾರಾಮ (ಭಾಷಾಂತರ) (ಇ), ನನ್ನ ಆಚಾರ್ಯ (ಭಾಷಾಂತರ), ನಿರ್ಮಲೆ, ಭಾರತಕಥಾಸಂಗ್ರಹ (ತೆಲುಗಿನಿಂದ ಭಾಷಾಂತರ), ವಾಸದ ಮನೆ.

ಅಪ್ರಕಟಿತ : ಅಬ್ರಹಾಂ ಲಿಂಕನ್, ವಿಕ್ಟೋರಿಯಾ, ಸರೋಜ ನಳಿನಿ.

ರಾಮಬ್ರಹ್ಮ, ಎಂ., ಬಿ.ಎ., ಎಲ್.ಟಿ.

ಜ : ೮-೧೨-೧೮೮೪

ಮೈಸೂರು. ವ್ಯಾಸಂಗ ಪೂರ್ತಿಯಾದ ಬಳಿಕ ಧಾರವಾಡ ಹೈಸ್ಕೂಲ್, ಧಾರವಾಡ ಶಿಕ್ಷಣಮಹಾವಿದ್ಯಾಲಯ (೧೯೧೫-೧೭), ಬೆಳಗಾವಿ ಹೈಸ್ಕೂಲುಗಳಲ್ಲಿ ಕೆಲಸಮಾಡಿ, ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿ ನಿವೃತ್ತರಾದರು. ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ೧೯೨೩ರಿಂದ ೩೬ರ ವರೆಗೆ ಸ್ಕೌಟ್ ಕಮಿಶನರಾಗಿದ್ದರು. ಕೆಲಕಾಲ ಬೆಳಗಾವಿ ಜಿಲ್ಲಾ ಹಿಂದುಳಿದ ವರ್ಗದ ಕಮಿಟಿಯ ಸಭಾಸದರು.

ಗ್ರಂಥಗಳು : ಅಂತರಿಕ್ಷ ಹವೆಗಳ ನಿರೀಕ್ಷಣೆ (ಜ.೧೯೧೭), ಶಾಲೆಯ ತೋಟ (ಟ.೧೯೧೭), ಸಸ್ಯಪಾಠಗಳು (ಟ), ಸೃಷ್ಟಿಪಾಠಗಳ ನಿರೀಕ್ಷಣೆ (ಜ.೧೯೧೭), ಸುಲಭ ಸಸ್ಯಪಾಠ (ಟ), ಹಿಂದೂ ದೇಶದ ಸಸ್ಯಶಾಸ್ತ್ರ (ಟ).

ಶಿವಲಿಂಗಸ್ವಾಮಿ, ಸಾವಳಗಿಮಠ

ಜ : ೧೮೮೪ ಮ : ೯-೧೧-೧೯೩೯

ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯವರು. ಮಾಧ್ಯಮಿಕ ಶಿಕ್ಷಣವನ್ನು ಪೂರ್ತಿಗೊಳಿಸಿ

ಮಹಾರಾಷ್ಟ್ರದ 'ಕಿರ್ಲೋಸ್ಕರ' ಎಂಬ ಸುಪ್ರಸಿದ್ಧ ನಾಟಕ ಕಂಪನಿಯಲ್ಲಿ ಒಂದು ವರ್ಷ ಕೆಲಸ ಮಾಡಿ ರಂಗಭೂಮಿಯ ಅನುಭವ ಪಡೆದು, ಅನಂತರ ಸ್ವತಂತ್ರ ನಾಟಕ ಕಂಪನಿಯನ್ನು ಸ್ಥಾಪಿಸಿದರು.

ಗ್ರಂಥಗಳು : ಕಿತ್ತೂರ ಚೆನ್ನಮ್ಮ (ಆ), ಕಿತ್ತೂರ ರುದ್ರಮ್ಮ(ಆ), ಗುರುವಿರಕ್ತಪ್ರಪಂಚ (ಆ), ಸಾಗ್ರಸಂಗೀತ ಮನೋವಿಜಯವು (ಆ.೧೯೧೨), ಸಂಪೂರ್ಣ ಹೇಮರಡ್ಡಿಮಲ್ಲಮ್ಮ (ಆ)

ಅಪ್ರಕಟಿತ: ಅಸ್ಪೃಶ್ಯತೆಯ ನಿವಾರಣೆ, ಒಂದೇ ಖಡ್ಗ ಅಥವಾ ಸಂಗೊಳ್ಳಿ ರಾಯಣ್ಣ, ಕೆಳದಿಯ ಚನ್ನಮ್ಮಾಜಿ, ಗೋಪೀಚಂದ, ಚಿತ್ರದುರ್ಗದ ಮದಕರಿನಾಯಕ, ಟೀಪುಸುಲ್ತಾನ, ಪವಿತ್ರ ಖಾದಿ, ಪುಂಡಲೀಕ, ಪುರಂದರದಾಸ, ಮಹಾನಂದಾ, ರಮಾಮಾಧವ, ರಾಜಶೇಖರ, ರಾಯಗಡ, ರಾಷ್ಟ್ರಧ್ವಜ, ವೀರನರಬಲಿ, ಸಿರಿಪ್ರಭಾವ, ಸುಭದ್ರಾ, ಸೈರಂಧ್ರಿ, ಹ್ಯಾಮ್ಲೆಟ್ ಇತ್ಯಾದಿ.

ಶ್ರೀಕಂಠಯ್ಯ, ಮೈಲಾರ, ಬೆಳ್ಳೂರ, ರಾಜಸೇವಾಸಕ್ತ

ಜ: ೩-೧-೧೮೮೪ ಮ : ೫-೧-೧೯೪೬

ನಾಗಸಂದ್ರ ತಾಲೂಕಿನ ಬೆಳ್ಳೂರು. ಮೈಸೂರು ಮಹಾರಾಜಾ ಕಾಲೇಜು ಹಾಗೂ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ. ಬಿ.ಎಲ್ : (೧೯೦೬), ಎಂ.ಎ.(೧೯೦೯), ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ ೧೯೧೧ರಲ್ಲಿ ವಿದ್ಯಾಇಲಾಖೆಯನ್ನು ಸೇರಿ, ೧೯೨೬ರಿಂದ ೪ ವರ್ಷಗಳವರೆಗೆ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಾಗಿದ್ದರು. ೧೯೨೭ರಿಂದ ಅಲ್ಲಿಯೇ ಗೌರವ ಕನ್ನಡ ಪ್ರಾಧ್ಯಾಪಕರು. ಮುಂದೆ ಸೆಂಟ್ರಲ್ ಕಾಲೇಜಿನಲ್ಲಿ ಕೆಲಕಾಲ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ೧೯೪೨ರಲ್ಲಿ ನಿವೃತ್ತರಾಗಿ ಧಾರವಾಡ ಕೆ.ಇ.ಬೋರ್ಡ್ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ಕೊನೆಯವರೆಗೆ ಅಲ್ಲಿಯೇ ಇದ್ದರು.

ಕನ್ನಡ, ಸಂಸ್ಕೃತ, ತಮಿಳು, ಇಂಗ್ಲೀಷ್, ಗ್ರೀಕ್ ಇತ್ಯಾದಿ ಭಾಷಾಪಾರಂಗತರಾಗಿದ್ದ ಇವರು ಹೊಸಗನ್ನಡದ ಆಚಾರ್ಯಪುರುಷರೆಂದೂ, ಅಖಿಲ ಕರ್ನಾಟಕದ ಸಾಂಸ್ಕೃತಿಕ ಏಕೀಕರಣದ ಅಧ್ವರ್ಯರೆಂದೂ ಗೌರವಿಸಲ್ಪಟ್ಟವರು. ಶ್ರೀಕಂಠಯ್ಯನವರ ಕಂಠಶ್ರೀ, ಪಾಂಡಿತ್ಯ, ರಸಜ್ಞತೆಗಳು ಅಖಿಲ ಕರ್ನಾಟಕದಲ್ಲಿ ಮಾತ್ರವಲ್ಲ, ಪರಪ್ರಾಂತಗಳಲ್ಲಿಯೂ ಅವರ ಲೋಕಪ್ರಿಯತೆಯನ್ನು ಹೆಚ್ಚಿಸಿದ್ದವು. ಇವರು ಪ್ರತಿಭಾನ್ವಿತ ವಾಗ್ಮಿಗಳಾಗಿದ್ದರು.

ಮೈಸೂರು ವಿಶ್ವವಿದ್ಯಾನಿಲಯ ಸಂಘ ಹಾಗೂ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ (೧೯೪೦)ಗಳ ಅಧ್ಯಕ್ಷರು. ೧೯೩೮ರಿಂದ ೪ ವರ್ಷಗಳವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ ಕೆಲಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ

ಗ್ರಂಥಮಾಲೆಯ ಪ್ರಧಾನ ಸಂಪಾದಕರೂ ಆಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಹದಿನಾಲ್ಕನೆಯ ಅಧಿವೇಶನ (ಕಲಬುರ್ಗಿ, ೧೯೨೮) ಹಾಗೂ ತಿರುಪತಿಯಲ್ಲಿ ನೆರೆದ ಪ್ರಾಚ್ಯವಿದ್ಯಾಸಮ್ಮೇಲನದ ಕನ್ನಡ ಶಾಖೆಗೆ ಅಧ್ಯಕ್ಷರಾಗಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸುಮಾರು ೭೨೦೦ ರೂಪಾಯಿಗಳ ದಾನವನ್ನು ಕೊಟ್ಟು 'ಶ್ರೀಕಂಠಯ್ಯ ಅಚ್ಚುಕೂಟ'ದ ಸ್ಥಾಪನೆಗೆ ಕಾರಣರಾದರು.

ಗ್ರಂಥಗಳು : ಅಶ್ವತ್ಥಾಮನ್ (ಆ. ೧೯೨೯), ಇಂಗ್ಲೀಷ್ ಗೀತಗಳು (ಅ. ೧೯೨೧), ಇಸ್ಲಾಂ ಸಂಸ್ಕೃತಿ (ಧ. ೧೯೪೯), ಕನ್ನಡ ಮಾತು ತಲೆಯೆತ್ತುವ ಬಗೆ (ಉ. ೧೯೧೨), ಕನ್ನಡ ಕೈಪಿಡಿ-ಭಾಗ ೨ (ದ. ೧೯೪೭), ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ-ಭಾಗ ೧ (ಉ. ೧೯೪೮), ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ-ಭಾಗ ೨ (ಉ. ೧೯೪೮), ಪಾರಶಿಕರು (ಆ. ೧೯೩೫), ಹೊಂಗನಸುಗಳು (ಈ, ೧೯೪೩).

ಸಂಪಾದಿತ : ಕನ್ನಡ ಬಾವುಟ (೧೯೩೮)

ಶ್ರೀಕಂಠಶಾಸ್ತ್ರೀ, ಸುಬ್ಬಾಶಾಸ್ತ್ರೀ, ನಂಜನಗೂಡು ಆಸ್ಥಾನಮಹಾವಿದ್ವಾನ್

ಜ : ೧೮೮೪ ಮ : ೧೯೫೮

ಮೈಸೂರು. ನಂಜನಗೂಡು ಅನಂತನಾರಾಯಣಶಾಸ್ತ್ರಿಗಳ ತಮ್ಮಂದಿರಾದ ಇವರು ಸ್ವಂತ ವ್ಯಾಸಂಗದಿಂದ ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯದಲ್ಲಿ ವಿಶೇಷವಾದ ಪಾಂಡಿತ್ಯವನ್ನು ಸಂಪಾದಿಸಿ ಹದಿನೆಂಟನೆಯ ವಯಸ್ಸಿನಲ್ಲಿಯೇ ಗ್ರಂಥರಚನಾ ಚಾತುರ್ಯವನ್ನು ಪ್ರದರ್ಶಿಸಿ ಮೈಸೂರು ಮಹಾರಾಜರ ಕೃಪಾಪೋಷಣೆಯನ್ನು ಪಡೆದರು. ಅರಸುಮಕ್ಕಳ ಗುರುಕುಲದಲ್ಲಿ ಕನ್ನಡದ ಅಧ್ಯಾಪಕರಾಗಿ ಸುಮಾರು ೪೦ ವರ್ಷಗಳವರೆಗೆ ಸೇವೆಸಲ್ಲಿಸಿದರು. ಕೆಲವು ಸಮಯ ಶ್ರೀಜಯಚಾಮರಾಜರಿಗೆ ಕನ್ನಡಪಾಠ ಹೇಳಿಕೊಟ್ಟರು. ಅನಂತನಾರಾಯಣಶಾಸ್ತ್ರಿಗಳಂತೆ ಇವರಾದರೂ ಅನೇಕ ಐರೋಪ್ಯ ಅಧಿಕಾರಿಗಳಿಗೆ ಕನ್ನಡವನ್ನು ಕಲಿಸಿದರು. ಅಭಿನಯವಿಶಾರದ ವರದಾಚಾರ್ಯರು ಅಭಿನಯಿಸುತ್ತಿದ್ದ 'ನಿರುಪಮಾ, ಧ್ರುವವಿಜಯ, ವಿಷ್ಣುಲೀಲಾ, ಸೀತಾಪರಿಣಯ' ಎಂಬ ಜನಪ್ರಿಯ ನಾಟಕಗಳನ್ನು ಶಾಸ್ತ್ರಿಗಳೇ ರಚಿಸಿಕೊಟ್ಟರು. ಅದರಂತೆ ಮೈಸೂರಿನ ಚಾಮುಂಡೇಶ್ವರೀ ನಾಟಕ ಮಂಡಲಿಯವರು ಇವರ 'ಸರ್ವಸುಂದರಿ, ಶ್ರೀರಾಮಪಾದುಕಾಪಟ್ಟಾಭಿಷೇಕ, ರಾಜಸೂಯ' ಇತ್ಯಾದಿ ನಾಟಕಗಳನ್ನು ರಂಗಭೂಮಿಯ ಮೇಲೆ ತಂದರು. 'ಕೃಷ್ಣರಾಜೇಂದ್ರವಂಶಚರಿತ್ರೆ' ಎಂಬ ಇವರ ಚಂಪೂಗ್ರಂಥವು ಆಸ್ಥಾನವಿದ್ವತ್ಸಭೆಯ ಕವಿತಾಸ್ಪರ್ಧೆಯಲ್ಲಿ ಪ್ರಥಮ ಪಾರಿತೋಷಕವನ್ನು ಪಡೆಯಿತು. ಇವರ ಭಾಷಾಸೇವೆಯನ್ನು ಮೆಚ್ಚಿ ಮೈಸೂರಿನ ನಾಗರಿಕರು ೧೯೨೭ರಲ್ಲಿ ಎಂ.ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ರಾಜಕವಿಭೂಷಣ ಲಿಂಗರಾಜ ಅರಸರ ಹಸ್ತದಿಂದ ಸುವರ್ಣಕಂಕಣವನ್ನು ಅರ್ಪಿಸಿ ಇವರನ್ನು ಗೌರವಿಸಿದರು. ೧೯೫೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಇವರನ್ನು ಸನ್ಮಾನಿಸಲಾಯಿತು.

'ಕರ್ನಾಟಕ ಚಂದ್ರಿಕೆ' (೧೯೧೧, ಮೈಸೂರು) ಎಂಬ ಮಾಸಪತ್ರಿಕೆಯನ್ನು ಹೊರಡಿಸಿ ಸುಮಾರು ೧೪ ವರ್ಷಗಳವರೆಗೆ ನಡೆಸಿದರು.

ದಳವಾಯಿ ಪ್ರೌಢಶಾಲೆಯಲ್ಲಿಯೂ, ಸಿಟಿ ಕೋ-ಆಪರೇಟಿವ್ ಬ್ಯಾಂಕಿನಲ್ಲಿಯೂ ಕಾರ್ಯನಿರ್ವಾಹಕ ಸಭೆಯ ಸದಸ್ಯರಾಗಿ ಅನೇಕ ವರ್ಷ ಕೆಲಸಮಾಡಿದರು. ಅನಾಥ ಸಹಾಯಕ ಸಂಘವನ್ನು ಏರ್ಪಡಿಸಿ ೩೫ ವರ್ಷಗಳವರೆಗೆ ಅದರ ಕಾರ್ಯದರ್ಶಿಯಾಗಿ ಶ್ರಮಿಸಿ ಸುಮಾರು ೧ ಲಕ್ಷ ರೂಪಾಯಿಯ ಆಸ್ತಿಯನ್ನು ಸಂಪಾದಿಸಿಕೊಟ್ಟರು.

ಗ್ರಂಥಗಳು : ಅಧಿಕಪ್ರಸಂಗಿ (ಇ), ಅನಂಗಸುಂದರಿ (ಇ), ಅಪರಾಜಿತಾ (ಇ), ಅಭಿಜ್ಞಾನಪ್ರದಾನನಾಟಕಂ (ಇ), ಅಸಹಾಯಶೂರಪ್ರಹಸನ (ಇ), ಉತ್ಪಲಕುಮಾರಿ(ಆ), ಕರ್ಣಾಟಕ ಪ್ರಿಯದರ್ಶಿಕಾ ನಾಟಿಕೆ (ಆ), ಕನಕಲತಾಪರಿಣಯ ನಾಟಕಂ (ಆ), ಕಲಹಪ್ರಿಯಾಪ್ರಹಸನ (ಆ), ಕಳಾವತಿ (ಇ), ಕೃಷ್ಣರಾಜೇಂದ್ರ ವಂಶಚರಿತಂ (ಅ), ಕೃಷ್ಣವಿಜಯವ್ಯಾಯೋಗಂ (ಆ),ಗೃಹಿಣಿ ಧರ್ಮದೀಪಿಕೆ (ಧ), ಚಮತ್ಕಾರರತ್ನಾವಳಿ(ಇ), ಚಂದ್ರಮತಿ (ಇ), ಚಾತುರ್ಯವತಿ (ಇ), ಚಾರುಮತಿ (ಇ), ಚಿತ್ರಕಳಾವತಿ (ಇ), ಛಾಯಾಮತಿ (ಇ), ತಾರಾಸುಂದರಿ (ಇ), ತಿಲೋತ್ತಮಾ (ಇ), ದಯಾಮತಿ (ಇ), ದಾನಕೇಸರಿ ಪ್ರಲಾಪ (ಇ), ಧ್ರುವವಿಜಯನಾಟಕಂ (ಆ), ನವೀನ ಪ್ರಪಂಚ (ಆ), ನಿರ್ಭಾಗ್ಯ ಚಾಣಕ್ಯ (ಇ), ನಿರುಪಮಾ (ಆ. ೧೯೦೭), ಪತ್ನೀಹಿತಸೂಚನಿ (ಧ), ಪದ್ಮಿನಿ (ಇ), ಪಶುಲೋಕ ರಹಸ್ಯ (ಆ), ಪ್ರಭಾವತಿ (ಇ), ಪ್ರಹಸನತರಂಗ (ಆ), ಪುನರ್ಮರಣ ಪ್ರಹಸನ (ಆ), ಭಾನುಮತಿ (ಇ), ಮರುಳಾಟದ ಮದುವೆ (ಆ), ಮಹಾಬಧಿರ ಪ್ರಹಸನ (ಆ), ಮಹಾರಣ್ಯಪುರಾಧಿಪತ್ಯ (ಆ), ಮಂಜುವಾಣಿ (ಇ), ಮಾಧವಚಂದ್ರ (ಇ), ಮಾಲತೀಮಧುಕರ (ಇ) ಮೂಷಕಾಸುರವಿಜಯ (ಆ), ಮೈಸೂರು ಯಾತ್ರೆ (ಈ), ಯೋಗನಿದ್ರಾಪ್ರಹಸನ (ಆ), ರಾಘವಾಭ್ಯುದಯ ನಾಟಕ (ಆ), ರಾಜಸೂಯ (ಆ), ರಾಧಾಮಾಧವಿ (ಇ), ರೇಣುಕವಿಜಯ ಮಹಾಪುರಾಣ (ಅ), ವಸುಮತಿ (ಇ), ವ್ಯವಹಾರಧರ್ಮಬೋಧಿನಿ (ಆ), ವಿಜಯಾಭ್ಯುದಯ ನಾಟಕಂ(ಆ), ವಿಲಕ್ಷಣ ಶಿಕ್ಷಣ (ಇ) ವಿವೇಕದೀಪಿಕೆ (ಈ), ವಿಶ್ವಾಮಿತ್ರ (ಇ), ವಿಷ್ಣುಲೀಲಾ(ಆ)ವೈದರ್ಭೀವಿಲಾಸ (ಇ), ಸತ್ಯರಾಜನ ಪೂರ್ವದೇಶದ ಯಾತ್ರೆ (ಇ) ಸತೀಮಣಿ (ಇ), ಸತೀಹಿತಬೋಧಿನಿ (ಧ), ಸತೀ ರೋಹಿಣಿ (ಇ) ಸತ್ಯಸಂಜೀವಿನಿ(ಇ), ಸರಳಬಾಲೆ (ಇ), ಸ್ವರ್ಣಲತಾ (ಇ) ಸೀತಾಪರಿಣಯ ನಾಟಕಂ (ಇ), ಸೀತಾಸುವರ್ಣಮೃಗ ನಾಟಕಂ (ಆ), ಸುಭಾಷಿತಲಹರಿ (ಧ), ಸಂಗೀತಪಾರಿಜಾತ (ಆ), ಸಂತಾಪಕ(ಇ), ಹಾಸ್ಯ ಸಂಜೀವಿನಿ (ಆ).

ಸದಾಶಿವ, ಗುರುನಾಥ, ಗರುಡ

ಜ : ೧೮೮೪ ಮ : ೧೯೫೪

ಕೊಪ್ಪಳ ಜಿಲ್ಲೆಯ ಕೌಲೂರು. ಮ್ಯಾಟ್ರಿಕ್‌ವರೆಗೆ ವಿದ್ಯಾಭ್ಯಾಸ. ಮರಾಠಿ, ಉರ್ದು, ಪಾರ್ಶಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಚಿಕ್ಕಂದಿನಿಂದಲೂ

ನಾಟ್ಯಕಲೆಯಲ್ಲಿ ಒಲವುಳ್ಳ ಇವರು ೧೯೦೭ರಲ್ಲಿ ನಿಜಾಂನಾಡಿನ ಯಾದಗಿರಿಯಲ್ಲಿ 'ಶಿವಸುತ ಪ್ರಾಸಾದಿಕ ನಾಟಕ ಮಂಡಲಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ರಂಗಭೂಮಿಯ ಸೇವೆಯನ್ನು ಪ್ರಾರಂಭಿಸಿದರು. ಕೆಲವು ದಿನಗಳನಂತರ ಆ ಸಂಸ್ಥೆಯು ನಿಂತುಹೋದಾಗ, ೧೯೧೬ರಲ್ಲಿ ಗದಗಿನಲ್ಲಿ 'ದತ್ತಾತ್ರೇಯ ನಾಟಕಮಂಡಲಿ'ಯನ್ನು ಸಂಸ್ಥಾಪಿಸಿ. ಸುಮಾರು ೨೫ವರ್ಷಗಳವರೆಗೆ ಕರ್ನಾಟಕ-ಆಂಧ್ರ-ಮಹಾರಾಷ್ಟ್ರ ಪ್ರದೇಶಗಳಲ್ಲಿ ಸಂಚರಿಸಿ ಕನ್ನಡ ರಂಗಭೂಮಿಯ ಭೇರಿಯನ್ನು ಮೊಳಗಿಸಿದರು. ೧೯೪೧ರಲ್ಲಿ ಈ ಸಂಸ್ಥೆಯೂ ನಿಂತುಹೋಯಿತು. ಅಭಿಜಾತ ಕಲಾವಿದರೂ, ಕುಶಲ ಸಂಘಟಕರೂ ಆಗಿದ್ದ ಇವರು ಕನ್ನಡ ಸಾಹಿತ್ಯಸಮ್ಮೇಲನದ ಬೆಳಗಾವಿಯ ಅಧಿವೇಶನದಲ್ಲಿ (೧೯೨೯) 'ನಾಟಕಾಲಂಕಾರ' ಎಂಬ ಗೌರವವನ್ನು ಪಡೆದರು.

ಗ್ರಂಥಗಳು : ಎಚ್ಚಮನಾಯಕ (ಆ. ೧೯೪೯, II), ಕ್ರಾಂತಿ (ಆ. ೧೯೪೧), ಚವತಿಯ ಚಂದ್ರ (ಆ. ೧೯೨೯), ನಮ್ಮ ಭಾಗ್ಯೋದಯ (ಆ. ೧೯೩೬), ಮಹಾಸಾಧು ಕಬೀರದಾಸ (ಆ. ೧೯೨೨), ಮಾತೃಬಂಧವಿಮೋಚನೆ ಅಥವಾ ಕಂಸವಧೆ (ಆ. ೧೯೩೦), ವಿಷಮವಿವಾಹ (ಆ. ೧೯೨೩), ಶ್ರೀರಾಮಪಾದುಕಾಪಟ್ಟಾಭಿಷೇಕ (ಆ. ೧೯೨೯), ಸತ್ಯಸಂಕಲ್ಪ (ಆ. ೧೯೩೩)*.

ಸಿದ್ಧಗಿರಿಯಪ್ಪ, ರೇವಪ್ಪ, ಸಬರದ

ಜ : ೧೮೮೪ ಮ : ಮಾರ್ಚ್ ೧೯೩೫

ಗೋಕಾಕ ತಾಲೂಕಿನ ಸುಣಧೋಳಿ. ಪ್ರಾಥಮಿಕ ಶಿಕ್ಷಣವು ಅಲ್ಲಿಯೇ ಆಯಿತು. ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರುವರ್ಷದ ಅಭ್ಯಾಸವನ್ನು ಪೂರ್ತಿಗೊಳಿಸಿ ಉಪಾಧ್ಯಾಯವೃತ್ತಿಯನ್ನು ಸ್ವೀಕರಿಸಿ ಬೆಳಗಾವಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡಿದರು. ಆ.ಡೆ.ಎ. ಇನ್ಸ್ಪೆಕ್ಟರರಾಗಿಯೂ ಕೆಲವು ವರ್ಷ ಸೇವೆಸಲ್ಲಿಸಿದರು. ಹೋಮಿಯೋಪಥಿ ವೈದ್ಯಶಾಸ್ತ್ರವನ್ನು ಬಲ್ಲವರು.

ಗ್ರಂಥಗಳು : ಕುಮುದಿನಿ (ಅ), ಚಾಲುಕ್ಯರ ಪುಲಿಕೇಶಿ (ಅ), ನಲಿನಿ (ಅ), ಭ್ರಮರ (ಅ), ಮಹಾರಾಣಾಸಿಂಹ (ಅ), ರಾಜಸಿಂಹ (ಅ) ರಾಣಾಪ್ರತಾಪಸಿಂಹ (ಅ), ಸಂತಾನಶಾಸ್ತ್ರ (ಥ), ಹೇಮಚಂದ್ರ (ಅ).

ಸುಬ್ಬಣ್ಣಾಚಾರ್ಯ, ಗೋಪಾಳಾಚಾರ್ಯ, ಅಡಬಡ್ಡಿ

ಜ : ೧೮೮೪ ಮ : ೨೫-೧೧-೧೯೩೬

ಧಾರವಾಡ ಜಿಲ್ಲೆಯ ಕಲಘಟಗಿ ಕಕ್ಕಂದಿರಾದ ಭೀಮಾಜಿ ಶ್ರೀನಿವಾಸ ಅಡಬಡ್ಡಿ

---

*ಒಟ್ಟು ೪೩ ನಾಟಕಗಳು ಇವರಿಂದ ರಚಿತವಾಗಿದ್ದು ಅವುಗಳಲ್ಲಿ ಕೇವಲ ಒಂಬತ್ತು ನಾಟಕಗಳು ಪ್ರಕಟವಾಗಿವೆ.

(ಶೀಘ್ರಕವಿ) ಅವರ ಬಳಿಯಲ್ಲಿ ವಿದ್ಯಾಭ್ಯಾಸವಾಯಿತು. ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಎರಡನೆಯ ವರ್ಷದ ಅಧ್ಯಾಪನ ಶಿಕ್ಷಣದಲ್ಲಿ ಪ್ರಶಸ್ತಿ ಪಡೆದು ಉಪಾಧ್ಯಾಯವೃತ್ತಿಯನ್ನು ಸ್ವೀಕರಿಸಿದರು (೧೯೦೭). ಮೈಸೂರು ಅರಮನೆಯ ನಾಟಕಶಾಲೆಯಲ್ಲಿ ಕೃಷ್ಣರಾಜಪ್ರಭುಗಳ ಸಮ್ಮುಖದಲ್ಲಿ ಇವರ 'ವಿವೇಕ ವಿಜಯ' ಎಂಬ ನಾಟಕವು ಶಿರಹಟ್ಟಿಯ ಲಕ್ಷ್ಮೀಪ್ರಾಸಾದಿಕ ಸಂಗೀತ ನಾಟಕ ಮಂಡಳಿಯವರಿಂದ ಅಭಿನಯಿಸಲ್ಪಟ್ಟು ಸರ್ವರ ಮೆಚ್ಚುಗೆಗೆ ಪಾತ್ರವಾಯಿತು (೧೯೧೧) 'ಅಭಿಜ್ಞಕವಿ' ಎಂಬ ಪ್ರಶಸ್ತಿಪಡೆದಿದ್ದರು.

ಗ್ರಂಥಗಳು : ಕುಮುದಿನಿ (ಆ), ವಿಕ್ರಮವಿಜಯ (ಆ), ವಿವೇಕವಿಜಯ (ಆ), ಸ್ಯಮಂತಕಮಣಿ (ಆ), ಶಿಬಿಚಕ್ರವರ್ತಿ (ಆ)

ಕೇಶವದಾಸ, ಬೇಲೂರು

ಜ : ೧೮೮೫ ಮ : ೩೦-೧೧-೧೯೪೮

ಬೆಂಗಳೂರು. ಪ್ರಸಿದ್ಧ ಹರಿದಾಸರ ಮನೆತನದವರಾಗಿದ್ದ ಇವರು ಸಾಹಿತ್ಯ, ಸಂಗೀತ ಹಾಗೂ ದ್ವೈತವೇದಾಂತದಲ್ಲಿ ವಿಶೇಷವಾದ ಪರಿಶ್ರಮ ಪಡೆದು ಖ್ಯಾತನಾಮ ಕೀರ್ತನಕಾರರೆನಿಸಿಕೊಂಡರು. ತಮ್ಮ ಪಾಂಡಿತ್ಯ, ಚಿಕಿತ್ಸಕದೃಷ್ಟಿ ಹಾಗೂ ಅಸ್ಖಲಿತ ವಾಣಿಯ ಪ್ರಭಾವದಿಂದ ಅತ್ಯಂತ ಜನಪ್ರಿಯ ಕೀರ್ತನಕಾರರಾಗಿ, ಸುಮಾರು ೪೦ ವರ್ಷಗಳವರೆಗೆ ಅಖಿಲ ಕರ್ನಾಟಕವನ್ನು ಅನೇಕ ಸಲ ಸಂಚರಿಸಿ ಕರ್ನಾಟಕಸಂಗೀತದ ಪ್ರಚಾರವನ್ನೂ ಧರ್ಮಜಾಗೃತಿಯನ್ನೂ ಉಂಟುಮಾಡಿದರು. ಅಲ್ಲದೆ 'ಹರಿಮಂದಿರ'ವೆಂಬ ಸಂಸ್ಥೆಯನ್ನು ಸ್ಥಾಪಿಸಿ, ಭಾರತೀಯ ತತ್ತ್ವಶಾಸ್ತ್ರ ಹಾಗೂ ಹರಿದಾಸ ಸಾಹಿತ್ಯದ ಸಂಶೋಧನ-ಪ್ರಕಾಶನ ಕಾರ್ಯಗಳನ್ನು ಆರಂಭಿಸಿದ್ದರು.

೧೯೩೯ರಲ್ಲಿ ಗೋಕರ್ಣದ ಸಾರ್ವಜನಿಕರು 'ಕೀರ್ತನಾಚಾರ್ಯ' ಎಂಬ ಪದವಿಯಿಂದ ಇವರನ್ನು ಗೌರವಿಸಿದ್ದರು.

ಗ್ರಂಥಗಳು : ಕನ್ಯಕಾಪುರಾಣ (ಧ), ಕರ್ನಾಟಕ ಭಕ್ತವಿಜಯ ಭಾಗ ೧, ೨, (ಪಿ-ಚ), ರಾಘವೇಂದ್ರವಿಜಯ (ಧ-ಚ)

ಕೋಟಿಯಣ್ಣಶೆಟ್ಟಿ, ಹಿರಿಕುದ್ರು

ಜ : ೧೮೮೫

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಆನಗಳ್ಳಿ. ೧೮೯೯ರಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಸೌಕೂರಿನಲ್ಲಿ ಪಾಠಶಾಲೆಯೊಂದನ್ನು ಪ್ರಾರಂಭಿಸಿದರು. ೧೯೦೪ರಲ್ಲಿ ಲೋವರ್ ಗ್ರೇಡ್ ತರಬೇತಿ ಪಡೆದು, ಬಸರೂರು ಮೊದಲಾದ ಸ್ಥಳಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿದರು. ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಕೆಲಸಗಳಲ್ಲಿ ದುಡಿದವರು.

ಗ್ರಂಥಗಳು : ಆನಂದ ಅಥವಾ ಮನೆಯ ಅಳಿಯ (ಇ.೧೯೨೨), ಭಗೀರಥವಿಜಯ (ಆ. ೧೯೧೮), ಭವನದ ಹೇಳಿಕೆ (ಲ-ಋೂ.೧೯೨೦).

ಫಕೀರಯ್ಯಾ, ಬಸವಯ್ಯಾ, ಇಂಡಿಮಠ

ಜ : ಸು. ೧೮೮೫

ಧಾರವಾಡ ಜಿಲ್ಲೆಯ ಬ್ಯಾಡಿಗಿ. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ತರಬೇತು ಹೊಂದಿದ ಇವರು ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿದರು.

ಗ್ರಂಥ : ಸಂಗೀತ ಪ್ರೇಮಲೀಲಾ (ಬಾಣ ಕಾದಂಬರಿಯನ್ನಾಧರಿಸಿದ ನಾಟಕ) (ಆ.೧೯೨೦)

ಭೀಮರಾವ್, ಹುರಳಿ

ಜ : ಸು. ೧೮೮೫

ಮಂಗಳೂರು. 'ಕಂಠೀರವ' ಎಂಬ ವಾರಪತ್ರಿಕೆಯ ಸಂಪಾದಕರು. ಸಾಹಿತ್ಯಿಕ ಚಟವಟಿಕೆಗಳಲ್ಲಿಯೂ ಪತ್ರಿಕಾ ವ್ಯವಸಾಯದಲ್ಲಿಯೂ ತುಂಬ ದುಡಿದಿದ್ದಾರೆ. 'ಸುಬ್ರಾಯಾನುಜ' ಎಂಬುದು ಇವರ ಕಾವ್ಯನಾಮ.

ಗ್ರಂಥಗಳು : ತಾರಾ (ಇ. ೧೯೧೩), ಪಾಪಪುಣ್ಯ (ಇ. ೧೯೨೩), ಮುರುಕು ದಂಬೂಕು (ಇ. ೧೯೪೭), ರಜಿಯಾ ಬೇಗಂ, (ಇ. ೧೯೬೪), ಸ್ವಲ್ಪ ನಗಬಾರದೇ? (ಈ), ಹಾಸನ ಟೋಪಿ (ಇ. ೧೯೩೨).

ರಾಘವೇಂದ್ರ, ಕೃಷ್ಣ, ಇನಾಮತಿ

ಜ : ೧೮೮೫ ಮ : ೧೯೪೦

ಧಾರವಾಡ ಜಿಲ್ಲೆಯ ಅಣ್ಣೀಗೇರಿ. ಮಾಧ್ಯಮಿಕ ಶಿಕ್ಷಣದ ನಂತರ ಸ್ವಾಧ್ಯಾಯದಿಂದ ಹಿಂದೀ, ಗುಜರಾತಿ ಭಾಷಾಪರಿಚಯವನ್ನು ಮಾಡಿಕೊಂಡರು.

ಗ್ರಂಥಗಳು : ಅಶೋಕ ಅಥವಾ ಆರ್ಯಾವರ್ತದ ಮೊದಲನೆಯ ಚಕ್ರವರ್ತಿ, ಗುಜರಾಥದ ಇತಿಹಾಸ-ಭಾಗ ೧, ದಕ್ಷಿಣ ಮುಸಲ್ಮಾನೀ ರಾಜ್ಯಗಳು, ವೀರೇಂದ್ರ (ಇ.೧೯೦೩), ಸರೋಜಿನಿ ನಾಟಕ.

ವೆಂಕಣ್ಣಯ್ಯ, ಎಸ್.ತಳುಕು

ಜ : ೧-೧೦-೧೮೮೫ ಮ : ೨೪-೨-೧೯೩೯

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ತಳುಕು ಗ್ರಾಮದವರು. ಚಳ್ಳಕೆರೆ, ಚಿತ್ರದುರ್ಗ, ಮೈಸೂರಿನಲ್ಲಿ ವ್ಯಾಸಂಗ. ಚರಿತ್ರೆ, ಅರ್ಥಶಾಸ್ತ್ರ, ವಿಷಯಗಳೊಂದಿಗೆ ೧೯೦೯ರಲ್ಲಿ ಮಹಾರಾಜಾ ಕಾಲೇಜಿನಿಂದ ಬಿ.ಎ. ಪದವಿಯನು ಪಡೆದು ಎಲ್‌ಎಲ್.ಬಿ.

ಅಭ್ಯಾಸಕ್ಕೆಂದು ಮುಂಬೈಗೆ ಹೋದರು. ಅದು ಸಾಧ್ಯವಾಗದೆ, ಅಲ್ಲಿಯ ಜನರಲ್ ಪೋಸ್ಟಾಫೀಸಿನಲ್ಲಿ ಕೆಲವು ದಿನ ಗುಮಾಸ್ತರಾಗಿ ಕೆಲಸಮಾಡಿ ಹಿಂತಿರುಗಿ ಮೈಸೂರಿಗೆ ಬಂದರು. ೧೯೧೪ರಲ್ಲಿ ಎಂ. ಎ ಪಾಸಾಗಿ ಅಧ್ಯಾಪನವೃತ್ತಿಯನ್ನು ಸ್ವೀಕರಿಸಿದರು. ಧಾರವಾಡ, ಬೆಂಗಳೂರು, ದೊಡ್ಡಬಳ್ಳಾಪುರ ಮೊದಲಾದೆಡೆಗಳಲ್ಲಿ ಅಧ್ಯಾಪಕರಾಗಿದ್ದು ೧೯೨೭ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ಕನ್ನಡ ಭಾಷಾ-ಸಾಹಿತ್ಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲ ಹಿರಿಯ ವಿದ್ವಾಂಸರಲ್ಲಿ ಇವರೂ ಒಬ್ಬರಾಗಿದ್ದರು.

ಗ್ರಂಥಗಳು : ಕನ್ನಡ ಕೈಪಿಡಿ (ಹಳಗನ್ನಡ ವ್ಯಾಕರಣ ಮತ್ತು ಭಾಷಾಚರಿತ್ರೆಯ ಭಾಗ) (ದ), ಪ್ರಾಚೀನ ಸಾಹಿತ್ಯ (ರವೀಂದ್ರನಾಥ ಟಾಗೋರರ ಭಾಷಣಗಳ ಅನುವಾದ) (ದ), ಶ್ರೀ ರಾಮಕೃಷ್ಣಪರಮಹಂಸರ ಚರಿತ್ರೆ (ಪೀ-ಚ), ಶ್ರೀರಾಮಕೃಷ್ಣಲೀಲಾ ಪ್ರಸಂಗದ ಭಾಷಾಂತರ (ಪೀ).

ಪರಿಷ್ಕೃತ : ಕಾದಂಬರೀ ಸಂಗ್ರಹ, ಬಸವರಾಜದೇವರ ರಗಳೆ, ಹರಿಶ್ಚಂದ್ರ ಕಾವ್ಯಸಂಗ್ರಹ, ಸಿದ್ಧರಾಮಪುರಾಣ.

ಮಂಜಪ್ಪ, ಹರ್ಡೇಕರ

ಜ : ೧೮೮೬ ಮ : ೩-೧-೧೯೪೭

ಉತ್ತರ ಕನ್ನಡ ಜಿಲ್ಲೆಯ ಬನವಾಸಿ. ಬನವಾಸಿ, ಶಿರಸಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ; ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರು ವರ್ಷ ಪ್ರೌಢ ವ್ಯಾಸಂಗವನ್ನು ಪೂರ್ತಿಗೊಳಿಸಿ ಉಪಾಧ್ಯಾಯವೃತ್ತಿಯನ್ನು ಸ್ವೀಕರಿಸಿದರು.

ತತ್ತ್ವನಿಷ್ಠರೂ ದೇಶಸೇವಾಕಾಂಕ್ಷಿಗಳೂ ಆಗಿದ್ದ ಮಂಜಪ್ಪನವರು ಕೆಲವೇ ದಿನಗಳಲ್ಲಿ ಆ ನೌಕರಿಯನ್ನು ಬಿಟ್ಟುಕೊಟ್ಟು, ಇಡಿಯ ಜೀವಮಾನವನ್ನು ಪತ್ರಿಕಾ ವ್ಯವಸಾಯ, ಗ್ರಂಥರಚನೆ, ವಿದ್ಯಾಪ್ರಸಾರ ಇತ್ಯಾದಿ ಲೋಕೋಪಯೋಗಿ ಕಾರ್ಯಗಳಲ್ಲಿಯೇ ಕಳೆದರು. ದಾವಣಗೆರೆಯಿಂದ ೧೯೦೬ರಲ್ಲಿ ಇವರು ಹೊರಡಿಸಿದ 'ಧನುರ್ಧಾರಿ' ವಾರಪತ್ರಿಕೆಯು ೧೯೧೫ವರೆಗೆ ಕಾರ್ಯ ಮಾಡಿತು. ೧೯೨೧ರಲ್ಲಿ ರಾಷ್ಟ್ರಜೀವನ ಗ್ರಂಥಮಾಲೆಯನ್ನು ಪ್ರಾರಂಭಿಸಿ ಸಮಾಜಕ್ಕೆ ಉಪಯುಕ್ತವಾದ ಸಾಹಿತ್ಯವನ್ನು ಪ್ರಚುರಪಡಿಸಲುಪಕ್ರಮಿಸಿದರು. ೧೯೪೩ರಲ್ಲಿ 'ಪ್ರಗತಿ ಗ್ರಂಥಮಾಲೆ'ಯ ಯೋಜನೆಯೊಂದನ್ನು ಸಿದ್ಧಗೊಳಿಸಿದ್ದರು; ಆದರೆ ಇವರ ಆಕಸ್ಮಿಕ ಮರಣದಿಂದ ಆ ಕೆಲಸವು ಕಾರ್ಯಗತವಾಗಲಿಲ್ಲ. 'ಖಾದೀ ವಿಜಯ' (೧೯೨೮), 'ಉದ್ಯೋಗ' (೧೯೩೦), 'ಶರಣಸಂದೇಶ' (೧೯೩೧), ಎಂಬ ಮಾಸಪತ್ರಿಕೆಗಳಿಗೆ ಇವರು ಸಂಪಾದಕರಾಗಿದ್ದರು. 'ಶರಣಸಂದೇಶ'ವು (ಆಲಮಟ್ಟಿ) ವಾರಪತ್ರಿಕೆಯಾಗಿ ಪರಿವರ್ತಿತವಾಗಿ, ಹಲವು ವರ್ಷ ಹಿಂದೂ ಧರ್ಮ-ತತ್ತ್ವಜ್ಞಾನದ ಪ್ರಚಾರವನ್ನು ಮಾಡಿತು.

ವಿವಿಧ ವಿಷಯಗಳ ಅಭ್ಯಾಸ-ಚರ್ಚೆ-ವ್ಯಾಖ್ಯಾನಗಳನ್ನು ಕೈಕೊಳ್ಳುವ ಉದ್ದೇಶದಿಂದ ೧೯೧೭ರಲ್ಲಿ ದಾವಣಗೆರೆಯಲ್ಲಿ ಜ್ಞಾನಪ್ರಸಾರಕ ಸಂಘವನ್ನು ಸ್ಥಾಪಿಸಿದ್ದರು. ಮಹಾತ್ಮಾ ಗಾಂಧಿಯವರ ನೈತಿಕ ತತ್ತ್ವಗಳನ್ನು ಪ್ರಸಾರಗೊಳಿಸುವುದಕ್ಕಾಗಿ ೧೯೨೨ರಲ್ಲಿ ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜವನ್ನೂ, ಮರುವರ್ಷ ಹರಿಹರದ ನೆರೆಯಲ್ಲಿ ತುಂಗಭದ್ರೆಯ ದಂಡೆಯ ಮೇಲೆ 'ಸತ್ಯಾಗ್ರಹ ಆಶ್ರಮ' ವನ್ನೂ ಸ್ಥಾಪಿಸಿದರು. ನದಿಯ ಪ್ರವಾಹದಿಂದ ಅದು ಕೊಚ್ಚಿಹೋದದ್ದರಿಂದ ವಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ವೀರಶೈವ ವಿದ್ಯಾಲಯವನ್ನು ಸ್ಥಾಪಿಸಿ ಕೊನೆಯವರೆಗೂ ತಮ್ಮ ಕಾರ್ಯಕ್ಷೇತ್ರವನ್ನಾಗಿರಿಸಿಕೊಂಡರು. ಅಖಿಲಭಾರತ ಕಾಂಗ್ರೆಸ್ಸಿನ ಬೆಳಗಾವಿಯ ಅಧಿವೇಶನದಲ್ಲಿ(೧೯೨೪), 'ಬಸವೇಶ್ವರ ಸೇವಾದಳ' ವೆಂಬ ಸ್ವಯಂಸೇವಕ ಪಥಕವನ್ನು ಸಂಘಟಿಸಿದ್ದರು. ಹಾವೇರಿಯಲ್ಲಿ ಸೇರಿದ್ದ ಧಾರವಾಡ ಜಿಲ್ಲಾ ರಾಷ್ಟ್ರೀಯ ಸಭೆಗೂ (೧೯೨೩), ವಿಜಾಪುರದಲ್ಲಿ ನೆರೆದಿದ್ದ ಖಾದೀ ಪರಿಷತ್ತಿಗೂ (೧೯೨೮) ಅಧ್ಯಕ್ಷರಾಗಿದ್ದರು.

ನೈಷ್ಠಿಕ ಬ್ರಹ್ಮಚಾರಿಗಳೂ, ಸದಾಚಾರಶೀಲರೂ ಆಗಿದ್ದ ಮಂಜಪ್ಪನವರು 'ಕರ್ನಾಟಕದ ಗಾಂಧೀ' ಎಂದು ಲೋಕಪ್ರಿಯರಾಗಿದ್ದರು.

ಗ್ರಂಥಗಳು : ಆಧುನಿಕ ಜರ್ಮನಿ (ಮ.೧೯೧೮), ಆರೋಗ್ಯವೇ ಜೀವನ (೧೯೨೦), ಎಚ್ಚತ್ತ ಹಿಂದುಸ್ತಾನ (ಮ), ಕಾಯಕವೇ ಕೈಲಾಸ, ಕೇರ್ ಹಾರ್ಡಿ ಎಂ.ಪಿ. ಇವರ ಚರಿತ್ರೆ, ಖಾದೀಶಾಸ್ತ್ರ, ತ್ಯಾಗವೀರ ಲಿಂಗರಾಜರ ಚರಿತ್ರೆ, ಪ್ರಮಥಾಚಾರದೀಪಿಕೆ, ಬಸವಚರಿತ್ರೆ, ಬಸವಬೋಧಾಮೃತ, ಬುದ್ಧಿಯ ಮಾತು, ಭಗವಾನ್ ಬುದ್ಧಚರಿತ್ರೆ, ಭಾರತೀಯರ ದೇಶಭಕ್ತಿ, ಮಲ್ಲಪ್ಪ ಬಸವಪ್ಪ ವಾರದ ಇವರ ಸಚಿತ್ರ ಚರಿತ್ರೆ, ಮಹಾತ್ಮಾ ಗಾಂಧಿಯವರ ಚರಿತ್ರೆ, ವಿಜಯವಾಣಿ, ವೀರಶೈವ ಮತತತ್ತ್ವ, ವೀರಶೈವ ಮತಬೋಧೆ, ಶುದ್ಧಿಸಂಘಟನೆ, ಸತ್ಯಾಗ್ರಹಧರ್ಮ (ಯ.೧೯೨೨), ಸ್ವಕರ್ತವ್ಯ ಸಿದ್ಧಾಂತ, ಸ್ವಾಮಿ ರಾಮತೀರ್ಥ (ಪೀ-ಚ.೧೯೨೨), ಸ್ವಾಮಿ ರಾಮತೀರ್ಥರ ಉಪನ್ಯಾಸಗಳು (ಪೀ.೧೯೨೧), ಸ್ತ್ರೀನೀತಿಸಂಗ್ರಹ, ಸುಬೋಧಸಾರ, ಹಿಂದುತ್ವ (ಯ).

ರಾಜಗೋಪಾಲಕೃಷ್ಣರಾವ್, ಕಡೇಕಾರು

ಜ: ೧೮೮೬ ಮ : ೧೭-೯-೧೯೫೩

ಉಡುಪಿ ಬಳಿಯ ಕಡೇಕಾರು. ಸುಪ್ರಸಿದ್ಧ ಜಮೀನುದಾರರ ಮನೆತನದವರಾಗಿದ್ದ ಇವರು ಚಿಕ್ಕಂದಿನಿಂದಲೂ ಸಾಹಿತ್ಯ-ಸಂಸ್ಕೃತಿಯ ಕಾರ್ಯಕ್ರಮಗಳಲ್ಲಿ ತೊಡಗಿದವರಾಗಿದ್ದರು. ಅನೇಕ ವರ್ಷ ಕಡೇಕಾರು ಪಂಚಾಯತಿ ಬೋರ್ಡಿನ ಅಧ್ಯಕ್ಷರಾಗಿ ಲೋಕಹಿತಕಾರ್ಯಗಳನ್ನು ಸಾಧಿಸಿದರು. 'ಶ್ರೀಕೃಷ್ಣಸೂಕ್ತಿ' ಮಾಸಪತ್ರಿಕೆಯನ್ನು (ಉಡುಪಿ, ೧೯೦೫) ಹೊರಡಿಸಿದ್ದರು.

ಗ್ರಂಥ : ಜಯವಾಲ್ಮೀಕಿ (ಇ. ೧೯೨೪)

ವೀರಪ್ಪಶಾಸ್ತ್ರೀ, ದುಂಡಪ್ಪ, ಆರುಬೆರಳಿನ

ಜ : ೧೮೮೬

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಸ್ವಾಧ್ಯಾಯದಿಂದಲೇ ವಿದ್ಯಾರ್ಜನೆ. 'ನೀಲಕಂಠವಿಜಯ' (ಹಿರೇಬಾಗೇವಾಡಿ, ೧೯೧೦) ಎಂಬ ಮಾಸಪತ್ರಿಕೆಯನ್ನು ಕೆಲಕಾಲ ಹೊರಡಿಸಿದ್ದರು. ಅಲ್ಲಿಯ ಗ್ರಾಮಪಂಚಾಯತಿಯ ಸರಪಂಚರಾಗಿದ್ದರು. ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿ (೧೯೪೨) ಸೆರೆಮನೆವಾಸವನ್ನನುಭವಿಸಿದವರು.

ಗ್ರಂಥಗಳು : ಅಗತ್ಯವಿಚಾರ (೧೯೧೦), ಕಲ್ಪವೃಕ್ಷ (ಣ. ೧೯೨೨), ಕಾಮಧೇನು (ಣ.೧೯೨೧), ಮೈಸೂರ ಪ್ರವಾಸ (ಭ-ಗ).

ಶಿವಭಟ್ಟ, ರಾಮಭಟ್ಟ, ಕೆಕ್ಕಾರ ವಿದ್ಯಾವಿನೋದ, ವೇದಾಂತಕಲಾನಿಧಿ

ಜ : ೧೮೮೬ ಮ : ೧೯೩೧

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೆಕ್ಕಾರ. ಪ್ರಾರಂಭಿಕ ಶಿಕ್ಷಣವನ್ನು ಮನೆಯಲ್ಲಿಯೂ ಅನಂತರ ಕಾವ್ಯನಾಟಕಾದಿಗಳ ಹೆಚ್ಚಿನ ಅಭ್ಯಾಸವನ್ನು ಕೂಡ್ಲಕೆರೆ ಮಠದಲ್ಲಿಯೂ ಪೂರೈಸಿದರು. ಮುಂದೆ ಬೆತ್ತಗೇರಿ ಕೃಷ್ಣಶಾಸ್ತ್ರಿಗಳಲ್ಲಿ ಅಲಂಕಾರ, ಉಂಚಗೇರಿ ಸುಬ್ರಹ್ಮಣ್ಯ ಶಾಸ್ತ್ರಿಗಳಲ್ಲಿ ಜ್ಯೋತಿಷ್ಯಶಾಸ್ತ್ರಾದಿಗಳನ್ನು ಓದಿಯೂ, ಸ್ವಂತ ಪರಿಶ್ರಮದಿಂದ ಸಿದ್ಧಾಂತಕೌಮುದಿ, ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ವ್ಯಾಕರಣಗ್ರಂಥ ಹಾಗೂ ಹಳೆಗನ್ನಡ ಕಾವ್ಯಗಳನ್ನು ಅಭ್ಯಸಿಸಿಯೂ ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಗಣಿತ, ಜ್ಯೋತಿಷ್ಯ, ವೈದ್ಯಕಶಾಸ್ತ್ರಗಳಲ್ಲಿಯೂ ಸಾಹಿತ್ಯ, ಸಂಗೀತ ಮೊದಲಾದ ಲಲಿತಕಲೆಗಳಲ್ಲಿಯೂ ಇವರ ಅಭಿಜ್ಞತೆಯು ವಿಶೇಷವಾಗಿತ್ತು. ಕಾಶಿಯ ಭಾರತಧರ್ಮ ಮಹಾಮಂಡಲದ ಪರೀಕ್ಷೆಯಲ್ಲಿ ಯಶಸ್ವಿಯಾಗಿ 'ವಿದ್ಯಾವಿನೋದ' ಎಂಬ ಪ್ರಶಸ್ತಿಯನ್ನೂ 'ಸ್ವಾನುಭವಾದರ್ಶ'ವೆಂಬ ಸಂಸ್ಕೃತ ಗ್ರಂಥರಚನೆಯಿಂದ 'ವೇದಾಂತಕಲಾನಿಧಿ' ಎಂಬ ಗೌರವವನ್ನೂ ಪಡೆದವರಾಗಿದ್ದರು.

ಅಧ್ಯಯನ ಮುಗಿದನಂತರ ಶಿವಭಟ್ಟರು ಧಾರವಾಡ ಹೈಸ್ಕೂಲಿನಲ್ಲಿ ಪಂಡಿತರಾದರು. ಆದರೆ ಮುಂದೆ ಕೆಲವೇ ದಿನಗಳಲ್ಲಿ ಆ ಕೆಲಸವನ್ನು ಬಿಟ್ಟು ಸ್ವಗ್ರಾಮದಲ್ಲಿ 'ರಾಮಚಂದ್ರ ಭಾರತೀ ಸಂಸ್ಕೃತಪ್ರೌಢಶಾಲೆ'ಯನ್ನು ಸ್ಥಾಪಿಸಿ, ಸಾಹಿತ್ಯ, ಜ್ಯೋತಿಷ್ಯ, ವೇದಾಂತ ಇತ್ಯಾದಿ ವಿಷಯಗಳನ್ನು ಕಲಿಸಲು ಪ್ರಾರಂಭಿಸಿದರು (೧೯೧೧), ಮುಂದೆ ೧೯೨೩ರಲ್ಲಿ ತೆಪ್ಪದಲ್ಲಿ 'ಶ್ರೀ ಶಾರದಾ ಸಂಸ್ಕೃತ ಪಾಠಶಾಲೆ'ಯನ್ನೂ ಎರಡು ವರ್ಷಗಳ ನಂತರ ಬೆತ್ತಗೇರಿಯಲ್ಲಿ 'ಶ್ರೀ ಶಿವಾನಂದ ಸಂಸ್ಕೃತ ಪಾಠಶಾಲೆ'ಯನ್ನೂ, ೧೯೨೭ರಲ್ಲಿ ಹೊಸಾಕುಳಿಯಲ್ಲಿ 'ಶ್ರೀ ಜಗದ್ಗುರು ವಿದ್ಯಾರಣ್ಯ ಸಂಸ್ಕೃತಪಾಠಶಾಲೆ'ಯನ್ನೂ ಸ್ಥಾಪಿಸಿ ತಮ್ಮ ಜಿಲ್ಲೆಯಲ್ಲಿ ಸಂಸ್ಕೃತ ವಿದ್ಯಾಪ್ರಚಾರಕ್ಕೆ ಮಹತ್ವದ ಸೇವೆ ಸಲ್ಲಿಸಿದರು.

ಗ್ರಂಥಗಳು : ಆತ್ಮವಿದ್ಯಾರಹಸ್ಯ, ಏಕಶ್ಲೋಕೀ, ಅವಧೂತಗೀತಾ, ಕವಿತಾಪಂಚರತ್ನ,

ಕೌತುಕಮಾಲಿಕಾ, ಪರಮಾರ್ಥಸಂಗ್ರಹ, ಪಂಚಮಜಾರ್ಜ ಕೀರ್ತಿಮಂಜರಿ, ಭಾರತ ಭೂದೇವೀ ಸ್ತೋತ್ರ, ವೇದಾಂತಸ್ತೋತ್ರಮಾಲಾ, ಶ್ರೀರಾಮಸ್ತೋತ್ರ, ಸಿದ್ಧಿವಿನಾಯಕಾಷ್ಟಕ.

ಸಂಸ್ಕೃತ : ಆಸ್ತಿಕ ದಕ್ಷಿಣೋತ್ತರಾಯಣ, ತುಲಸೀವಿಯೋಗವಿಜ್ಞಾನಕಾವ್ಯ, ರೊದ್ದರಾಜ ಕೀರ್ತಿಮಂಜರಿ, ಸ್ವಾನುಭವಾದರ್ಶ, ಸೂಕ್ತಿಮುಕ್ತಾವಲಿ.

ಸಂಜೀವರಾಯಕವಿ, ಹನುಮಾನ್

ಜ : ೧೬-೬-೧೮೮೬ ಮ : ೧-೨-೧೯೪೩

ತುಮಕೂರು ಜಿಲ್ಲೆಯ ಬೆಳ್ಳಾವೆ. ಪ್ರಸಿದ್ಧ ಕವಿ ಹನುಮಾನ್ ವೆಂಕಟರಾಯರು ಇವರ ಹಿರಿಯ ಸಹೋದರರು. ಕನ್ನಡ-ಸಂಸ್ಕೃತಸಾಹಿತ್ಯ ವ್ಯಾಸಂಗವನ್ನು ಅವರ ಸಮ್ಮುಖದಲ್ಲಿಯೇ ಪೂರೈಸಿ, ತುಮಕೂರು ಜಿಲ್ಲೆಯ ತುರುವೇಕೆರೆ, ಮಾಯಸಂದ್ರ, ನೊಣವಿನಕೆರೆ ಮೊದಲಾದ ಕಡೆಗೆ ಕನ್ನಡ ಅಧ್ಯಾಪಕರಾಗಿ ಕೆಲಸಮಾಡಿದರು.

ಗ್ರಂಥ : ವೆಂಕಟೇಶವಿಜಯಂ*

ಕೃಷ್ಣ, ನೀಲಕಂಠ, ಕರಗುಪ್ಪೀಕರ

ಜ :೧೮೮೭ ಮ : ೨೮-೧೦-೧೯೨೨

ಬೆಳಗಾವಿಯ ಬಳಿ ಕಣಬರಗಿ. ೧೯೦೬ರಲ್ಲಿ 'ಮ್ಯಾಟ್ರಿಕ್ಯುಲೇಶನ್' ಪರೀಕ್ಷೆ ಪಾಸಾಗಿ ಪುಣೆಯ ಫರ್ಗ್ಯುಸನ್ ಕಾಲೇಜ್ ಸೇರಿದರು. ಆದರೆ ಮನೆತನದ ಅನಾನುಕೂಲತೆಯಿಂದ ಮರುವರ್ಷವೇ ಶಿಕ್ಷಣ ನಿಲ್ಲಿಸಿ, ಆಗತಾನೇ ಬೆಳಗಾವಿಯಲ್ಲಿ ಸ್ಥಾಪಿತವಾಗಿದ್ದ ಗಣೇಶ ವಿದ್ಯಾಲಯವೆಂಬ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾದರು. ಕೆಲಕಾಲದನಂತರ ವಕೀಲಿ ಅಭ್ಯಾಸ ಮಾಡಿ ೧೯೧೧ರಲ್ಲಿ ಬೆಳಗಾವಿಯಲ್ಲಿ ವ್ಯವಸಾಯವನ್ನಾರಂಭಿಸಿದರು. ೧೯೨೧ರ ಅಸಹಕಾರ ಚಳವಳಿಯಲ್ಲಿ ಸೇರಿ ಕರ್ನಾಟಕ ಖಾದೀಕೇಂದ್ರಕ್ಕೆ ಪ್ರಥಮ ಕಾರ್ಯದರ್ಶಿಯಾದರು. ಬೆಳಗಾವಿಯಲ್ಲಿ ಹೊರಟಿದ್ದ 'ಮಾತೃಭೂಮಿ' (೧೯೨೧), ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದರು.

ಗ್ರಂಥಗಳು : ಅಸಹಕಾರದ ಮೀಮಾಂಸೆಯು (ಯ.೧೯೨೦), ಮಹಾತ್ಮಾ ಗಾಂಧಿಯವರ ಚರಿತ್ರೆ (ಯ-ಚ).

ಕೃಷ್ಣಮಾಚಾರ್ಯ, ದೇವನಹಳ್ಳಿ

ಜ : ೧೮೮೭ ಮ : ೧೯೩೯

ಬೆಂಗಳೂರು. 'ಲೋವರ್ ಸೆಕಂಡರಿ' ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ

---

*(ಸಂಸ್ಕೃತ ವೆಂಕಟೇಶ ಮಹಾತ್ಮೆಯ ಆಧಾರದಿಂದ ರಚಿತವಾದ ೧೦೨೭ ಪದ್ಯಗಳನ್ನೊಳಗೊಂಡ ಈ ಗ್ರಂಥದ ಹಸ್ತಪ್ರತಿಗಳು ಪೂನಾ ಭಾಂಡಾರ್‌ಕರ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಗ್ರಂಥಾಲಯದಲ್ಲಿಯೂ, ಆರಾದ ಸೆಂಟ್ರಲ್ ಓರಿಯಂಟಲ್ ಗ್ರಂಥಾಲಯದಲ್ಲಿಯೂ ಇಡಲ್ಪಟ್ಟವೆ.)

ತೇರ್ಗಡೆಹೊಂದಿದ ಬಳಿಕ ಅಲ್ಲಿಯೇ ಆರ್ಕಾಟ್‌ನಾರಾಯಣಸ್ವಾಮಿ ಮೊದಲಿಯಾರ್ ಇಂಜನಿಯರಿಂಗ್ ವಿದ್ಯಾನಿಲಯದಲ್ಲಿ 'ಸಬ್-ಓವರ್ಸಿಯರ್' ಪರೀಕ್ಷೆಗಾಗಿ ವ್ಯಾಸಂಗ ಮಾಡಿದರು. ಮುಂದೆ ವಿದ್ಯುಚ್ಛಕ್ತಿಇಲಾಖೆಯನ್ನು ಸೇರಿ (೧೯೦೫) 'ಸೂಪರಿಂಟೆಂಡೆಂಟ್' ಹುದ್ದೆಯವರೆಗೆ ಪ್ರಗತಿಹೊಂದಿ ೧೯೩೪ರಲ್ಲಿ ನಿವೃತ್ತರಾದರು.

ಗ್ರಂಥ : ಸೀತಾರಾಮ (ಬಂಗಾಲಿಯಿಂದ ಭಾಷಾಂತರಿತ ಕಾದಂಬರಿ ಇ. ೧೯೦೯)

ತಿರುಮಲಾಂಬಾ, ನಂಜನಗೂಡು

ಜ : ೧೮೮೭

ನಂಜನಗೂಡು. ಮನೆಯಲ್ಲಿಯೇ ವಿದ್ಯಾಭ್ಯಾಸ. ಹೆಚ್ಚಿನ ಶಿಕ್ಷಣದ ಅನುಕೂಲತೆ ಇರಲಿಲ್ಲ. ಆದರೂ ಭಾಷಾಸೇವೆಯ ಉತ್ಸಾಹದಿಂದ ಧೈರ್ಯವಾಗಿ ಮುಂದೆ ಬಂದು ಗ್ರಂಥರಚನೆ ಹಾಗೂ ಪ್ರಕಾಶನಕಾರ್ಯವನ್ನು ಕೈಕೊಂಡರು. ಅಖಿಲ ಕರ್ನಾಟಕದಲ್ಲಿ ಏಕಮೇವ ಪ್ರಮುಖ ಗ್ರಂಥಪ್ರಕಾಶಿಕೆಯಾಗಿ ಇವರು ಆ ದೃಷ್ಟಿಯಿಂದ ಹೊಸಗನ್ನಡ ಸಾಹಿತ್ಯಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದವರು. 'ಕರ್ನಾಟಕನಂದಿನಿ' (೧೯೨೧ರ ವರೆಗೆ), 'ಸನ್ಮಾರ್ಗದರ್ಶಿನಿ' (೧೯೨೩-೨೬) ಎಂಬ ಮಾಸಪತ್ರಿಕೆಗಳನ್ನು ಹೊರಡಿಸಿದ್ದರು. ಸನ್ಮಾರ್ಗಗ್ರಂಥಾವಳಿ, ಸತಿಹಿತೈಷಿಣಿ ಗ್ರಂಥಮಾಲೆಗಳ ಮೂಲಕ ಅನೇಕ ಗ್ರಂಥಗಳನ್ನು ಪ್ರಕಟಿಸಿರುವರು.

ಗ್ರಂಥಗಳು : ಅಜಮಿಳೋಪಾಖ್ಯಾನ, ಅಬಲಾದೌರ್ಜನ್ಯ (ಧ. ೧೯೩೯), ಗಿರಿಜಾಬಾಯಿ (ಇ. ೧೯೨೧), ಚಂದ್ರವದನೆ (ಆ. ೧೯೧೬), ದಕ್ಷಕನ್ಯಾ (ಇ. ೧೯೧೫), ನಬಾ (ಇ. ೧೯೧೪), ನಿಶಾಕಾಂತ (ಇ. ೧೯೨೨), ಪೂರ್ಣಕಲಾ (ಧ. ೧೯೧೭), ಭದ್ರಗೀತಾವಳಿ (ಅ. ೧೯೧೬), ಭಾರ್ಗವ ಗರ್ವಭಂಗ (ಆ. ೧೯೨೨), ಮಣಿಮಾಲೆ (ಇ. ೧೯೨೯), ಮಾತೃನಂದಿನಿ (ಇ. ೧೯೧೫). ರಮಾನಂದ (ಇ. ೧೯೧೬), ರವಿವರ್ಮ (ಇ), ವಿಕ್ರಮ (ಇ. ೧೯೩೬), ವಿದ್ಯಾವಿಚಾರ, ವಿದ್ಯುಲ್ಲತಾ (ಇ. ೧೯೧೪), ವಿಧವಾತತ್ತ್ವ (ಧ), ವಿರಾಗಿಣಿ (ಇ. ೧೯೧೪), ಸುಮುಖಿವಿಜಯಂ (ಆ. ೧೯೧೭), ಸುಶೀಲೆ (ಆ. ೧೯೧೬), ಸೇವಾವಿಚಾರ, ಹರಿಣಿ (ಇ), ಇತ್ಯಾದಿ.

ನಾರಾಯಣ, ಶ್ರೀನಿವಾಸ, ರಾಜಪುರೋಹಿತ

ಜ : ೧೭-೭-೧೮೮೭ ಮ: ೨೪-೮-೧೯೫೩

ಹಾವೇರಿ ತಾಲೂಕಿನ ಅಗಡಿ. ಮುಲಕೀ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಗೆ ಮೊದಲಿಗರಾಗಿ ಉತ್ತೀರ್ಣರಾದರು. ಮುಂದೆ ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಪೂರೈಸಿ ೧೯೦೫ರಲ್ಲಿ ಉಪಾಧ್ಯಾಯವೃತ್ತಿಯನ್ನು ಕೈಕೊಂಡರು. ಆದರೆ ಮೂರೇ ವರುಷಗಳನಂತರ ಸರಕಾರೀ ಕೆಲಸ ಬಿಟ್ಟು ಶ್ರೀಆಲೂರ ವೆಂಕಟರಾಯರ ಮುಖ್ಯಾಧ್ಯಾಪಕತ್ವದಲ್ಲಿ ಸ್ಥಾಪಿತವಾಗಿದ್ದ ಧಾರವಾಡ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾದರು.

ಆ ಶಾಲೆಯು ನಿಂತುಹೋದ ಬಳಿಕ ಕರ್ನಾಟಕ ಇತಿಹಾಸ ಸಂಶೋಧನೆಯೇ ಇವರ ಉದ್ಯೋಗವಾಯಿತು. ಕರ್ನಾಟಕದ ಅಸ್ತಿತ್ವವನ್ನೇ ಆಹ್ವಾನಿಸುತ್ತಿದ್ದ ಈ ಶತಮಾನದ ಮೊದಲ ದಶಕದಲ್ಲಿ ರಾಜಪುರೋಹಿತರು ಬಹುಧೈರ್ಯದಿಂದ ಮುಂದೆ ಬಂದು ಕರ್ನಾಟಕತ್ವದ ಪ್ರಸಾರದಲ್ಲಿ ತೊಡಗಿದರು. ಮುಂದೆ ಕೆಲಕಾಲ ಕಾಶಿಯ 'ಭಾರತ ಧರ್ಮ ಮಹಾಮಂಡಲ'ದಲ್ಲಿ ಧರ್ಮಶಾಸ್ತ್ರ, ಮೀಮಾಂಸೆ ಮುಂತಾದವುಗಳ ವ್ಯಾಸಂಗ ಮಾಡಿದರು. ಧಾರವಾಡ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸಂಸ್ಥಾಪಕರಲ್ಲಿ ಒಬ್ಬರು (೧೯೧೪). ಶಿವಮೊಗ್ಗ ಜಿಲ್ಲೆಯ ನೆಗವಾಡಿಯ ಶಾನುಭೋಗರಾಗಿಯೂ, ಮೈಸೂರು ಸಂಸ್ಥಾನದ ಗ್ರಾಮಸುಧಾರಣಾ ಯೋಜನೆಯನ್ವಯ ಸಂಚಾರೀ ಭಾಷಣಕಾರರಾಗಿಯೂ ಕೆಲವು ದಿನ ಇವರು ಕೆಲಸಮಾಡಿದರು.

ವಿಜಯನಗರದ ಕೊನೆಯ ಯುದ್ಧದ ರಣಭೂಮಿಯನ್ನು ಕುರಿತು ಸಂಶೋಧಿಸಿ, ತಾಳೀಕೋಟೆಯ ಬದಲು ರಕ್ಕಸತಂಗಡಗಿಯು ರಣಕ್ಷೇತ್ರವಾಗಿತ್ತೆಂದು ಸಾಧಾರಪೂರ್ವಕವಾಗಿ ಸಿದ್ಧಮಾಡಿದರು. ನಾಡಿನಲ್ಲೆಲ್ಲ ಸಂಚರಿಸಿ ತಾಡವಾಲೆ ಗ್ರಂಥ, ತಾಮ್ರಶಾಸನ, ನಾಣ್ಯ ಹಾಗೂ ಇತರ ಐತಿಹಾಸಿಕ-ಸಾಂಸ್ಕೃತಿಕ ಅವಶೇಷಗಳ ಸಂಗ್ರಹದಿಂದ ಕರ್ನಾಟಕ ಇತಿಹಾಸ ಮಂಡಲದ ಕಾರ್ಯಕ್ಷೇತ್ರವನ್ನು ವಿಸ್ತರಿಸಿದರು. ಆ ಸಂಸ್ಥೆಯ ಮುಖಪತ್ರವಾಗಿದ್ದ 'ಪ್ರಾಚೀನ ಕರ್ನಾಟಕ' (೧೯೩೨) ಎಂಬ ತ್ರೈಮಾಸಿಕಕ್ಕೆ ಇವರು ಪ್ರಮುಖ ಬರಹಗಾರರಾಗಿದ್ದರು. ಚಿಪಳೂನ, ತಾಳಗುಂದ ಮತ್ತು ಕರಹಟ ಅಗ್ರಹಾರಗಳ ವಿಷಯವಾಗಿಯೂ, ಸಹವಾಸೀ, ಚಿತ್ಪಾವನ, ಕಾಣ್ವ ಹಾಗೂ ಯಜುರ್ವೇದೀ ಸಂಪ್ರದಾಯ ಮೊದಲಾದ ಬ್ರಾಹ್ಮಣ ಒಳಪಂಗಡಗಳ ಬಗ್ಗೆಯೂ ಇವರು ಬರೆದ ಲೇಖನಗಳು ವಿದ್ವನ್ಮಾನ್ಯವಾಗಿವೆ.

೧೯೩೫ರಲ್ಲಿ ಮುಂಬಯಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಸಂಶೋಧಕ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಾಣ್ವ ಶಾಖೆಯ ಶುಕ್ಲ-ಯಜುರ್ವೇದೀಯ ಸಂಘಗಳಿಂದ ಗೌರವ ಪಡೆದವರು. ತಾ॥೧೦-೮-೧೯೪೭ರಂದು ಧಾರವಾಡದಲ್ಲಿ ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಇವರ ಷಷ್ಟ್ಯಬ್ದಿಸಮಾರಂಭವು ನಡೆದು, ಸಾರ್ವಜನಿಕ ನಿಧಿಯನ್ನು ಅರ್ಪಿಸಲಾಯಿತು.

ಗ್ರಂಥಗಳು : ದಾನಧರ್ಮಪದ್ಧತಿ (ಧ.೧೯೧೦), ಮಧ್ವಾಚಾರ್ಯರ ಚರಿತ್ರೆ (ಧ-ಚ.೧೯೩೭), ಯಾಜ್ಞವಲ್ಕ್ಯರ ಚರಿತ್ರೆ (ಧ-ಚ. ೧೯೩೭), ಸುರೇಶ್ವರಾಚಾರ್ಯರ ಚರಿತ್ರೆ (ಧ-ಚ.೧೯೨೨).

ರಾವ್‌ಜಿ. ಬಾಳಕೃಷ್ಣ, ಕುಲಕರ್ಣಿ ಕಾವ್ಯರತ್ನ

ಜ : ೧೪-೪-೧೮೮೭ ಮ : ೧೯-೭-೧೯೫೩

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕೆಲ್ಲೊಳ್ಳಿ. ಗೋಕಾಕದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ೧೯೦೫ರಲ್ಲಿ ಮುಲಕೀ ಪರೀಕ್ಷೆ ಪಾಸಾದರು. ಮುಂದೆ ಮೂರು

ವರ್ಷಗಳವರೆಗೆ ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ಓದಿ, ಕೊನೆಯ ಪರೀಕ್ಷೆಯಲ್ಲಿ ಶಿಕ್ಷಣವಿಷಯದಲ್ಲಿ ಮೊದಲಿಗರಾಗಿ ಉತ್ತೀರ್ಣರಾದ ಬಗ್ಗೆ ಸರಕಾರದಿಂದ ಬಹುಮಾನಪಡೆದು, ಪಾಚ್ಛಾಪುರದಲ್ಲಿ ಉಪಾಧ್ಯಾಯರಾದರು. ಕೆಲವು ದಿನಗಳನಂತರ ಗೋಕಾಕಕ್ಕೆ ವರ್ಗಾಯಿಸಲ್ಪಟ್ಟು, ಅಲ್ಲಿ ಸ್ವಾಧ್ಯಾಯದಿಂದ ಇಂಗ್ಲೀಷ್ ಹಾಗೂ ವೇ. ಧೋಂಡಾಚಾರ್ಯ ಮತ್ತು ವೇ. ನಾರಾಯಣಾಚಾರ್ಯ ಸಾಂಗಲಿ ಅವರ ಬಳಿಯಲ್ಲಿ ವೇದಾಂತ, ಧರ್ಮಶಾಸ್ತ್ರಗಳನ್ನು ಓದಿದರು. ೧೯೧೭ರಲ್ಲಿ ಪುಣೆಗೆ ಹೋಗಿ ಪ್ರೊ.ವಾಮನ ಮಲ್ಹಾರ ಜೋಶಿಯವರಲ್ಲಿ ಪಾಲಿಭಾಷೆಯನ್ನು ಕಲಿತು ಜೊತೆಗೆ ಲೇಖನಕಲಾಸಾಧನೆಯನ್ನು ಮಾಡಿದರು. ಮರುವರ್ಷ ಮತ್ತೆ ಬೆಳಗಾವಿಗೆ ಬಂದು ಗಿಲಗಂಚಿ ಅರ್ಟಾಳ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾದರು. ೧೯೧೯ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿಯೂ, ೧೯೨೦ರಲ್ಲಿ ನಿಖಿಲ ಭಾರತ ಸಾಹಿತ್ಯಸಂಘದ ಕನ್ನಡವಿಭಾಗದ ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ೧೯೨೫ರಲ್ಲಿ ಬೆಳಗಾವಿ ಎಜ್ಯುಕೇಶನ್ ಸೊಸಾಯಿಟಿಯ ಸಂಸ್ಥಾಪಕರಲ್ಲೊಬ್ಬರಾಗಿ, ಮಾಡೆಲ್ ಹೈಸ್ಕೂಲು ಪ್ರಾರಂಭಿಸಿ ೧೯೪೫ರವರೆಗೂ ಅಧ್ಯಾಪಕರಾಗಿದ್ದು ನಿವೃತ್ತರಾದರು. ಆ ಸಂಸ್ಥೆಯ ಆಜೀವ ಸಭಾಸದರು. ಬೆಳಗಾವಿಯಲ್ಲಿ 'ಮಾತೃಭೂಮಿ' (ಮಾಸಪತ್ರಿಕೆ, ೧೯೨೦), ಹಾಗೂ ನವಜೀವನ ಗ್ರಂಥಮಾಲೆಯ ಸಂಪಾದಕರಾಗಿ ಕೆಲಸಮಾಡಿದರು. ಬೆಳಗಾವಿ ಜಿಲ್ಲಾ ಸ್ಕೂಲ್‌ಬೋರ್ಡಿಗೆ ಎರಡು ಸಲ ಲೋಕನಿಯುಕ್ತ ಸಭಾಸದರಾಗಿದ್ದರು.

ಗ್ರಂಥಗಳು : ಔಪಪತ್ತಿಕ ಮಹತ್ವಮಾಪನ (ಖ.೧೯೧೫), ಕನ್ನಡಿಗನ ಸರ್ವಸ್ವ* (ಯ.೧೯೨೪), ಕರ್ನಾಟಕ ಏಕೀಕರಣ* (ಯ.೧೯೨೭), ನೀತಿಮುಕ್ತಾಹಾರ (೧೯೧೮), ಸಚಿತ್ರ ವಿಜಾಪುರ ವರ್ಣನೆ (ಭ.೧೯೨೧).

ಅಪ್ರಕಟಿತ : ಗಣೇಶಪುರಾಣ, ರಕ್ಕಪ್ಪ ಉಚ್ಚಾರಾಮ (ಆ), ನಾಗರಿಕನ ಹಕ್ಕುಭಾಧ್ಯತೆಗಳು, ಅಭಿನವನೀತಿಶತಕ, ಬಾಲಕೃಷ್ಣ ಗೀತಾಶತಕ, ಶ್ರೀ ಆಂಜನೇಯಶತಕ, ಶ್ರೀವಿದ್ಯಾರಣ್ಯಶತಕ, ಶ್ರೀ ಸದ್ಗುರುಶತಕ.

ಗುಂಡಪ್ಪ. ಡಿ.ವಿ.

ಜ : ೧೮೮೮

ಬೆಂಗಳೂರು. ಘನವಿದ್ವಾಂಸರೂ ಶಾಸ್ತ್ರವೇತ್ತರೂ ರಾಜಕಾರಣಿಗಳೂ ಎಂದು ಅಖಿಲ ಕರ್ನಾಟಕಕ್ಕೆ ಪರಿಚಿತರು. ೧೯೦೮ರಲ್ಲಿ 'ಭಾರತಿ', ೧೯೧೭ರಲ್ಲಿ 'ಕರ್ನಾಟಕ ಜೀವನ ಮತ್ತು 'ಅರ್ಥಸಾಧಕ ಪತ್ರಿಕೆ'ಗಳನ್ನು ಪ್ರಾರಂಭಿಸಿದ್ದರು 'Karnataka Review' (ಆರಂಭ : ೨-೪-೧೯೧೩) ಎಂಬ ಅರೆವಾರಪತ್ರಿಕೆಗೂ, 'ಸಾರ್ವಜನಿಕ'

---

*ಮದ್ರಾಸ್ ಸ್ಕೂಲ ಬುಕ್ಸ್ ಎಂಡ್ ಲಿಟರೇಚರ ಸೊಸಾಯಿಟಿಯಿಂದ ಬಹುಮಾನ ಪಡೆದದ್ದು.

*ಬಾಗಿಲುಕೋಟೆಯ ಸೇವಾದಲದ ಅಧಿವೇಶನದಲ್ಲಿ ಸುವರ್ಣಪದಕ ಪಡೆದ ಪುಸ್ತಕ.

(೧೯೪೩) ಎಂಬ 'ತ್ರೈಮಾಸಪತ್ರಿಕೆಗೂ ಸಂಪಾದಕರು. ಮೈಸೂರು ನ್ಯಾಯ ವಿಧಾಯಕ ಸಮಿತಿ, ವಿಶ್ವವಿದ್ಯಾನಿಲಯ ಸಮಿತಿ, ರಾಜ್ಯಾಂಗಸುಧಾರಣಾಸಮಿತಿ (೧೯೩೯), ಬೆಂಗಳೂರು ಪೌರಸಭೆ, ಶಿಕ್ಷಣೋದ್ಯೋಗಿಗಳ ಸಂಘ, ಪತ್ರಿಕಾಕರ್ತರ ಸಂಘ, ರಾಜ್ಯಾಂಗರಚನಾ ಸಮಿತಿ ಮುಂತಾದ ಸಂಸ್ಥೆ ಸಮಿತಿಗಳ ಸಭಾಸದರು. ಕರ್ನಾಟಕ ಪತ್ರಿಕಾಕರ್ತರ ಪ್ರಥಮ ಸಮ್ಮೇಲನ (ಬಾಗಿಲುಕೋಟೆ, ೧೯೨೮), ಮೈಸೂರು ಪತ್ರಿಕಾಕರ್ತರ ಸಮ್ಮೇಲನ (ಮೈಸೂರು ೧೯೪೦), ಕನ್ನಡ ಸಾಹಿತ್ಯಸಮ್ಮೇಲನದ ೧೮ನೇ ಅಧಿವೇಶನ (ಮಡಿಕೇರಿ, ೧೯೩೨) ಗಳ ಅಧ್ಯಕ್ಷರು, ಕನ್ನಡ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರು (೧೯೩೩-೩೭). ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಪ್ರಮುಖ ಕಾರ್ಯಕರ್ತರು.

ಗ್ರಂಥಗಳು : ಅಂತಃಪುರಗೀತೆ (ಅ. ೧೯೫೦), ಉಮರನ ಒಸಗೆ (ಅ. ೧೯೩೦), ಕನಕಾಲುಕಾ ಅಥವಾ ಕಮಲಿನಿಚರಿತಂ (Lord Tennyson ಕೃತ The Cup ಎಂಬ ಗ್ರಂಥದ ಆಧಾರದಿಂದ) (ಅ. ೧೯೧೧), ಗೋಪಾಲ ಕೃಷ್ಣಗೋಖಲೆ, ಜೀವನ ಸೌಂದರ್ಯ ಮತ್ತು ಸಾಹಿತ್ಯ (ಉ. ೧೯೩೩), ದಿವಾನ ರಂಗಾಚಾರ್ಲು, ನಿವೇದನ (ಅ. ೧೯೨೪), ಭಾರತ ರಾಜ್ಯಾಂಗದಲ್ಲಿ ಸಂಸ್ಥಾನಗಳೂ ಅವುಗಳ ಪ್ರಜೆಗಳೂ (ಯ. ೧೯೫೧), ಭಾರತೀಯ ಮಹಾಕುಲವೃದ್ಧ ದಾದಾಭಾಯಿ ನವರೋಜಿ ಅವರ ಸಂಕ್ಷಿಪ್ತ ಜೀವನಚರಿತ್ರೆ (ಯ-ಚ.೧೯೫೧), ಮಹಾಚುನಾವಣೆ (ಯ. ೧೯೫೧), ಮಹಾತ್ಮಾಗಾಂಧಿ (ಅ.೧೯೪೮), ಮಂಕುತಿಮ್ಮನ ಕಗ್ಗ (ಅ. ೧೯೪೩), ಮ್ಯಾಕ್‌ಬೆತ್ (ಅ. ೧೯೩೬), ವಸಂತಕುಸುಮಾಂಜಲಿ, ವೃತ್ತಪತ್ರಗಳು (ಉ) ವಿದ್ಯಾರಣ್ಯರ ಸಮಕಾಲೀನರು, ವಿದ್ಯಾರಣ್ಯವಿಜಯ, ಶ್ರೀರಾಮಪರೀಕ್ಷಣಂ (ಅ. ೧೯೪೫), ಸ್ವತಂತ್ರ ಭಾರತ (ಅ. ೧೯೪೭), ಸಾಹಿತ್ಯಶಕ್ತಿ (ಉ. ೧೯೫೦).

ಇಂಗ್ಲಿಷ್ : The Karnatak Year Book.

ಧೋಂಡೋ, ಗೋವಿಂದ, ಮಹಾಜನ

ಜ : ೧೮೮೮

ಬೆಳಗಾವಿ ಜಿಲ್ಲೆಯ ಗೋಕಾಕ. ಮಾಧ್ಯಮಿಕ ಶಿಕ್ಷಣ ಮುಗಿದ ಬಳಿಕ 'ಹೋಮಿಯೋಪಥಿ' ವೈದ್ಯಶಾಸ್ತ್ರವನ್ನು ಅಭ್ಯಸಿಸಿ ವೈದ್ಯಕೀಯ ವ್ಯವಸಾಯವನ್ನು ಕೈಕೊಂಡರು.

ಗ್ರಂಥಗಳು : ಅವಧೂತಗೀತಾ (ಮರಾಠಿಯಿಂದ ಭಾಷಾಂತರ), ಕುಮುದ್ವತಿ (ಇ.೧೯೧೫), ಪ್ರೇಮಪೀಯೂಷ (ಇ.೧೯೧೩).

ಬಸವಾರ್ಯ, ಬೂದಪ್ಪಯ್ಯ, ಬೂದಿಹಾಳಮಠ

ಜ : ೩-೩-೧೮೮೮

ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕಿನ ಮಾಸೂರು. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ಮೂರು ವರ್ಷದ ವ್ಯಾಸಂಗ. ೧೯೨೬ರ ವರೆಗೆ ಕನ್ನಡ

ಶಾಲೆಯ ಉಪಾಧ್ಯಾಯರಾಗಿದ್ದು, ಮುಂದೆ ಕೆಲಕಾಲ ರಾಣೆಬೆನ್ನೂರ ಹೈಸ್ಕೂಲಿನಲ್ಲಿ ಅಧ್ಯಾಪಕರೆಂದು ಕೆಲಸ ಮಾಡಿದರು. ಕೊನೆಗೆ ಅ.ಡೆ.ಎ.ಇನ್‌ಸ್ಪೆಕ್ಟರಾಗಿ ನಿವೃತ್ತರಾದರು. ಸಾರ್ವಜನಿಕ ಸೇವಾಸಕ್ತರೆಂದು ಅಥಣಿಯ ಶಿವಯೋಗಿಗಳಿಂದಲೂ, ಪ್ರತಿಭಾನ್ವಿತ ಗ್ರಂಥಕರ್ತರೆಂದು ಹಿರೇಕೆರೂರು, ಅಲೂರು ಮುಂತಾದ ಊರುಗಳ ಸಾರ್ವಜನಿಕರಿಂದಲೂ ಸುವರ್ಣ ಪದಕ ಪಡೆದವರು.

ಗ್ರಂಥಗಳು : ದಮಯಂತಿ (ಇ.೧೯೨೧), ದಿವ್ಯಸುಂದರಿ (ಇ.೧೯೧೮), ಮನೋಹರಿ, ಮಾನವಧರ್ಮ (ಇ.೧೯೨೧), ವಿಚಿತ್ರ ಕಾರಸ್ಥಾನ (ಇ.೧೯೧೯), ವೇಣೂ, ಸತ್ವಪ್ರಕಾಶ (ಇ.೧೯೧೮), ಸರಸ್ವತೀ ಪ್ರಕಾಶ (ಇ.೧೯೩೩), ಸುಲಭ ಬಾಲಬೋಧೆ (ಬ.೧೯೩೭).

ವೆಂಕಟರಮಣಶಾಸ್ತ್ರೀ, ವೆಂಕಟಕೃಷ್ಣಶಾಸ್ತ್ರೀ, ಚಾಮರಾಜನಗರ

ಜ : ೧೮೮೮ ಮ : ೧೯೪೫

ಮೈಸೂರು. ಇವರ ತಾತಂದಿರಾದ ಶ್ರೀಕಂಠಶಾಸ್ತ್ರಿಗಳು ಆಸ್ಥಾನ ವಿದ್ವಾಂಸರೂ ಸುಪ್ರಸಿದ್ಧ ವೈಯಾಕರಣಿಗಳೂ ಆಗಿದ್ದರು. ವೆಂಕಟರಮಣಶಾಸ್ತ್ರಿಗಳ ವಿದ್ಯಾಭ್ಯಾಸವು ತಾತಂದಿರ ಬಳಿಯಲ್ಲಿಯೇ ಆಯಿತು. ಇವರು ವೃತ್ತಿಯಿಂದ ಪುರೋಹಿತರು. ೧೯೧೧ರಲ್ಲಿ 'ಕಾದಂಬರಿ ಸಂಗ್ರಹ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದ್ದರು. ಇವರು 'ಕಾದಂಬರಿ ಶಾಸ್ತ್ರಿ' ಎಂಬ ಹೆಸರಿನಿಂದಲೇ ಪರಿಚಿತರಾಗಿದ್ದರು. 'ಕಾದಂಬರಿ ಸಂಗ್ರಹ'ದಲ್ಲಿ ಅನೇಕ ಗ್ರಂಥಗಳನ್ನು ಪ್ರಚುರಪಡಿಸಿದರು.

ಗ್ರಂಥಗಳು : ಅತ್ತಿಗುಪ್ಪೆ ಕೃಷ್ಣಶಾಸ್ತ್ರಿಗಳ ಚರಿತ್ರೆ, ಕರ್ನಾಟಕರತ್ನದರ್ಪಣ, ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳ ಚರಿತ್ರೆ, ಶ್ರೀ ವಿಷ್ಣುಧರ್ಮೋತ್ತರಪುರಾಣಂ (ಧ), ಸೋಸಲೆ ಗರಳಪುರಿಶಾಸ್ತ್ರಿಗಳ ಚರಿತ್ರೆ.

ಅನಂತಾಚಾರ್ಯ, ರಘುನಾಥಾಚಾರ್ಯ, ಆದ್ಯ

ಜ : ೧೮೮೯

ವಿಜಾಪುರ ಜಿಲ್ಲೆಯ ಅಗರಖೇಡ. ಕಾವ್ಯ, ವ್ಯಾಕರಣ, ನ್ಯಾಯ, ವೇದಾಂತ, ಅಲಂಕಾರೇತ್ಯಾದಿ ಶಾಸ್ತ್ರಾಧ್ಯಯನ ಮಾಡಿ ಕೆಲವು ಕಾಲ ಸಂಸ್ಕೃತ ಅಧ್ಯಾಪಕರಾಗಿ ಧಾರವಾಡ, ವಿಜಾಪುರಗಳಲ್ಲಿ ಕೆಲಸಮಾಡಿದರು. ಮುಂದೆ ಆಯುರ್ವೇದ ಶಾಸ್ತ್ರದ ವ್ಯಾಸಂಗ ಮಾಡಿ ಅಲೀಗಡದ ಅಖಿಲ ಭಾರತೀಯ ವಿದ್ವತ್ ಸಮ್ಮೇಲನದಿಂದ 'ಆಯುರ್ವೇದತೀರ್ಥ' ಎಂಬ ಪ್ರಶಸ್ತಿಯನ್ನು ಪಡೆದು ವಿಜಾಪುರದಲ್ಲಿ ವೈದ್ಯಕೀಯ ವ್ಯವಸಾಯವನ್ನು ಕೈಕೊಂಡರು. ಅಲ್ಲಿ ಕೇಶವ ಆರ್ಷ ಔಷಧಾಲಯವನ್ನು ಸ್ಥಾಪಿಸಿ ಅದರೊಂದಿಗೆ ಆರ್ಯವೈದ್ಯಕ ಶಾಲೆಯನ್ನೂ ಮತ್ತು ರೋಗನಿವಾರಣಾ ಸಂಸ್ಥೆಯನ್ನೂ ಪಾರಂಭಿಸಿದರು. ಕೆಲಕಾಲ ವಿಜಾಪುರ ವೈದ್ಯಸಂಘದ ಅಧ್ಯಕ್ಷರಾಗಿದ್ದು, ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನದ ೯ನೆಯ ಅಧಿವೇಶನ, ರಾಯಚೂರು ಮತ್ತು ಬಳ್ಳಾರಿಯಲ್ಲಿ

ನೆರೆದಿದ್ದ ತದ್ವಿದ್ಯಾ ಸಂಭಾಷಾ ಪರಿಷತ್ತು ಮೊದಲಾದ ಸಮ್ಮೇಲನಗಳ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದವರು; ಕೆಲವು ವರ್ಷ ಅಖಿಲ ಭಾರತೀಯ ಆಯುರ್ವೇದ ಕಾಂಗ್ರೆಸ್ಸಿನ ಉಪಾಧ್ಯಕ್ಷರೂ, ಮುಂಬಯಿ ಇಲಾಖೆಯ ವೈದ್ಯಮಂಡಲದ ಕಾರ್ಯಕಾರಿ ಸಮಿತಿಯ ಸಭಾಸದರೂ ಆಗಿ ಕೆಲಸ ಮಾಡಿದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಬೇರೆ ಬೇರೆ 'ಟ್ರಿಬ್ಯುನಲ್'ಗಳ ಸಭಾಸದರು ಮತ್ತು ಕಾರ್ಯದರ್ಶಿಗಳು ಆಗಿದ್ದರು. ೧೯೩೮ರಿಂದ ಆರ್ಯವೈದ್ಯಕ ಗ್ರಂಥಮಾಲೆ ಹಾಗೂ ನಿ.ಕ.ಆ. ಮಂಡಲದ ಮುಖಪತ್ರವಾದ 'ಧನ್ವಂತರಿ' ಪತ್ರಿಕೆಯ ಸಂಪಾದಕರು.

ಗ್ರಂಥಗಳು : ಅಷ್ಟಾಂಗಹೃದಯ (ಸೂತ್ರಸ್ಥಾನ) (ಥ), ಆಯುರ್ವೇದದ ವೈಶಿಷ್ಟ್ಯ ಅಥವಾ ಆಯುರ್ವೇದದಲ್ಲಿ ಏನಿದೆ? (ಥ), ಆಯುರ್ವೇದೀಯ ಔಷಧೀ ಗುಣಧರ್ಮಶಾಸ್ತ್ರ ಭಾಗ ೧ (ಥ), ಚರಕಸಂಹಿತಾ (ಚಿಕಿತ್ಸಾಸ್ಥಾನ) ಭಾಗ ೧, (ಥ)

ಸಂಸ್ಕೃತ : ಬಾಲಸುಭಾಷಿತಮ್ (೧೯೧೮), ರಘುಸಂಭವಮ್.

ಕೃಷ್ಣಶಾಸ್ತ್ರೀ ಎ.ಆರ್, ಎಂ.ಎ.

ಜ : ೧೮೮೯

ಮೈಸೂರು. ಎಂ.ಎ. ಪದವೀಧರರಾಗಿ ೧೯೧೫ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು. ೧೯೧೮ (ಆಗಸ್ಟ್)ರಲ್ಲಿ ಅಲ್ಲಿಯ ಕರ್ನಾಟಕ ಸಂಘದ ಸಂಸ್ಥಾಪನೆಗೆ ಮುಂದಾಗಿ ವಿದ್ಯಾರ್ಥಿಗಳಲ್ಲಿ ಕನ್ನಡ ಅಭಿಮಾನ ಹಾಗೂ ಶ್ರದ್ಧೆಯನ್ನು ಹುಟ್ಟಿಸಲು ಕಾರಣರಾದರು. 'ಪ್ರಬುದ್ಧ ಕರ್ಣಾಟಕ' ಎಂಬ ತ್ರೈಮಾಸಿಕವನ್ನು ಹೊರಡಿಸಿ ೧೩ ವರ್ಷಗಳವರೆಗೆ ಅದರ ಸಂಪಾದಕರಾಗಿ ಅನೇಕ ಹೊಸಲೇಖಕರನ್ನು ಬೆಳಕಿಗೆ ತಂದು, ಸಾಹಿತ್ಯ-ಕಲಾ ಹಾಗೂ ವಿಜ್ಞಾನಪ್ರಪಂಚದಲ್ಲಿ ಕನ್ನಡದ ಮಾನವನ್ನು ಹೆಚ್ಚಿಸಿದರು. ಪರಿಷತ್ಪತ್ರಿಕೆಯ ಸಂಪಾದಕರಾಗಿಯೂ, ಕಾರ್ಯನಿರ್ವಾಹಕ ಮಂಡಲಿಯ ಸಭಾಸದರಾಗಿದ್ದುಕೊಂಡೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಸೇವೆ ಸಲ್ಲಿಸಿದ್ದಾರೆ. ೧೯೪೨ರಿಂದ ೪೫ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥ ಪ್ರಕಾಶನ ಸಮಿತಿಯ ಅಧ್ಯಕ್ಷರಾಗಿದ್ದರು. ನವಕರ್ನಾಟಕದ ಶುಭೋದಯದ ಕಾಲದಲ್ಲಿ ಭಾಷಾಸೇವೆಯಲ್ಲಿ ವಿಶೇಷವಾಗಿ ಶ್ರಮಿಸಿದ ಆಚಾರ್ಯಪುರುಷರಲ್ಲಿ ಇವರೂ ಒಬ್ಬರು.

ಗ್ರಂಥಗಳು : ಕನ್ನಡ ಕೈಪಿಡಿ ಭಾಗ ೧ (ದ), ನಾಗಮಹಾಶಯ (ಪ-ಚ), ಭಾಷಣ ಮತ್ತು ಲೇಖನಗಳು ಭಾಗ ೧ (ಉ), ಭಾಷಣ ಮತ್ತು ಲೇಖನಗಳು ಭಾಗ ೨ (ಉ), ಭಾಸಕವಿ (ಆ-ಚ), ವಚನಭಾರತ (ಧ), ಶ್ರೀಪತಿಯ ಕಥೆಗಳು (ಇ.೧೦೪೮), ಶ್ರೀರಾಮಕೃಷ್ಣಪರಮಹಂಸರ ಚರಿತ್ರೆ) (ಟಿ.ಎಸ್.ವೆಂಕಣ್ಣಯನವರೊಂದಿಗೆ, ಪ-ಚ. ೧೯೧೮), ಸಂಸ್ಕೃತ ನಾಟಕಗಳು (ಆ-ಟ), ಸ್ವಾಮಿ-ಶಿಷ್ಯಸಂವಾದ (ಪ).

ನಾರಾಯಣ, ವೆಂಕಟೇಶ, ಕುರಡಿ

ಜ : ೮-೮-೧೮೮೯

ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಎಂಬ ಗ್ರಾಮ. ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ತರಬೇತು ಹೊಂದಿ ಅಲ್ಲಿಯೇ 'ಪ್ರಾಕ್ಟೀಸಿಂಗ್ ಸ್ಕೂಲ್'ನಲ್ಲಿ ಶಿಕ್ಷಕರಾದರು. ಮುಂದೆ ವಿಜಾಪುರ ಜಿಲ್ಲೆಯಲ್ಲಿಯೂ ಅಸಿಸ್ಟೆಂಟ್ ಡೆ.ಇನ್‌ಸ್ಪೆಕ್ಟರ್ ಎಂದು ಕೆಲಕಾಲ ಕಾರವಾರ ಜಿಲ್ಲೆಯಲ್ಲಿಯೂ ಕೆಲಸ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಉತ್ತರಕರ್ನಾಟಕ ಪ್ರಾಂತಸಮಿತಿಯಲ್ಲಿ ಬಹುಕಾಲ ಇದ್ದರು. ೧೯೩೯ರಲ್ಲಿ ಈ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸಮಾಡಿದರು. ಅದರಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಸಮಿತಿಯ ಸಭಾಸದರಾಗಿಯೂ, 'ವಾಗ್ಭೂಷಣ' (ಧಾರವಾಡ) ಮಾಸಪತ್ರಿಕೆಯ ಸಂಪಾದಕರಾಗಿಯೂ ಸೇವೆಸಲ್ಲಿಸಿದರು. ಶಕ್ತಿಯುತ ಹಾಗೂ ಸೌಂದರ್ಯಸಂಪನ್ನವಾದ ಭಾಷಾಶೈಲಿ ಇವರ ಕೃತಿಗಳ ವೈಶಿಷ್ಟ್ಯ.

ಗ್ರಂಥಗಳು : ಅಹಲ್ಯೋದ್ಧಾರ (ಇ. ೧೯೩೪), ಕವಿತಾಕುಸುಮಮಂಜರಿ ಭಾಗ ೧ (ಅ. ೧೯೧೯), ಭಾಗ ೨ (ಅ. ೧೯೨೨), ಭಾಗ ೩, ದಾಕ್ಷಾಯಣಿ (ಇ.೧೯೧೬), ಪದ್ಮಿನಿ(ಇ.೧೯೧೫), ಪಾರ್ವತಿ (ಇ. ೧೯೧೮), ಮಹಾರಾಣಿ ಲಕ್ಷ್ಮೀಬಾಯಿ (ಇ. ೧೯೧೭), ವಾಚನಪಾಠಮಾಲೆ ಮತ್ತು ಕವಿತಾಪಾಠಮಾಲೆ, ಶ್ರೀಮಂತ ನಾನಾ ಸಾಹೇಬ ಪೇಶವೆ (ಇ.೧೯೩೩) ಶ್ರೀಹರ್ಷನ ನಾಟಕಗಳು (ಅ. ೧೯೩೦), ಸತ್ಕಥಾಕುಸುಮಮಂಜರಿ- ಭಾಗ ೧ (ಇ. ೧೯೨೩), ಭಾಗ '೨ (ಇ.೧೯೨೪), ಭಾಗ ೩ (ಇ. ೧೯೨೪), ಭಾಗ ೪ (ಇ. ೧೯೨೫), ಸಾವಿತ್ರಿ-ಸತ್ಯವಾನ (ಇ. ೧೯೧೪).

ಫಕೀರಶಾಸ್ತ್ರೀ, ಹಿರೇಮಠ

ಜ : ೧೮೮೯

ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ. ಸಂಸ್ಕೃತ-ಕನ್ನಡ ಪಂಡಿತರು. ವೀರಶೈವ ಸಿದ್ಧಾಂತ ಪ್ರವೀಣರು. ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ವರ್ಷ ಧರ್ಮಪ್ರಚಾರ ಮಾಡಿದರು. ಧಮಶಾಸ್ತ್ರದ ವಿಷಯಕ ಇವರ ಅಭಿಪ್ರಾಯಗಳು ನ್ಯಾಯಾಲಯದಲ್ಲಿಯೂ ಪ್ರಮಾಣಭೂತವಾಗಿದ್ದವಂತೆ.

ಗ್ರಂಥಗಳು : ನಂದೀಶನೀತಿ, ನಾಗದೇವತ್ರಿವಿಧಿ. ಮರುಳಸಿದ್ಧೇಶ್ವರಸ್ತೋತ್ರ.

ಭಿಕಾಜಿ, ಪರಶುರಾಮ, ಕಾಳೆ

ಜ : ೨೦-೧-೧೮೮೯

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಸಂಶಿ. ಚಿಕ್ಕವಯಸ್ಸಿನಲ್ಲಿಯೇ

ಮುದ್ರಣವ್ಯವಸಾಯದಲ್ಲಿ ತೊಡಗಿ ದಿವಂಗತ ಗಳಗನಾಥರ ಆಶ್ರಯದಲ್ಲಿ ಗ್ರಂಥ ರಚನೆಗೆ ತೊಡಗಿದರು. ಅಗಡಿಯ ಶೇಷಾಚಲ ಸಂಸ್ಥೆಯಲ್ಲಿ ಬಹುಕಾಲ ಕೆಲಸ ಮಾಡಿದರು. ಅನೇಕ ಮರಾಠಿ ಕಾದಂಬರಿಗಳನ್ನು ಭಾಷಾಂತರಿಸಿರುವರು.

ಗ್ರಂಥಗಳು : ಅಡಮುಟ್ಟ ಸಿಪಾಯಿ (ಇ.೧೯೪೩-II) ಅಡಿಗೆಯೂ ಊಟವೂ, ಅಪರಾಧಿಗಳಾರು?, ಅವಿವಾಹಿತರ ಸಮಸ್ಯೆ, ಅಂಬಿಕೆ (ಇ. ೧೯೪೭ III), ಇಂದುಮುಖಿ, ಎರಡನೇ ಹೆಂಡತಿ, ಕರ್ನಾಟಕಕ್ಕೆ ದೇವತೆಗಳ ಆಗಮನ, ಕಮಲಾಕಾಂತ ಸಾಧು, ಕರಿನೀರು, ಕಾಲಸರ್ಪ (ಇ.೧೯೪೨), ಕುಣಿಕ್ಯಾ, ಕಂಕಣಚೋರ, ಘಾತುಕ ಶಿತಿಕಂಠ, ಚದುರೆ, ಚಂದ್ರಕಾಂತ, ಚೋದ್ಯಪುರದ ಜೋಜಿಗರಾಯ (ನ.ಚಿಂ.ಕೇಳಕರ ಅವರ ಮರಾಠೀ ಕಾದಂಬರಿಯ ಭಾಷಾಂತರ) (ಇ, ೧೯೩೫), ಜ್ವರ,ತಾಯಿನಾಡು, ತುಕಾರಾಮ, ನನ್ನ ಗತಿ, ನನ್ನ ಗೃಹಿಣಿ, ನರವೀರಕಾಸೀಮ, ನೇತಾಜಿ, ಪ್ರಗತಿ, ದಾಸ್ಯವಿಮೋಚನೆ, ಫಿರಂಗಿಗಳ ಉತ್ಪಾತ (ಇ.೧೯೩೦), ಫಿರಂಗಿಯ ಪ್ರತಿಹಿಂಸೆ, ಬಲಿದಾನ, ಬೆಳಧಡಿ ಬ್ರಹ್ಮಾನಂದರು, ಭಗವಾನದಾಸ (ಇ. ೧೯೨೧), ಮಿತ್ರದುಃಖ, ಯೋಗಾಯೋಗ (ಇ.೧೯೪೦), ವಡಗಾಂವದ ವಿಜಯ (ಇ. ೧೯೩೬-II), ವಿಚಿತ್ರ ಚಟ, ವಿಮಲಾ, ವಿಲಕ್ಷಣ ಪತಿಸೇವೆ (ಇ. ೧೯೪೩-III), ಶಕ್ತಿಮಯಿ (ಇ .೧೯೧೪), ಶ್ರೀ ಶ್ರೀ ಸಮರ್ಥರಾಮದಾಸ, ಸ್ತ್ರೀಯರ ಹಕ್ಕು, ಸ್ಕೂಲ್ ಮಿಸ್ಟ್ರೆಸ್, ಸೌಭಾಗ್ಯತಿಲಕ, ಹಂಸಾ, ಹಿಂದೂ-ಮುಸಲ್ಮಾನರ ಐಕ್ಯ.

ಗರಳಪುರಿಶಾಸ್ತ್ರೀ, ಅಯ್ಯಾಶಾಸ್ತ್ರೀ, ಸೋಸಲೆ

ಜ : ಸು.೧೮೯೦ ಮ : ೧೯೫೫

ಬೆಂಗಳೂರು. ಇವರು ಪ್ರಸಿದ್ಧ ವಿದ್ವಾಂಸರೂ ಸಾಹಿತಿಗಳೂ ಆಗಿದ್ದ ಸೋಸಲೆ ಅಯ್ಯಾಶಾಸ್ತ್ರಿಗಳ ಮಕ್ಕಳು. ಬಿ.ಎ. ಪದವೀಧರರಾದ ಬಳಿಕ ೧೯೧೩ರಿಂದ ೧೬ರ ವರೆಗೆ ಲಂಡನ್ನಿನಲ್ಲಿದ್ದು ರಸಾಯನಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿಯನ್ನು ಪಡೆದರು. ತಾಯ್ನಾಡಿಗೆ ಮರಳಿ ಬಂದನಂತರ ಮೈಸೂರು ಸರಕಾರದ ಸೋಪ್ ಕಾರಖಾನೆಯ ವ್ಯವಸ್ಥಾಪಕರಾಗಿ ಕೆಲಸಮಾಡಿದರು. ಕೊನೆಗೆ ಮೈಸೂರು ಸರಕಾರದ ಉದ್ಯೋಗ ಹಾಗೂ ವ್ಯಾಪಾರ ಇಲಾಖೆಯ ಮುಖ್ಯಾಧಿಕಾರಿಗಳಾಗಿ ನಿವೃತ್ತರಾದರು. ಸಂಗೀತ, ನಾಟಕ ಇತ್ಯಾದಿ ಲಲಿತಕಲೆಗಳಲ್ಲಿ ವಿಶೇಷ ಆಸ್ಥೆಯುಳ್ಳ ಇವರು ಅನೇಕ ವ್ಯಕ್ತಿ-ಸಂಸ್ಥೆಗಳಿಗೆ ಸಹಾಯ ಮಾಡಿದರು.

ಗ್ರಂಥಗಳು : ಆರ್ಯಕ (ಹೆನ್ರಿಕ್ ಇಬ್ಸೆನ್ ಕೃತ The Warriors in Helgeland ನಾಟಕದ ಭಾಷಾಂತರ), ಇದ್ದರೂ ಇರಬಹುದು (ಇ. ೧೯೪೬), ಕಣ್ಣುಬಿಚ್ಚಾಲೆ (ಅ)ಮೊನ್ನ-ವನ್ನ (ಮಾರಿಸ್ ಮ್ಯಾಟರಲಿಂಕ್‌ಕೃತ ನಾಟಕಾನುವಾದ, ೧೯೫೫), ಸಾಕ್ರೆಟೀಸನ ಮರಣ (ಹೌಸಮನ್‌ಕೃತ Death of Socrates ನಾಟಕದ ಭಾಷಾಂತರ, ೧೯೩೨), ಸೂತ್ರದ ಬೊಂಬೆ (ಹೆನ್ರಿಕ್ ಇಬ್ಸೆನ್‌ಕೃತ Doll's House ನಾಟಕದ ಭಾಷಾಂತರ, ೧೯೩೨).

ರಂಗಪ್ಪ ಭೀ, ಪೋತದಾರ, ಬಿ.ಎ

ಜ : ೧೮೯೦

ಬೆಳಗಾವಿ. ಪದವೀಧರರಾಗಿ ಮುಂಬಯಿ ಸರಕಾರದ ಶಿಕ್ಷಣಶಾಖೆಯಲ್ಲಿ ಅಧ್ಯಾಪಕರಾಗಿದ್ದರು. ಕನ್ನಡಸಾಹಿತ್ಯಪರಿಷತ್ತಿನ ಪ್ರಾದೇಶಿಕ ಸಮಿತಿ, ಕಾರ್ಯಸಮಿತಿಗಳಲ್ಲಿ ಅನೇಕ ವರ್ಷ ಕಾರ್ಯಮಾಡಿದರು. ಕನ್ನಡಪ್ರಚಾರಕಾರ್ಯದಲ್ಲಿ ಇವರು ವಿಶೇಷ ಶ್ರಮಿಸಿದರು.

ಗ್ರಂಥ : ಸಂಕಲನ : ಕವಿಗಳ ನುಡಿಗಳು (ಅ-ಭ.೧೯೧೮)

ರಾಮಕೃಷ್ಣ, ಕೆ.ಬಿ.

ಜ : ೧೮೯೦ ಮ : ಸು.೧೯೫೧

ಉಡುಪಿಯ ಬಳಿಯ ಕಲ್ಯಾಣಪುರ. ಶಿಕ್ಷಣವು ಮಂಗಳೂರಲ್ಲಿಯೇ ಆಯಿತು. ಕ್ರಿ.ಶ.೧೯೧೨ರಿಂದ ೧೯೨೮ರ ವರೆಗೆ ಇವರು ಅಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಅನಂತರ ಕೆಲವು ವರ್ಷ ಉಡುಪಿಯ 'ಹಿಂದೂ ಹೈಯರ್ ಎಲಿಮೆಂಟರಿ ಸ್ಕೂಲ್''ನಲ್ಲಿ ಮುಖ್ಯಾಧ್ಯಾಪಕರೆಂದು ಕೆಲಸಮಾಡಿದರು.

ಗ್ರಂಥಗಳು : ಅಜಿತಕುಮಾರ (ಆ.೧೯೨೪), ಕಲಿಯುಗದ ಭೀಷ್ಮ (ಆ.೧೯೨೬), ಭ್ರಾತೃಪ್ರೇಮ, ಯಶೋಧರ (ಇ.೧೯೨೫), ಶ್ರೀಕೃಷ್ಣಸಂಧಾನ (ಆ.೧೯೧೮), ಸ್ವಾಮಿನಿಷ್ಠೆ (ಗಳಗನಾಥರ 'ಕ್ಷಾತ್ರತೇಜ' ಕಾದಂಬರಿಯನ್ನಾಧರಿಸಿದ್ದು) (ಆ. ೧೯೩೪- IV), ಹೊಂದೊವಲ ಹಂಬಲು (Charles Kingsley ಕೃತ Argonots ಪುಸ್ತಕದ ಭಾಷಾಂತರ) (ಇ. ೧೯೩೩).

ರಾಮರಾವ್, ಹನುಮಂತರಾವ್, ಎಂ.

ಜ : ೧೮೯೦

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ. ಬೆಂಗಳೂರಿನಲ್ಲಿ ಮಿಡಲ್‌ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಇವರು 'ಟೀಚರ್ಸ್ ಟ್ರೇನಿಂಗ್' ಮುಗಿಸಿ ಬಂದು ಮುನಿಸಿಪಲ್, R.B, R.N.M. ಮೊದಲಾದ ವಿದ್ಯಾಸಂಸ್ಥೆಗಳಲ್ಲಿ ಸುಮಾರು ೧೩ ವರ್ಷ ಉಪಾಧ್ಯಾಯರಾಗಿ ಕೆಲಸಮಾಡಿದರು. ರಾಷ್ಟ್ರೀಯ ಆಂದೋಲನದ ಕಾರಣದಿಂದ ೧೯೨೬ರಲ್ಲಿ ನೌಕರಿಯನ್ನು ಬಿಟ್ಟುಕೊಟ್ಟು 'ಸುಬೋಧ' ರಾಮರಾಯರಾದರು. ೧೯೧೬ರಿಂದಲೇ 'ಸುಬೋಧಕುಸುಮಾಂಜಲಿ ಗ್ರಂಥಮಾಲೆ'ಯ ಮುಖಾಂತರ ಪ್ರಕಟನವ್ಯವಸಾಯ ಪ್ರಾರಂಭಿಸಿದ್ದರು. ಹತ್ತು ವರ್ಷಗಳನಂತರ, ಅಂದರೆ ೧೯೨೫ರಲ್ಲಿ, 'ಸುಬೋಧ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಹರಿಕೀರ್ತನೆಗಳನ್ನು ಪರಿಷ್ಕರಿಸಿ ಪ್ರಕಟಿಸುವುದರಲ್ಲಿಯೂ, ಹರಿದಾಸ ಸಾಹಿತ್ಯದ ಪ್ರಚಾರಕಾರ್ಯದಲ್ಲಿಯೂ ವಿಶೇಷ

ಶ್ರಮಿಸಿದವರು. ಬೆಂಗಳೂರು ಮಾಧ್ವ ಯುವಕ ಸಂಘವನ್ನು ಸ್ಥಾಪಿಸಿ (೧೯೪೫) ಅದರ ಆಶ್ರಯದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸಿಕೊಂಡು ಬಂದಿದ್ದಾರೆ. ೧೯೪೮ರಿಂದ ೧೯೫೦ರ ವರೆಗೆ ಬೆಂಗಳೂರು ಪೌರಸಭೆಯ ಸಭಾಸದರಾಗಿದ್ದರು.

ಗ್ರಂಥಗಳು : ಜೀವನಕ್ಕೆ ಬೆಳಕು (ಈ), ಮೈಸೂರಿನ ರಾಜಲಕ್ಷ್ಮಿಯರು (ಮ-ಚ), ರಾಮಾಯಣ ಕಥಾಸಾರ (ಧ), ಸುಬೋಧ ಕುಸುಮಾಂಜಲಿ (ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ೧೩೮ ಮಹಾಪುರುಷರ ಜೀವನಚರಿತ್ರೆಗಳು ಚಿಕ್ಕ ಪುಸ್ತಕರೂಪದಲ್ಲಿ ಪ್ರಕಟವಾಗಿವೆ).

ಪರಿಷ್ಕೃತ : ಕನಕದಾಸರ ಮತ್ತು ಜಗನ್ನಾಥದಾಸರ ಕೀರ್ತನೆಗಳು, ಗೋಪಾಲದಾಸರ ಮತ್ತು ಮೋಹನದಾಸರ ಕೀರ್ತನೆಗಳು, ಪುರಂದರದಾಸರ ಕೃತಿಗಳು-ಭಾಗ ೧, ಭಾಗ೨, ವಾದಿರಾಜಸ್ವಾಮಿಗಳವರ ಕೀರ್ತನೆಗಳು, ವಿಜಯದಾಸರ ಕೃತಿಗಳು, ಹರಿಕಥಾಮೃತಸಾರ (ಕರ್ನಾಟಕ ಹರಿದಾಸಕೀರ್ತನ ತರಂಗಿಣಿ ಗ್ರಂಥಮಾಲೆಯಲ್ಲಿ ಪ್ರಕಟವಾಗಿವೆ).

ವರ್ಥ್ ಜಿ.ಎ. (ರೆವರೆಂಡ್)

ಮ : ಸು ೧೮೯೦

ಮಂಗಳೂರು. ಬಾಸೆಲ್ ಮಿಶನ್ನಿನಲ್ಲಿ ಇವರು ಧರ್ಮಪ್ರಚಾರಕರಾಗಿದ್ದರು. ಧಾರವಾಡ ಶಿಕ್ಷಣಮಹಾವಿದ್ಯಾಲಯದ ಪರವಾಗಿ ಪ್ರತಿವರ್ಷ ಪ್ರತ್ಯೇಕವಾದ ಪರೀಕ್ಷೆ ನಡೆದು, ಇವರ ಹೆಸರನಲ್ಲಿ 'ವರ್ಥ್ ಪ್ರೈಜ್' ಹಂಚಲಾಗುತ್ತಿದೆ.

ಗ್ರಂಥಗಳು : ಈಸೋಪನ ನೀತಿಕಥೆಗಳು (ಇ. ೧೮೬೯, IV), ಕರ್ನಾಟಕ ಪ್ರಾಕ್ಕಾವ್ಯಮಾಲಿಕೆ (ಅ.೧೮೬೮), ದ್ವೀಮತಪರೀಕ್ಷೆ (ಧ. ೧೮೬೬), ಶಾಲಾಗೃಹಪಠಣೋದ್ದಿಶ್ಯ ದೇವವಾಕ್ಯವ್ಯಾಖ್ಯಾನವು (ಧ. ೧೮೭೫-ಮೋಗ್ಲಿಂಗ್, ವೀಗಲ, ಕೌಂಡಿಣ್ಯರ ಜೊತೆಗೆ).

ಶಂಕರಭಟ್ಟ, ಮುಳಿಯ

ಜ : ೧೮೯೦ ಮ : ೧೯೩೪

ಮಂಗಳೂರು. ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ತಮ್ಮಂದಿರಾದ ಇವರು ಸ್ವಾಭಾವಿಕವಾಗಿ ಬಾಲ್ಯದಿಂದಲೇ ಕನ್ನಡಸಾಹಿತ್ಯದಲ್ಲಿ ಆಸಕ್ತಿಯುಳ್ಳವರಾಗಿದ್ದರು. ತಿಮ್ಮಪ್ಪಯ್ಯನವರ ಬಳಿಯಲ್ಲಿಯೇ ವ್ಯಾಸಂಗಮಾಡಿ ಕನ್ನಡಸಾಹಿತ್ಯದಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದರು. ಮಂಗಳೂರು ಮಿಶನ್ ಹೈಸ್ಕೂಲಿನಲ್ಲಿಯೂ ಅನಂತರ ಕಾಸರಗೋಡು, ಕುಂದಾಪುರ ಹೈಸ್ಕೂಲುಗಳಲ್ಲಿಯೂ ಅನೇಕ ವರ್ಷ ಕನ್ನಡ ಪಂಡಿತರಾಗಿದ್ದರು. ಕೆಲವು ಕಾಲ ಮಂಗಳೂರು ಸೆಂಟ್ ಎಲೋಸಿಯಸ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪಂಡಿತರಾಗಿಯೂ ಕೆಲಸಮಾಡಿದರು.

ಗ್ರಂಥಗಳು : ಚಂಡಭೀಮಕಾವ್ಯ (ಅ. ೧೯೨೦), ಚಾಣಕ್ಯತಂತ್ರ (ಇ), ತಿಲಕಪುರಾಣ (೧೯೨೦), ರಾಮಾಶ್ವಮೇಧಸಂಗ್ರಹ (ಅ.ಛ. ೧೯೨೩).

ಶಾಂತಿರಾಜಶಾಸ್ತ್ರೀ ಎ.

ಜ : ೧೮೯೦ ಮ : ೧೯೫೨

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ಬಳಿಯ ಎರ್ತೂರು. ಮೂಡಬಿದರೆ, ಶ್ರವಣಬೆಳಗುಳ, ಮೈಸೂರು ಮೊರೆನಾ (ಗ್ವಾಲಿಯರ್) ಹಾಗೂ ಕಲಕತ್ತೆಗಳಲ್ಲಿ ವ್ಯಾಸಂಗವನ್ನು ಪೂರೈಸಿ ನ್ಯಾಯತೀರ್ಥ ಪ್ರಶಸ್ತಿಯನ್ನು ಸಂಪಾದಿಸಿದರು. 'ವಿಶ್ವಬಂಧು' ಎಂಬ ವಾರಪತ್ರಿಕೆಯನ್ನೂ 'ವಿವೇಕಾಭ್ಯುದಯ' ಎಂಬ ಮಾಸಪತ್ರಿಕೆಯನ್ನೂ ಹೊರಡಿಸಿ ಅನುಕ್ರಮವಾಗಿ ೬ ಹಾಗೂ ೮ ವರ್ಷ ಸಂಪಾದಕರಾಗಿದ್ದರು. ೧೯೪೦ರಿಂದ ೪೮ರ ವರೆಗೆ ಮೈಸೂರು ಓರಿಯೆಂಟಲ್ ಗ್ರಂಥಭಾಂಡಾರದಲ್ಲಿ ಸಂಶೋಧಕರಾಗಿ ಕೆಲಸಮಾಡಿದರು. ಮೈಸೂರು ಮಹಾರಾಜರಿಂದ 'ಆಸ್ಥಾನವಿದ್ವಾನ್' (೧೧-೬-೧೯೨೫), 'ಮಹಾವಿದ್ವಾನ್' (೨೫-೧-೧೯೪೧) ಹಾಗೂ 'ಪಂಡಿತರತ್ನಂ' (೧೯೪೭), ಎಂಬ ಪ್ರಶಸ್ತಿಗಳನ್ನು ಪಡೆದಿದ್ದರು.

ಗ್ರಂಥಗಳು : ಇಷ್ಟೋಪದೇಶ (ಪೂಜ್ಯಪಾದಾಚಾರ್ಯವಿರಚಿತ ಗ್ರಂಥಕ್ಕೆ ಟೀಕೆ; ಧ.೧೯೩೮), ದ್ವಾದಶಾನುಪ್ರೇಕ್ಷೆ (ಧ.೧೯೩೬), ನಿರ್ದುಃಖ ಸಪ್ತಮಿಯ ಮತ್ತು ಸಮಾಧಿವಿಧಾನದ ನೋಂಪಿಯ ಕಥೆ (ಧ.೧೯೩೮), ಪರಮಾತ್ಮಬೋಧ (ಧ.೧೯೩೭), ಪಾರ್ಶ್ವನಾಥ ತೀರ್ಥಂಕರಚರಿತ (ಧ-ಚ.೧೯೩೪), ಪೂಜಾಸಾರ ಸಮುಚ್ಚಯ (ಧ.೧೯೨೩), ಪೂರ್ವಪುರಾಣಂ (೧೯೨೫), ಮೃತ್ಯುಮಹೋತ್ಸವ (ಧ.೧೯೩೭).

ಪರಿಷ್ಕೃತ : ಶತಕತ್ರಯ (೧೯೨೩), ನಿತ್ಯಸುಖದ ನೋಂಪಿಯ ಕಥೆ.

ಶ್ರೀಕಂಠಶಾಸ್ತ್ರೀ

ಜ : ೧೮೯೦ ಮ : ೧೯೧೮

ಚಿತ್ರದುರ್ಗ. ದಿವಂಗತ ಟಿ.ಎಸ್.ವೆಂಕಣ್ಣಯ್ಯನವರ ಆಪ್ತರಾದ ಇವರು ೧೯೦೪ರ ಸುಮಾರಿಗೆ ಮೈಸೂರು ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಸಂಗಮಾಡಿ ಸಾಹಿತ್ಯ-ವಿದ್ವತ್ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಧಾರವಾಡ ಜಿಲ್ಲೆಯ ಅಗಡಿಯ ಸಂಸ್ಕೃತಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದ ಇವರು ಅಕಾಲಮರಣಕ್ಕೆ ಈಡಾದರು.

ಗ್ರಂಥಗಳು : ಆನಂದರಾಮಾಯಣ (ಧ. ೧೯೧೨), ಭಾಗವತ, ಸತೀಸಾಹಸ (ಇ. ೧೯೧೦).

ಶ್ರೀನಿವಾಸಭಟ್ಟ, ಬಿ.

ಜ : ೧೮೯೦

ಉಡುಪಿ. ಸಂಸ್ಕೃತ ಸಾಹಿತ್ಯ, ದ್ವೈತವೇದಾಂತ, ವ್ಯಾಕರಣಗಳಲ್ಲಿ ವಿಶೇಷವಾದ ವ್ಯಾಸಂಗಮಾಡಿ ೧೯೨೩ರಲ್ಲಿ 'ಶಿರೋಮಣಿ' ಪದವಿಯನ್ನೂ, ೧೯೪೫ರಲ್ಲಿ ಅಯೋಧ್ಯಾ ಸಂಸ್ಕೃತ ಕಾರ್ಯಾಲಯದಿಂದ 'ವಿದ್ಯಾಭೂಷಣ' ಪ್ರಶಸ್ತಿಯನ್ನೂ ಸಂಪಾದಿಸಿದರು.

೧೯೩೦ರಲ್ಲಿ ಕೃಷ್ಣಾಪುರ ಮಠಾದೀಶರಾದ ವಿದ್ಯಾಪೂರ್ಣತೀರ್ಥರಿಂದ ಸುವರ್ಣಪದಕ ಸಮೇತ ಮುಂಗೈಕಡಗದಿಂದ ಗೌರವಿತರಾದವರು.

ಉಡುಪಿಯ ದಿ.ಪಾವಂಜೆ ಗುರುರಾಯರ ಮಧ್ವಸಿದ್ಧಾಂತ ಗ್ರಂಥಾಲಯದಲ್ಲಿ ಪರಿಶೋಧಕರಾಗಿ ೧೯೧೫ರಿಂದ ೧೯೪೩ರ ವರೆಗೆ ಕೆಲಸಮಾಡಿದರು. ಹಾಗೂ ೧೯೧೮ರಿಂದ ಅಲ್ಲಿಯೇ ಮಧ್ವಸಿದ್ಧಾಂತಪ್ರಬೋಧಿನಿ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ೧೯೪೭ರಿಂದ ವೈದಿಕ ಧರ್ಮಪರಿಷತ್ತಿನ ಸದಸ್ಯರಾಗಿಯೂ, ತಮ್ಮ ಪಾಠಶಾಲೆಯ ಪ್ರಾಕ್ತನ ವಿದ್ಯಾರ್ಥಿ ಸಂಘದಿಂದ ಪ್ರಕಟವಾಗುತ್ತಿದ್ದ 'ಧರ್ಮಬೋಧ' ಮಾಸಪತ್ರಿಕೆಯ ಪ್ರಧಾನಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು.

ಗ್ರಂಥಗಳು : ಆಹ್ನಿಕಮಂಜರಿ (ಧ. ೧೯೧೫), ಉಡುಪಿಕ್ಷೇತ್ರಮಹಾತ್ಮ್ಯೆ (ಧ-ಪ್ರ.೧೯೧೮), ಉಪದೇಶಾಮೃತ (ಧ. ೧೯೨೬), ಭಗವದ್ಗೀತಾಸುಖಬೋಧಿನೀ (ನ), ಭವಿಷ್ಯೋತ್ತರ ವೆಂಕಟೇಶ ಮಹಾತ್ಮೆಯ ತಾತ್ಪರ್ಯ (ಧ), ಮಧ್ವಮತಸಾರ (ಧ. ೧೯೧೮), ಮನುಸ್ಮೃತಿಸಾರಬೋಧಿನಿ (ಧ), ಶ್ರೀಮಧ್ವಾಚಾರ್ಯರು (ಧ-ಚ.೧೯೧೮), ಶ್ರೀ ವಾದಿರಾಜಚರಿತೆ (ಧ-ಚ.೧೯೨೪), ಶ್ರೀ ವಿದ್ಯಾರಣ್ಯತೀರ್ಥರು (ಧ-ಚ.೧೯೩೫), ಸದಾಚಾರಸ್ಮೃತಿ ಕರ್ನಾಟಕ ತಾತ್ಪರ್ಯ (ಧ. ೧೯೨೯), ಸುಮಧ್ವವಿಜಯಸಾರ ಬೋಧಿನಿ (ಧ).

ಸಂಸ್ಕೃತ : ಅವತಾರತ್ರಯಭಜನ, ದಾಶರಥಿಶತಕ*, ಬಲರಾಮಪ್ರತಾಪ, ಭಜಗುರು ರಾಜಸ್ತುತಿ, ರಾಮಾನಂದ, ಶ್ರೀವಾದಿರಾಜಗುರುರಾಜಸಾರ್ವಭೌಮ.

ತಿಮ್ಮಪ್ಪಯ್ಯ, ಮುಳಿಯ, ವಿದ್ವಾನ್

ಜ : ೧೮೮೧ ಮ : ೧೬-೧-೧೯೫೦

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಮುಳಿಯದವರು. ಪ್ರಾರಂಭಿಕ ಸಂಸ್ಕೃತ ಶಿಕ್ಷಣವನ್ನು ಪೂರೈಸಿ ಹೆಚ್ಚಿನ ವ್ಯಾಸಂಗಕ್ಕಾಗಿ ತಿರುವನಂತಪುರಕ್ಕೆ ಹೋಗಿ ನೆಲೆಸಿದರು. ಕೆಲಕಾಲದ ನಂತರ ಸಂಗೀತಾಧ್ಯಯನಕ್ಕಾಗಿ ಮೈಸೂರಿಗೆ ಬಂದರು. ಅದಾದನಂತರ ಮಂಡ್ಯ, ಮಂಗಳೂರು ಮುಂತಾದ ಊರುಗಳಲ್ಲಿ ಕನ್ನಡಸಾಹಿತ್ಯದ ಪ್ರೌಢಶಿಕ್ಷಣ ಪಡೆದು ವಿದ್ವಾನ್ ಪದವೀಧರರಾದರು. ೧೯೧೧ರಲ್ಲಿ ಕನ್ನಡ ಪಂಡಿತರಾಗಿ ಮಂಗಳೂರು ಕೆನರಾ ಹೈಸ್ಕೂಲನ್ನು ಸೇರಿ ಏಳು ವರ್ಷಗಳನಂತರ ಅಲ್ಲಿಯ ಸೇಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ಪಂಡಿತರಾಗಿ ಹೋದರು. ಅದೇ ಸ್ಥಾನದಿಂದ ೧೯೪೮ರಲ್ಲಿ ನಿವೃತ್ತರಾದರು. 'ಕನ್ನಡ ಕೋಗಿಲೆ' ಎಂಬ ಮಾಸಪತ್ರಿಕೆಯ ಸಂಪಾದಕರು (ಮಂಗಳೂರು, ೧೯೧೪-೧೯೧೯); ಕನ್ನಡ ಸಾಹಿತ್ಯ ಸಮ್ಮೇಳನದ ೧೭ನೆಯ ಅಧಿವೇಶನದ

*ಮದ್ರಾಸ್ ಸಂಸ್ಕೃತ ಸೇವಾಸಮಿತಿಯಿಂದ ಬಹುಮಾನಿತ.

(ಕಾರವಾರ, ೧೯೩೧) ಅಧ್ಯಕ್ಷರು; ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ನೆರೆದ ಪಂಪೋತ್ಸವದ ಅಧ್ಯಕ್ಷರು (೧೯೪೧); ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ 'ಕನ್ನಡನಾಡೂ ದೇಸಿ ಸಾಹಿತ್ಯವೂ' ಎಂಬ ವಿಷಯವಾಗಿ ಸಂಶೋಧನೋಪನ್ಯಾಸ ಮಾಡಿದರು (೧೯೪೮ ಮಾರ್ಚ್ ೯,೨೯,೩೦, ೩೧) ಪಂಪಮಹಾ ಕವಿಯ ವಿಷಯವಾಗಿ ಅಧಿಕಾರವಾಣಿಯಿಂದ ಮಾತಾಡಬಲ್ಲ ಅಖಿಲ ಕರ್ನಾಟಕದ ಕೆಲವೇ ಪಂಡಿತರಲ್ಲಿ ಇವರು ಪ್ರಮುಖರಾಗಿದ್ದರು.

ಗ್ರಂಥಗಳು : ಆದಿಪುರಾಣಸಂಗ್ರಹ (ಅ-ಭ. ೧೯೩೮), ಕವಿರಾಜಮಾರ್ಗವಿವೇಕ ಭಾಗ ೧ (ಅ-ಭ), ಚಂದ್ರಾವಳಿವಿಲಾಸ (ಇ. ೧೯೧೩), ತ್ರಿಪುರದಾಹ (ಧ.೧೯೪೧), ನಡತೆಯ ನಾಡು (ಆ. ೧೯೧೭), ನವನೀತರಾಮಾಯಣ (ಅ),ನಾಡೋಜಪಂಪ (ಅ-ಟ.೧೯೩೮), ಪಶ್ಚಾತ್ತಾಪ (ಇ. ೧೯೩೪), ಪಾರ್ತಿಸುಬ್ಬ (ಅ. ಟ.೧೯೪೬), ಬಡಹುಡುಗಿ (ಅ. ೧೯೧೮), ವೀರ ಬಂಕೆಯ (ಇ. ೧೯೪೮), ಸಮಸ್ತಭಾರತಸಾರ (ಅ-ಭ. ೧೯೪೧), ಸೊಬಗಿನ ಬಳ್ಳಿ (ಅ. ೧೯೧೭), ಹಗಲಿರುಳು (ಆ. ೧೯೧೮).

ತಿರುಮಲ, ಲಿಂಗಪ್ಪ, ಹೆಗಡೆ

ಜ : ೨೩-೫-೧೮೯೧

ಕುಮಟಾ ತಾಲೂಕಿನ ಕಲ್ಲಬ್ಬೆ. ಚಿಕ್ಕಂದಿನಲ್ಲಿ ವೇದಾಧ್ಯಯನದ ಜೊತೆಗೆ ಶಾಲಾಪ್ರಮಾಣ ಪರೀಕ್ಷೆಗೆ ಓದಿ ಮುಂದೆ ಧಾರವಾಡ ಶಿಕ್ಷಣಮಹಾವಿದ್ಯಾಲಯದ ಮೂರನೆಯ ವರ್ಷದ ಪ್ರಶಸ್ತಿಯನ್ನು ಪಡೆದು ಉಪಾಧ್ಯಾಯರಾದರು. ಸ್ವಾಧ್ಯಾಯದಿಂದ ಹಿಂದೀ, ಮರಾಠಿ. ಬಂಗಾಲಿ ಭಾಷೆಗಳನ್ನು ಅವಗತಮಾಡಿಕೊಂಡರು. ೧೯೪೭ರಲ್ಲಿ ನಿವೃತ್ತರಾದರು.

ಗ್ರಂಥಗಳು : ಕಲಿಯ ಮಹಿಮೆ (ಅ.೧೯೨೬), ಪತಿಪೂಜೆ (ಆ.೧೯೨೩), ಬುದ್ಧನ ಜೀವನಚರಿತ್ರೆ (ಧ-ಚ.೧೯೨೭), ಮೂರ್ಖಶತಕ (ಅ.೧೯೨೫), ಶ್ರೀ ಅನಂತ ಚತುರ್ದಶಿ ಕಥೆ (ಅ.೧೯೨೫), ಸತ್ಯವಿನಾಯಕನ ಹಾಡು (ಅ.೧೯೨೩).

ದತ್ತಾತ್ತ್ರೇಯ, ಕೃಷ್ಣ, ಭಾರದ್ವಾಜ

ಜ: ೨೯-೧೨-೧೮೯೧ ಮ : ೨೨-೨-೧೯೫೩

ಧಾರವಾಡ ಜಿಲ್ಲೆಯ ಕುಂದಗೋಳ. ಬೆಂಗಳೂರು, ಧಾರವಾಡ, ಪುಣೆ, ಕಾಶಿ, ಮದ್ರಾಸ್ ಮುಂತಾದ ಕಡೆಗಳಲ್ಲಿ ಶಿಕ್ಷಣ ಪಡೆದರು. 'ವೈದ್ಯಗುರು' ಪ್ರಶಸ್ತಿಯನ್ನು ಸಂಪಾದಿಸಿ, ಎನಿಬೆಸೆಂಟ್, ಡಿ.ಕೆ. ತೆಲಂಗ ಮೊದಲಾದ ಧುರೀಣರ ಆಶ್ರಯದಲ್ಲಿ ಕೆಲದಿನ ನಿಂತು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅನುಭವವನ್ನು ಹೆಚ್ಚಿಸಿಕೊಂಡರು. ೧೯೧೫ರಲ್ಲಿ 'ಒಕ್ಕಲಿಗ' ಮಾಸಪತ್ರಿಕೆಯ ಉಪಸಂಪಾದಕರೆಂದು

ಸಾರ್ವಜನಿಕರಂಗದಲ್ಲಿ ಕಾಲಿಟ್ಟರು. ಮುಂದೆ ೧೬ ವರ್ಷಗಳವರೆಗೆ ತಮ್ಮ ಇನ್ನಿತರ ಚಟುವಟಿಕೆಗಳೊಂದಿಗೆ ಪತ್ರಿಕಾಕ್ಷೇತ್ರಕ್ಕೆ ಪ್ರತ್ಯಕ್ಷ ಸಂಬಂಧವನ್ನಿರಿಸಿಕೊಂಡಿದ್ದರು. ಈ ಅವಧಿಯಲ್ಲಿ, ಆಂಗ್ಲ-ಸಂಸ್ಕೃತತ್ರೈಮಾಸಿಕ, 'ಸಂಸ್ಕೃತ ರೀಸರ್ಚ್'ದ ವ್ಯವಸ್ಥಾಪಕ-ಉಪಸಂಪಾದಕ (೧೯೧೬-೧೮), 'ಭಕ್ತಿಸಂದೇಶ'ದ ಸಂಪಾದಕ (೧೯೧೮-೧೯), 'ತಿಲಕ ಸಂದೇಶ'ದ ಸಂಪಾದಕ (೧೯೨೦-೨೧), 'ಅಸಹಕಾರ' ಪತ್ರಿಕೆಯ ಸಂಪಾದಕ, 'ರಂಗಭೂಮಿ' ಮಾಸಪತ್ರಿಕೆಯ ಸಂಪಾದಕ (೧೯೨೫-೩೧), 'ಮಕ್ಕಳ ಪುಸ್ತಕ'ದ ಸಂಪಾದಕ (೧೯೨೬-೨೮) ಇತ್ಯಾದಿ ಸ್ಥಾನಗಳ ಕೆಲಸ ಮಾಡಿದರು. ಈ ಮಧ್ಯೆ ೧೯೧೯ರಿಂದ ಎರಡು ವರ್ಷ ಮದ್ರಾಸ್ ರಾಷ್ಟ್ರೀಯ ಶಿಕ್ಷಕಿಯರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ೧೯೨೬ರಿಂದ ಕೊನೆಯವರೆಗೆ ಬೆಂಗಳೂರಿನಲ್ಲಿ 'ಶ್ರೀರಾಮಕೃಷ್ಣ ಚಿಕಿತ್ಸಾಲಯ'ವನ್ನು ಸ್ಥಾಪಿಸಿ, ವೈದ್ಯಕೀಯ ವ್ಯವಸಾಯವನ್ನು ಕೈಕೊಂಡಿದ್ದರು.

೧೯೨೧ರ ಅಸಹಕಾರ ಆಂದೋಲನದೊಂದಿಗೆ ಇವರ ರಾಜಕೀಯಜೀವನವು ಪ್ರಾರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ,ಪ್ರಾ.ಕಾಂ. ಸಮಿತಿಯ ಜೊತೆ ಕಾರ್ಯದರ್ಶಿ, ದ.ಕ.ಜಿ. ಕಾಂ. ಸಮಿತಿಯ ಉಪಾಧ್ಯಕ್ಷ, ತಿಲಕ ಮಹಾವಿದ್ಯಾಲಯದ ಉಪಾಧ್ಯಕ್ಷ, ಅ.ಭಾ.ಕಾಂ. ಮಹಾಸಭೆಯ (ಬೆಳಗಾವಿ, ೧೯೨೪), ಕಾರ್ಯದರ್ಶಿ, ಅ.ಭಾ.ಪುಸ್ತಕ ಭಾಂಡಾರ ಪರಿಷತ್ತಿನ (ಬೆಳಗಾವಿ, ದೇ.ಭ. ಚಿತ್ತರಂಜನದಾಸರ ಅಧ್ಯಕ್ಷತೆ, ೧೯೨೪) ಸ್ವಾಗತಾಧ್ಯಕ್ಷ ಮೊದಲಾದ ಅಧಿಕಾರ ಸ್ಥಾನಗಳಲ್ಲಿ ಕಾರ್ಯನಿರ್ವಹಿಸಿದರು. ಇದಲ್ಲದೆ ತಮ್ಮ ವ್ಯವಸಾಯಕ್ಷೇತ್ರವಾಗಿದ್ದ ಆಯುರ್ವೇದದ ಉನ್ನತಿಗಾಗಿಯೂ ಹಿಂದೀ ಪ್ರಚಾರಕ್ಕಾಗಿಯೂ ಇವರು ವಿಶೇಷವಾಗಿ ಶ್ರಮಿಸಿದರು. ಬೆಂಗಳೂರಲ್ಲಿ ಶ್ರೀರಾಮಕೃಷ್ಣ ವಿದ್ಯಾಪೀಠವನ್ನು ಸ್ಥಾಪಿಸಿ, ನಿಖಿಲ ಭಾರತ ಆಯುರ್ವೇದ ವಿದ್ಯಾಪೀಠದ ಸ್ಥಾನಿಕ ಕೇಂದ್ರದ ಅಧ್ಯಕ್ಷರಾದರು (೧೯೩೦ರಿಂದ). ಶಿರಸಿಯಲ್ಲಿ ಜರುಗಿದ ಕಾರವಾರ ಜಿಲ್ಲಾ ವೈದ್ಯ-ಹಕೀಮರ ಸಮ್ಮೇಲನದ ಅಧ್ಯಕ್ಷ (೧೯೩೯), ನಿ. ಭಾ.ಆ.ಮಹಾಸಮ್ಮೇಲನದ ದಕ್ಷಿಣ ಭಾರತದ ಕಾರ್ಯದರ್ಶಿ (೧೯೪೦-೪೨), ನಿ;ಭಾ.ಆನುವಂಶಿಕ ವೈದ್ಯ-ಹಕೀಮರ ಸಮ್ಮೇಲನದ ಪ್ರಧಾನಕಾರ್ಯದರ್ಶಿ (ಬೆಂಗಳೂರು, ೧೯೩೮), ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಅಧ್ಯಕ್ಷ (೧೯೪೪ರಿಂದ), ನಿ.ಕ.ಆ. ಪ್ರಚಾರ ಪರಿಷತ್ತಿನ ಅಧ್ಯಕ್ಷ (ಗದಗ, ೧೯೪೭), ನಿ.ಕ.ಆ. ಸಮ್ಮೇಲನದ ೧೮ನೇ ಅಧಿವೇಶನದ ಅಧ್ಯಕ್ಷ (ಬಿಜಾಪುರ, ನವಂಬರ್ ೧೯೫೧) ಇತ್ಯಾದಿ ಇವು ಭಾರದ್ವಾಜರ ವಿಶಾಲ ಕಾರ್ಯರಂಗದ ಕೆಲವು ಮೈಲುಗಲ್ಲುಗಳು ಮಾತ್ರ.

ಗ್ರಂಥಗಳು : ಅನಾಸಕ್ತಿಯೋಗ (ಮ.ಗಾಂಧಿಯವರ ಪುಸ್ತಕದ ಭಾಷಾಂತರ) (ನ.೧೯೩೦), ಅಮೃತಸರ ಪಟ್ಟಣ (ಮ.೧೯೨೦), ಆಯುರ್ವೇದ ಚಿಕಿತ್ಸಾಸಾರಸಂಗ್ರಹ (ಧ.೧೯೨೫), ಆಹಾರವಿಜ್ಞಾನ (ಣ.೧೯೩೩), ಕರ್ಣಾಟಕ ಕೈಪಿಡಿ (ಮ-ಓ.೧೯೨೪),ಜಗತ್ತಿನ ಸ್ವಾತಂತ್ರ್ಯಸಂಗ್ರಾಮ (ಮ.೧೯೩೦), ಜನನ ನಿಯಂತ್ರಣ (ಧ), ತಿಲಕ ಮಹಾರಾಜರ ಜೀವನ ಚರಿತ್ರೆ (ಯ-ಚ.೧೯೧೯), ದಾಂಪತ್ಯವಿಜ್ಞಾನ (ಧ.೧೯೨೯), ನಾಟ್ಯರೂಪ

ಹಿಂದುಸ್ತಾನ (ತ.೧೯೩೦), ನೀತಿಧರ್ಮ ಅಥವಾ ಧರ್ಮನೀತಿ (ಮ.ಗಾಂಧಿಯವರ ಪುಸ್ತಕದ ಭಾಷಾಂತರ) (ಧ. ೧೯೨೧), ಬ್ರಹ್ಮಚರ್ಯೆಯೋ ಕಾಮಸಾಧನೆಯೋ (ಮ.ಗಾಂಧೀಯವರ ಪುಸ್ತಕದ ಭಾಷಾಂತರ), (ಧ.೧೯೨೮), ಭೀಷ್ಮ (ದ್ವಿಜೇಂದ್ರಲಾಲ ಬಸು ಅವರ ವಂಗ ನಾಟಕದ ಭಾಷಾಂತರ) (ಆ. ೧೯೨೭), ರಾಷ್ಟ್ರಸಭೆಯ ಇತಿಹಾಸ (ಮ. ೧೯೨೪), ಶ್ರೀಕೃಷ್ಣಜನ್ಮಾಷ್ಟಮಿ (ಧ.೧೯೨೦), ಶ್ರೀ ತುಳಸೀದಾಸ ರಾಮಾಯಣ (ತುಳಸೀದಾಸ ಕೃತ ಹಿಂದೀಕಾವ್ಯದ ಭಾಷಾಂತರ), (ಧ. ೧೯೩೮), ಶ್ರೀಯುತ ಆಂಡ್ರೂಜರ ಅಸಹಕಾರ ಪತ್ರಗಳು (ಯ. ೧೯೨೧), ಸಚಿತ್ರ ಭಾರತಯಾತ್ರೆ (ಉತ್ತರಭಾರತ) (ಭ-ಗ.೧೯೪೦), ಸಚಿತ್ರ ಭಾರತಯಾತ್ರೆ (ದಕ್ಷಿಣ ಭಾರತ) (ಭ-ಗ. ೧೯೪೦), ಸಂತಾನ ವಿಜ್ಞಾನ (ಧ. ೧೯೩೦), ಸ್ವರಾಜ್ಯ ಡೈರಿ ಮತ್ತು ವಿಶ್ವಕೋಶ (೧೨ ಭಾಗಗಳು), (ಯ.ಏ. ೧೯೨೨-೩೪), ಸೀತಾದೇವಿ (ದ್ವಿಜೇಂದ್ರಲಾಲ ಬಸು ಅವರ ವಂಗನಾಟಕದ ಭಾಷಾಂತರ) (ಆ. ೧೯೨೯), ಹಿಂದೀ ಭಾಷಾಸಾರ (ದ. ೧೯೨೧), ಹಿಂದೀ ಸ್ವರಾಜ್ಯ (ಮ.ಗಾಂಧಿಯವರ Hind Swaraj ಪುಸ್ತಕದ ಭಾಷಾಂತರ), (ಯ. ೧೯೨೦).

ಇಂಗ್ಲೀಷ್ : Swaraj Cyclopaedia (2 Vols.) (1923-24), Karnatak hand Book (1924), RangaBhoomi Pictrorials (4 Parts), 1927-31), Dangers of Vaccinations (1934), Student's Modern Practical English-Kannada Dictionary (1942).

ಶ್ರೀಕಂಠಶಾಸ್ತ್ರೀ, ಅಮರಾರ್ಯ, ಹಿರೇಮಠ

ಜ : ೧೮೯೧

ಧಾರವಾಡ ಜಿಲ್ಲೆಯ ನಲವಡಿ ಗ್ರಾಮ. ಇವರು ಕಾಶಿಯಲ್ಲಿ ಸಂಸ್ಕೃತ ಸಾಹಿತ್ಯ, ನ್ಯಾಯ, ವೇದಾಂತಗಳನ್ನು ವ್ಯಾಸಂಗ ಮಾಡಿದರು. ಪುರಾಣಪ್ರವಚನ ಹಾಗೂ ಕೀರ್ತಕಥನದಲ್ಲಿ ನಿಷ್ಣಾತರಾಗಿದ್ದ ಇವರು 'ಕರ್ನಾಟಕ ಕವಿಚಂದ್ರ' ಎಂಬ ಪ್ರಶಸ್ತಿ ಪಡೆದಿರುವರು.

ಗ್ರಂಥಗಳು : ಅಕ್ಕಮಹಾದೇವಿ ವಚನ (ಭಾವಾರ್ಥ; ಪಾ), ಅಶ್ವಮೇಧ (ಆ), ಕಿತ್ತೂರ ಚೆನ್ನಮ್ಮ (ಆ), ಕೈವಲ್ಯಕಲ್ಪವಲ್ಲರೀ (ಸರ್ಪಭೂಷಣ ಶಿವಯೋಗಿಕೃತ-ಭಾವಾರ್ಥ;ಧ), ಧರ್ಮದ್ರೋಹ (ಆ), ಪ್ರಪಂಚ ಪರೀಕ್ಷಾ (ಆ), ಪ್ರಭುವಿಜಯ (ಆ), ಬಸವಣ್ಣನವರ ವಚನಸಂಗ್ರಹ-ಭಾವಾರ್ಥಸಹಿತ (ಪಾ), ಮಂಗಳಸೂತ್ರ (ಆ), ಲಿಖಿತ ಲೀಲಾ (ಆ), ಶಾಪವಿಮೋಚನ (ಆ), ಸಂಪೂರ್ಣ ರಾಮಾಯಣ (ಆ), ಸಿದ್ಧರಾಮೇಶ್ವರ (ಆ), ಸೋಹಂ (ಆ), ಹೇಮರಡ್ಡಿಮಲ್ಲಮ್ಮ ಭಾಗ ೧, ೨ (ಆ).

ಶ್ರೀನಿವಾಸಾಚಾರ್ಯ, ದೇವನಹಳ್ಳಿ

ಜ : ೧೮೯೧

ಇವರು ದೇವನಹಳ್ಳಿ ಕೃಷ್ಣಮಾಚಾರ್ಯರ ಕಿರಿಯ ಸಹೋದರರು. ಹೆಚ್ಚಿನ ವಿದ್ಯಾಭ್ಯಾಸದ ಅನುಕೂಲತೆ ದೊರೆಯದ್ದರಿಂದ ಮಾಧ್ಯಮಿಕ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಒಂದು ಸಣ್ಣ ಕೆಲಸಕ್ಕೆ ಸೇರಿ ಕೆಲಕಾಲದ ನಂತರ ಟೆಲಿಫೋನ್ ಆಪರೇಟರರಾದರು. ಬಂಗಾಲಿ ಭಾಷೆಯನ್ನು ಅಭ್ಯಸಿಸಿ ಎರಡು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿರುವರು. ೧೯೪೬ರಲ್ಲಿ ಸೇವಾನಿವೃತ್ತರಾದರು.

ಗ್ರಂಥಗಳು : ಭಿಕ್ಷುಕ (ಇ.೧೯೨೦), ಹರಿದಾಸಿ (ಇ.೧೯೧೮)

ರಾಮದಾಸ

ಜ : (?) ಮ : ೧೮೯೨

ನಿಜಾಮಕರ್ನಾಟಕದ ಲಿಂಗಸುಗೂರು. ತಕ್ಕಮಟ್ಟಿಗೆ ವಿದ್ಯಾಭ್ಯಾಸ. ಇವರ ಸೋದರಮಾವಂದಿರಾದ 'ಗುರುಪ್ರಾಣೇಶವಿಠಲ'ರಿಂದ ಇವರಿಗೆ ಜ್ಞಾನೋದಯವಾಗಿ, ಅವರಿಂದಲೇ 'ಶ್ರೀಶಪ್ರಾಣೇಶವಿಠಲ' ಎಂಬ ಅಂಕಿತ ಪಡೆದು ಹರಿದಾಸರಾದರು. ಇವರು ರಚಿಸಿದ ದೇವರನಾಮಗಳಲ್ಲಿ ೧೪ ಕೀರ್ತನೆಗಳು 'ಶ್ರೀಪ್ರಾಣೇಶವಿಠಲರ ಕೀರ್ತನೆಗಳು' ಎಂಬ ಪುಸ್ತಕದಲ್ಲಿ ಪ್ರಕಟವಾಗಿವೆ.

ನಾಗೇಶಶಾಸ್ತ್ರೀ, ವೈ., ಆಸ್ಥಾನ ವಿದ್ವಾನ್, ಸರ್ವದರ್ಶನತೀರ್ಥ

ಜ : ೧೮೯೨

ಬಳ್ಳಾರಿ ತಾಲೂಕಿನ ಏಳುಬೆಂಚಿ. ಪ್ರಾಥಮಿಕ ಶಿಕ್ಷಣ ಮುಗಿದ ಬಳಿಕ ಕೆಲಕಾಲ ಉಪಾಧ್ಯಾಯರಾಗಿದ್ದರು. ಮುಂದೆ ನಿಜಾಮ ಕರ್ನಾಟಕದ ಕೊಪ್ಪಳ ಗವಿಮಠದ ಶ್ರೀ ಕೊಂಗೋಡು ವೀರಭದ್ರಶಾಸ್ತ್ರಿಗಳಲ್ಲಿ ೩ ವರ್ಷ ಸಂಸ್ಕೃತಸಾಹಿತ್ಯವನ್ನು ಅಭ್ಯಸಿಸಿ ಬಂದು, ೧೯೧೪ರಿಂದ ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರೆಂದು ನಿಯಮಿಸಲ್ಪಟ್ಟರು. ೧೯೨೫ರಲ್ಲಿ ಕಲಕತ್ತಾ ವಿಶ್ವವಿದ್ಯಾನಿಲಯದ 'ಸರ್ವದರ್ಶನತೀರ್ಥ' ಪ್ರಶಸ್ತಿಯನ್ನೂ ಎರಡು ವರ್ಷಗಳನಂತರ ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ-ಸಂಸ್ಕೃತ ಪಂಡಿತ ಪ್ರಶಸ್ತಿಯನ್ನೂ ಪಡೆದರು. ೧೯೩೭ರಿಂದ ಬೆಳಗಾವಿಯ ಲಿಂಗರಾಜ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲವು ಕಾಲ ಇದ್ದು, ಅನಂತರ ಬಳ್ಳಾರಿಯ ವೀರಶೈವ ಆರ್ಟ್ಸ್ ಕಾಲೇಜಿನಲ್ಲಿ ಪಂಡಿತರಾದರು. ತೆಲುಗು, ಮರಾಠಿ. ಹಿಂದೀ, ವಂಗಭಾಷೆಗಳನ್ನು ಬಲ್ಲವರು.

೧೯೨೫ರಲ್ಲಿ ಬಳ್ಳಾರಿಯಿಂದ 'ಕರ್ನಾಟಕ ಬಂಧು' ಎಂಬ ವಾರಪತ್ರಿಕೆಯನ್ನು ಹೊರಡಿಸಿದ್ದರು. ಮೈಸೂರು ಆಸ್ಥಾನ ವಿದ್ವಾಂಸರು (೧೯೩೨); ಅದರಂತೆ ಸೊಂಡೂರು ಸಂಸ್ಥಾನಾಧೀಶರಿಂದಲೂ ಗೌರವಿಸಲ್ಪಟ್ಟರು. ಹುಬ್ಬಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದ ೧೯ನೇ ಅಧಿವೇಶನದ ಅಧ್ಯಕ್ಷರಾಗಿದ್ದರು (೧೯೩೩).

ಗ್ರಂಥಗಳು : ಅಭಿನವಗೀತಾ (ಅ.೧೯೧೫), ಅಷ್ಟಾವರಣವಿವೇಕ, ಕುಮಾರಸಂಭವ (ಅ.೧೯೩೮), ಗವಿಸಿದ್ಧೇಶ್ವರ ಪುರಾಣ (ಅ.೧೯೫೦), ಪಂಚಾಚಾರಪ್ರಕಾಶಿಕೆ, ಭಗವದ್ಗೀತಾ, ಮರಿಯೋಗೀಶ್ವರ ಪುರಾಣ, ರಘುವಂಶ (ಅ.೧೯೩೨), ವಜ್ರಾಂಗುಳೀಯ (ಇ.೧೯೧೬), ಶಿವಾನುಭವಸೂತ್ರಸಾರ (ಧ.೧೯೫೦), ಶ್ರೀಫಲಾಕ್ಷಾರ ಶಿವಯೋಗೀಶ್ವರಪುರಾಣ (ಅ.೧೯೫೩), ಷಟ್ಸ್ಥಲತತ್ವದರ್ಪಣ.

ಅಪ್ರಕಟಿತ : ಚಂದ್ರಾಲೋಕ, ವಿಜಯನಗರಾಭ್ಯುದಯ, ನೀತಿಚಿಂತಾಮಣಿ, ಷಟ್ಸ್ಥಲ ಸಿದ್ಧಾಂತ, ಅರ್ಧನಾರೀಶ್ವರಪುರಾಣ.

ವೆಂಕಟೇಶ ಅಯ್ಯಂಗಾರ್ ಮಾಸ್ತಿ

ಜ : ೧೮೯೨

ಮಾಸ್ತಿಯ ಬಳಿಯ ಹೊಂಗೇನಹಳ್ಳಿ. ವಿದ್ಯಾರ್ಥಿಯಾಗಿದ್ದಾಗ ಪ್ರತಿವರ್ಗದಲ್ಲಿಯೂ ಪ್ರಥಮ ಶ್ರೇಣಿಯನ್ನು ಪಡೆದು ಹಲವಾರು ಪ್ರಶಸ್ತಿಗಳನ್ನು ದೊರಕಿಸಿದ ಇವರು ಎಂ.ಎ. ಪಾಸಾದನಂತರ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮೈಸೂರು ಸರಕಾರದ ಬೇರೆಬೇರೆ ಶಾಖೆಗಳಲ್ಲಿ ಕೆಲಸಮಾಡಿದರು. ಎಕ್ಸೈಜ್ ಕಮಿಷನರ್' ಹುದ್ದೆಯಿಂದ ೧೯೪೭ರಲ್ಲಿ ನಿವೃತ್ತರಾದರು.

'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಇವರು ಬಹುಜನಪ್ರಿಯ ಲೇಖಕರಾಗಿದ್ದಾರೆ. 'ಸುಬ್ಬಣ್ಣ' ಎಂಬ ಇವರ ಕತೆಯು ಕನ್ನಡದ ಅತ್ಯುತ್ತಮ ಕೃತಿಗಳಲ್ಲಿ ಒಂದು ಎಂದು ಎಣಿಸಲ್ಪಟ್ಟಿದೆ. ಕನ್ನಡ ಸಣ್ಣಕತೆಯ ಸ್ಥಾನವನ್ನು ಉನ್ನತಪಡಿಸಲು ಇವರು ಸಲ್ಲಿಸಿದ ಕಾಣಿಕೆ ಅಪ್ರತಿಮವಾಗಿದೆ. ೧೯೪೩ರಿಂದ 'ಜೀವನ' ಎಂಬ ಶ್ರೇಷ್ಠವರ್ಗದ ಮಾಸಪತ್ರಿಕೆಯ ಸಂಪಾದಕರಾಗಿದ್ದಾರೆ.

೧೯೪೩ರಿಂದ ೪೮ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು. ಸಾಹಿತ್ಯ ಸಮ್ಮೇಲನದ ೧೫ನೆಯ ಅಧಿವೇಶನದ ಅಧ್ಯಕ್ಷರು (ಬೆಳಗಾವಿ, ೧೯೨೯), ಮೈಸೂರು ಮಹಾರಾಜರಿಂದ 'ರಾಜಸೇವಾಪ್ರಸಕ್ತ' ಪ್ರಶಸ್ತಿಪಡೆದವರು. ಕರ್ನಾಟಕ ಏಕೀಕರಣದ ಕಾರ್ಯದಲ್ಲಿ ತುಂಬ ಉತ್ಸಾಹದಿಂದ ದುಡಿದವರು. ಅಖಿಲ ಭಾರತ ಪ್ರಾಚ್ಯ ಸಮ್ಮೇಲನದ ೧೧ನೇ ಅಧಿವೇಶನದ ಕನ್ನಡ ವಿಭಾಗದ ಅಧ್ಯಕ್ಷರು (ಹೈದರಾಬಾದು).

ಗ್ರಂಥಗಳು : ಅರುಣ (ಅ.೧೯೨೪), ಆದಿಕವಿ ವಾಲ್ಮೀಕಿ (ಅ-ಟ.೧೯೩೮), ಉಷಾ (ಆ.೧೯೨೭), ಕನ್ನಡದ ಸೇವೆ (ಉ.೧೯೩೦), ಕರ್ನಾಟಕದ ಜನತೆಯ ಸಂಸ್ಕೃತಿ (ಉ.೧೯೨೧), ಕರ್ನಾಟಕದ ಜನಪದಸಾಹಿತ್ಯ (ಈ.೧೯೩೭), ಕಾಕನ ಕೋಟೆ (ಆ.೧೯೩೮), ಕೆಲವು ಸಣ್ಣಕತೆಗಳು (ಇ.೧೯೨೦), ಗೌಡರ ಮಲ್ಲಿ (ಅ.೧೯೪೦), ಚಿತ್ರಾಂಗದಾ (ಆ.೧೯೪೫), ಚೆನ್ನಬಸವನಾಯಕ (ಇ.೧೯೪೯), ಚೆಲುವು (ಅ.೧೯೩೧), ತಾವರೆ

(ಆ.೧೯೩೦), ತಾಳೀಕೋಟೆ (ಆ.೧೯೨೯), ತಾಯ್ನುಡಿಯ ತಮ್ಮಡಿ (ಉ.೧೯೪೪), ತಿರುಪಾಣಿ (ಆ.೧೯೩೮), ನವರಾತ್ರಿ-೨ (ಅ.೧೯೪೪), ನವರಾತ್ರಿ-೩ (ಅ.೧೯೪೬), ನವರಾತ್ರಿ-೪ (ಅ.೧೯೪೫), ನವರಾತ್ರಿ-೫ (ಅ.೧೯೪೮), ನಾಲ್ಕು ಸಣ್ಣ ಕತೆಗಳು (ಇ), ಪ್ರಸಂಗ (ಈ.೧೯೪೭), ಪೂಜನ (ಈ.೧೯೫೧), ಬಿನ್ನಹ (ಅ.೧೯೨೨), ಭಾರತತೀರ್ಥ (ಅ.ಟ.೧೯೫೨),ಮನವಿ (ಅ.೧೯೫೧), ಮಲಾರ (ಅ.೧೯೩೩), ಮಂಜುಳಾ (ಆ.೧೯೩೦), ಮೂಕನ ಮಕ್ಕಳು (ಅ.೧೯೪೩), ಯಶೋಧರಾ (ಆ.೧೯೩೩), ರವೀಂದ್ರನಾಥ ಠಾಕೂರರು (ಅ-ಚ.೧೯೪೬), ರಾಮನವಮಿ (ಅ.೧೯೪೧, ವಿಮರ್ಶೆ೧ (ಈ.೧೯೨೫), ವಿಮರ್ಶೆ೨ (ಈ.೧೯೨೯), ವಿಮರ್ಶೆ-೩ (ಈ.೧೯೩೩), ವಿಮರ್ಶೆ-೪ (ಈ.೧೯೪೨), ಶಾಂತಾ (ಆ.೧೯೨೮) ಸಣ್ಣ ಕಥೆಗಳು-೪ (ಇ), ಸಣ್ಣಕಥೆಗಳು-೫ (ಇ), ಸಣ್ಣ ಕಥೆಗಳು-೬ (ಇ.೧೯೪೦), ಸಣ್ಣಕಥೆಗಳು-೭ (ಇ.೧೯೪೭), ಸಣ್ಣಕಥೆಗಳು-೮ (೧೯೪೭), ಸಣ್ಣಕಥೆಗಳು-೯ (ಇ.೧೯೪೯), ಸಣ್ಣಕಥೆಗಳು-೧೦ (ಇ.೧೯೫೦), ಸಾವಿತ್ರಿ (ಆ.೧೯೨೩), ಸಾಹಿತ್ಯ (ಉ.೧೯೨೪), ಸುನೀತ (ಅ.೧೯೪೬), ಸುಬ್ಬಣ್ಣ (ಇ.೧೯೨೮).ಶಿವಛತ್ರಪತಿ (ಆ.೧೯೩೨),ಶ್ರೀರಾಮಕೃಷ್ಣ(ಪ.ಚ.೧೯೩೬) ಸಣ್ಣಕಥೆಗಳು (ಇ.೧೯೨೩)

ಇಂಗ್ಲೀಷ್ : Popular Culture in Karnatak, The Poetry of Valmiki, Short Stories (4vols); Subbanna, Rabindranath Tagore.

ಶ್ರೀನಿವಾಸಮೂರ್ತಿ, ಎಂ.ಆರ್.

ಜ : ೧೮೯೨ ಮ : ೧೯೫೩

ಮೈಸೂರು. ೧೯೧೫ರಲ್ಲಿ ಬಿ.ಎ. ಪಾಸಾಗಿ ಮೈಸೂರು ವಿದ್ಯಾಇಲಾಖೆಯನ್ನು ಸೇರಿದರು. ಕೆಲಕಾಲ ಡಿ.ಪಿ.ಐ. ಕಚೇರಿಯಲ್ಲಿ ಕೆಲಸಮಾಡಿ ಆ ಬಳಿಕ ಅಧ್ಯಾಪಕರಾಗಿಯೂ, ಶಾಲಾ ಇನ್‌ಸ್ಪೆಕ್ಟರರಾಗಿಯೂ ಕಾರ್ಯನಿರ್ವಹಿಸಿ ೧೯೪೭ರಲ್ಲಿ ಸೇವಾನಿವೃತ್ತರಾದರು.

ಮೈಸೂರಿನ ಸ್ಕೌಟ್‌ಸಂಘದ ಮಾಸಪತ್ರಿಕೆಯ ಕನ್ನಡ ವಿಭಾಗದ ಸಂಪಾದಕರು. ವಿದ್ಯಾಇಲಾಖೆಯ ಹಲವು ಸಮಿತಿ-ಉಪಸಮಿತಿಗಳಿಗೆ ಸದಸ್ಯರು, ಅಧ್ಯಕ್ಷರು. ಅನೇಕ ವರ್ಷ ಮೈಸೂರು ಸಂಸ್ಥಾನದ ಹೈಸ್ಕೂಲ್ ಮತ್ತು ನಾರ್ಮಲ್ ಸ್ಕೂಲ್‌ಗಳ ಅಭ್ಯಾಸಕ್ರಮದ ಕನ್ನಡ ವಿಭಾಗದ ಅಧ್ಯಕ್ಷರು. ೧೯೨೦ರಿಂದ ೧೬ ವರ್ಷ ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯಸಮಿತಿಯ ಸದಸ್ಯರೂ ೧೯೩೪ರಲ್ಲಿ ಜರುಗಿದ ವಿಶೇಷ ಸಾಹಿತ್ಯೋತ್ಸವದ ಕಾರ್ಯದರ್ಶಿಗಳೂ ಆಗಿದ್ದರು. 'ಪ್ರಬುದ್ಧ ಕರ್ಣಾಟಕ'ದ (ತ್ರೈಮಾಸಿಕ) ಸಂಪಾದಕ ಮಂಡಲದಲ್ಲಿಯೂ ಕೆಲಕಾಲ ಇದ್ದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್-ಕನ್ನಡ ನಿಘಂಟಿಗೆ (೧೯೨೯ ಜೂನ್‌ನಿಂದ ೧೯೪೩ ಜುಲೈ) ಸಹಸಂಪಾದಕರಾಗಿದ್ದು ಬೆಳ್ಳಾವೆ ವೆಂಕಟನಾರಣಪ್ಪನವರ ಮರಣದನಂತರ ಸಂಪಾದಕ ಮಂಡಲದ ಅಧ್ಯಕ್ಷರೂ, ಪ್ರಧಾನ ಸಂಪಾದಕರೂ ಆಗಿದ್ದರು (೧೯೪೬ ಡಿಸೆಂಬರ್‌ವರೆಗೆ).

ಸ್ವಂತ ವ್ಯಾಸಂಗದಿಂದ ವೀರಶೈವಸಿದ್ಧಾಂತ ಮತ್ತು ಸಾಹಿತ್ಯದಲ್ಲಿ ಇವರು ಗಾಢವಾದ ಪಾಂಡಿತ್ಯವನ್ನು ಸಂಪಾದಿಸಿ, ಅಖಿಲ ಕರ್ನಾಟಕದ ಗೌರವಕ್ಕೆ ಪಾತ್ರರಾಗಿದ್ದರು. ೧೯೪೦ರಲ್ಲಿ ಬಾದಾಮಿಯ ಶಿವಯೋಗ ಮಂದಿರದಿಂದ 'ವಚನವಾಙ್ಮಯ ವಿಶಾರದ' ಎಂಬ ಪ್ರಶಸ್ತಿಯನ್ನು ಪಡೆದಿದ್ದರು. ಕನ್ನಡಸಾಹಿತ್ಯಸಮ್ಮೇಲನದ ೩೩ನೆಯ ಅಧಿವೇಶನದ (ಸೊಲ್ಲಾಪುರ, ೧೯೫೦) ಅಧ್ಯಕ್ಷರು.

ಗ್ರಂಥಗಳು : ಅಯಸ್ಕಾಂತ (ಗ), ಕವಿಯ ಸೋಲು (ಅ), ಕಂಠೀರವ ವಿಜಯ (ಆ.೧೯೨೩), ಧರ್ಮದುರಂತ (ಆ.೧೯೪೭), ನಾಗರಿಕ (ಆ.೧೯೩೦), ಭಕ್ತಿಭಂಡಾರಿ ಬಸವಣ್ಣನವರು (ಪಾ-ಚ), ರಂಗಣ್ಣನ ಕನಸಿನ ದಿನಗಳು (ಇ.೧೯೪೯) ರೂಲ್ಸ್ ಮೇಷ್ಟ್ರು (ಆ.೧೯೪೧), ವಚನಧರ್ಮಸಾರ (ಪಾ-ಟ), ವಿದ್ಯುಚ್ಛಕ್ತಿ (ಗ), ಸಾವಿತ್ರಿ (ಇ.೧೯೪೯) ಸ್ಕ್ಯಾಟು ಕೈಪಿಡಿ (...ಸು), ಹಳ್ಳಿಗಳ ಆರ್ಥಿಕಸ್ಥಿತಿ (ರ)

ಸಂಪಾತಿತ : ಪ್ರಭುಲಿಂಗಲೀಲೆಯ ಸಂಗ್ರಹ (ಎಂ.ಎಸ್.ಬಸವಲಿಂಗಯ್ಯನವರ ಜೊತೆಗೆ)

ಅಪ್ರಕಟಿತ : ಯದುವಿಜಯ, ವೀರಶೈವಸಾಹಿತ್ಯಚರಿತ್ರೆ.

ಶಿವರಾಮದಾಸ, ಕಾರುಪಲ್ಲಿ, ವಿದ್ಯಾನಿಧಿ, ಕೀರ್ತನರತ್ನಾಕರ, ತತ್ತ್ವಭೂಷಣ

ಜ : ೧೦-೬-೧೮೯೩

ಸೇಲಂ ಜಿಲ್ಲೆಯ ಹೊಸೂರು ತಾಲೂಕಿನ ಕಾರುಪಲ್ಲಿ ಎಂಬ ಗ್ರಾಮದವರು. ಹೊಸೂರು ಹಾಗೂ ಬೆಂಗಳೂರಿನಲ್ಲಿ ಶಿಕ್ಷಣವನ್ನು ಪಡೆದು ಕೆಲಮಂಗಲದ ಗ್ರಾಮಾಧಿಕಾರವನ್ನು ವಹಿಸಿಕೊಂಡರು. ಜಮೀನುದಾರರು. ಸುಪ್ರಸಿದ್ಧ ಹರಿಕೀರ್ತನಕಾರರಾಗಿದ್ದು, ಸಂಸ್ಕೃತ, ತೆಲುಗು, ಆಂಗ್ಲ ಇತ್ಯಾದಿ ಭಾಷೆಗಳಲ್ಲಿ ಪ್ರಭುತ್ವವುಳ್ಳವರು.

'ಆನಂದಚಂದ್ರಿಕೆ' (೧೯೧೬-೨೨), 'ರಾಮಕೋಟಿ' (೧೯೨೪-೨೯), ಹಾಗೂ 'ಭಾರತಿ' ಎಂಬ ಮಾಸಪತ್ರಿಕೆಗಳನ್ನು ನಡೆಸಿದರು. ೧೯೪೯ರಲ್ಲಿ ಸ್ವಗ್ರಾಮದಲ್ಲಿ ಗೀತಾಪ್ರಚಾರಮಂಡಲಿಯನ್ನು ಸ್ಥಾಪಿಸಿ ಅದರ ಪರವಾಗಿ 'ಗೀತಾಪ್ರಭಾ' ಎಂಬ ಮಾಸಪತ್ರಿಕೆಯನ್ನು ಸಂಪಾದಿಸುತ್ತಿರುವರು.

ಗ್ರಂಥಗಳು : ಆತ್ಮರಾಮಾಯಣ, ಕನ್ನಡ ವಿಶ್ವಕೋಶ, ಗೋಪೀಚಂದ್ರ ಚರಿತ್ರೆ, ಗ್ರಂಥಾಲಯ ಸರ್ವಸ್ವ, ಜಗನ್ನಾಥಪಂಡಿತರಾಯಚರಿತ್ರೆ, ತುಲಸೀಬಾಯಿ, ಪುರಂದರದಾಸರ ಚರಿತ್ರೆ, ಭದ್ರಾಚಲ ರಾಮದಾಸಚರಿತ್ರೆ, ಯೋಗರಹಸ್ಯ, ರಾಜಕುಮಾರಿ ಯಮುನಾ, ರಾಮರಾಜ್ಯ, ಲಲಿತಾ, ವಿಶ್ವಭಾರತಿ, ಶ್ರೀಕೃಷ್ಣಲೀಲೆ, ಸ್ವತಂತ್ರ ಜೀವನ, ಶ್ರೀ ಸುಜ್ಞಾನಚಂದ್ರೋದಯ, ಸ್ನೇಹಲತಾ, ಹರಿಕಥಾರಾಮಾಯಣ.

ಶಿವಲಿಂಗಪ್ಪ, ಶಿವಯೋಗಪ್ಪ, ಬಸವನಾಳ

ಜ : ೧೮೯೩ ಮ : ೨೨-೧೨-೧೯೫೧

ಧಾರವಾಡ. ಗದಗಿನಲ್ಲಿ ಹೈಸ್ಕೂಲು ವಿದ್ಯಾಭ್ಯಾಸವನ್ನೂ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಉಚ್ಚಶಿಕ್ಷಣವನ್ನೂ ಪೂರೈಸಿ ೧೯೧೫ರಲ್ಲಿ ಎಂ.ಎ. ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ಪಾಸಾದರು. ವೀರಶೈವ ಸಮಾಜದಲ್ಲಿ ಪ್ರಥಮ ಸ್ನಾತಕೋತ್ತರ ಪದವೀಧರರೆಂಬ ಮನ್ನಣೆಯನ್ನೂ, ಎಂ.ಆರ್.ಸಾಖರೆಯವರ ಜೊತೆಯಲ್ಲಿ ವಿಕ್ಟೋರಿಯಾ ಜುಬಿಲಿ ನಿಧಿಯ ಪಾರಿತೋಷಕವನ್ನೂ ಪಡೆದರು. ಮರುವರ್ಷ ಹಲವು ಸ್ನೇಹಿತರ ನೆರವಿನಿಂದ ಬೆಳಗಾವಿಯಲ್ಲಿ 'ಗಿಲಗಂಚಿ ಅರ್ಟಾಳ ಹೈಸ್ಕೂಲ್' ಎಂಬ ಸ್ವತಂತ್ರ ವಿದ್ಯಾಸಂಸ್ಥೆ ಸ್ಥಾಪಿಸಿದರು. ೧೯೨೨ರಲ್ಲಿ ಧಾರವಾಡದಲ್ಲಿ ರಾಜಾ ಲಖಮನಗೌಡಾ ಸರದೇಸಾಯಿ ಹೈಸ್ಕೂಲು ಸ್ಥಾಪಿತವಾದಾಗ ಇವರು ಮುಖ್ಯಾಧ್ಯಾಪಕರಾಗಿ ಅಲ್ಲಿಗೆ ಹೋದರು. ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜು ಪ್ರಾರಂಭವಾದಾಗ ಇವರು ಮತ್ತೆ ಬೆಳಗಾವಿಗೆ ಬಂದು ಅಲ್ಲಿ ಪ್ರಾಧ್ಯಾಪಕರಾದರು. ಹಾಗೂ ಕೆ.ಎಲ್.ಇ. ಸೊಸಾಯಿಟಿಯ ಮುಖ್ಯಕಾರ್ಯದರ್ಶಿಯಾಗಿಯೂ, ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿಯೂ ಕಾರ್ಯವನ್ನು ನಿರ್ವಹಿಸಿದರು. ವೀರಶೈವ ತರುಣ ಸಂಘದ ಸಂಸ್ಥಾಪಕರಲ್ಲೊಬ್ಬರೂ, ಅದರ ಪರವಾಗಿ ಹೊರಟ 'ಪ್ರಬೋಧ' ಎಂಬ ಮಾಸಪತ್ರಿಕೆಗೆ ಎಚ್.ಎಫ್.ಕಟ್ಟೀಮನಿಯವರೊಂದಿಗೆ ಸಂಪಾದಕರೂ ಆಗಿದ್ದರು.

ಕೆಲಕಾಲ ಮುಂಬಯಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಕರು; ಮುಂಬಯಿ ಸರಕಾರದಿಂದ ೧೯೪೮ರಲ್ಲಿ ನಿಯಮಕವಾದ ಕರ್ನಾಟಕ ವಿಶ್ವವಿದ್ಯಾನಿಲಯ ಸಮಿತಿಯ ಸಭಾಸದರಾಗಿದ್ದು ಅದರ ಸಂಸ್ಥಾಪನೆಯನಂತರ ಸಿನೇಟ್ ಸಿಂಡಿಕೇಟ್ ಎಕೆಡೆಮಿಕ್ ಕೌನ್ಸಿಲ್ ಇತ್ಯಾದಿ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿ ಅದರ ಅಭಿವೃದ್ಧಿಗಾಗಿ ವಿಶೇಷವಾಗಿ ಶ್ರಮಿಸಿದರು. ವೀರಶೈವ ವಿದ್ಯಾವರ್ಧಕ ಸಂಘದ ಹುಟ್ಟು-ಬೆಳವಣಿಗೆಗಾಗಿ ದುಡಿದವರಲ್ಲಿ ಇವರು ಪ್ರಮುಖರು. ಬೆಳಗಾವಿಯಲ್ಲಿ ಸಹಕಾರಿ ಸಂಘಗಳ ಆಡಳಿತೆಯ ಶಿಕ್ಷಣಕ್ಕಾಗಿ ಸ್ಥಾಪಿತವಾದ ವಿದ್ಯಾಲಯದ ಸಂಚಾಲಕರಾಗಿದ್ದರು. ಅನೇಕ ವರ್ಷ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷರು; ಕನ್ನಡ ಸಾಹಿತ್ಯ ಸಮ್ಮೇಲನದ ೩೪ನೇ ಅಧಿವೇಶನದ ಅಧ್ಯಕ್ಷರು (ರಬಕವಿ, ೧೯೪೪), ವೀರಶೈವ ತರುಣ ಸಂಘಗಳ ಸಮ್ಮೇಲನ (ಸಿದ್ಧಗಂಗಾ, ೧೯೨೭) ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆ ೧೩ನೆಯ ಅಧಿವೇಶನ (ಹುಬ್ಬಳ್ಳಿ, ೧೯೩೮)ದ ಅಧ್ಯಕ್ಷರಾಗಿದ್ದರು. 'ಜಯಕರ್ನಾಟಕ (ಧಾರವಾಡ), ಮಾಸಪತ್ರಿಕೆ ಹಾಗೂ ವಾರಪತ್ರಿಕೆಗಳಿಗೆ ಕೆಲಕಾಲ ಸಂಪಾದಕರಾಗಿದ್ದರು.

ಗ್ರಂಥಗಳು : ಪರಿಷ್ಕೃತ : ಕರ್ನಾಟಕ ಕಾವ್ಯಾವಲೋಕನಂ (ನಾಗವರ್ಮಕವಿಕೃತ), ಕರ್ನಾಟಕ ಶಬ್ದಾನುಶಾಸನಪ್ರಕಾಶಿಕೆ (ಭಟ್ಟಾಕಳಂಕಕೃತ), ಕೈವಲ್ಯಕಲ್ಪವಲ್ಲರಿ (ನಿಜಗುಣಶಿವಯೋಗಿಕೃತ), ಕೈವಲ್ಯದರ್ಪಣ (ನಿಜಗುಣಶಿವಯೋಗಿಕೃತ),

ಚನ್ನಬಸವಪುರಾಣಂ (ವಿರೂಪಾಕ್ಷಪಂಡಿತಕೃತ), ಪ್ರಭುಲಿಂಗಲೀಲೆ, (ಚಾಮರಸಕವಿಕೃತ), ಬಸವಣ್ಣನವರ ವಚನಗಳು, ಬಸವಲಿಂಗಶರಣರ ಕೃತಿಗಳು, ವೀರಶೈವತತ್ತ್ವಪ್ರಕಾಶನ (ಸಂಕಲನ), ಶಬರಶಂಕರವಿಲಾಸ (ಷಡಕ್ಷರಿಕವಿಕೃತ), ಶಿವತತ್ವ ಪ್ರಕಾಶನ.

ಇಂಗ್ಲೀಷ್ : Musings of Basava (ಕೆ.ಆರ್.ಶ್ರೀನಿವಾಸ ಅಯ್ಯಂಗಾರ್ ಅವರೊಂದಿಗೆ)

ಹನುಮಾನದಾಸ, ಸ್ವಾಮಿರಾಯದಾಸ, ಕದರಮಂಡಲಗಿ

ಜ : ೧೮೯೩ ಮ : (?)

ಮೂಲತಃ ಧಾರವಾಡ ಜಿಲ್ಲೆಯವರಾದ ಇವರು ಬಹುಕಾಲ ಮೈಸೂರು ಪ್ರಾಂತದಲ್ಲಿ ನೆಲೆಸಿದ್ದರು. ಬೆಂಗಳೂರಿನ ವೆಸ್ಲಿಯನ್ ಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವಾಯಿತು. ೧೯೧೨ರಲ್ಲಿ 'ಮಧುರವಾಣಿ' ಎಂಬ ಪ್ರಸಿದ್ಧ ಮಾಸಪತ್ರಿಕೆಯನ್ನು ಹೊರಡಿಸಿದರು. ಕನ್ನಡ ಸಾಹಿತ್ಯಪರಿಷತ್ತಿನ ಪ್ರಾರಂಭದ ಸಮಯದಲ್ಲಿ ಕಾರ್ಯ ಸಮಿತಿಯ ಸದಸ್ಯರಾಗಿದ್ದರು (೧೯೧೫).

ಗ್ರಂಥಗಳು : ಕರ್ಣಾಟಕ ಪತ್ರಿಕೆಗಳು, ಗಜೇಂದ್ರಸಿಂಹ, ನಾನಕನ ಚರಿತ್ರೆ, ಸಲೀಮಬೇಗಂ ಸಾಹಸಿಕೆ (Conon Doyle ಅವರ ಒಂದು ಕಾದಂಬರಿಯ ಅನುವಾದ - ಆರ್. ಶ್ರೀನಿವಾಸರಾಯರೊಂದಿಗೆ)

ಪದ್ಮನಾಭಮಹಾರಾಜ, ತಾಳೀಕೋಟೆ

ಮ: ಸು.೧೮೯೫

ತಾಳೀಕೋಟೆಯ ಅರಸುಮನೆತನದವರಾಗಿದ್ದ ಇವರು ಕೊನೆಗೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು.

ಗ್ರಂಥಗಳು : ದಾಸಬೋಧ (ಪ.೧೮೯೫), ನಿಗಮಸಾರಾಮೃತ (ಪ.೧೮೯೫).

ಅಚ್ಯುತ, ಕೃಷ್ಣ, ಹುಯಿಲಗೋಳ

ಜ : ೮-೮-೧೮೯೫

ಧಾರವಾಡ ಜಿಲ್ಲೆಯ ಗದಗ. ಪ್ರಾಥಮಿಕ ಶಿಕ್ಷಣ ಮುಗಿಯುವಷ್ಟರಲ್ಲಿ ವಂಗಭಂಗದ ಆಂದೋಲನವು ಪ್ರಾರಂಭವಾಗಿ, ಇವರ ಮುಂದಿನ ವಿದ್ಯಾಭ್ಯಾಸಕ್ಕೆ ವ್ಯತ್ಯಯವನ್ನುಂಟುಮಾಡಿತು. ದಿವಂಗತ ವೆಂ.ತಿ.ಕುಲಕರ್ಣಿಯವರ (ಗಳಗನಾಥ)ರ ಬಳಿಯಲ್ಲಿ ಕೆಲಕಾಲ ಲೇಖನಕಲಾಸಾಧನೆ ಮಾಡುತ್ತ, ಅದರೊಂದಿಗೆ ಸ್ವಂತ ಪರಿಶ್ರಮದಿಂದ ಇಂಗ್ಲೀಷು ಅಭ್ಯಾಸಮಾಡಿದರು. ಕ್ರಿ.ಶ.೧೯೦೫ರಲ್ಲಿ ವೆಂಕಣ್ಣಾಚಾರ್ಯ ಗುಡಿ ಅವರಿಂದ ಗದಗಿನಲ್ಲಿ ಸ್ಥಾಪಿತವಾದ ಇಂಗ್ಲೀಷು-ವ್ಹರ್ನ್ಯಾಕುಲ್ಯರ ಶಾಲೆಯಲ್ಲಿ ಗೌರವ ಶಿಕಕರಾಗಿ ೧೯೧೫ರ ವರೆಗೆ ಕೆಲಸ ಮಾಡಿದರು. ರಾಜಕೀಯ ಕಾರಣಗಳಿಗಾಗಿ ಈ

ಸಂಸ್ಥೆಯು ಮೂಲೆಗುಂಪಾದೊಡನೆ ಇವರು ಸ್ವತಂತ್ರ ರೀತಿಯಲ್ಲಿ ಧರ್ಮಾರ್ಥ ವಿದ್ಯಾದಾನ ಪ್ರಾರಂಭಿಸಿದರು. ಜಹಗೀರದಾರ ಮನೆತನವರು; ಪ್ರಸಿದ್ಧ ನಾಟಕಕಾರರಾದ ಹುಯಿಲಗೋಳ ನಾರಾಯಣರಾಯರ ಬಂಧುಗಳು.

ಗ್ರಂಥಗಳು : ಅಕ್ಕಮಹಾದೇವಿ (ಆ. ೧೯೩೨), ಅಚಲಪದ (ಆ. ೧೯೩೪), ಗೀತಾ ಪ್ರತಿಪದಾರ್ಥ ಚಂದ್ರಿಕೆ (ಸತ್ಯಧ್ಯಾನತೀರ್ಥಕೃತ ಸಂಸ್ಕೃತ ಗ್ರಂಥದ ಭಾಷಾಂತರ), (ನ. ೧೯೪೯), ಗುಣಶೋಧನ (ಆ. ೧೯೧೪), ನರಗುಂದ ಮುತ್ತಿಗೆ (ಆ. ೧೯೩೦), ಪ್ರೇಮಪತಾಕಾ (ಆ. ೧೯೪೨), ಬ್ರಹ್ಮಕುಮಾರಿ (ಆ. ೧೯೪೭), ಮಹಾರಥಿ ಕರ್ಣ (ಆ. ೧೯೪೮), ಮಹಾರಥಿ ಭೀಷ್ಮ (ಆ. ೧೯೩೩), ವೈಕುಂಠಕ್ಕೆ ಮುತ್ತಿಗೆ★ (ಆ. ೧೯೪೪), ಶ್ರೀಕೃಷ್ಣಗೀತಾಮೃತ (ಆ. ೧೯೫೦), ಸಂಭಾಜಿಯ ಚರಿತ್ರೆ★ (ಮ.ಚ-.೧೯೧೩), ಸ್ವಾತಂತ್ರ್ಯಸಂಗ್ರಾಮ (ಆ. ೧೯೩೦), ಸೈರಂಧ್ರಿ (ಆ. ೧೯೧೩).

ಕೃಷ್ಣರಾವ್, ವೆಂಕಟೇಶ, ಕುಲಕರ್ಣಿ

ಜ : ಸು.೧೮೯೫

ಧಾರವಾಡ. ಬಿ.ಎ. ಪದವೀಧರರಾಗಿ ಧಾರವಾಡ ಕರ್ನಾಟಕ ಹೈಸ್ಕೂಲಿನಲ್ಲಿ ಅಧ್ಯಾಪನವೃತ್ತಿಯನ್ನು ಸ್ವೀಕರಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾಗಿ ಕೆಲವು ವರ್ಷ ಕೆಲಸಮಾಡಿದರು.

ಗ್ರಂಥಗಳು : ತರುಣ ರಜಪೂತ ಸರದಾರನು (ಇ.೧೯೧೭), ದಿ.ಬ.ಶ್ರೀನಿವಾಸರಾವ್ ರೊದ್ದ ಈ ಮಹನೀಯರ ಚರಿತ್ರೆಯು (ಬ.ಚ.೧೯೨೫).

ಬಾಳಕೃಷ್ಣ, ದೇವಣಭಟ್ಟ, ಜೋಶಿ

ಜ : ೧೮೯೫ ಮ : ೧೯೪೬

ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ. ೧೯೧೪ರಲ್ಲಿ ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರು ವರ್ಷದ ವ್ಯಾಸಂಗವನ್ನು ಮುಗಿಸಿ ಬೆಳಗಾವಿ ಜಿಲ್ಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ, ಬೈಲಹೊಂಗಲ, ಗುರ್ಲಹೊಸೂರ, ಹಿರೇ ಬಾಗೇವಾಡಿ ಮೊದಲಾದ ಕಡೆಗಳಲ್ಲಿ ಕೆಲಸ ಮಾಡಿದರು.

ಗ್ರಂಥಗಳು : ಅನುಕರಣೀಯ ವಿದ್ಯಾರ್ಥಿ, ಕೈವಲ್ಯಸ್ವಾಮಿಗಳ ಚರಿತ್ರೆ (ಧ-ಚ.೧೯೩೯), ದ್ರೋಣಾಚಾರ್ಯ (ಇ).

ಭೀಮಾಜಿ, ಜೀವಾಜಿ, ಹುಲಿಕವಿ

ಜ : ೧೮೯೫

ಬೆಳಗಾವಿ ಜಿಲ್ಲೆಯ ದೇವರಶೀಗೇಹಳ್ಳಿ. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ

★ಕನ್ನಡ ಗ್ರಂಥಗಳೆಲ್ಲವೂ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನ ಪಡೆದ ಗ್ರಂಥಗಳು.

ಮೂರು ವರ್ಷದ ವ್ಯಾಸಂಗವನ್ನು ಪೂರ್ತಿಗೊಳಿಸಿದರು. ಅನಂತರ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮುಂಬಯಿ ಸರಕಾರದ ವಿದ್ಯಾ ಇಲಾಖೆಯನ್ನು ಸೇರಿದರು. ಧಾರವಾಡ, ಬೆಳಗಾವಿ ಮುಂತಾದ ಕಡೆಗೆ ಹೈಸ್ಕೂಲ್ ಅಧ್ಯಾಪಕರಾಗಿದ್ದರು. ಅದೇ ಸಮಯದಲ್ಲಿ ಸ್ವತಂತ್ರವಾಗಿ ಓದಿಕೊಂಡು ಬಿ.ಎ. ಪದವಿಯನ್ನೂ ಪಡೆದರು.

'ಶಾರದೆಯ ಮುತ್ತಿನ ಸರ' ಎಂಬ ಗ್ರಂಥಮಾಲೆಯ ಸಂಚಾಲಕರಾಗಿದ್ದರು (೧೯೨೯).

ಗ್ರಂಥಗಳು : ಅತ್ತೆಯ ಮನೆಯ ಕಾಟ ಅಥವಾ ಸುಶೀಲಾ-ವಸಂತರ ದುರ್ದೈವ (ಇ), ಕಥಾಪಂಚಕ (ಇ), ಕರ್ನಾಟಕ ಸ್ವಪ್ನವಾಸವದತ್ತೆ (ಆ. ೧೯೨೫), ದುಷ್ಕರ್ಮ ಪರಿಪಾಕ ಅಥವಾ ಉನ್ಮಾದಿನಿಯಾದ ಮೋಹಿನಿ (ಇ), ದೇವನಂದಿನಿ, ನನ್ನ ಕನಸು, ನರಗುಂದ ಬಂಡಾಯ (ಇ. ೧೯೩೦), ಪತಿತಪರಾವರ್ತನ (ಇ. ೧೯೨೦), ಪದ್ಮಾವತಿ, ಪ್ರೇಮಮಂದಿರ (ಇ. ೧೯೧೯), ಯಶೋಮತಿ, ಶ್ರೀಕೃಷ್ಣನಾಮಾಮೃತ (ಧ-ಚ.೧೯೨೮), ಶ್ರೀವಿದ್ಯಾರಣ್ಯ ಸ್ವಾಮಿಗಳು (ಮ-ಚ. ೧೯೨೨), ಶ್ರೀವಿಷ್ಣು ಸಹಸ್ರನಾಮಮೀಮಾಂಸೆ, ಶ್ರೇಯಃಸಾಧನ (ಇ. ೧೯೨೦), ಶುದ್ಧಿಸಂಘಟನೆ, ಹತಭಾಗಿನಿಯಾದ ವಿಮಲೆ (ಇ. ೧೯೨೪)

ಶಂಕರ, ಬಾಳದೀಕ್ಷಿತ, ಜೋಶಿ

ಜ : ೪-೧-೧೮೯೬

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಗುರ್ಲಹೊಸೂರು. ಧಾರವಾಡ ಶಿಕ್ಷಣಮಹಾವಿದ್ಯಾಲಯದಲ್ಲಿ ವ್ಯಾಸಂಗವನ್ನು ಪೂರ್ತಿಗೊಳಿಸಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಕೆಲಕಾಲ ಉಪಾಧ್ಯಾಯರಾಗಿದ್ದರು. ಮುಂದೆ ಅಸಹಕಾರ ಚಳುವಳಿಯಲ್ಲಿ ಸೇರಿ ಸೇವಾವೃತ್ತಿಯಿಂದ ಮುಕ್ತರಾಗಿ, ಪತ್ರಿಕಾವ್ಯವಸಾಯವನ್ನವಲಂಬಿಸಿ, 'ಕರ್ಮವೀರ' (ಧಾರವಾಡ), 'ಜಯಕರ್ನಾಟಕ' (ಧಾರವಾಡ) ಪತ್ರಿಕೆಗಳ ಸಂಪಾದಕ ಮಂಡಲದಲ್ಲಿ ಕೆಲವು ಸಮಯ ಕೆಲಸಮಾಡಿದರು. ಬಳಿಕ ಮತ್ತೆ ಅಧ್ಯಾಪಕರಾಗಿ, ರಾಷ್ಟ್ರೀಯ ಶಿಕ್ಷಣಾಲಯ, ಕರ್ನಾಟಕ ಹಾಗೂ ವಿಕ್ಟೋರಿಯಾ ಹೈಸ್ಕೂಲುಗಳಲ್ಲಿದ್ದು ನಿವೃತ್ತರಾದರು. ಭಾಷಾ-ಸಂಸ್ಕೃತಿಯ ಸಂಶೋಧನೆಯಲ್ಲಿ ತುಂಬ ಶ್ರಮಿಸಿದವರು.

ಗ್ರಂಥಗಳು : ಅರವಿಂದಚರಿತ್ರೆ (ಪ-ಚ.೧೯೨೦), ಉಪನಿಷದ್ರಹಸ್ಯ (ಪ್ರೊ.ಆರ್.ಡಿ. ರಾನಡೆಯವರ ಇಂಗ್ಲೀಷ್ ಗ್ರಂಥದ ಭಾಷಾಂತರ-ವೆಂಭೀ.ಆಲೂರ,ರಂ.ರಾ.ದಿವಾಕರ ಅವರೊಂದಿಗೆ; ನ), ಎಡೆಗಳು ಹೇಳುವ ಕಥೆಗಳು, ಎದ್ದೇಳು ಕನ್ನಡಿಗಾ (ಈ. ೧೯೪೨), ಕಣ್ಮರೆಯಾದ ಕನ್ನಡ (ಮ. ೧೯೩೩), ಕರ್ಣನ ಮೂರು ಚಿತ್ರಗಳು, ಕನ್ನಡದ ನೆಲೆ, ಕರ್ನಾಟಕದ ವೀರ ಕ್ಷತ್ರಿಯರು (ಮ. ೧೯೩೬), ಕಂನಾಡ ಕಥೆ (ಮ. ೧೯೪೭), ಕಂನುಡಿಯ ಜೀವಾಳ (ದ.೧೯೪೪), ಕಂನುಡಿಯ ಹುಟ್ಟು (ದ.೧೯೩೭) ಟಿಳಕ ಕಥಾಮೃತಸಾರ (ಯ-ಚ. ೧೯೩೦), ದಾರಿಯ ಬುತ್ತಿ (ಊ.೧೯೪೨), ಪುರುಷಾರ್ಥ

ಬೋಧಿನಿ (ಪ. ೧೯೪೫), ಮಹಾರಾಷ್ಟ್ರದ ಮೂಲ, ಯಕ್ಷಪ್ರಶ್ನೆ ಅಥವಾ ಬರಲಿರುವ ಸಮಾಜ (ಈ. ೧೯೪೮), ಶಿವರಹಸ್ಯ, ಸಮಾಜದರ್ಶನ.

ನಾರಾಯಣ, ಕೃಷ್ಣ, ಹಂಪೀಹೊಳಿ, ಬಿ.ಎ.

ಜ : ೧೮೯೭

ಸವದತ್ತಿ ತಾಲೂಕಿನ ಸಿರಸಂಗಿ. ಧಾರವಾಡದ ರಾಜಾ ಲಖಮನಗೌಡಾ ಸರದೇಸಾಯಿ ಹೈಸ್ಕೂಲಿನಲ್ಲಿ ಅಧ್ಯಾಪಕರು. ಸಂಗೀತ-ನಾಟಕಗಳಲ್ಲಿ ವಿಶೇಷವಾದ ಅಭಿರುಚಿ.

ಗ್ರಂಥಗಳು : ಕೌಮುದಿ* (ಆ.೧೯೨೬), ಗಜರಾ* (ಆ.೧೯೧೮).

ಅಪ್ರಕಟಿತ : ಮಲ್ಹಾರರಾವ

ದಾಮೋದರ, ಸದಾಶಿವ, ದೇಶಪಾಂಡೆ

ಜ : ೧೮೯೭ ಮ : ೨೯-೬-೧೯೧೯

ಗೋಕಾಕ ತಾಲೂಕಿನ ಮದವಾಲ. ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ, ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ವರ್ಗದಲ್ಲಿದ್ದಾಗ ವಿಷಮಜ್ವರದಿಂದ ಮರಣಹೊಂದಿದರು. ಮದವಾಲದ ಬಲಭೀಮ ವಾಚನಾಲಯು ಮತ್ತು ಗ್ರಂಥಮಾಲೆಯ ಸಂಸ್ಥಾಪಕರು, ಸಂಪಾದಕರು. 'ಜ್ಞಾನಾಂಜನ' ಮಾಸಪತ್ರಿಕೆಯ (ಬೆಳಗಾವಿ, ೧೯೧೮), ಉಪಸಂಪಾದಕರಾಗಿದ್ದರು.

ಗ್ರಂಥಗಳು : ಆತ್ಮೋದ್ಧಾರ (ಇ), ಸತೀಧರ್ಮ (ಇ. ೧೯೧೯), ಸಮಾಜರಹಸ್ಯ (ಇ. ೧೯೧೮), ಸಂಗೀತ ರಾಕ್ಷಸೀ ಮಹತ್ವಾಕಾಂಕ್ಷೆ (ಆ), ಸಾಮಾಜಿಕ ಸಾವಿತ್ರಿ (ಇ. ೧೯೧೭)

ತುಳಸೀಬಾಯಿ, ಸುಬ್ಬರಾವ್ ಬಳ್ಳಾರಿ

ಜ : ೧೮೯೮ ಮ : ೧೯೧೮

ಮೈಸೂರು. ಎಂ.ಎನ್. ಶ್ರೀನಿವಾಸರಾಯ ಹಾಗೂ ಎಂ.ಎನ್.ಗೋಪಾಲರಾಯರ ಭಗಿನಿ. ತಕ್ಕಮಟ್ಟಿಗೆ ವಿದ್ಯಾಭ್ಯಾಸವಾಗಿತ್ತು. ಆದರೂ ಚಿಕ್ಕಂದಿನಿಂದ ಕವಿತಾರಚನೆಯಲ್ಲಿ ಇವರಿಗೆ ಆಸ್ಥೆ ಇತ್ತು. 'ಮಲ್ಲಿಕಾ' ಎಂಬುದು ಇವರ ಕಾವ್ಯನಾಮ. ಚಿಕ್ಕವಯಸ್ಸಿನಲ್ಲಿ ಕ್ಷಯರೋಗದಿಂದ ಮರಣಹೊಂದಿದರು.

ಗ್ರಂಥಗಳು : ಕಾಳಗೌಡ (ಅ. ೧೯೧೯), ರಂಗಸೆಟ್ಟಿ (ಅ).

---

*ಮದ್ರಸ್ 'ಸುಗುಣವಿಲಾಸ' ಸಭೆಯಿಂದ ಬಹುಮಾನ ಪಡೆದಿದೆ.

ಗೋವಿಂದ, ಹಣಮಂತ, ಹೊಸೂರ

ಜ : ೧-೬-೧೮೯೯

ಗದಗ ತಾಲೂಕಿನ ಮುಳಗುಂದ. ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರು ವರ್ಷ ವ್ಯಾಸಂಗ ಪೂರ್ತಿಗೊಳಿಸಿ ಧಾರವಾಡ ಜಿಲ್ಲೆಯಲ್ಲಿ ಉಪಾಧ್ಯಾಯರಾದರು. ಕಣ್ವಸಂಘದ ಸಂಸ್ಥಾಪಕರೂ, ಅಗಡಿಯ ಶೇಷಾಚಲ ಸಂಸ್ಥೆಯ ಕಾರ್ಯಕರ್ತರೂ ಆಗಿದ್ದರು. ಕಲಕತ್ತೆಯ ನಿಖಿಲ ಭಾರತ ಸಾಹಿತ್ಯಸಂಘದವರಿಂದ 'ಕರ್ನಾಟಕ ವಿದ್ಯಾವಿನೋದಿ' ಎಂಬ ಪ್ರಶಸ್ತಿ ಪಡೆದವರು.

ಗ್ರಂಥಗಳು : ಕಣ್ವಮಠಚರಿತಾಮೃತ, ಕರ್ನಾಟಕಭೂಮಾತಾ (ಇ. ೧೯೪೮), ಕರ್ಮಯೋಗಿ (ಇ. ೧೯೨೪),ಕೇವಲ ಮಾತೃಭೂಮಿಗಾಗಿ (ಇ), ಗೃಹಲಕ್ಷ್ಮೀ (ಇ. ೧೯೨೦), ಭಾರತೀಯ ಶ್ರೇಷ್ಠತ್ವ (ಈ), ಮಹಾರಾಣಾ ಪ್ರತಾಪಸಿಂಹ (ಮ-ಚ), ಮಿತ್ರದುಃಖ. ಮುರುಘಾರಾಜೇಂದ್ರವಿಜಯ (ಧ-ಚ.೧೯೪೮), ರಾಷ್ಟ್ರಧ್ವಜ (ಈ. ೧೯೪೮), ರಾಕ್ಷಸೀ ಸರಕಾರ (ಯ. ೧೯೨೪), ವಿಂಧ್ಯಾಚಲ (ಇ. ೧೯೨೩), ಶ್ರೀರಾಮಹೃದಯ, ಸ್ವರ್ಗಸುಂದರಿ, ಸ್ವರಾಜ್ಯವಿಯೋಗ.

ಲಕ್ಷ್ಮೀನಾರಾಯಣ, ಪುಣಿಂಚತ್ತಾಯ

ಜ : ೧೭-೪-೧೮೯೯ ಮ : ೬-೫-೧೯೫೧

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕಿಗೆ ಸೇರಿದ ಪುಂಡೂರು. ಕಾಸರಗೋಡು ಬೋರ್ಡು ಶಾಲೆಯಲ್ಲಿಯೂ, ಅನಂತರ ಮಂಗಳೂರು ಸರಕಾರೀ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸ. ಇಂಟರ್‌ಮೀಡಿಯೆಟ್‌ವರೆಗೆ ಕಲಿತು, ಅಸಹಕಾರ ಚಳುವಳಿಯ ಕಾರಣದಿಂದ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟುಕೊಟ್ಟರು. ಪ್ರಸಿದ್ಧ ಜಮೀನುದಾರ ಮನೆತನಕ್ಕೆ ಸೇರಿದ ಇವರು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಕಾರ್ಯಕ್ರಮದ ಪ್ರಚಾರಕ್ಕೆ ತುಂಬ ನೆರವಾದರು. ಶ್ರೇಷ್ಠ ವಾಗ್ಮಿಯಾದ ಇವರ ಸುಂದರ ಇಂಗ್ಲೀಷ್ ಹಸ್ತಾಕ್ಷರಕ್ಕಾಗಿ ಅನೇಕ ಬಹುಮಾನ-ಪ್ರಶಸ್ತಿಗಳು ದೊರೆತಿದ್ದವು. ಮಲೆಯಾಳ ಭಾಷೆಯಲ್ಲಿಯೂ ವಿಶೇಷ ಪರಿಜ್ಞಾನವುಳ್ಳವರು. ಕನ್ನಡದಲ್ಲಿ ರಾಷ್ಟ್ರೀಯಗೀತೆಗಳನ್ನು ರಚಿಸಿ ಪ್ರಚುರಗೊಳಿಸಿದವರಲ್ಲಿ ಆದ್ಯರೂ ಪ್ರಮುಖರೂ ಆಗಿದ್ದರು.

ಗ್ರಂಥಗಳು : ಕೋದಂಡರಾಮವಿಜಯ (ಆ), ಗಾಂಧೀವಿಜಯ (ಅ. ೧೯೨೦), ಚರಖಗೀತೆ (ಅ), ತಿಲಕಕಾವ್ಯಾಂಜಲಿ (ಅ. ೧೯೨೧), ಧ್ವಜಗೀತೆ (ಅ), ಬಾಲಗಂಗಾಧರಸ್ತವ(ಅ. ೧೯೨೦), ಭರತಜನ್ಮ (ಆ. ೧೯೨೭), ಮಹಾಕರ್ಣಾಟಗಾನ (ಅ), ರಂಜನಗೀತೆ (ಅ. ೧೯೨೭), ರಾಷ್ಟ್ರಗೀತಾರತ್ನಾಕರ (ಅ. ೧೯೨೪), ಲೀಲೆ (ಅ. ೧೯೨೪), ಸ್ವರಾಜ್ಯಗೀತಾಮೃತ (ಅ. ೧೯೪೭), ಸ್ವರಾಜ್ಯಭಕ್ತೋಲ್ಲಾಸ. ಸ್ವಾತಂತ್ರ್ಯೋತ್ಸವದ ಕಾಣಿಕೆ (ಅ. ೧೯೪೭), ಹರಿಜನಸಂಧಾನ (ಅ. ೧೯೩೪).

ಶೀನಪ್ಪ, ಹೆಗಡೆ, ನಂದಳಿಕೆ

ಜ : ೧೫-೭-೧೮೯೯

ಕಾರ್ಕಳ ತಾಲೂಕಿನ ನಂದಳಿಕೆ. ಸ್ವಗ್ರಾಮದಲ್ಲಿಯೇ ವಿದ್ಯಾಭ್ಯಾಸ. ಭೂಮಾಲಿಕರು. ಕಾಂಗ್ರೆಸ್ ಕಾರ್ಯಕರ್ತರು. ದಕ್ಷಿಣಕನ್ನಡ ಜಿಲ್ಲಾ ಗ್ರಾಮಸೇವಕ ಸಂಘದ ಕೆಲಸಗಾರರಲ್ಲೊಬ್ಬರು. ರಾಷ್ಟ್ರೀಯ ಆಂದೋಲನದಲ್ಲಿ ಎರಡು ಬಾರಿ ಕಾರಾಗೃಹ ವಾಸವನ್ನನುಭವಿಸಿದವರು.

ಗ್ರಂಥಗಳು : ತುಳುವಾಲ ಬಲಿಯೇಂದ್ರಮಿತ್ಯನಾರಾಯಣ ಕಥೆ (ಇ. ೧೯೩೫), ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ ಅಥವಾ ಭೂತಾಳ ಪಾಂಡ್ಯರಾಯನ ಅಳಿಯಸಂತಾನದ ಕಟ್ಟು. ಬಂಗಾರ್ದಂಗಿಯ ಕಥೆ (ಇ. ೧೯೩೦), ಪುಳಿನಾಪುರಮಹಾತ್ಮ್ಯೆ (ಮ. ೧೯೪೯), ಶ್ರೀನಿವಾಸಲಿಪಿ (ದ. ೧೯೨೦).

ವೆಂಕಟರಮಣಯ್ಯ, ಎಣ್ಣೆಮಡಿ

ಜ: (?) ಮ : ಸು. ೧೯೦೦

ಉತ್ತರ ಕನ್ನಡ ಜಿಲ್ಲೆಯ ಕುಮಟಾ. ಆ ಜಿಲ್ಲೆಯ ಶಿರಾವಿ ಮೊದಲಾದ ಊರುಗಳಲ್ಲಿ ಉಪಾಧ್ಯಾಯರಾಗಿ ಕೆಲಸಮಾಡಿದರು.

ಗ್ರಂಥಗಳು : ದೇವೀಮಹಾತ್ಮ್ಯೆ (ಅ), ರುಕ್ಮಿಣೀಸ್ವಯಂವರ (ಅ).

ಶಾಂತವೀರ, ರಾಚಿದೇವ, ಕಿತ್ತೂರ

ಜ :(?) ಮ :ಸು.೧೯೦೦

ಬೆಳಗಾವಿ. ಗಂಗಾಧರ ಮಡಿವಾಳೇಶ್ವರ ತುರಮರಿಯವರ ಸಮಕಾಲೀನರಾಗಿದ್ದ ಇವರು ಹಳಗನ್ನಡ ವ್ಯಾಸಂಗದಿಂದ ಕಾವ್ಯಪ್ರೌಢಿಮೆಯನ್ನು ಸಂಪಾದಿಸಿದ್ದರು. ಬೆಳಗಾವಿಯಲ್ಲಿ ಹೈಸ್ಕೂಲಿನಲ್ಲಿಯೂ ಆನಂತರ 'ನಾರ್ಮಲ್ ಸ್ಕೂಲ್'ನಲ್ಲಿಯೂ ಕನ್ನಡ ಪಂಡಿತರಾಗಿ ಕೆಲಸಮಾಡಿದರು.

ಗ್ರಂಥ : ರಾಜಶೇಖರವಿಳಾಸ (ಕೆಲವು ಆಶ್ವಾಸನದ ಟೀಕೆ) (ಷಡಕ್ಷರಿಕವಿಕೃತ; ೧೮೭೨)

ಸಕ್ಕರಿನಾಯಿಕ, ಮಲ್ಲಿನಾಯಿಕ, ಇಂಚಲ

ಜ : (?) ಮ : ಸು. ೧೯೦೦

ಸವದತ್ತಿ ತಾಲೂಕಿನ ಇಂಚಲ. ಇವರು ಕನ್ನಡ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಪ್ರಸಿದ್ಧ ಲಾವಣಿಕಾರರಾಗಿದ್ದ ಇವರು ಹಲವು ಲಾವಣಿಪದಗಳನ್ನು ರಚಿಸಿರುವರು.

ಗ್ರಂಥ : ಸುದಾಮಚರಿತ್ರವು.

ಗುಂಡಾಚಾರ್ಯ, ಬಲುಟಗಿ

ಜ : ೧೯೦೧ ಮ : ೧೮-೫-೧೯೫೬

ಮಾನವಿ. ಇವರು ನಿಜಾಂ ಕರ್ನಾಟಕದಲ್ಲಿ 'ಶಾಮಸುಂದರವಿಠಲ' ಎಂಬ ಹೆಸರಿನಿಂದ ಪ್ರಸಿದ್ಧರಾಗಿ, ಮಾನವಿಯಲ್ಲಿ ಜಗನ್ನಾಥದಾಸರ ಸೇವೆ ಮಾಡಿ, ಅವರ ಅನುಗ್ರಹಕ್ಕೆ ಪಾತ್ರರಾಗಿದ್ದರು. ಪ್ರಾಣೇಶದಾಸರ ಎಲ್ಲ ಪದ್ಯಗಳಿಗೆ ಅರ್ಥ ಬರೆದಿರುವರು.

ಗ್ರಂಥಗಳು : ಪದ್ಮಾವತೀಪರಿಣಯ (ಅ), ರುಕ್ಮಾಂಗದ ಚರಿತ್ರೆ (ಅ), ಸುಂದರಕಾಂಡ ರಾಮಾಯಣ (ಅ).

ಚಂದ್ರಶೇಖರಯ್ಯ, ಬಿ.

ಜ : ಸು. ೧೯೦೧ ಮ : ೧೬-೫-೧೯೩೩

ಮೈಸೂರು. ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಪದವಿಯನ್ನು ಪಡೆದು ಮುಂಬಯಿಯಲ್ಲಿ ಅಧ್ಯಾಪಕರಾಗಿದ್ದರು. 'ಗೌರೀಶಂ' ಎಂಬ ಹೆಸರಿನಿಂದ ಲೇಖನ ಬರೆಯುತ್ತಿದ್ದ ಇವರು ೧೯೩೧ರಲ್ಲಿ 'ಪ್ರಬೋಧಕ' ಎಂಬ ಮಾಸಪತ್ರಿಕೆಯನ್ನು ಮುಂಬಯಿಯಿಂದ ಹೊರಡಿಸಿದ್ದರು.

ಗ್ರಂಥ : ಪ್ರಣಯಾವರ್ತ ಅಥವಾ ಚಂಚಲಕುಮಾರಿ (ಇ. ೧೯೨೩).

ರಾಘವೇಂದ್ರರಾವ್ ಚಾಕಲಬ್ಬಿ

ಜ : ೪-೭-೧೯೦೨

ಹುಬ್ಬಳ್ಳಿ ತಾಲೂಕಿನ ಚಾಕಲಬ್ಬಿ. ಕೊಪ್ಪಳ ಹಾಗೂ ಧಾರವಾಡದಲ್ಲಿ ಶಿಕ್ಷಣ. ಮುಂದೆ ವಕೀಲಿಯ ಪರೀಕ್ಷೆ ಪಾಸಾಗಿ ಕೊಪ್ಪಳದಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದರು. ಅದರೊಂದಿಗೆ ಗಜಾನನ ವಾಚನಾಲಯ, ಜನರಲ್ ಲೈಬ್ರರಿ, ಸೋಶಿಯಲ್ ಕ್ಲಬ್ ಮುಂತಾದ ಸಾರ್ವಜನಿಕ ಸಂಸ್ಥೆಗಳ ಕಾರ್ಯಕರ್ತರಲ್ಲೊಬ್ಬರು. ರಾಜಕೀಯ ಚಟುವಟಿಕೆಗಳಲ್ಲಿಯೂ ಮುಂದಾದವರು.

ಗ್ರಂಥಗಳು : ಜಾಗರ್ತಿ (ಆ. ೧೯೨೦), ಕರ್ನಾಟಕದ ಜಾಗೃತಿಯ ಉಪನ್ಯಾಸ (ಈ. ೧೯೩೧), ಸಾಲಗಾರರಾದ ಬೇಸಾಯದವರಿಗೆ ಸಹಾಯಮಾಡುವ ಮತ್ತು ದುಬಾರಿ ಬಡ್ಡಿಯನ್ನು ಬಂದುಮಾಡುವ ಹೈದರಾಬಾದ ಕಾನೂನು (ರ-ಅಂ.೧೯೩೦).

ಕೇಶವ, ರಂಗಭಟ್ಟ, ಜೋಶಿ (ಪಂ.ಕೇಶವಶರ್ಮಾ ಗಲಗಲಿ)

ಜ : ೧೩-೩-೧೯೦೩

ವಿಜಾಪುರ ಜಿಲ್ಲೆಯ ಗಲಗಲಿಯವರು. ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರನೆಯ ವರ್ಷದ ಪ್ರಶಸ್ತಿಯನ್ನೂ ಮೈಸೂರು ವಿದ್ಯಾ ಇಲಾಖೆಯ 'ಪಂಡಿತ'

ಪದವಿಯನ್ನೂ ಪಡೆದು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದರು. ಅದೇ ಹುದ್ದೆಯಲ್ಲಿ ಸೇವಾನಿವೃತ್ತರಾಗಿ ೧೯೪೮ರಲ್ಲಿ ಧಾರವಾಡ ಕೆ.ಇ.ಬೋರ್ಡ್ ಟ್ರೇನಿಂಗ್ ಕಾಲೇಜಿನಲ್ಲಿ ಕನ್ನಡ ಪಂಡಿತರೆಂದು ಸೇರಿದರು. ಜ್ಯೋತಿಷ್ಯಶಾಸ್ತ್ರದಲ್ಲಿ ವಿಶೇಷ ಪರಿಶ್ರಮವುಳ್ಳವರಾಗಿದ್ದು, ಅದಕ್ಕೆ ಸಂಬಂಧಪಟ್ಟ ಅನೇಕ ಪ್ರೌಢಲೇಖನಗಳನ್ನು ಪ್ರಕಟಿಸಿದ್ದಾರೆ.

ಗ್ರಂಥಗಳು : ಪಂಡಿತರಾಜ ('ವಾಗ್ಭೂಷಣ'ದಲ್ಲಿ ಅ.ಚ.೧೯೨೦), ನೂರಜಹಾನ* (ಇ.೧೯೪೭).

ಅಪ್ರಕಟಿತ : ಪಾಣಿನಿ*

ಜನಾರ್ದನಾಚಾರ್ಯ, ಮುದ್ರಾಡಿ

ಜ : ೧೮-೧-೧೯೦೩ ಮ : ೨೩-೩-೧೯೫೦

ಉಡುಪಿ ಬಳಿಯ ಮುದ್ರಾಡಿ ಗ್ರಾಮ. ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗವನ್ನು ಮಾಡಿ ಮದ್ರಾಸ್ ವಿಶ್ವವಿದ್ಯಾನಿಲಯದ 'ವೇದಾಂತಶಿರೋಮಣಿ' ಪದವಿಯನ್ನು ಸಂಪಾದಿಸಿದರು. ವೈದಿಕವೃತ್ತಿಯಿಂದ ಜೀವನ. 'ಶ್ರೀಕೃಷ್ಣಸಂದೇಶ' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ (ಉಡುಪಿ.೧೯೨೧) ಕೊನೆಯವರೆಗೂ ಸಂಪಾದಕರಾಗಿದ್ದರು. ಭಾಷಣ-ಪ್ರವಚನದ ಮೂಲಕ ಧರ್ಮಪ್ರಚಾರ ಮಾಡಿದರು

ಗ್ರಂಥಗಳು : ಚಂದ್ರನ ಸಾಕ್ಷಿ (ಇ.೧೯೩೬), ಪ್ರಮಥನಾಥ (ಇ.೧೯೩೭), ಮಣ್ಣಿನ ಗಡಿಗೆ (ಈ.೧೯೩೧).

(ಕಳವಳವೇಕೆ?, ಗೀತಾನಾಟಕ, ನಾರೀ ದಿನಚರ್ಯೆ, ಯಮಶಾಸನ, ಸರಳ ಗೀತೆ ಹೆಣ್ಣಿನ ಹತ್ತು ಗುಣಗಳು ಮೊದಲಾದ ಗ್ರಥಗಳೂ ಹಲವು ಸಣ್ಣಕಥೆಗಳೂ 'ಶ್ರೀಕೃಷ್ಣಸಂದೇಶ'ದಲ್ಲಿ ಪ್ರಕಟವಾಗಿವೆ)

ಶಂಕರಭಟ್ಟ, ಕಡೆಂಗೊಡ್ಲು, ವಿದ್ವಾನ್

ಜ: ೧೫-೮-೧೯೦೫

ಮಂಗಳೂರು. ಗುಜರಾತ ವಿದ್ಯಾಪೀಠದ ಮೆಟ್ರಿಕ್ ಪರೀಕ್ಷೆಯಲ್ಲಿಯೂ ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿ ಮಂಗಳೂರು ಹೆಣ್ಣುಮಕ್ಕಳ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರೆಂದು ಕೆಲಸ ಮಾಡುತ್ತಿರುವರು. ಮಂಗಳೂರಿನ 'ರಾಷ್ಟ್ರಬಂಧು' ವಾರಪತ್ರಿಕೆಯ ಸಂಪಾದಕರು (ಮಾರ್ಚ್ ೧೯೫೩ರ ವರೆಗೆ). ಆಬಳಿಕ 'ರಾಷ್ಟ್ರಮತ' ಎಂಬ ವಾರಪತ್ರಿಕೆಯ ಸಂಪಾದಕರು.

ಗ್ರಂಥಗಳು : ಉಷಾ (ಅ. ೧೯೨೭), ಕಾಣಿಕೆ (ಅ. ೧೯೨೭), ಗಾಂಧೀ ಉಪದೇಶ

*ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನ ಪಡೆದ ಗ್ರಂಥಗಳು.

(ಅ. ೧೯೨೨), ಗಾಜಿನ ಬಳೆ ಮತ್ತು ಇತರ ಕಥೆಗಳು (ಇ. ೧೯೪೭), ಗುರುದಕ್ಷಿಣೆ, ಘೋಷಯಾತ್ರೆ (ಅ. ೧೯೨೦), ದೇವತಾಮನುಷ್ಯ (ಇ.೧೯೪೬), ಧೂಮಕೇತು (ಇ), ನಲ್ಮೆ (ಅ. ೧೯೩೨), ಯಜ್ಞಕುಂಡ (ಅ. ೧೯೨೨), ವಸ್ತ್ರಾಪಹರಣ (ಅ.೧೯೨೧), ಶಿಖಂಡಿ, ಸ್ವರಾಜ್ಯಯುದ್ಧ, ಹಣ್ಣುಕಾಯಿ (ಅ. ೧೯೩೩), ಹಿಡಿಂಬೆ (ಅ. ೧೯೩೧), ಹಿಂದಿನ ಕಥೆಗಳು (ಇ. ೧೯೪೬).

ವೇದಮಿತ್ರ, ಪಿ.

ಜ : (?) ಮ : ೧೯೦೯

ಮೈಸೂರು. 'ಮಹಿಳಾಸಖಿ' ಸಂಸ್ಥೆಯಲ್ಲಿ ಬಹುಕಾಲ ಉಪಾಧ್ಯಾಯರಾಗಿದ್ದರು. 'ವೃತ್ತಾಂತಪತ್ರಿಕೆ'ಯಲ್ಲಿ ಕೆಲವು ಸಮಯ ಇದ್ದರು.

ಗ್ರಂಥಗಳು : ಆಗಸ್ಟಿನ್ ಬಿನ್ನಪಂ (The Confessions of St. Augustine ಪುಸ್ತಕದ ಭಾಷಾಂತರ; ಧ.೧೯೦೯), ಯವನಯಾಮಿನೀ ವಿನೋದಕಥೆಗಳು (Arabian Nights ಪುಸ್ತಕದ ಭಾಷಾಂತರ; (ಇ. ೧೯೦೫), ಸ್ವಪ್ರಯಾಸ ಫಲದೀಪಿಕೆ S.Smiles ಕೃತ Self Help ಪುಸ್ತಕದ ಭಾಷಾಂತರ; (ಈ. ೧೯೦೯)

ಅಪ್ಪಣ್ಣಶೆಟ್ಟಿ, ಎಚ್.

ಮ : ಸು. ೧೯೦೦

ಮೈಸೂರು ಗ್ರಾಜ್ಯುಯೇಟ್ಸ್ ಟ್ರೇಡಿಂಗ್ ಅಸೋಶಿಯೇಶನ್ನಿಲ್ಲಿ 'ರೈಟರ್' ಆಗಿದ್ದರು.

ಗ್ರಂಥಗಳು : ಪ್ಲೇಗಿನ ಚರಿತ್ರೆ (ಧ), ಹೈದರನಾಮೆ, ಹೈದರ ಅಲಿಯ ಚರಿತ್ರೆ.

ಆನಂದರಾವ್, ಎ.

ಮ : ಸು.೧೯೧೨

ಬೆಂಗಳೂರು. ಮೈಸೂರು ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಶನರ್ ಹುದ್ದೆಯಲ್ಲಿದ್ದರು. 'ಮೈಸೂರು ದೇಶೀಯ' ಎಂಬ ಹೆಸರಿನಿಂದ ಗ್ರಂಥ ರಚಿಸಿದ್ದಾರೆ.

ಗ್ರಂಥಗಳು : ಪಾಂಚಾಲೀ ಪರಿಣಯಂ (Shakespeare ಕೃತ Marchant of Venice ಭಾಷಾಂತರ (ಅ. ೧೮೯೦), ರಾಮವರ್ಮ ಲೀಲಾವತಿ ಚರಿತ್ರೆ (Shakespeare ಕೃತ Romeo Julietದ ಭಾಷಾಂತರ) (ಅ. ೧೮೮೯), ಹ್ಯಾಮ್ಲೆಟ್

ಜಯರಾಯಾಚಾರ್ಯ, ನರಹರಿ

ಮ : ಸು.೧೯೦೦

ಮೈಸೂರು. ಆಸ್ಥಾನವಿದ್ವಾಂಸರಾಗಿದ್ದ ಇವರು ಮಹಾರಾಣಿ ಬಾಲಿಕಾ ಪಾಠ ಶಾಲೆಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು.

ಗ್ರಂಥಗಳು : 'ಅನುಕರಣಗೀತಲಹರಿ', 'ಕರ್ನಾಟಕಭಾಷಾಕರಂ' ಎಂಬ ಅಕಾರಾದಿ ನಿಘಂಟು (ದ-ಏ.೧೮೯೧), ಕರ್ನಾಟಕ ವೇಣೀಸಂಹಾರನಾಟಕ, ಕಲ್ಯಾಣಗೀತಾವಳಿ (ಅ), ಚಂಡಕೌಶಿಕನಾಟಕ (ಅ), ಚಂದ್ರಹಾಸ. ನಾಡೀಪ್ರಕರಣ (ರಾಜವೈದ್ಯ ಭೀಮರಾಯಕೃತ ಸಂಸ್ಕೃತಗ್ರಂಥದ ಭಾಷಾಂತರ) (ಫ.೧೮೭೯), ಪಾಕಶಾಸ್ತ್ರ (ಣ),ಭವಿಷ್ಯೋತ್ತರಪುರಾಣಂ, ಮದಾಲಸಾಪರಿಣಯ (ಅ), ಮಹಾಬಧಿರಪ್ರಹಸನ (ಅ), ರಾಮವರ್ಮಲೀಲಾವತಿ ಚರಿತ್ರೆ (ಅ), ಸಿರಿಯಾಳರಾಜ, ಸಂಗೀತದ ಕೃತಿಗಳು.

ಪರಿಷ್ಕೃತ : ನರಪತಿಚರಿತಂ (ಲಿಂಗರಾಜ ಅರಸಕೃತ) (೧೮೯೯), ಶ್ರೀವರನಂದೀಕಲ್ಯಾಣಂ (ಚಲುವಾಜಮ್ಮಣ್ಣಿಕೃತ), (೧೯೦೧)

ಚೆಲ್ಲಮ್ಮ, ಸಿ.ಆರ್.

ಮ : ಸು.೧೯೧೦

ಮೈಸೂರು. ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ಅಧ್ಯಾಪಕಿಯಾಗಿದ್ದರು.

ಗ್ರಂಥಗಳು : ಗೀತಿಕಾಲಹರಿ (ಕ), ದ್ವಾದಶಮಂಜರಿಸ್ತೋತ್ರ, ಪಾರಿಜಾತಾಪಹರಣ, ರಾಜಕಲಾನಿಧಿ, ರುಕ್ಮಿಣೀಪರಿಣಯ (ಕ) ವೈರಾಗ್ಯಮಂಜರಿ.

ರಾಮಚಂದ್ರ, ಪುಣಿಂಚತ್ತಾಯ

ಜ : (?) ಮ : ಸು : ೧೯೧೦

ಕಾಸರಗೋಡು ತಾಲೂಕಿನ ಪುಂಡೂರು.ಪ್ರಸಿದ್ಧ ಗ್ರಂಥಕರ್ತರಾಗಿದ್ದ ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರ ತಂದೆ. ಪುಂಡೂರಿನ ಜಮೀನುದಾರರು.

ಗ್ರಂಥ : ವಿಜಿತಾಶ್ವವಿಜಯ ಕಾಳಗ (ಅ).

ವೆಂಕಟಸುಬ್ಬರಾಯ, ರೆಂಟಾಲ, ಬಿ.ಎ.,ಬಿ.ಎಲ್

ಮ : ಸು.೧೯೧೦

ಇವರು ಮದ್ರಾಸಿನಲ್ಲಿ ಹೈಕೋರ್ಟು ವಕೀಲರಾಗಿದ್ದರು. ಕನ್ನಡದಲ್ಲಿ ಪ್ರಥಮ ಸಾಮಾಜಿಕ ಕಾದಂಬರಿಕಾರರು ಎಂದು ಹೇಳಲಾಗುತ್ತದೆ*.

ಗ್ರಂಥಗಳು : ಆನಂದದೀಪಿಕೆ (ತೆಲುಗಿನಿಂದ ಭಾಷಾಂತರ) (ಇ. ೧೯೦೧), ಕೇಸರೀ ವಿಲಾಸವು (ಇ. ೧೮೯೫), ಹಿಂದೂ ಲಾ (ವ)

ಇಂಗ್ಲೀಷ್ : Kamala's Letters, Shakespeare's Othello.

* ಲೇಖನ. ಪೆ. ೧೯೫೪.

ಶೇಷದಾಸಾಚಾರ್ಯ, ಆದ್ಯ

ಜ : (?) ಮ : ಸು. ೧೯೧೦

ವಿಜಾಪುರ ಜಿಲ್ಲೆಯ ಅಗರಖೇಡದ ಜಹಗೀರದಾರರು. ಸಂಸ್ಕೃತ ಪಂಡಿತರೂ ದ್ವೈತಸಿದ್ಧಾಂತಪಾರಂಗತರೂ ಆಗಿದ್ದ ಇವರು ಆ ಕಾಲದಲ್ಲಿ ಸುಧಾರಣಾವಾದಿಗಳೆಂದು ಹೆಸರಾಗಿದ್ದರು. ಕೆಲಕಾಲ ವಿಜಾಪುರ ಜಿಲ್ಲಾ ಲೋಕಲ್ ಬೋರ್ಡಿನ ಸಭಾಸದರಾಗಿದ್ದರು.

ಗ್ರಂಥ : ಸುವದನಾಭಾಸ್ಕರ (ಆ. ೧೯೦೬)

ಶೇಷಾದ್ರಿ ಅಯ್ಯಂಗಾರ್, ಕಡಬ, ಎಲ್.ಎಜಿ.

ಜ : (?) ಮ : ಸು.೧೯೧೦

ಬೆಂಗಳೂರು. ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು.

ಗ್ರಂಥಗಳು : ವ್ಯವಸಾಯಬೋಧಿನಿ, ಸಚಿತ್ರ ಕರ್ಣಾಟಕ ಉದ್ಭಿಜ್ಜಶಾಸ್ತ್ರ (ಝ.೧೮೯೫).

ನರಸಿಂಹಾಚಾರ್, ಗೋವಿಂದರಾಜ, ಶ್ರೀರಂಗಪಟ್ಟಣಂ

ಜ : (?) ಮ : ೧೯೧೧

ಇವರು ಆರ್ ನರಸಿಂಹಾಚಾರ್ಯರ ಭ್ರಾತೃಪುತ್ರರು. ಹಳೆಗನ್ನಡ ವಿದ್ವಾಂಸರೂ ಪ್ರತಿಭಾಶಾಲಿಗಳೂ ಆಗಿದ್ದ ಇವರು ಮೈಸೂರು 'ಓರಿಯಂಟಲ್ ಲೈಬ್ರರಿ'ಯಲ್ಲಿ ಗ್ರಂಥಪಾಲರಾಗಿಯೂ ಶಿಕ್ಷಣ ಇಲಾಖೆಯಲ್ಲಿ ಕನ್ನಡ ಭಾಷಾಂತರಕಾರರಾಗಿಯೂ ಕೆಲಸ ಮಾಡಿದರು. 'ಕವಿಚರಿತೆ'ಯ ಪ್ರಥಮ ಸಂಪುಟದ ರಚನೆಯಲ್ಲಿ ಆರ್ ನರಸಿಂಹಾಚಾರ್ಯರಿಗೆ ಸಹಾಯಕರಾಗಿದ್ದರು. ಎಂ.ಎ.ರಾಮಾನುಜಯ್ಯಂಗಾರ್ ಅವರ ಜೊತೆಗೆ 'ಕಾವ್ಯಮಂಜರಿ'ಯ ಸಂಪಾದಕರಾಗಿದ್ದು ಅನೇಕ ಪ್ರಾಚೀನ ಕಾವ್ಯ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಭೆಯ ಅಧ್ಯಕ್ಷರಾಗಿದ್ದರು (ಧಾರವಾಡ, ೧೯೦೭).

ಗ್ರಂಥಗಳು : ಅಜನೃಪಚರಿತೆ (ಕಾಳಿದಾಸಕೃತ ರಘುವಂಶದ ಕೆಲವು ಸರ್ಗಗಳ ಪದ್ಯಾನುವಾದ) (ಅ.೧೮೯೭), ಅಲ್ಲಾವುದ್ದೀನನ ಅದ್ಭುತದೀಪ (ಇ), ಇಸೋಪನ ನೀತಿ ಕಥೆಗಳು (ಇ), ಗಯ್ಯಾಳಿಯನ್ನು ಸಾಧುಮಾಡುವಿಕೆ (ಭಾಷಾಂತರ), ಗಲಿವರನ ದೇಶಸಂಚಾರ (ಭಾಷಾಂತರ), ದಿಲೀಪಚರಿತೆ (ಕಾಳಿದಾಸಕೃತ ರಘುವಂಶದ ಕೆಲವು ಸರ್ಗಗಳ ಪದ್ಯಾನುವಾದ) (ಅ), ಪ್ರೋಷಿತಪ್ರಿಯಾಸಮಾಗಮ (ಅ) ಭಾರತವೀರ ಚರಿತೆ (ಮ.೧೯೦೬,III).

ಪರಿಷ್ಕೃತ : ಆದಿಪುರಾಣಂ (ಪಂಪಮಹಾಕವಿಕೃತ)

ರಾಮಕೃಷ್ಣಯ್ಯ, ಬೋಳಾರ

ಜ : (?) ಮ : ಸು. ೧೯೧೩

ಮಂಗಳೂರು. ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದರು.

ಗ್ರಂಥಗಳು : ಕನ್ನಡ ವ್ಯಾಕರಣ (ದ), ಚಂಡಿಕಾಶತಕ ಅಥವಾ ದೇವೀಸ್ತೋತ್ರ (ಅ. ೧೯೨೩), ನಾನಾರ್ಥಶಬ್ದಾವಳಿ ಮತ್ತು ಸಂಜ್ಞಾರ್ಥಗಳು (ದ-ಏ.೧೮೯೫).

ಅಪ್ಪಯ್ಯಾ, ಕೊರವಂಡ

ಮ : ಸು.೧೯೧೫

ಮೈಸೂರು. ಆಸ್ಥಾನದಲ್ಲಿ ಆಯುರ್ವೇದ ಪಂಡಿತರಾಗಿದ್ದರು.

ಗ್ರಂಥಗಳು : ಕೊಡಗರ ಕುಲಾಚಾರ ತತ್ತ್ವೋಜ್ಜೀವಿನಿ (ಲ.೧೯೦೩), ಗೋರಕ್ಷಣೆ (ಡ), ಭಗವದ್ಗೀತೆ (ಧ)

ಅಶ್ವತ್ಥನಾರಾಯಣಶಾಸ್ತ್ರೀ, ಬಿದರೆ

ಮ : ಸು.೧೯೧೫

ಬೆಂಗಳೂರು. ಮೈಸೂರು ಆಸ್ಥಾನದಲ್ಲಿ ಪಂಡಿತರಾಗಿದ್ದರು.

ಗ್ರಂಥಗಳು : ಧರ್ಮಪದವೆಂಬ ಬುದ್ಧಗೀತೆಯು (ಪಾಲಿ ಗ್ರಂಥದ ಅನುವಾದ), (ಧ. ೧೯೦೮), ಧರ್ಮಸಾಮ್ರಾಜ್ಯಂ (ಧ. ೧೯೧೬), ಬೌದ್ಧಾವತಾರ (ಧ.೧೯೦೮), ರಾಮಾಯಣದಿಂದುಂಟಾಗುವ ನೀತಿಗಳು (ಧ), ವ್ಯಾಘ್ರೀಜಾತಕ.

ಕೃಷ್ಣರಾವ್, ಬಾಳಾಜಿ, ಬೆಂಡೀಗೇರಿ

ಜ : (?) ಮ :೧೯೧೫

ಧಾರವಾಡ ಶಿಕ್ಷಣ ಮಹಾವಿದ್ಯಾಲಯದ ವೈಸ್‌ಪ್ರಿನ್ಸಿಪಾಲರಾಗಿದ್ದ ಇವರು ೧೯೦೫ರಿಂದ ಕೆಲವು ಕಾಲ ಕಾರವಾರ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕರೆಂದು ಕೆಲಸ ಮಾಡಿದ್ದರು. ಕೊನೆಗೆ ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣಾಧಿಕಾರಿಯಾಗಿದ್ದರು(ಅ.ಡೆ.ಎ.ಇ.)

ಗ್ರಂಥ : ಜೈಮಿನಿಭಾರತ (೧೧-೧೩ ಸಂಧಿ), ಇಂಗ್ಲೀಷು ಅರ್ಥದೊಂದಿಗೆ (ಅ.೧೮೯೩-೧೯೦೨)

ಲಕ್ಷ್ಮೀನರಸಿಂಹ ಶಾಸ್ತ್ರೀ, ಅಂಬಳೆ

ಮ : ಸು ೧೯೧೫

ಮೈಸೂರು. ವೆಸ್ಲಿಯನ್ ಮಿಶನ್ ಪಾಠಶಾಲೆಯಲ್ಲಿ ಬಹುಕಾಲ ಅಧ್ಯಾಪಕರಾಗಿದ್ದರು.

ಗ್ರಂಥಗಳು : ಕರ್ಣಾಟಕ ಚಂದ್ರಾಲೋಕ (ಜಯದೇವಕವಿಕೃತ ಸಂಸ್ಕೃತ ನಾಟಕದ ಭಾಷಾಂತರ) (ಆ. ೧೯೦೫), ಭಾನುಶತಕ (ಅ), ವಿದುರನೀತಿ (ಅ), ಸುಮತಿ ಶತಕ (ಅ. ೧೮೯೭).

ಲಕ್ಷ್ಮೀನಾರಾಯಣಪ್ಪ, ಕೆ., ಬಿ.ಎ.

ಮ : ಡಿಸೆಂಬರ್ ೧೯೧೫

ಮೈಸೂರು. ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ ಅನಂತರ ಮೈಸೂರು ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾಗಿಯೂ ಕೆಲಕಾಲ ಕೆಲಸಮಾಡಿದ ನಂತರ ಸೆಕ್ರೆಟರಿಯೆಟ್ಟಿಗೆ ವರ್ಗಾಯಿಸಲ್ಪಟ್ಟರು. ಮೈಸೂರು ಕನ್ನಡ ಪಂಡಿತ ಪರೀಕ್ಷೆಯ ಮುಖ್ಯಪರೀಕ್ಷಕರೂ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕ ಮಂಡಲದ ಸದಸ್ಯರೂ ಆಗಿದ್ದರು.

ಗ್ರಂಥ : ಪದ್ಯಸಾರ (ಅ)

ವೀರೇಶ್ವರಶಾಸ್ತ್ರೀ

ಜ : (?) ಮ : ಸು.೧೯೧೫

ಮೈಸೂರು ಪ್ರಾಂತದ ಗುಬ್ಬಿ. ಸುಪ್ರಸಿದ್ಧ ಶಿವಕಥಾವಿದ್ವಾಂಸರು. ೧೮೮೬ರಿಂದ ೧೯೧೦ರ ವರೆಗೆ 'ಚನ್ನಬಸವೇಶ್ವರ ಪ್ರಾಸಾದಿಕ ನಾಟಕಮಂಡಳಿ'ಯ (ಗುಬ್ಬಿಕಂಪನಿ) ನಾಟಕಕಾರರಾಗಿದ್ದರು.

ಗ್ರಂಥಗಳು : ಗುಲೇಬಕಾವಲಿ (ಅ), ಜಗನ್ಮೋಹಿನಿ ಚರಿತ್ರೆ (ಅ), ಸೋಮಶೇಖರ ಚಿತ್ರಶೇಖರಚರಿತ್ರೆ ಅಥವಾ ಚೋರಕಥೆ (ಅ), ಶಕ್ತಿವಿಶಿಷ್ಟಾದ್ವೈತ ವೀರಶೈವಾನ್ವಯ ಚಂದ್ರಿಕಾ (ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕೆ, ಧ.೧೮೯೦)

ವೆಂಕಟರಮಣರಾವ್, ಕೋಪಳ್ಳಿ

ಮ : ಸು.೧೯೧೫

ಇವರು ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

ಗ್ರಂಥ : ಕರ್ನಾಟಕಕಾವ್ಯಲಕ್ಷಣಸಾರವು (ದ.೧೯೦೪)

ಶ್ರೀನಿವಾಸ ಅಯ್ಯಂಗಾರ್, ಭೀಮರಾವ, ಮಂಡ್ಯ, ಎಂ.ಎ

ಜ : (?) ಮ: ಸು.೧೯೧೫

ಮೈಸೂರು. ಚಿತ್ರದುರ್ಗ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕೆಲಕಾಲ ಇದ್ದು ಆ ಬಳಿಕ ಮೈಸೂರು ಸರಕಾರದ ವಿದ್ಯಾ ಇಲಾಖೆಯಲ್ಲಿ ಭಾಷಾಂತರ ಕಾರರಾದರು. 'ಹಿತಬೋಧಿನಿ (ಮೈಸೂರು. ೧೮೮೮) ಮಾಸಪತ್ರಿಕೆಯ ಸಂಸ್ಥಾಪಕ ರಲ್ಲೊಬ್ಬರು, ಆ ಪತ್ರಿಕೆಯ ಪ್ರಮುಖ ಲೇಖಕರೂ ಆಗಿದ್ದರು.

ಗ್ರಂಥಗಳು : ಜಯಸಿಂಹರಾಜಚರಿತೆ (Shakespeare ಕೃತ Cymbeline) ನಾಟಕದ ಭಾಷಾಂತರ (ಆ.೧೮೮೬), ನಿತ್ಯಾನುಸಂಧಾನಟೀಕೆ (ತಮಿಳು ಗ್ರಂಥದ ಭಾಷಾಂತರ), ನೀತಿಚಿಂತಾಮಣಿ (ಎಂ.ಎಸ್.ಪುಟ್ಟಣ್ಣನವರೊಂದಿಗೆ, ೧೮೮೪), ಮುಕುಂದ ಮಾಲಾಸ್ತೋತ್ರಂ (ಕುಲಶೇಖರ ಆಳ್ವಾರರ ಸಂಸ್ಕೃತ ಗ್ರಂಥದ ಕನ್ನಡ-ಇಂಗ್ಲೀಷ್ ಭಾಷಾಂತರಗಳೊಂದಿಗೆ, ೧೯೦೭), ಹಿಂದೂ ದೇಶದ ನಾಗರಿಕ, ಹೇಮರಾಜವಿಲಾಸ.

ಶ್ರೀಕಂಠೇಶಗೌಡ, ಎಂ.ಎಲ್.

ಜ : (?) ಮ : ಸು. ೧೯೧೮

ಮೈಸೂರು. ಬಿ.ಎ.,ಬಿ.ಎಲ್ ಪದವೀಧರರಾಗಿದ್ದ ಇವರು ಮುನಸೀಫರಾಗಿ ಕೆಲಸ ಮಾಡಿದರು. ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಭೆಯ ಸ್ಥಾಪಕರಲ್ಲೊಬ್ಬರು.

ಗ್ರಂಥಗಳು : ಕನ್ಯಾವಿತಂತು (Sir Henry Taylor ಕೃತ A Sicilian summer) ಪುಸ್ತಕದ ಭಾಷಾಂತರ),. ಚಾಮನೃಪ ಚಂದ್ರಪ್ರಭ, ಚಿಕ್ಕ ಬಣಜಿಗರು (Maria Edgeworth ಕೃತ The Little Merchants ಪುಸ್ತಕದ ಭಾಷಾಂತರ), ಪ್ರತಾಪರುದ್ರದೇವ (Shakespeare ಕೃತ Macbeth)ನಾಟಕದ ಭಾಷಾಂತರ; (ಆ. ೧೮೯೫), ಪ್ರಮೀಳಾರ್ಜುನೀಯಂ (ಆ), ಪ್ರಿಯದರ್ಶಿಕೆ, ಸೀತಾಸ್ವಯಂವರ, ಸುರಭಿ (ಆ. ೧೯೦೧).

ಸುಬ್ಬರಾಯ, ಚಿಕ್ಕಬಳ್ಳಾಪುರ

ಜ : (?) ಮ : ಸು. ೧೯೧೮

ಮೈಸೂರು. ಬಿ.ಎ. ಪದವೀಧರರಾಗಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನಶಾಸ್ತ್ರದ ಪ್ರಾಧ್ಯಾಪಕರಾದರು. ಕೊನೆಯ ಕೆಲವು ವರ್ಷ ಮೈಸೂರು ಸರಕಾರದ ಭಾಷಾಂತರಕಾರರಾಗಿಯೂ ಕೆಲಸಮಾಡಿದರು. ಮರಾಠಿ ಮತ್ತು ಕನ್ನಡ ನಾಟಕಗಳಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನು ಅಭಿನಯಿಸುತ್ತಿದ್ದ ಇವರು 'ಅರಮನೆ ನಾಟಕದ ಸುಬ್ಬರಾಯರು' ಎಂದು ಪ್ರಸಿದ್ಧರಾಗಿದ್ದರು. ಮಹಾರಾಜರ ಆಜ್ಞೆಯ ಮೇರೆಗೆ ಹಲವು ಇಂಗ್ಲೀಷ್ ನಾಟಕಗಳನ್ನು ಭಾಷಾಂತರಿಸಿದರು. 'ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭೆ'ಯ ಮುಖ್ಯ ಕಾರ್ಯಕರ್ತರಲ್ಲೊಬ್ಬರಾಗಿದ್ದರು.

ಗ್ರಂಥಗಳು : ಆಹಾರವಿಷಯೋಪನ್ಯಾಸಮಂಜರಿ (ಣ), ಪ್ರಜ್ಞಾವತೀವಿಜಯ (ಆ), ಯುವರಾಜಕಲ್ಯಾಣ (ಆ), ವಲೀಮುಖವಿಲಾಸಂ, ಶೂರಸೇನಚರಿತ್ರೆ (Shakespeare ವಿರಚಿತ Othello ನಾಟಕದ ಭಾಷಾಂತರ; ಬಸವಪ್ಪಶಾಸ್ತ್ರಿಗಳೊಂದಿಗೆ; (ಆ. ೧೮೯೫).

ಸ್ವಾಮಿರಾವ, ಕೌಲೂರ

ಜ : (?) ಮ : ೧೯೧೮

ಲಿಂಗಸೂಗೂರು. ವಕೀಲಿ ವೃತ್ತಿಯಲ್ಲಿದ್ದ ಇವರು ಪ್ರಾರಂಭದಿಂದಲೂ ಅಧ್ಯಾತ್ಮವಾದಿಗಳು. 'ಗುರುಜಗನ್ನಾಥವಿಠಲ'ರ ಬಳಿಯಲ್ಲಿ 'ವರದೇಶವಿಠಲ' ಎಂಬ ಅಂಕಿತ ಪಡೆದು ಅನೇಕ ಪದಗಳನ್ನು ರಚಿಸಿದ್ದಾರೆ. ಅಲ್ಲದೆ 'ಪ್ರಹ್ಲಾದ ಚರಿತ್ರೆ'ಯ ಮತ್ತು ರಾಘವೇಂದ್ರಸ್ವಾಮಿಗಳ ಒಂದು ಆಖ್ಯಾನವನ್ನೂ ಬರೆದಿರುವುದಾಗಿ ತಿಳಿಯುತ್ತದೆ.

ಗ್ರಂಥ : ಶ್ರೀ ಪ್ರಾಣೇಶವಿಠಲರ ಕೀರ್ತನೆಗಳು ಮತ್ತು ಶ್ರೀ ಗುರುಪ್ರಾಣೇಶವಿಠಲರ ಕೀರ್ತನೆಗಳೂ ಶ್ರೀ ವರದೇಂದ್ರಸ್ವಾಮಿಗಳವರ ಸ್ವಪ್ನವೃಂದಾವನಾಖ್ಯಾನವೂ (ಆ.೧೯೨೬).

ಶಂಕರನಾರಾಯಣಶಾಸ್ತ್ರೀ, ಡಿ.ಎಸ್.

ಜ : (?) ಮ : ೧೯೨೦

ಮೈಸೂರು. ಬಿ.ಎ. ಪದವಿಯನ್ನು ಪಡೆದು ಮೈಸೂರು ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪಂಡಿತರಾಗಿದ್ದರು. ಪ್ರತಿಭಾನ್ವಿತ ಸಾಮಾಜಿಕ ಕಾದಂಬರಿಕಾರರೆಂದು ಮುಂದೆ ಬರುತ್ತಿರುವಾಗಲೇ ಇವರು ಅಕಾಲಮೃತ್ಯುವಿಗೀಡಾದರು.

ಗ್ರಂಥಗಳು : ಭಗವತ್ಪಾದಾಚಾರ್ಯಪ್ರಶಂಸೆ (ಧ), ಮದುವೆಯ ಗಲಿಬಿಲಿ (ಇ), ಶಂಕರ ಕಥಾಸಾರ (ಧ-ಚ).

ಶಿವಪ್ಪಶಾಸ್ತ್ರೀ, ನಂಜುಂಡ, ವಿ.

ಜ : (?) ಮ : ಸು. ೧೯೨೦

ಮೈಸೂರು. ಕವಿ, ನಾಟಕಕಾರ ಎಂದು ಮಾತ್ರವಲ್ಲದೆ ನಟರೂ, ದಿಗ್ದರ್ಶಕರೂ ಎಂದು ಖ್ಯಾತರಾಗಿದ್ದ ಇವರು ತುಮಕೂರು ಚಾಮುಂಡೇಶ್ವರಿ ನಾಟಕಸಂಘದಲ್ಲಿ ಅನೇಕ ವರ್ಷ ಕೆಲಸ ಮಾಡಿದರು. ಸುಪ್ರಸಿದ್ಧ ಕೀರ್ತನಕಾರರು; ಹಲವು ಬಿಡಿಪದ್ಯಗಳನ್ನೂ ರಚಿಸಿರುವರು.

ಗ್ರಂಥಗಳು : ಕೃಷ್ಣಪಾರಿಜಾತ ನಾಟಕ (ಆ.೧೯೧೫), ನವೀನ ದ್ರೌಪದೀ ಸ್ವಯಂವರ ನಾಟಕವು (ಆ.೧೮೯೭), ನವೀನ ಪ್ರಭಾವತೀ ದರ್ಬಾರ ನಾಟಕವು (ಆ.೧೮೯೭), ಮನೋವಿಜಯ ಟೀಕೆ, ವೀರಶೈವಾಮೃತಪುರಾಣ ಟೀಕೆ (ಎಂ.ಎಸ್ ವೀರಪ್ಪ ಶಾಸ್ತ್ರಿಗಳೊಂದಿಗೆ; ಧ.೧೯೦೬), ಶಿವಯೋಗರಹಸ್ಯ.

ವಲ್ಲಭ, ಮಹಲಿಂಗ, ತಟ್ಟಿ

ಜ : (?) ಮ : ೧೯೨೨

ಧಾರವಾಡ. ಶಿಕ್ಷಣಮಹಾವಿದ್ಯಾಲಯದಲ್ಲಿ 'ಟ್ರೇನಿಂಗ್' ಪಡೆದು ಉಪಾಧ್ಯಾಯ

ವೃತ್ತಿಯನ್ನು ಸ್ವೀಕರಿಸಿದರು. ವ್ಯವಸಾಯದಲ್ಲಿಯೂ ಇತರ ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಇವರು ಶಾಂತಕವಿಗಳ ಸಹಕಾರಿಯಾಗಿದ್ದರು. 'ಪ್ರಭಾತ' (ಧಾರವಾಡ, ೧೯೧೮) ಎಂಬ ಪದ್ಯಮಯ ಮಾಸಪತ್ರಿಕೆಯ ಪ್ರಮುಖ ಲೇಖಕರಾದ ಇವರು 'ಬಾಲಮಿತ್ರ' (ಧಾರವಾಡ, ೧೯೨೦), ಮಾಸಪತ್ರಿಕೆಯ ಸಂಪಾದಕರೂ ಆಗಿದ್ದರು. 'ಮಾತೃಭೂಮಿ ಜನನಿ ನಿನ್ನ ಚರಣಸೇವೆ ಮಾಡುವಾ' ಎಂಬ ಸ್ಫೂರ್ತಿಪ್ರದ ಹಾಗೂ ಲೋಕಪ್ರಿಯ ಪದ್ಯವು ಇವರದೇ. ಕರ್ನಾಟಕ ವಿದ್ಯಾವರ್ಧಕ ಸಂಘದ ಉತ್ಸಾಹೀ ಕಾರ್ಯಕರ್ತರು.

ಗ್ರಂಥಗಳು : ಕನ್ನಡಿಗರ ಜನ್ಮಸಾರ್ಥಕತೆ (ಯ.೧೮೯೮), ಗೀತಾವಲೋಕನ, ಗುರುಪ್ರಸಾದ (ಇ), ಪುನರ್ಜನ್ಮ (ಇ) ಲಕ್ಷ್ಮೀಬಾಯಿ (ಇ).

ಶ್ರೀನಿವಾಸಾಚಾರ್ಯ, ಎಂ.ಎ.

ಮ : ೧೯೨೩

ಮೈಸೂರು. ಮೈಸೂರು ಸರಕಾರದಲ್ಲಿ ಅಸಿಸ್ಟಂಟ ಕಂಟ್ರೋಲರೆಂದು ಸುಮಾರು ೩೪ ವರ್ಷ ಕೆಲಸ ಮಾಡಿದರು.

ಗ್ರಂಥ : ರಾಜಾ ಮಲಯಸಿಂಹ (Alexandre Dumas ಕೃತ The Count of Monte Christo ಕಾದಂಬರಿಯ ಭಾಷಾಂತರ, (ಇ. ೧೯೨೩)

ರಘುನಾಥರಾಯ, ರಾಮನಾಥಪುರಂ ಬಿ.ಎ.

ಮ: ಸು.೧೯೨೪

ಬೆಂಗಳೂರು. ಇವರು ಕೆಲಕಾಲ ಸೆಂಟ್ರಲ್ ಕಾಲೇಜಿನ ಮುಖ್ಯಾಧ್ಯಾಪಕರಾಗಿದ್ದರು. ೧೮೯೪ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಪರೀಕ್ಷಕರು. ಬೆಂಗಳೂರು ಥಿಯಾಸಫಿಕಲ್ ಸೊಸಾಯಿಟಿಯ ಕಾರ್ಯದಲ್ಲಿ ವಿಶೇಷ ಶ್ರದ್ಧೆವಹಿಸಿದ್ದರು.

ಗ್ರಂಥಗಳು : ಈಸೋಪನ ನೀತಿಕಥೆಗಳು, ಕರ್ನಾಟಕ ವ್ಯಾಕರಣೋಪನ್ಯಾಸ ಮಂಜರಿ (ದ.೧೮೯೪), ನಿಯೋಗವಿಧಿಯ ವಿಚಾರ, ನೀತಿರತ್ನಾಕರ, ಪ್ರಾಣಿಶಾಸ್ತ್ರ, ಪ್ರೌಢವಿವಾಹ, ವಿವಾಹದ ಮುಖ್ಯತಮ ಕರ್ಮವಿಚಾರ, ಸನಾತನಧರ್ಮದೀಪಿಕೆ (ಧ.೧೯೦೭), ಸನಾತನ ಧರ್ಮಪ್ರಶ್ನೋತ್ತರಮಾಲೆ, ಸ್ತ್ರೀಸಂಸ್ಕಾರಪ್ರಕಾಶಿಕೆ ಇತ್ಯಾದಿ.

ಇಂಗ್ಲೀಷ್ : The Aryan Marriage, The Art of Translation.

ಮಾಚೆನ್, ಕ್ರಿಶ್ಚನ್

ಜ : (?) ಮ : ಸು. ೧೯೨೬

ಮಂಗಳೂರು. ಥಿಯಾಲಾಜಿಕಲ್ ಸಂಸ್ಥೆಯಲ್ಲಿ ಅಧ್ಯಾಪಕರಾಗಿದ್ದ ಇವರು ವೈದ್ಯಶಾಸ್ತ್ರದಲ್ಲಿ ಅನುಭವವುಳ್ಳವರಾಗಿದ್ದರು.

ಗ್ರಂಥಗಳು : ಆರೋಗ್ಯಭಾಗ್ಯ (ಥ.೧೯೨೫), ಇಸೋಪನ ನೀತಿಕಥೆಗಳು (ಇ), ಕನ್ನಡ ಮೂಲಪಾಠಕ, ಜೀವರಸಾಯನಿ ವಿದ್ಯಾಸಾರ (ಥ).

ಕೃಷ್ಣಪ್ಪ, ಬಿ.

ಮ : ೨-೩-೧೯೨೭

ಮೈಸೂರು. ೧೯೦೭ರಲ್ಲಿ ಬಿ.ಎ. ಪದವೀಧರರಾದ ಬಳಿಕ ಅಧ್ಯಾಪಕರಾಗಿ ಪ್ರಾಂತದ ನಾನಾಭಾಗಗಳಲ್ಲಿ ಸುಮಾರು ೭-೮ ವರ್ಷ ಕೆಲಸಮಾಡಿ ೧೯೧೫ರ ಸುಮಾರಿಗೆ ಮೈಸೂರಿಗೆ ಬಂದು ಅಲ್ಲಿ ಕುರುಡ-ಮೂಗರ ಪಾಠಶಾಲೆಯ ಮುಖ್ಯಾಧ್ಯಾಪಕರಾದರು. ಮುಂದೆ, ಕನ್ನಡ-ತೆಲುಗು ವಿಷಯದೊಂದಿಗೆ ಎಂ.ಎ. ಪದವಿ ಸಂಪಾದಿಸಿ ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರೆಂದು ನಿಯಮಿಸಲ್ಪಟ್ಟರು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾದ ನಂತರ ಮಹಾರಾಜಾ ಕಾಲೇಜಿಗೆ ಕನ್ನಡ ಪ್ರಾಧ್ಯಾಪಕರಾಗಿ ಬಂದು ೧೯೩೫ರ ವರೆಗೂ ಆ ಸ್ಥಾನದಲ್ಲಿಯೇ ಇದ್ದರು.

'ವಿದ್ಯಾದಾಯಿನಿ' ಮಾಸಪತ್ರಿಕೆಗೂ, ಬಾಪು ಸುಬ್ಬರಾಯರ ಅನಂತರ ಕರ್ನಾಟಕಗ್ರಂಥಮಾಲೆಗೂ ಕೃಷ್ಣಪ್ಪನವರು ಸಂಪಾದಕರಾಗಿದ್ದರು. ಕನ್ನಡಸಾಹಿತ್ಯ ಪರಿಷತ್ತಿನ ಪ್ರಥಮ ಕಾರ್ಯದರ್ಶಿ ಇವರೇ. ೧೯೧೯ರಿಂದ ೧೯೨೬ರ ವರೆಗೆ ಬೆಂಗಳೂರು ಸೆಂಟ್ರಲ್ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದರು.

ಗ್ರಂಥಗಳು : ಅಭಿಜ್ಞಾನ ಶಾಕುಂತಲ ನಾಟಕ, ಕನಕೋರ್ಣಾರ್ಜುನ, ಕಾಳಿದಾಸನ ಶಾಕುಂತಲದ ವಿಮರ್ಶೆ (ಆ.ಟ.೧೯೪೯), ಟ್ರೋಜನ್‌ದಂಡಯಾತ್ರೆ, ಯವನವೀರಕಥಾವಳಿ, ರಾಯಚೂರು ವಿಜಯ (ಇ.೧೯೫೦).

ಸುಬ್ಬರಾವ, ಕರೋಡಿ

ಜ : (?) ಮ : ೧೯೨೮

ಉಡುಪಿ. ಬಿ.ಎ. ಪದವೀಧರರಾಗಿದ್ದ ಇವರು ಕೆಲವು ಕಾಲ 'ಕೃಷ್ಣಸೂಕ್ತಿ' ಎಂಬ ಮಾಸಪತ್ರಿಕೆಯ ಸಂಪಾದಕರೂ ಪ್ರಮುಖಪತ್ರಿಕಾಕರ್ತರೂ ಆಗಿದ್ದರು. 'ಗವಾನಂದ' ಎಂಬ ಕಾವ್ಯನಾದಿಂದ ಸಾಹಿತ್ಯರಚನೆ ಮಾಡಿರುವರು.

ಗ್ರಂಥಗಳು : ಕುಮಾರಶೇಖರ, ಜರಾಸಂಧವಧೆ (ಆ.೧೯೨೯), ತಾರಾನಾಥ, ಪಲಾಂಡು ಚರಿತ್ರೆ (ಆ.೧೯೩೦), ಶೃಂಗಾರಶತಕ (ಆ), ಸೌಭಾಗ್ಯವತಿಪರಿಣಯಂ (ಆ).

ಉಪೇಂದ್ರಶರ್ಮಾ, ತೋಳಮಟ್ಟಿ

ಮ : ೧೯೨೯

ಧಾರವಾಡ. ಶಿಕ್ಷಣ ಮಹಾವಿದ್ಯಾಲಯದಲ್ಲಿ ತರಬೇತು ಹೊಂದಿ ಅದೇ ಜಿಲ್ಲೆಯಲ್ಲಿ ಉಪಾಧ್ಯಾಯರಾದರು. ಸ್ವಂತ ಪರಿಶ್ರಮದಿಂದ ಸಂಸ್ಕೃತ, ಬಂಗಾಲಿ ಕಲಿತು,

ವಂಗಕಾವ್ಯದ ಆಧಾರದಿಂದ 'ಪೃಥ್ವಿರಾಜ ಯುದ್ಧಸಿದ್ಧತೆ' ಎಂಬ ಪದ್ಯಗ್ರಂಥವನ್ನು ರಚಿಸಿದ್ದರು. ಅದರ ಒಂದೆರಡು ಸರ್ಗಗಳು ವಾಗ್ಭೂಷಣದಲ್ಲಿ ಪ್ರಕಟವಾಗಿದ್ದು, ೧೯೨೩ರಲ್ಲಿ ಈ ಗ್ರಂಥಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನ ದೊರೆತಿದೆ. ಕುವಲಯಾನಂದ ಕೃತ 'ಅಲಂಕಾರದರ್ಪಣ'ದೊಳಗಿನ ಕೆಲವು ಪದ್ಯಗಳನ್ನು ಕನ್ನಡಿಸಿ 'ಕನ್ನಡ ಶಾಲಾ ಪತ್ರಕ'ದಲ್ಲಿ ಪ್ರಕಟಿಸಿದ್ದರು.

ಕೃಷ್ಣಪ್ಪ, ಎಂ.

ಮ : ಸು.೧೯೩೦

ಇವರು ಶ್ರೀರಂಗಪಟ್ಟಣದ ಕಸಬಾ ಗಂಜಾಂ ಕನ್ನಡ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದರು. ಸಂಸ್ಕೃತ ಪಂಡಿತರು.

ಗ್ರಂಥಗಳು : ಕರ್ಣಾಟಕಭರ್ತೃಹರಿನಿರ್ವೇದನಾಟಕಂ, ಪ್ರಬೋಧ ಚಂದ್ರೋದಯನಾಟಕಂ, ಶ್ರೀರಾಮಚರಿತೆ, ಸೋಮೇಶ್ವರ ಶತಕವು.

ಬಾಳಕೃಷ್ಣ, ಮಲ್ಹಾರ, ಲಾಡ

ಜ : (?) ಮ : ೧೯೩೦

ಬೆಳಗಾವಿ. ನ್ಯಾಯಾಲಯದಲ್ಲಿ ದಸ್ತೈವಜ ಲೇಖನವು ಇವರ ವ್ಯವಸಾಯವಾಗಿತ್ತು. 'ಶಾಂತಕವಿ'ಗಳ ಶಿಷ್ಯರು.

ಗ್ರಂಥ : ರಮಲನವರತ್ನಸಾರ್ಥ (ಪ.೧೮೯೭)

ಶ್ರೀನಿವಾಸಯ್ಯಂಗಾರ, ಸೆಟ್ಲೂರ, ಬಿ.ಎ., ಎಲ್. ಎಲ್. ಬಿ

ಜ : (?) ಮ : ೧೦-೧-೧೯೩೦

ಇವರು ಪ್ರಾರಂಭದಲ್ಲಿ ಮುಂಬಯಿಯಲ್ಲಿ ವಕೀಲಿ ವ್ಯವಸಾಯ ಮಾಡುತ್ತಿದ್ದು ದಿವಾನ್ ವಿ.ಪಿ.ಮಾಧವರಾಯರ ಆಳಿಕೆಯಲ್ಲಿ ಮೈಸೂರಿಗೆ ಬಂದು ನ್ಯಾಯಾಧೀಶರಾಗಿ ಕೆಲಕಾಲ ಕೆಲಸಮಾಡಿದರು. ಮುಂದೆ ರಾಜಕೀಯ ಕಾರಣದಿಂದ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮದ್ರಾಸಿನಲ್ಲಿ ವಕೀಲರಾದರು. ಕೊನೆಗೆ ಬೆಂಗಳೂರಿನಲ್ಲಿಯೂ ಕೆಲವು ವರ್ಷ ವಕೀಲರಾಗಿದ್ದರು.

ಅಲ್ಲದೆ ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ಹಿಂದೂ ಕಾಯದೆಯ ಪ್ರಾಧ್ಯಾಪಕರಾಗಿ ಕೆಲವು ಸಮಯ ಕೆಲಸ ಮಾಡಿದರು. ಮುಂಬಯಿ, ಮೈಸೂರು ವಿಶ್ವವಿದ್ಯಾನಿಲಯ ಸಮಿತಿಗಳ ಸದಸ್ಯರು; ಧಾರವಾಡದಲ್ಲಿ ಆದ ಗೋಳೀಬಾರು ವಿಚಾರಣಾ ಮಂಡಲದ ಸಭಾಸದರು. ಹಿಂದೂ ಕಾಯದೆಗೆ ಸಂಬಂಧಪಟ್ಟ ಒಂದು ವಿಷಯದ ಚರ್ಚೆಗಾಗಿ ಇವರು ಪರದೇಶಕ್ಕೆ ಕೂಡ ಹೋಗಿದ್ದರು. ಮೈಸೂರು ಭಾಗದಲ್ಲಿ ಅಖಿಲ

ಕರ್ನಾಟಕತ್ವದ ವಿಶಾಲ ಭಾವನೆಯನ್ನು ಬಿತ್ತಿದ ಹಿರಿಯರಲ್ಲಿ ಇವರೊಬ್ಬರು.

ಗ್ರಂಥಗಳು : ಮಿತಾಕ್ಷರದ ಭಾಷಾಂತರ, ಹಿಂದೂಧರ್ಮಶಾಸ್ತ್ರಸಂಗ್ರಹ.

ನರಹರಯ್ಯ, ಎಸ್.ಎನ್., ಬಿ.ಎ., ಬಿ.ಎಲ್.

ಮ : ೩-೧೧-೧೯೩೧

ಬೆಂಗಳೂರಲ್ಲಿ ಎಡ್ವೋಕೇಟರಾಗಿದ್ದ ಇವರು ಕನ್ನಡ ಹಾಗೂ ಸಂಸ್ಕೃತಭಾಷಾಪಂಡಿತರಾಗಿದ್ದರು. ಅನೇಕ ಧಾರ್ಮಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ಗ್ರಂಥಗಳು : ಆರ್ಯರ ಶಿಕ್ಷಣಪದ್ಧತಿಗಳು (ಭ), ಕರ್ಪೂರಮಂಜರಿ, ಚಂದ್ರಿಕಾವಿಜಯಂ, ನಿತ್ಯಚರ್ಯೆ (ಧ), ಭರ್ತೃಹರಿಯ ನಿರ್ವೇದ, ವ್ರತಗಳು (ಧ), ಶ್ರೀಲಕ್ಷ್ಮೀನೃಸಿಂಹಸ್ತೋತ್ರಂ.

ವೆಂಕಟರಾವ್ ಅಲೆಮನೆ, ಬಿ.ಎ.,ಎಲ್‌ಎಲ್. ಬಿ.

ಜ : (?) ಮ : ೧೯೩೪

ಮಂಗಳೂರಿನವರು. ಮದ್ರಾಸ್ ವಿಶ್ವವಿದ್ಯಾನಿಲಯದ ಓರಿಯೆಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟಿನ ಕನ್ನಡ ಶಾಖೆಗೆ ಇವರು ಪ್ರಧಾನಾಧಿಕಾರಿಯಾಗಿದ್ದರು. ಹಾಗೂ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸಮಂಡಲದ ಸಭಾಸದರು (೧೯೩೨). ಮೋಟಾರು ಅಪಘಾತದಿಂದ ಅಕಾಲಮರಣಕ್ಕೀಡಾದರು.

ಗ್ರಂಥ : ಚಂದ್ರಗುಪ್ತ ಚಕ್ರವರ್ತಿ (ತೆಲುಗಿನಿಂದ)

ಪರಿಷ್ಕೃತ : ಕವಿರಾಜಮಾರ್ಗಂ, ಪುಷ್ಪದಂತಪುರಾಣ, ಶಾಂತಿಪುರಾಣ.

ಬಿಂದುಮಾಧವ, ಕೊಲ್ಹಾರ

ಮ : ೧೯೩೫

ವಿಜಾಪುರ. ಇವರು ಕೆಲವು ಕಾಲ ಬೇರೆ ಬೇರೆ ಕಡೆಗಳಲ್ಲಿ ಶಿಕ್ಷಕರಾಗಿದ್ದರು. ಅಲ್ಲದೆ ಪತ್ರಿಕಾವ್ಯವಸಾಯ, ಗ್ರಂಥಪ್ರಚಾರದ ಕಾರ್ಯದಲ್ಲಿಯೂ ತೊಡಗಿದ್ದರು. 'ಜಯಕರ್ನಾಟಕ' ಗೆಳೆಯರ ಗುಂಪಿನವರಾಗಿದ್ದ ಇವರು ಕನ್ನಡಸಾಹಿತ್ಯಸೇವೆಯಲ್ಲಿ ಅತ್ಯಂತ ಹಂಬಲವುಳ್ಳವರಾಗಿದ್ದರು.

ಗ್ರಂಥ : ಕನ್ನಡ ಪದ್ಯರತ್ನಮಾಲೆ (ಅ).

ರಾಮಚಂದ್ರ, ಮಧ್ವ, ಮಹಿಷಿ

ಜ : (?) ಮ : ೨೪-೫-೧೯೩೫

ಧಾರವಾಡ. ಪದವೀಧರರಾದ ಬಳಿಕ ಮುಂಬಯಿ ಸರಕಾರದ ವಿದ್ಯಾಖಾತೆಯನ್ನು

ಸೇರಿ, ಹೈಸ್ಕೂಲಿನ ಮುಖ್ಯಾಧ್ಯಾಪಕರೂ, ಕೆಲಕಾಲ ಧಾರವಾಡ ಶಿಕ್ಷಣ ಮಹಾವಿದ್ಯಾಲಯದ ಮುಖ್ಯಾಧ್ಯಾಪಕರೂ ಆಗಿದ್ದರು. ಆಯುರ್ವೇದ ಪಂಡಿತರು. ನಿವೃತ್ತಿಹೊಂದಿ, ಧಾರವಾಡದಲ್ಲಿ 'ಸ್ವಾಸ್ಥ್ಯನಿಲಯ'ವೆಂಬ ಔಷಧಾಲಯವನ್ನು ಸ್ಥಾಪಿಸಿ, ಸಿದ್ಧೌಷಧಿಗಳನ್ನು ತಯಾರಿಸಲುಪಕ್ರಮಿಸಿದರು.

